ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಿರಾಟ್-ಪಡಿಕ್ಕಲ್ ಜುಗಲ್ಬಂದಿ

ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ (81ರನ್, 44ಬಾಲ್) ಮತ್ತು ದೇವದತ್ ಪಡಿಕ್ಕಲ್ (55ರನ್, 27ಬಾಲ್) ಅವರ ಭರ್ಜರಿ ಜತೆಯಾಟದ ಮೂಲಕ ಆರ್‌ಸಿಬಿ, ಗುಜರಾತ್ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸಿದೆ.

ಬಲಗೈ, ಎಡಗೈಗೆ ತಲಾ ಶೇ.5.25, ಇತರರಿಗೆ ಶೇ.4.5 ಮೀಸಲು

ಮೀಸಲಿಗೆ ಒಳದಾರಿ

ಸಿಎಂ ನೇತೃತ್ವದ ವಿಶೇಷ ಸಂಪುಟ ಸಭೆಯಲ್ಲಿ ಮಹತ್ವದ ನಿರ್ಧಾರ

ಶೇ.17ರ ಒಳಮೀಸಲು ಅಧಿಸೂಚನೆ ವಾಪಸ್‌ಗೆ ಸಂಪುಟ ಒಪ್ಪಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ ದಲಿತ ಸಮುದಾಯದ ಬಹುಕಾಲದ ಬೇಡಿಕೆಯಾದ ಒಳ ಮೀಸಲಾತಿ ಸಂಬಂಧ ಎಡಗೈ ಹಾಗೂ ಬಲಗೈ ಸಮುದಾಯಕ್ಕೆ ತಲಾ ಶೇ. 5.25 ಹಾಗೂ ಇತರರಿಗೆ ಶೇ 4.50 ರಷ್ಟು ಮೀಸಲು ಹಂಚಿಕೆ ಮಾಡಲು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಶುಕ್ರವಾರ ಸರ್ವಾನುಮತದ ನಿರ್ಧಾರ ಕೈಗೊಳ್ಳಲಾಗಿದೆ.

ಒಳ ಮೀಸಲಿನ ಗೊಂದಲವು ಸಾವಿರಾರು ಹುದ್ದೆಗಳ ಭರ್ತಿ ಸಮಸ್ಯೆ ಸೇರಿದಂತೆ ರಾಜಕೀಯವಾಗಿ ಕಾಂಗ್ರೆಸ್ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು. ಈ ಹಿನ್ನೆಲೆಯಲ್ಲಿ ಈ ಹಿಂದೆ ಎರಡು ಬಾರಿ ಸಭೆ ವಿಶೇಷ ಸಚಿವ ಸಂಪುಟ ಸಭೆ ಕರೆಯಲಾಗಿತ್ತು. ಶುಕ್ರವಾರ ಮೂರನೇ ವಿಶೇಷ ಸಚಿವ ಸಂಪುಟದಲ್ಲಿ 'ಕಾಜಿ' ನ್ಯಾಯದ ಮೂಲಕ ಪರಿಶಿಷ್ಟ ಪಂಗಡದಲ್ಲಿರುವ ಎಲ್ಲ ಸಮುದಾಯಗಳಿಯೂ ನ್ಯಾಯ ಕೊಡಿಸುವ ಮಹತ್ವದ ತೀರ್ಮಾನವನ್ನು ಕೈಗೊಂಡಿದೆ. ಶೇ.15ರ ಎಸ್‌ಸಿ ಒಳಮೀಸಲಾತಿ ಅನ್ವಯ ಎ (ಬಲ), ಬಿ (ಎಡ) ಮತ್ತು ಸಿ (ಸ್ಪೃಶ್ಯರು) ಎಂದು ಮೂರು ವರ್ಗೀಕರಣ ಮಾಡಲಾಗಿದೆ. ಅದರಂತೆ 'ಎ'ಗೆ ಶೇ.5.25, 'ಬಿ'ಗೆ ಶೇ.5.25, 'ಸಿ'ಗೆ ಶೇ.4.50 ಒಳಮೀಸಲು ನೀಡಲು ತೀರ್ಮಾನಿಸಲಾಗಿದೆ.

ವಿಶೇಷ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಶೇ.15ರ ಎಸ್‌ಸಿ ಒಳಮೀಸಲಾತಿ ಅನ್ವಯ 'ಎ'ಗೆ 5.25%, 'ಬಿ'ಗೆ 5.25%, 'ಸಿ'ಗೆ 4.50% ಒಳ ಮೀಸಲಾತಿ ನೀಡಲು ತೀರ್ಮಾನಿಸಿದ್ದೇವೆ. 2024ರ ಆಗಸ್ಟ್ ಒಂದರಂದು ಸುಪ್ರೀಂಕೋರ್ಟ್ ಒಳಮೀಸಲಾತಿ ನೀಡಬಹುದೆಂದು ತೀರ್ಪು ನೀಡಿದೆ. ಈ ಹಿನ್ನೆಲೆಯಲ್ಲಿ ನಾವು ನಾಗಮೋಹನ ದಾಸ್ ನೇತೃತ್ವದಲ್ಲಿ ಆಯೋಗ ರಚನೆ ಮಾಡಿದೆವು. ಅವರ ವರದಿಯನ್ನು ಸಂಪುಟದ ಮುಂದೆ ಇಟ್ಟು ಅನುಮೋದಿಸಲಾಗಿದೆ. ಈ ಹಿಂದೆ ಸಂಪುಟ ಸಭೆಯಲ್ಲಿ 6:6:5ರಂತೆ ಶೇ. 17ರಷ್ಟು ಒಳಮೀಸಲಾತಿ ನೀಡಲು ತೀರ್ಮಾನಿಸಲಾಗಿತ್ತು. ಈ ಸಂಬಂಧ ಕಾನೂನು ಮಾಡಲಾಯಿತು. ಕಾನೂನು ಮಾಡಿದ ಬಳಿಕ ರೋಸ್ಟರ್‌ನಲ್ಲಿ ಗೊಂದಲ ಉಂಟಾಯಿತು. ಇತ್ತ ಅಲೆಮಾರಿಯವರು ಕೋರ್ಟ್‌ಗೆ ಹೋದರು. ನ್ಯಾಯಾಲಯ ಮೀಸಲಾತಿ ಶೇ. 50 ಮೀರಬಾರದು ಎಂದು ತೀರ್ಪು ನೀಡಿತು. ಎಸ್‌ಸಿಗೆ ಶೇ.17, ಎಸ್‌ಟಿಗೆ ಶೇ.17ರಂತೆ ಶೇ.24ರಷ್ಟು ಮೀಸಲಾತಿ ಕಲ್ಪಿಸಿದ ಹಿನ್ನೆಲೆಯಲ್ಲಿ ಒಟ್ಟು ಮೀಸಲಾತಿ ಶೇ.56ಕ್ಕೆ ಹೋಯಿತು ಎಂದು ವಿವರಿಸಿದರು.

ಹೈಕೋರ್ಟ್ ಒಟ್ಟು ಮೀಸಲಾತಿ ಪ್ರಮಾಣ ಶೇ.50 ಮೀರಬಾರದು ಎಂದು ಆದೇಶ ನೀಡಿರುವ ಹಿನ್ನೆಲೆಯಲ್ಲಿ ಕಳೆದ ಸಂಪುಟ ಸಭೆಯಲ್ಲಿ ಸರಕಾರದ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ತಾಂತ್ರಿಕ ಸಮಿತಿ ರಚಿಸಲು ತೀರ್ಮಾನಿಸಲಾಗಿತ್ತು. ಸಮಿತಿ ಶೇ.15ರ ಎಸ್‌ಸಿ ಒಳಮೀಸಲಾತಿಯಡಿ 5.3, 5.3 ಮತ್ತು 4.4ರಂತೆ ಮೀಸಲು ನೀಡಲು ಶಿಫಾರಸು ಮಾಡಿತ್ತು. ಸಂಪುಟ ಸಭೆಯಲ್ಲಿ ಈ ಸಂಬಂಧ ಚರ್ಚಿಸಿ ಅಂತಿಮವಾಗಿ ಎಡಗೈ ಹಾಗೂ ಬಲಗೈ ಸಮುದಾಯಕ್ಕೆ ತಲಾ ಶೇ. 5.25 ಹಾಗೂ ಇತರರಿಗೆ ಶೇ 4.50 ರಷ್ಟು ಮೀಸಲು ಹಂಚಿಕೆ ಮಾಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು ಎಂದು ತಿಳಿಸಿದರು.

ಇದಕ್ಕೆ ಸಚಿವರಾದ ಮುನಿಯಪ್ಪ, ತಿಮ್ಮಾಪೂರ, ಪ್ರಿಯಾಂಕ್ ಖರ್ಗೆ, ಮಹದೇವಪ್ಪ, ಸತೀಶ್ ಜಾರಕಿಹೊಳಿ ಒಪ್ಪಿಕೊಂಡಿದ್ದಾರೆ. ಯಾವುದೇ ಅಪಸ್ವರ ಇಲ್ಲದೇ ತೀರ್ಮಾನಕ್ಕೆ ಬರಲಾಗಿದೆ ಎಂದು ಸಿಎಂ ತಿಳಿಸಿದರು.

ಹೈಕೋರ್ಟ್ ತೀರ್ಮಾನದವರೆಗೆ ಶೇ.6 ಬ್ಯಾಕ್ ಲಾಗ್ ಆಗಿ ಪರಿಗಣಿಸಲಾಗುವುದು. ಹೈಕೋರ್ಟ್ ತೀರ್ಮಾನದ ಬಳಿಕ ಇದನ್ನು ತೀರ್ಮಾನಿಸಲು ನಿರ್ಧರಿಸಲಾಗಿದೆ. ಈ ಹಿಂದಿನ 6:6:5 ಒಳಮೀಸಲಾತಿ ಅಧಿಸೂಚನೆ ವಾಪಸ್ ಪಡೆದು ಇಂದಿನ ತೀರ್ಮಾನದಂತೆ ಶೇ.5.25, ಶೇ.5.25 ಮತ್ತು ಶೇ. 4.50ರ ಅಧಿಸೂಚನೆ ಹೊರಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಒಳಮೀಸಲು ಸಂಪುಟ ತೀರ್ಮಾನದ ಬಳಿಕ ಹಿರಿಯ ಸಚಿವರ ಸಮ್ಮುಖ ಸಿಎಂಗೆ ಅಭಿನಂದನೆ.

56,432 ಹುದ್ದೆಗಳ ನೇಮಕಾತಿ ಕೂಡಲೇ ಆರಂಭವಾಗಲಿದೆ. ನಮ್ಮ ಪಕ್ಷದ ನಿಲುವು ಸಮ ಪಾಲು, ಸಮಬಾಳು ಅನ್ನೋದು. ಯಾರಿಗೂ ಅನ್ಯಾಯ ಆಗಬಾರದು ಎಂಬುದು ನಮ್ಮ ಉದ್ದೇಶ. ನಾವು ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ. ದಲಿತ ಸಂಘಟನೆಗಳು ಇದನ್ನು ಒಪ್ಪಿಕೊಳ್ಳುವ ವಿಶ್ವಾಸವಿದೆ.
ಸಿದ್ದರಾಮಯ್ಯ, ಮುಖ್ಯಮಂತ್ರಿ

ನೇಮಕಾತಿಗೆ ತುರ್ತು ಕ್ರಮ

ಬಜೆಟ್‌ನಲ್ಲಿ 56,432 ಹುದ್ದೆಗಳ ನೇಮಕ ಸಂಬಂಧ ಘೋಷಣೆ ಮಾಡಲಾಗಿದೆ. ಈ ಸಂಬಂಧ ತುರ್ತು ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಿದ್ದೇವೆ. ಈ ನೇಮಕಾತಿಯಲ್ಲಿ ಒಳಮೀಸಲಾತಿ ನೀಡಲಾಗುವುದು. ಸಿ ವರ್ಗಕ್ಕೆ ಲಭ್ಯವಾಗುವ ಹುದ್ದೆಗಳಲ್ಲಿ ಸುಮಾರು ಶೇ.20ರಷ್ಟು 59 ಅಲೆಮಾರಿ ಸಮುದಾಯಕ್ಕೆ ಮೀಸಲಾಗಿಡಬೇಕು ಎಂದು ತೀರ್ಮಾನಿಸ ಲಾಗಿದೆ. ಅಂದರೆ ಸಿ ವರ್ಗದ 4 ಹುದ್ದೆಗಳಲ್ಲಿ ಒಂದು ಹುದ್ದೆ ಅಲೆಮಾರಿ ಸಮುದಾಯಕ್ಕೆ ಮೀಸಲಿಡಲಾಗುವುದು ಎಂದರು.

ಕಮಲ ಮುಡಿದ ಚಡ್ಡಾ ಕೇಜ್ರಿವಾಲ್‌ಗೆ ಖೆಡ್ಡಾ

ಏಳು ಮಂದಿ ಆಪ್ ಸಂಸದರು ಬಿಜೆಪಿಗೆ ಸದ್ದಿಲ್ಲದೆ ಮತ್ತೊಂದು ಆಪರೇಶನ್ ಕಮಲ

ಆಪ್ ನಾಯಕ ಅರವಿಂದ್ ಕೇಜ್ರಿವಾಲ್ ಮಾಡುವ ತಪ್ಪುಗಳಿಗೆ ಬೆಂಬಲ ಕೊಡುತ್ತಾ ಆ ಪಕ್ಷದಲ್ಲಿರಲು ನಮಗೆ ಇಷ್ಟವಿರಲಿಲ್ಲ. ಆ ಕಾರಣಕ್ಕಾಗಿಯೇ ನಾವು ಪಕ್ಷ ಬಿಟ್ಟಿದ್ದೇವೆ.
- ರಾಘವ್ ಚಡ್ಡಾ, ರಾಜ್ಯಸಭಾ ಸದಸ್ಯ

ಚಡ್ಡಾ ಜೊತೆ ಬಿಜೆಪಿ ಸೇರಿರುವ ಅಶೋಕ್ ಮಿತ್ತಲ್ ಅವರ ಮೇಲೆ ಇತ್ತೀಚೆಗೆ ಇ.ಡಿ. ರೇಡ್ ಆಗಿತ್ತು. ಅದರಿಂದ ಬೆಚ್ಚಿದ ಮಿತ್ತಲ್, ಚಡ್ಡಾ ಹಾಗೂ ಇತರರು ತಮ್ಮ ರಕ್ಷಣೆಗಾಗಿ ಬಿಜೆಪಿ ಸೇರಿದ್ದಾರೆ. ಜನರ ಆಶೋತ್ತರಗಳಿಗೆ ದ್ರೋಹ ಬಗೆದ ಇವರನ್ನು ಪಂಜಾಬ್ ಜನತೆ ಕ್ಷಮಿಸುವುದಿಲ್ಲ.
-ಅರವಿಂದ್ ಕೇಜ್ರಿವಾಲ್, ಆಪ್ ರಾಷ್ಟ್ರೀಯ ಸಂಚಾಲಕ

ದೆಹಲಿ: ಆಮ್ ಆದ್ಮಿ ಪಾರ್ಟಿಯ (ಆಪ್) ಸಹ-ಸಂಸ್ಥಾಪಕ, ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ, ಪಕ್ಷದ ಇತರ ಆರು ಮಂದಿ ರಾಜ್ಯಸಭಾ ಸದಸ್ಯರೊಡನೆ ಪಕ್ಷ ತೊರೆದು ಬಿಜೆಪಿ ಸೇರಿದ್ದಾರೆ. ತಮ್ಮ ಪಕ್ಷ ಬಿಜೆಪಿಯೊಂದಿಗೆ ವಿಲೀನವಾಗಿದೆ ಎಂದು ಚಡ್ಡಾ ಹೇಳಿಕೊಂಡಿದ್ದಾರೆ. ಇದರೊಂದಿಗೆ ರಾಜ್ಯಸಭೆಯಲ್ಲಿ 10 ಸದಸ್ಯರ ಬಲ ಹೊಂದಿದ್ದ ಆಪ್ ಮೂವರು ಸದಸ್ಯರಿಗೆ ಸೀಮಿತವಾಗಿದೆ.

ರಾಘವ್ ಚಡ್ಡಾ ಜೊತೆಗೆ ಇತ್ತೀಚೆಗಷ್ಟೇ ಇಡಿ ದಾಳಿ ಎದುರಿಸಿದ್ದ ಅಶೋಕ್ ಮಿತ್ತಲ್, ಮಾಜಿ ಕ್ರಿಕೆಟಿಗ ಹರ್ಭಜನ್ ಸಿಂಗ್, ಸಂದೀಪ್ ಪಾಠಕ್, ಸ್ವಾತಿ ಮಳಿವಾಲ್, ವಿಕ್ರಮ್ ಸಾಹ್ನೆ ಹಾಗೂ ರಾಜೇಂದ್ರ ಗುಪ್ತಾ ಕೂಡ ಕೇಸರಿ ಪಕ್ಷದ ಧ್ವಜ ಹಿಡಿದಿದ್ದಾರೆ. ಏ. 24ರ ಸಂಜೆ, ದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಈ ಏಳು ಸಂಸದರನ್ನು, ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು ಸಿಹಿ ತಿನ್ನಿಸುವ ಮೂಲಕ ಪಕ್ಷಕ್ಕೆ ಬರಮಾಡಿಕೊಂಡರು.

ಚಡ್ಡಾ ತಿರುಗೇಟು: ರಾಜ್ಯಸಭೆಯಲ್ಲಿ ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ಮಾತನಾಡಿ ದೇಶಾದ್ಯಂತ ಮಧ್ಯಮ ವರ್ಗದ ಮೆಚ್ಚುಗೆಗೆ ಪಾತ್ರರಾಗಿದ್ದ ಚಡ್ಡಾ ಅವರನ್ನು ಇತ್ತೀಚೆಗೆ ಆಮ್ ಆದ್ಮಿ ಪಾರ್ಟಿಯು ರಾಜ್ಯಸಭೆಯ ವಿಪಕ್ಷ ಉಪನಾಯಕನ ಸ್ಥಾನದಿಂದ ಕೆಳಗಿಳಿಸಿ, ಅಶೋಕ್ ಮಿತ್ತಲ್ ಅವರನ್ನು ಈ ಸ್ಥಾನಕ್ಕೆ ನೇಮಿಸಿತ್ತು. ಅಲ್ಲದೆ, ಚಡ್ಡಾ ಅವರಿಗೆ ಸಂಸತ್ತಿನಲ್ಲಿ ಪ್ರಶ್ನೆಗಳನ್ನು ಕೇಳಲು ಕಾಲಾವಕಾಶವನ್ನು ನೀಡಬಾರದೆಂದು ಸಭಾಧ್ಯಕ್ಷರಿಗೆ ಮನವಿ ಮಾಡಿತ್ತು. ಇದೀಗ ಇವರಿಬ್ಬರೂ ಬಿಜೆಪಿ ಸೇರಿದ್ದು ಕೇಜ್ರಿವಾಲ್ ಪಕ್ಷಕ್ಕೆ ತೀವ್ರ ಮುಖಭಂಗವಾಗಿದೆ.

→ 4

ಸೊಂಪಾದ ಪುಟಗಳು

ಸೋಲಿನ ಹತಾಶೆ ಮೋದಿ ವಿರುದ್ಧ ಅವಹೇಳನಕಾರಿ ಭಾಷೆ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
6

ಅಂಕಪಟ್ಟಿ ನಗುತ್ತಿದೆ, ಮಕ್ಕಳು ಅಳುತ್ತಿದ್ದಾರೆ, ಇದು ಯಾವ ಶಿಕ್ಷಣ?!
ಕಲಿಕೆ ಕಿರಣ
ಡಾ. ಜಗದೀಶ ಮಾನೆ
7

ದಾರಿದೀಪೋಕ್ತಿ

ನಿಮ್ಮ ಆಶಯ ಮತ್ತು ಉದ್ದೇಶ ಶುದ್ಧವಾಗಿದ್ದರೆ, ನೀವು ಯಾರಿಗೂ ಹೆದರಬೇಕಿಲ್ಲ. ಆರಂಭದಲ್ಲಿ ನಿಮ್ಮನ್ನು ಸಂದೇಹದಿಂದ ನೋಡಿದವರು, ಕೊನೆಯಲ್ಲಿ ನಿಮ್ಮನ್ನು ಸರಿಯಾಗಿಯೇ ಅರ್ಥ ಮಾಡಿಕೊಳ್ಳಬಲ್ಲರು.

ವಕ್ರತುಂಡೋಕ್ತಿ

ಬುದ್ಧಿವಂತರು ಮೌನವಾಗಿರುತ್ತಾರೆ ಅನ್ನೋದು ಸರಿ, ಆದರೆ ಹೆಂಡತಿ ಬೈಯುವಾಗ ಮೌನವಾಗಿರುವಾವನು ನಿಜವಾದ ಮಹಾನ್ ಮೇಧಾವಿ.

ಮಿಥೋಸ್ ಎಐ ಜಾಗತಿಕ ಬ್ಯಾಂಕಿಂಗ್ ವಲಯ ತಲ್ಲಣ

ದೆಹಲಿ: ಜಗತ್ತಿನ ಬಲಾಢ್ಯ ದೇಶಗಳ ಬ್ಯಾಂಕುಗಳಲ್ಲಿರುವ ಹಣವನ್ನು ಕ್ಷಣಮಾತ್ರದಲ್ಲಿ ಲೂಟಿ ಮಾಡಬಲ್ಲ 'ಮಿಥೋಸ್' ಎಂಬ ಬಲಿಷ್ಠ ಎಐ ಅಪ್ಲಿಕೇಶನ್ ಅನ್ನು ಅಮೆರಿಕದ ಆ್ಯಂತ್ರೋಪಿಕ್ ಎಂಬ ಕಂಪನಿ ಅಭಿವೃದ್ಧಿಪಡಿಸಿದೆ. ಯಾವುದೇ ದೇಶದ ಬ್ಯಾಂಕುಗಳ ಕಂಪ್ಯೂಟರ್ ವ್ಯವಸ್ಥೆಯ ಸಾಫ್ಟ್‌ವೇರ್‌ನಲ್ಲಿನ ಲೋಪಗಳನ್ನು ಗುರುತಿಸಿ ಸ್ವಯಂಪ್ರೇರಿತವಾಗಿ ಸೈಬರ್ ದಾಳಿ ನಡೆಸಬಲ್ಲ ಛಾತಿ ಈ ಆ್ಯಪ್‌ಗೆ ಇದೆ. ಹಾಗಾಗಿ ಸದ್ಯಕ್ಕೆ ಇದರ ಸಾರ್ವಜನಿಕ ಬಳಕೆಗೆ ಸದ್ಯಕ್ಕೆ ಅಮೆರಿಕ ತಡೆ ನೀಡಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬ್ಯಾಂಕಿಂಗ್ ಮುಖ್ಯಸ್ಥರ ಜತೆ ತುರ್ತು ಸಭೆ ನಡೆಸಿ 'ಮಿಥೋಸ್' ಎದುರಿಸುವ ಬಗ್ಗೆ ಚರ್ಚೆ ನಡೆಸಿದ್ದಾರೆ.

ಜ.ದ್ವಿವೇದಿಗೆ ಅಮೆರಿಕ ಸೇನೆ ವಿಶೇಷ ಗೌರವ

ವಾಷಿಂಗ್ಟನ್: ಭಾರತೀಯ ಸೇನಾ ಮುಖ್ಯಸ್ಥ (ಸಿಒಎಸ್) ಜನರಲ್ ಉಪೇಂದ್ರ ದ್ವಿವೇದಿ ಅವರಿಗೆ ಅಮೆರಿಕದಲ್ಲಿ ಮಹತ್ವದ ಗೌರವ ಲಭಿಸಿದೆ. ಅಮೆರಿಕದ 'ಯುಎಸ್ ಆರ್ಮಿ ವಾರ್ ಕಾಲೇಜಿನ ಇಂಟರ್ ನ್ಯಾಷನಲ್ ಹಾಲ್ ಆಫ್ ಫೇಮ್'ನಲ್ಲಿ ಜನರಲ್ ಸ್ಥಾನ ಪಡೆದಿದ್ದು, ಈ ಗೌರವ ಪಡೆದ ಮೂರನೇ ಭಾರತೀಯ ಸೇನಾ ಮುಖ್ಯಸ್ಥ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಕಾಂಗ್ರೆಸ್ ಮುಖಂಡನ ಮನೆಯಲ್ಲಿ 21 ಗಂಟೆ 'ಬಿಟ್ ಕಾಯಿನ್' ಶೋಧ ಮಾಡಿದ ಇ.ಡಿ



ದೆಹಲಿಯಲ್ಲಿ ಹೈಕಮಾಂಡ್ ಎದುರು ಡಿಕೆಶಿ ಪವರ್ ಗೇಮ್

ಪಕ್ಷ ನಾಯಕರ ಭೇಟಿ | ರಾಜ್‌ನಾಥ್‌ಗೆ ಮನವಿ

ಬೆಂಗಳೂರು: ಪಂಚರಾಜ್ಯ ಚುನಾವಣೆ ಬಳಿಕ ರಾಜ್ಯದಲ್ಲಿ ಏಳಬಹುದಾದ ರಾಜಕೀಯ ದಂಗಲ್‌ನ ಮೊದಲ ಹಂತವಾಗಿ ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್, ದೆಹಲಿಯಲ್ಲಿ ತಮ್ಮ 'ತಂತ್ರಗಾರಿಕೆ' ಮುಂದುವರೆಸಿದ್ದಾರೆ. ರಾಜಕೀಯ ಆಟದ ನಡುವೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿ ಮಾಡಿ, ಬೆಂಗಳೂರಿನಲ್ಲಿ ರಕ್ಷಣಾ ಪಡೆಗಳಿಗೆ ಸೇರಿದ ಜಾಗದ ಸಮೀಪ ಕಟ್ಟಡ ಎತ್ತರಕ್ಕಿರುವ ಮಿತಿಯನ್ನು ಸಡಿಲಿಸಲು ಮನವಿ ಮಾಡಿದ್ದಾರೆ.

ಗುರುವಾರ ರಾತ್ರಿಯೇ ದೆಹಲಿಗೆ ತೆರಳಿದ ಡಿ.ಕೆ.ಶಿವಕುಮಾರ್ ರಾತ್ರಿಯೇ ಕೆಲ ನಾಯಕರನ್ನು ಭೇಟಿಯಾಗಿ, ಸುದೀರ್ಘ ಚರ್ಚೆ ನಡೆಸಿದ್ದಾರೆ.

→ 4

ಮುಖ್ಯಮಂತ್ರಿಗಳು ಆಪ್ತ ಸಚಿವ ರೊಂದಿಗೆ ಚರ್ಚಿಸಿರುವ ಬಗ್ಗೆ ಮಾಹಿತಿಯಿಲ್ಲ. ನನಗೆ ಈ ಬಗ್ಗೆ ಮಾಹಿತಿ ಇಲ್ಲ. ಯಾರು ಯಾರ ಆಪ್ತರು, ಯಾರಿಗೆ ಆಪ್ತರಲ್ಲ ಎಂದು ನನಗೆ ಗೊತ್ತಿಲ್ಲ. ನಾನು ಈ ಸಭೆಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಹಿರಿಯ ಶಾಸಕರು ಸಂಪುಟ ಪುನಾರಚನೆಗೆ ಆಗ್ರಹಿಸಲು ಮತ್ತೆ ದೆಹಲಿ ಪ್ರವಾಸ ಮಾಡುವ ಮಾತುಗಳಿವೆ. ಕಾದು ನೋಡೋಣ
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಗಾಳಿ ಕುಡಿಯಲು ದೆಹಲಿಗೆ ಬಂದಿಲ್ಲ

ದೆಹಲಿ ಭೇಟಿಯ ಬಗ್ಗೆ ಗುರುವಾರ ರಾತ್ರಿ ಮಾಧ್ಯಮದವರೊಂದಿಗೆ ಮಾತನಾಡುವ ವೇಳೆ, ನಾನು ಪಕ್ಷದ ನಾಯಕರನ್ನು ಭೇಟಿಯಾ ಗಿದ್ದೇನೆ. ನಾನು ನಮ್ಮ ಕೆಲಸ ಮಾಡುತ್ತಿರು ತ್ತೇನೆ. ಆದರೆ, ಯಾರನ್ನು ಭೇಟಿಯಾಗಿರುವೆ ಎಂದು ಹೇಳುವುದಿಲ್ಲ. ದೆಹಲಿಗೆ ಗಾಳಿ ಕುಡಿಯಲು ಬಂದಿಲ್ಲ ಎನ್ನುವ ಮೂಲಕ ರಾಜಕೀಯ ಚರ್ಚಿಸಲೆಂದೇ ಬಂದಿರುವ ಸ್ಪಷ್ಟ ಸಂದೇಶವನ್ನು ರವಾನಿಸಿದರು. 'ತಮಿಳು ನಾಡು, ಕೇರಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಚುನಾವಣೆ ಪ್ರವಾಸ ಮಾಡಿದ್ದೆ. ಎಲ್ಲೆಲ್ಲಿ ಏನಾಗಿದೆ ಎಂದು ನಮ್ಮ ನಾಯಕರಿಗೆ ಮಾಹಿತಿ ನೀಡಬೇಕಿದೆ. ಈ ಮೂರು ರಾಜ್ಯಗಳಲ್ಲಿ ಪ್ರಚಾರ ಮಾಡಲು ಪಕ್ಷ ನನಗೆ ಜವಾಬ್ದಾರಿ ನೀಡಿತ್ತು. ಕರ್ನಾಟಕದಲ್ಲಿ ಚುನಾವಣೆ ಮಾಡುವುದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿಯಾಗಿ ನನ್ನ ಕರ್ತವ್ಯ' ಎಂದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಗ್ಲೋಬಲ್ ಅಗ್ರಿಟೆಕ್ ಶೃಂಗ-2026ನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಕೃಷಿ ಸಚಿವರಾದ ಚಲುವರಾಯಸ್ವಾಮಿ ಮತ್ತು ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ, ಪದಾಧಿಕಾರಿಗಳು ಹಾಗೂ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಿಇಟಿ: ಜನಿವಾರ ತೆಗೆಸಿದ ಮೂವರು ಸಿಬ್ಬಂದಿ ಸಸ್ಪೆಂಡ್

ಮಡಿವಾಳ ಠಾಣೆಯಲ್ಲಿ ದೂರು ದಾಖಲು

ಬೆಂಗಳೂರು: ರಾಜಧಾನಿ ಸಿಇಟಿ ಕೇಂದ್ರವೊಂದರಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ವಿಚಾರ ಭಾರಿ ವಿವಾದಕ್ಕೆ ಕಾರಣವಾಗುತ್ತಿದ್ದಂತೆ ಬೆಂಗಳೂರಿನ ಮಡಿವಾಳದಲ್ಲಿರುವ ಕೃಪಾನಿಧಿ ಕಾಲೇಜಿನ ಮೂವರು ಸಿಬ್ಬಂದಿ ಅಮಾನತು ಮಾಡಲಾಗಿದೆ. ಇದೇ ವೇಳೆ ಈ ಸಂಬಂಧ ಮಡಿವಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಬ್ಬಂದಿಯಾದ ಸುಧಾಕರ್, ಗಿರಿಜಮ್ಮ, ಆರ್.ಸರಿತಾ ಅವರನ್ನು ಅಮಾನತು ಮಾಡಲಾಗಿದೆ. ಜನಿವಾರ ತೆಗೆಸಿದ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಬೆಂಗಳೂರು ನಗರ ಡಿಸಿಗೆ ಕೆಇಎ ಪತ್ರ ಬರೆದಿತ್ತು. ವಸ್ತ್ರಸಂಹಿತೆ ಅಧಿಕಾರಿಗಳ ನೇಮಕ ಮಾಡಿದರೂ ಈ ಘಟನೆ ನಡೆದಿದೆ. ವಿದ್ಯಾರ್ಥಿಗಳ ಜನಿವಾರ ತೆಗೆಸದಂತೆ ಸೂಚನೆ ನೀಡಿದ್ದರೂ ಜನಿವಾರ ತೆಗೆಸಿದ್ದು ಉದ್ದೇಶಪೂರ್ವಕ ಎಂಬಂತೆ ಕಂಡಿದೆ. ಈ ಬಗ್ಗೆ ತನಿಖೆ ನಡೆಸಿ ಕ್ರಮ ವಹಿಸಿದ ವಿವರ ನೀಡುವಂತೆ ಪತ್ರ ಮುಖೇನ ಕೆಇಎ ಆಗ್ರಹಿಸಿತ್ತು.

→ 4

ಅತ್ಯಾಚಾರ ಸಂತ್ರಸ್ತೆಗೆ ಮಾಸಿಕ 75 ಸಾವಿರ ಪರಿಹಾರಕ್ಕೆ ಆದೇಶ

ಬಿಜೆಪಿ ಮುಖಂಡನ ಪುತ್ರನಿಗೆ ಹೈ ತಾಕೀತು

ಬೆಂಗಳೂರು: ಉತ್ತಮ ಭವಿಷ್ಯದ ಕನಸು ಕಂಡಿದ್ದ 21 ವರ್ಷದ ವಿದ್ಯಾರ್ಥಿನಿಯನ್ನು ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕ ಬೆಳೆಸಿ, ತಾಯಿಯಾಗುವಂತೆ ಮಾಡಿ, ಆಕೆಯ ಜೀವನವನ್ನು ಸಂಪೂರ್ಣವಾಗಿ ನಾಶ ಮಾಡಿದ್ದೀರಿ ಎಂದು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬಿಜೆಪಿ ಮುಖಂಡ ಜಗನ್ನಿವಾಸ್ ರಾವ್ ಅವರ ಪುತ್ರ ಕೃಷ್ಣ ಜೆ.ರಾವ್ ವಿರುದ್ಧ ಮೌಖಿಕವಾಗಿ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ಸಂತ್ರಸ್ತೆ ಮತ್ತು ಆಕೆಯ ಮಗುವಿನ ಪೋಷಣೆಗೆ ಮಾಸಿಕ 75 ಸಾವಿರ ರು. ಪಾವತಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

ಇದೇ ವೇಳೆ, ಆರೋಪಿ ವಿರುದ್ಧದ ಅತ್ಯಾಚಾರ ಪ್ರಕರಣಕ್ಕೆ ಮಧ್ಯಂತರ ತಡೆ ನೀಡಿದ್ದು, ಸಂತ್ರಸ್ತೆ ಮತ್ತವರ ಕುಟುಂಬಸ್ಥರು, ಬಂಧುಗಳು ಈ ವಿಚಾರಕ್ಕೆ ಸಂಬಂಧಿಸಿ ಮಾಧ್ಯಮಗಳ ಮುಂದೆ ಹೋಗಬಾರದೆಂದು ನಿರ್ಬಂಧ ವಿಧಿಸಿದೆ. ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದು ಕೋರಿ ಆರೋಪಿ ಕೃಷ್ಣ ಜೆ.ರಾವ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, ಈ ಸೂಚನೆ ನೀಡಿ ವಿಚಾರಣೆ ಮುಂದೂಡಿದೆ.

ಇದಕ್ಕೂ ಮುನ್ನ ನಡೆದ ವಿಚಾರಣೆ ವೇಳೆ ಸಂತ್ರಸ್ತೆಯ ಪರ ವಕೀಲರು, ಸಹಪಾಠಿಗಳಾಗಿದ್ದ ಸಂದರ್ಭದಲ್ಲಿ ಅರ್ಜಿದಾರ ಮತ್ತು ಸಂತ್ರಸ್ತೆ ಪ್ರೀತಿಸುತ್ತಿದ್ದರು. ಬಳಿಕ ಮದುವೆಯಾಗುವುದಾಗಿ ಭರವಸೆ ನೀಡಿ ಹಲವು ಬಾರಿ ಅತ್ಯಾಚಾರ ಎಸಗಿದ್ದಾರೆ. ಇದರಿಂದ ಸಂತ್ರಸ್ತೆ ಮಗುವಿಗೆ ಜನ್ಮ ನೀಡಿದ್ದು, ಇನ್ನು ಎರಡು ತಿಂಗಳು ಕಳೆದರೆ ಮಗುವಿಗೆ ಒಂದು ವರ್ಷ ಆಗಲಿದೆ. ಆದರೆ, ಈವರೆಗೂ ಮಗುವಿಗೆ ನಾಮಕರಣ ಆಗಿಲ್ಲ. ಮಗುವನ್ನು ನೋಡಲು ಆರೋಪಿಯ ಕುಟುಂಬಸ್ಥರು ಬಂದಿಲ್ಲ. ಸಂತ್ರಸ್ತೆಯ ತಾಯಿ ಮನೆ ಕೆಲಸ ಮಾಡುತ್ತಾರೆ. ತಂದೆ ಚಿನ್ನಾಭರಣ ಅಂಗಡಿಯಲ್ಲಿ ದಿನಗೂಲಿ ನೌಕರರಾಗಿದ್ದು, ಜೀವನ ನಡೆಸುವುದು ಕಷ್ಟಕರವಾಗಿದೆ ಎಂದು ತಿಳಿಸಿದರು.

→ 4

ಪ್ರಕರಣಕ್ಕೆ ಮಧ್ಯಂತರ ತಡೆ

ಅರ್ಜಿದಾರ ಆರೋಪಿ ಸ್ವತಃ ಅಥವಾ ತನ್ನ ಪೋಷಕರ ಮೂಲಕ ಸಂತ್ರಸ್ತೆ ಹಾಗೂ ಮಗುವಿನ ಅಗತ್ಯಗಳನ್ನು ಪೂರೈಸಲು ಪ್ರತಿ ತಿಂಗಳು 75 ಸಾವಿರ ರು. ಪಾವತಿಸಬೇಕು. ಮುಂದಿನ ಒಂದು ವಾರದೊಳಗೆ ಈ ಹಣ ಪಾವತಿಸಿ, ಅದರ ಬಳಿಕ ಪ್ರತಿ ತಿಂಗಳೂ ಹಣ ಪಾವತಿಸಬೇಕು ಎಂಬ ಷರತ್ತಿಗೆ ಒಳಪಟ್ಟು ಪ್ರಕರಣದ ಮುಂದಿನ ಎಲ್ಲ ಪ್ರಕ್ರಿಯೆಗಳಿಗೆ ತಡೆ ನೀಡುತ್ತಿರುವುದಾಗಿ ನ್ಯಾಯಪೀಠ ಹೇಳಿತು.

ರಾಷ್ಟ್ರೀಯ ಅಥ್ಲೆಟಿಕ್ಸ್‌ನಲ್ಲಿ ಸಿರಿಂಜ್ ದರ್ಶನ

ತುಮಕೂರು ಅಂಡರ್-20 ಕೂಟದಲ್ಲಿ ಮಾದಕ ದ್ರವ್ಯ ಬಳಕೆಯ ಶಂಕೆ

ತುಮಕೂರು: ನಗರದ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಶುಕ್ರವಾರದಿಂದ ಆರಂಭ ಗೊಂಡಿರುವ ರಾಷ್ಟ್ರೀಯ ಅಂಡರ್-20 ಜೂನಿಯರ್ ಅಥ್ಲೆಟಿಕ್ಸ್ ಕ್ರೀಡಾಕೂಟಕ್ಕೆ ಮೊದಲ ದಿನವೇ ಡೋಪಿಂಗ್ ಭೂತದ (ಉದ್ದೀಪನ ಮದ್ದು) ಆತಂಕ ಎದುರಾಗಿದೆ.

ಕ್ರೀಡಾಂಗಣದ ಶೌಚಾಲಯದಲ್ಲಿ ಬಳಸಿದ ಸ್ಥಿತಿಯಲ್ಲಿ ಸಿರಿಂಜ್ ಹಾಗೂ ಸೂಜಿಗಳು ಪತ್ತೆಯಾಗಿರುವುದು ಕ್ರೀಡಾ ವಲಯದಲ್ಲಿ ತಲ್ಲಣ ಮೂಡಿಸಿದ್ದು ಕ್ರೀಡಾಕೂಟದ ಪಾರದರ್ಶಕತೆಯ ಬಗ್ಗೆ ಅನುಮಾನ ಮೂಡಿವೆ.

ಗೃಹ ಸಚಿವ ಪರಮೇಶ್ವರ್ ಶುಕ್ರವಾರ ಚಾಲನೆ ನೀಡಿದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ, ದೇಶದ ವಿವಿಧ ರಾಜ್ಯಗಳ ನೂರಾರು ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ. ಆದರೆ, ಪಂದ್ಯಾವಳಿ ಆರಂಭ ವಾದ ಕೆಲವೇ ಗಂಟೆಗಳಲ್ಲಿ ಕ್ರೀಡಾಂಗಣದ ಶೌಚಾಲಯದಲ್ಲಿ 5ಕ್ಕೂ ಹೆಚ್ಚು ಸಿರಿಂಜ್‌ಗಳು ಪತ್ತೆಯಾಗಿವೆ. ಶೌಚಾಲಯದ ಒಳಭಾಗದಲ್ಲಿ 3 ಸಿರಿಂಜ್‌ಗಳು ಪತ್ತೆಯಾಗಿದ್ದರೆ. ಶೌಚಾಲಯದ ಹೊರಭಾಗದ ಆವರಣದಲ್ಲಿ 2 ಸಿರಿಂಜ್‌ಗಳು ಬಿದ್ದಿರುವುದು ಕಂಡುಬಂದಿದೆ.

1,380 ಯುವ ಕ್ರೀಡಾಪಟುಗಳು ಭಾಗಿ: ದೇಶದ 28 ರಾಜ್ಯಗಳಿಂದ 1,380 ಯುವ ಕ್ರೀಡಾಪಟುಗಳು ಕ್ರೀಡಾಕೂಟದಲ್ಲಿ ಭಾಗಿಯಾಗಿದ್ದು, 40 ವಿವಿಧ ಕ್ರೀಡಾ ಚಟುವಟಿಕೆ ನಡೆಯಲಿದೆ. ಕರ್ನಾಟಕ ರಾಜ್ಯದ 110 ಕ್ರೀಡಾಪಟುಗಳಲ್ಲಿ ತುಮಕೂರು ಜಿಲ್ಲೆಯ 10 ಕ್ರೀಡಾಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ. ಮೇ 28ರಿಂದ 31ರವರೆಗೆ ಚೀನಾದ ಹಾಂಕಾಂಗ್‌ನಲ್ಲಿ ಏಷ್ಯನ್ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್, ಆ 5ರಿಂದ 9ರವರೆಗೆ ಅಮೆರಿಕಾದ ಒರೆಗಾನ್‌ನಲ್ಲಿ ವಿಶ್ವ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್ ಜರುಗಲಿದ್ದು ಈ ಎರಡು ಕ್ರೀಡಾಕೂಟಗಳಿಗೆ ಭಾರತ ಜೂನಿಯರ್ ತಂಡವನ್ನು ಆಯ್ಕೆ ಮಾಡಲು ಈ ಕ್ರೀಡಾಕೂಟವೇ ಪ್ರಮುಖ ಮಾನದಂಡವಾಗಿದೆ. ಬೆಳಗ್ಗೆ 6ರಿಂದ 10.30ರವರೆಗೆ, ಮಧ್ಯಾಹ್ನ 3.30ರಿಂದ ಆರಂಭವಾಗುವ ಸ್ಪರ್ಧೆಗಳು ರಾತ್ರಿ 8ಕ್ಕೆ ಮುಕ್ತಾಯವಾಗಲಿವೆ.

ಅಧಿಕಾರಿಗಳಲ್ಲಿ ಹೆಚ್ಚಿದ ಆತಂಕ: ಸಿರಿಂಜ್‌ಗಳು ಪತ್ತೆಯಾದ ಬೆನ್ನಲ್ಲೇ ಕ್ರೀಡಾ ಸಂಘಟಕರು ಹಾಗೂ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಆತಂಕ ಮನೆಮಾಡಿದೆ. ರಾಷ್ಟ್ರೀಯ ಮಟ್ಟದ ಕೂಟವೊಂದರಲ್ಲಿ ಇಂತಹ ಗಂಭೀರ ಲೋಪ ಕಂಡುಬಂದಿರುವುದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಸಿರಿಂಜುಗಳು ಪತ್ತೆಯಾದ ಬಗ್ಗೆ ಎನ್‌ಎಡಿಎಗೆ ಮಾಹಿತಿ ನೀಡಲಾಗುವುದು ಅವರು ಪರಿಶೀಲಿಸಿ, ತನಿಖೆ ನಡೆಸಲಿದ್ದಾರೆ. ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಎನ್‌ಎಡಿಎದಿಂದ ಡೋಪಿಂಗ್ ಟೆಸ್ಟ್ ಮಾಡಲಾಗುತ್ತದೆ. ಒಂದು ಟೆಸ್ಟ್‌ಗೆ 30 ರಿಂದ 40 ಸಾವಿರ ರೂ ವೆಚ್ಚವಾಗುತ್ತದೆ. ಕಾನೂನುಬಾಹಿರವಾಗಿ ಚುಚ್ಚು ಮದ್ದು ತೆಗೆದುಕೊಂಡಿದ್ದರೆ ಎನ್‌ಎಡಿಎ ಕ್ರಮಕೈಗೊಳ್ಳಲಿದೆ. ಯಾರೇ ಮಾದಕ ದ್ರವ್ಯದದ ಸೇವನೆ ಪತ್ತೆಯಾದರೆ ಅವರನ್ನು ನಾಲ್ಕು ವರ್ಷಗಳ ಅವಧಿಗೆ ಕ್ರೀಡೆಯಿಂದ ನಿಷೇಧಿಸಲಾಗುವುದು.
-ಸತ್ಯನಾರಾಯಣ, ಕ್ರೀಡಾಕೂಟದ ನಿರ್ದೇಶಕ

ಅನ್ನಭಾಗ್ಯಕ್ಕೆ ಕನ್ನ: ನೂರಾರು ಟನ್ ಅಕ್ಕಿ ವಶ

ಕೊಪ್ಪಳದಲ್ಲೂ ಅಕ್ರಮ ದಾಸ್ತಾನು ಪತ್ತೆ, ಆರೋಪಿಗೆ ಶೋಧ

ಕೊಪ್ಪಳ: ತಾಲೂಕಿನ ಕೂಕನಪಳ್ಳಿ ಗ್ರಾಮದ ಹೊರ ಹೊಲಯದ ಕಟ್ಟಡವೊಂದರ ಮೇಲೆ ಪೊಲೀಸ್ ಹಾಗೂ ಆಹಾರ ಇಲಾಖೆ ಅಧಿಕಾರಿಗಳು ದಾಳಿ ಮಾಡಿದ್ದು, ಭಾರಿ ಪ್ರಮಾಣದ ಪಡಿತರ ಅಕ್ಕಿ ಪತ್ತೆ ಮಾಡಿದ್ದಾರೆ.

ಖಚಿತ ಮಾಹಿತಿ ಆಧರಿಸಿ, ಆಹಾರ ಇಲಾಖೆ ಹಾಗೂ ಪೊಲೀಸ್ ಅಧಿಕಾರಿಗಳು ಜಂಟಿಯಾಗಿ ದಾಳಿ ಮಾಡಿದ್ದಾರೆ. ದಾಳಿ ವೇಳೆ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಪಡಿತರ ಅಕ್ಕಿ ವಶಕ್ಕೆ ಪಡೆದಿದ್ದಾರೆ. ದಾಳಿ ವೇಳೆ ಸಾವಿರಕ್ಕೂ ಹೆಚ್ಚು ಚೀಲಗಳಲ್ಲಿ ಪಡಿತರ ಅಕ್ಕಿ ತುಂಬಿ ಸಂಗ್ರಹಿಸಿರುವುದು ಪತ್ತೆ ಆಗಿದೆ. ಅಧಿಕಾರಿಗಳ ನೇತೃತ್ವದಲ್ಲಿ ಅಕ್ಕಿ ತೂಕ ಮಾಡಿ, ಸರಕಾರಿ ಗೋದಾಮಿಗೆ ಕಳುಹಿಸಲಾ ಗುತ್ತಿದೆ. ಶುಕ್ರವಾರ ಸಂಜೆ ವರೆಗೆ ಕಾರ್ಯಾಚರಣೆ ಮುಂದುವರೆದಿತ್ತು.

ದಾಖಲೆ ಮೀರಿದ ಅಕ್ಕಿ: ಆರಂಭದಲ್ಲಿ ಸುಮಾರು 200 ರಿಂದ 250 ಚೀಲ ಅಕ್ಕಿ ಮೂಟೆ ಇರುವುದಾಗಿ ಅಂದಾಜಿಸಲಾಗಿತ್ತು. ಆದರೆ, ಸ್ಥಳ ದಲ್ಲಿ ತೆಗೆದಷ್ಟು ಅಕ್ಕಿ ಮೂಟೆ ಪತ್ತೆ ಆಗುತ್ತಿವೆ. ಸುಮಾರು 250 ರಿಂದ 300 ಟನ್ ಅಕ್ಕಿ ಇರಬಹುದು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಅನ್ನಭಾಗ್ಯ ಯೋಜನೆ ವ್ಯಾಪಕವಾಗಿ ದುರುಪಯೋಗ ಆಗುತ್ತಿದೆ ಎಂಬ ಆರೋಪಗಳಿಗೆ ಈ ಪ್ರಕರಣ ಕನ್ನಡಿ ಹಿಡಿದಿದೆ.

→ 4

ಕೊಪ್ಪಳ ತಾಲೂಕು ಕೂಕನಪಳ್ಳಿ ಬಳಿ ಪಡಿತರ ಅಕ್ಕಿ ಪತ್ತೆ ಆಗಿರುವುದು.

ಬೆಳಗ್ಗೆಯಿಂದ ಅಕ್ಕಿ ತೂಕ ಮಾಡಿ, ಲಾರಿ ಮೂಲಕ ಭಾರತೀಯ ಆಹಾರ ನಿಗಮದ ಗೋದಾಮಿಗೆ ಸಾಗಣೆ ಮಾಡುವ ಕೆಲಸ ನಡೆದಿದೆ. ನಿರೀಕ್ಷೆಗೂ ಮೀರಿದಷ್ಟು ಅಕ್ಕಿ ಮೂಟೆಗಳು ಗೋದಾಮಿನಲ್ಲಿವೆ. ಸದ್ಯಕ್ಕೆ ಎಷ್ಟು ಟನ್ ಅಕ್ಕಿ ಇದೆ ಎಂಬುದು ಗೊತ್ತಾಗುವುದಿಲ್ಲ. ಶನಿವಾರವೂ ಕಾರ್ಯಾಚರಣೆ ಮುಂದುವರೆಯಲಿದೆ. ಶನಿವಾರ ಸಮಗ್ರ ಮಾಹಿತಿ ನೀಡಲಾಗುವುದು.
-ರವಿಚಂದ್ರ, ಆಹಾರ ನಿರೀಕ್ಷಕರು, ಕೊಪ್ಪಳ

ಟ್ಯಾಗ್ ಇರುವ ಮೂಟೆ ಪತ್ತೆ !

ಅಧಿಕಾರಿಗಳ ದಾಳಿ ವೇಳೆ ಮೇಲ್ನೋಟಕ್ಕೆ ರಸಗೊಬ್ಬರದ ಚೀಲದಲ್ಲಿ ಪಡಿತರ ಅಕ್ಕಿ ತುಂಬಿರುವ ಮೂಟೆ ಪತ್ತೆ ಆಗಿದೆ. ಇಂಥ ಚೀಲದಲ್ಲಿ ಪತ್ತೆ ಆಗುವ ಪಡಿತರ ಅಕ್ಕಿಯನ್ನು ಸಾರ್ವಜನಿಕರಿಂದ ಖರೀದಿಸಿ ತರಲಾಗುತ್ತದೆ ಎಂದು ಅಕ್ರಮ ವ್ಯವಹಾರ ಮಾಡುವವರು ಬಿಂಬಿಸುತ್ತಾರೆ. ಆದರೆ, ದಾಳಿ ವೇಳೆ ಸರಕಾರಿ ಟ್ಯಾಗ್ ಇರುವ ಗೋಣಿ ಚೀಲದ ಅಕ್ಕಿ ಮೂಟೆಗಳೇ ಪತ್ತೆ ಆಗಿವೆ.

ಬಳ್ಳಾರಿ ಐಜಿಪಿ ಸೂಚನೆ

20 ದಿನಗಳ ಹಿಂದಷ್ಟೇ ಗಂಗಾವತಿ ಸಮೀಪ ವಶಪಡಿಸಿಕೊಂಡ 30 ಟನ್ ಪಡಿತರ ಅಕ್ಕಿ ಸಾಗಣೆ ಮಾಡುತ್ತಿದ್ದ ಲಾರಿಯಲ್ಲಿ ಹುಲಿಗೆಮ್ಮ ದೇವಿ ಟ್ರೇಡರ್ ಹೆಸರಿನ ಬಿಲ್ ಪತ್ತೆ ಆಗಿದ್ದವು. ಇಲ್ಲೂ ಇದೇ ಬೋರ್ಡ್ ಕಂಡುಬಂದಿದೆ. ಈ ಬಗ್ಗೆ ಬಳ್ಳಾರಿ ಐಜಿಪಿ ಅವರಿಗೆ ದಾಖಲೆ ಸಹಿತ ಮಾಹಿತಿ ನೀಡಲಾಗಿತ್ತು. ಐಜಿಪಿ ಸೂಚನೆ ಮೇರೆಗೆ ದಾಳಿ ನಡೆದಿದೆ ಎಂದು ದೂರುದಾರರು ತಿಳಿಸಿದ್ದಾರೆ.

BEFORE THE NOMINEE OF DEPUTY REGISTRAR OF CHITS, FIRST ZONE, MARGOSA ROAD, MALLESWARAM, AT BANGALORE

Dispute No. DRB-1/ CFS/185/ 2025-2026

DISPUTANT: M/s Dhanalakshmi Srinivasan Chit Funds (Karnataka Pvt Ltd)

No. 32, 2nd Floor, 8th B Cross, 1st main, Near Gayathri Ganapathi Temple, Yelahanka New Town, Bengaluru-560064.

Branch : **Yelahanka**

Rep, by its Foreman/Manager,

SRI.P.V. Gajendra.

OPPONENTS

Mr. Mandala Malleshwar Rao and others

OPPONENT NO. 01

Mr. Mandala Malleswara Rao
S/o Rama Rao Mandala #402, A-Blocks, G.k Lakeview Apartment, Anantapura gate.
Yelahanka, Bengaluru-560064

NOTICE OF CONDITIONAL ATTACHMENT OF IMMOVABLE PROPERTY OF OPPONENT NO. 01 UNDER SECTION 68 (1) OF THE CHIT FUNDS ACT, 1982. THROUGH PAPER PUBLICATION

01. WHEREAS, the dispuitant has field the above dispute U/S 64 (1) of the Chit fund Act, 1982, before the Deputy Registar of Chits, First zone, Margosa road, Malleshwaram, Banglore, for recovery of **Rs. 3,99,978/- (Rupees Three Lakhs Ninety Nine Thousand Nine Hundred and Seventy Eight Only)** with intrest @24 p.annum And the Court Costs From the Opponents.

02. Whereas, it is brought to my notice by the disputant through an application filed under section 68(1) of the Chit fund act 1982, accompanied by an affidavit stating that the opponents No.01. Mandala Malleshwar Rao, the Subsciber/ Guarantor of this chits and now she is contemplating to dispose off the immovable property belonging to her, as mentioned in the schedule hereunder, with an intention to delay or defeat the enforcement of execution of the award that is likely to be passed in the above dispute against him.

03. The ABJ conditional notice issued by Speed Post to opponent No.01 to appear before this Hon'ble Court On 23/04/2026, the ABJ Conditional Notice to Opponent No.01 is Not served. Therefore the opponents No.01 is hereby Summoned to appear in this Court in person Before the Nominee of the Deputy registrar of chits, first zone, Sitting at, No. No.32,2nd Floor, 8th "B' Cross, 1st main, Near Gayathri Ganapathi Temple, Yelahanka New Town, Bengaluru-560064, **on 11-05-2026 at 3.00. P.M.** Without Fail Opponent to Take Notice that in default of Appearance the Dispute will be heard and Disposed Ex- Party and on Merits.

04. Further the opponent No.01 is hereby informed that if he desires to have this attachment raised, he shall furnish cash secutity to the of the dispute Claim by depositing the amount to the disputant company and producing the original reciept issued by them to this court on before 11/05/2026 at 3. P.M without fail for raising the attachment if they fail to do so within the stipulated period, this Conditional attachment shall be deemed to have confirmed and made absolute to the extent of the dispute claim as per the award.

SCHEDULE PROPERTY

All that piece and parcel of the Residential Site bearing Plot No.129, formed in the approved layout known as "Sri Lakshmi Narasimha Nagar", carved out of lands bearing R.S. Nos. 222, 222/1, 222/3, 223, 223/1 and 223/3, situated within the limits of Jambapuram Gram Panchayat, Koratla Mandal, in the State of Telangana. The said layout was approved by the Director of Town and Country Planning, Hyderabad, vide T.L.P. No. 27/2014/R. The said Plot No.129 measures 200 Square Yards (equivalent to approximately 167.22 Square Meters with all rights, appurtenances whatsoever hereunder or underneath or above the surface and bounded on; East by: 30 Feet Wide Layout Road, West by: Land belonging to others, North by: 40 Feet Wide Layout Road, South by: 60 Feet Wide Layout Road / Road leading to Plot No.130

Given under my hand & seal of this office on Dated 23/04/2026 at Bangalore

Nominee of The Deputy Registrar of Chits, Ist Zone, Malleshwaram, Bangalore

---

BEFORE THE NOMINEE OF DEPUTY REGISTRAR OF CHITS, FIRST ZONE, MARGOSA ROAD, MALLESWARAM, AT BANGALORE

Dispute No. DRB-1/ CFS/183/ 2025-2026

DISPUTANT: M/s Dhanalakshmi Srinivasan Chit Funds (Karnataka Pvt Ltd)

No. 32, 2nd Floor, 8th B Cross, 1st main, Near Gayathri Ganapathi Temple, Yelahanka New Town, Bengaluru-560064.

Branch : **Yelahanka**

Rep, by its Foreman/Manager,

SRI.P.V. Gajendra.

OPPONENTS: Mr. Manoj V. and others

OPPONENT NO.03

Mrs. Kumari.S W/o Damodaram.S,
No.8, and 9, Flat No.403, 4th floor, Neni Paradise Apts, Anugraha layout, Near Holy vision school, Mahadevapura, Bangalore-560010.

NOTICE OF CONDITIONAL ATTACHMENT OF IMMOVABLE PROPERTY OF OPPONENT NO. 03 UNDER SECTION 68 (1) OF THE CHIT FUNDS ACT, 1982. THROUGH PAPER PUBLICATION

01. WHEREAS, the dispuitant has field the above dispute U/S 64 (1) of the Chit fund Act, 1982, before the Deputy Registar of Chits, First zone, Margosa road, Malleshwaram, Banglore, for recovery of **Rs. 10,67,185/- (Rupees Ten Lakhs Sixty Seven Thousand One Hundred and Eighty Five Only)** with intrest @24 p.annum And the Court Costs From the Opponents.

02. Whereas, it is brought to my notice by the disputant through an application filed under section 68(1) of the Chit fund act 1982, accompanied by an affidavit stating that the opponents **No.03. Mrs.Kumari S**.the Subsciber/ Guaranter of this chits and now she is contemplating to dispose off the immovable property belonging to her, as mentioned in the schedule hereunder, with an intention to delay or defeat the enforcement of execution of the award that is likely to be passed in the above dispute against him.

03. The ABJ conditional notice issued by Speed Post to opponent No.03 to appear before this Hon'ble Court On 23/04/2026, the ABJ Conditional Notice to Opponent No.03 is Not served.

Therefore the opponents No.03 is hereby Summoned to appear in this Court in person Before the Nominee of the Deputy registrar of chits, first zone, sitting at, No.32, 2nd Floor, 8th B Cross, 1st main, near Gayathri Ganapathi Temple, Yelahanka New Town, Bengaluru 560064, **on 11-05-2026 at 3.00. P.M.** Without Fall Opponent to Take Notice that in default of Appearance the Dispute will be heard and Disposed Ex-Party and on Merits.

04. Further the opponent No.03 is hereby informed that if he desires to have this attachment raised, he shall furnish cash secutity to the extent of the dispute Claim by depositing the amount to the disputant company and producing the original receipt issued by them to this court on before 11/05/2026 at 3. PM without fail for raising the attachment, if they fail to do so within the stipulated period, this Conditional attachment shall be deemed to have confirmed and made absolute to the extent of the dispute claim as per the award.

SCHEDULE PROPERTY

All that piece and parcel of Property bearing Middle Portion (towards West Side) of Old Katha No.1127/2, Present BBMP Katha No.729/1127/Sy No.91/1/Site No.2, situated at Pattandur Agrahara Village, K. R. Puram Hobli, Bangalore East Taluk, presently under the Administrative Jurisdiction of BBMP and measuring about East to West 30 feet and North to South 80 feet, totally measuring 2400 Sq.feet; with all rights, appurtenances whatsoever hereunder or underneath or above the surface and bounded on; East by: Remaining Portion of same Property bearing Katha No. 1127/2, West by: Remaining Portion of same Property bearing Katha No. 1127/2; North by: Private Property; South by: 40 Feet Road;

Given under my hand & seal of this office on Dated 23/04/2026 at Bangalore.

Nominee of The Deputy Registrar of Chits, Ist Zone, Malleshwaram, Bangalore

---

BEFORE THE NOMINEE OF THE DEPUTY REGISTRAR OF CHITS, FIRST ZONE, MARGOSA ROAD MALLESWARAM AT BANGALORE

DISPUTE NO: DRB-1/CFS/185/2025-2026

DISPUTANT:

M/s Dhanalakshmi Srinivasan Chit Funds (Karnataka) Pvt Ltd No. No.32,2nd Floor, 8th 'B' Cross, 1st Main, Near Gayathri Ganapathi Temple, Yelahanka New Town, Bengaluru-64. Rep. by its Foreman/ Manager, SRI.P. V. Gajendra

OPPONENTS

1. Mr. Mandala Malleswar Rao, S/o Rama Rao Mandala, #402, A-Blocks, G.k Lakeview Apartment, Anantapura gate. Yelahanka, Bengaluru-560064

2.Mr.P.V Siddha Reddy, S/o P. Siva Reddy, Flat No. 7064,6th floor, Tower-7, Wing-01, Prestige Royale Gardens Apartment, Doddaballapur Main Road, Singanayakana halli, Bengaluru-560045.

4 Mrs. Mandala Kanakaveni, W/o mandala Malleswara Rao, #402, A-Blocks, G.k Lakeview Apartment, Anantapura gate. Yelahanka, Bengaluru-560064

5. Mr. Vanam venkata Raju, S/o Janardhan Rao #16. Sri Sai Layout, Harohalli (v) Singanayakanahalli (post) Bengaluru-560064

6.Mr. S. Manjunatha, S/o Late N.Shivanna Clo Shivanna, ward no.01, Lingapur road, J.J Nagar. malur (v), Kolar (Dists)-563130.

NOTICE TO OPPONENTS NO 01 to 06 THROUGH PAPER PUBLICATION

WHEREAS, the Disputant has Instituted the above dispute U/s 64 of The Chit Funds Act, 1982 before The Deputy Registrar of Chits, First Zone, Bangalore for recovery of a sum of Rs. 3,99,978/- (Rupees Three Lakhs Ninety Nine Thousand Nine Hundred and Seventy Eight Only) from the opponents.

The Summons issued By Speed Post to the opponent No.01 to 06 Appear for hearing on 23/04/2026 in this court not duly served. There fore the said opponent here by summons to appear before this court in person on 11/05/2026 at 3.00 PM before The Nominee of the Deputy registrar of chits, first zone, Sitting at, No. No.32,2nd Floor, 8th 'B' Cross, 1st Main, Near Gayathri Ganapathi Temple, Yelahanka New Town, Bengaluru-560064. If they wish to contest the above dispute with all Relavant document failing which the above dispute will be decided as per law in you absence.

Given Under my hand & seal on this office on 23/04/2026 at Bangalore

Nominee of the Deputy Registrar of Chits First Zone Malleshwaram, at Bangalore

---

BEFORE THE NOMINEE OF THE DEPUTY REGISTRAR OF CHITS, FIRST ZONE, MARGOSA ROAD MALLESWARAM AT BANGALORE

DISPUTE NO. DRB-1/CFS/185/2025-2026

DISPUTANT: M/s Dhanalakshmi Srinivasan Chit Funds (Karnataka)Pvt Ltd.

No. No.32,2nd Floor, 8th 'B' Cross, 1 main, Near Gayathri Ganapathi Temple, Yelahanka New Town, Bengaluru-560064.

Branch: Yelahanka

Rep. by its Foreman/ Manager, SRI.P.V.Gajendra..

OPPONENTS

Mr. Mandala Malleshwar Rao and others

OPPONENT NO. 02

Mr.P .V. Siddha Reddy, S/o P. Siva Reddy, Flat No. 7064, 6th Floor, Tower-7, Wing-01, Prestige Royale Gardens Apartment, Doddaballapur Main Road, Singanayakana-halli, Bengaluru-560045

NOTICE OF CONDITIONAL ATTACHMENT OF IMMOVABLE PROPERTY OF OPPONENT NO. 02 UNDER SECTION 68 (1) OF THE CHIT FUNDS ACT, 1982. THROUGH PAPER PUBLICATION

01. WHEREAS, the dispuitant has field the above dispute U/S 64 (1)of the Chit fund Act, 1982, before the Deputy Register of Chits, First zone, Margosa road, Malleshwaram, Bangalore, for recovery of Rs. 3,99,978/- (Rupees Three Lakhs Ninety Nine Thousand Nine Hundred and Seventy Eight Only)with intrest @24 p.annum And the Court Costs From the Opponents.

02. Whereas, it is brought to my notice by the disputant through an application filed under section 68(1) of the Chit fund act 1982, accompanied by an affidavit stating that the opponents No.02. P.V. Siddha Reddy the Subsciber/ Guaranter of this chits and now she is contemplating to dispose off the immovable property belonging to her, as mentioned in the schedule hereunder, with an intention to delay or defeat the enforcement of execution of the award that is likely to be passed in the above dispute against him.

03. The ABJ conditional notice issued by Speed Post to opponent No. 02 to appear before this Hon'ble Court On 23/04/2026, the ABJ Conditional Notice to Opponent No.02 is Not served. Therefore the opponents No.02 is hereby Summoned to appear in this Court in person Before the Nominee of the Deputy registrar of chits, first zone, Sitting at. No. No.32, 2nd Floor, 8th 'B' Cross, 1 main, Near Gayathri Ganapathi Temple, Yelahanka New Town, Bengaluru-560064, on 11/05/2026 at 3.00. P.M. Without Fail Opponent to Take Notice that in default of Appearance the Dispute will be heard and Disposed Ex- Party and on Merits.

04. Further the opponent No.02 is hereby informed that if he desires to have this attachment raised, he shall furnish cash security to the extent of the dispute Claim by depositing the amount to the disputant company and producing the original reciept issued by them to this court on before **11/05/2026 at 3-P.M** without fail for raising the attachment if they fail to do so within the stipulated period, this Conditional attachment shall be deemed to have confirmed and made absolute to the extent of the dispute claim as per the award.

SCHEDULE PROPERTY

SCHEDULE 'A' PROPERTY

ALL THOSE NON AGRICULTURAL CONVERTED LANDS comprised in Sy. Nos 11, 12, 13/1 132, 13/3, 16/2, 17, 18, 19/1A, 19/18, 19/2, 20, 21, 22/1, 22/2, 23, 23/2, 23/3, 24, 25, 26/2A, 28, 26/20, 26/3, 26/4, 26/5A, 26/58, 28/1, 28/2, 28/3, 29, 30, 31, 32/1, 32/2, 45, 48/1 and 48/28, all situated at Avalahalli Village, Yelahanka Hobli, Bangalore North Taluk, Bangalore District in all admeasuring 22 Acres 09 Guntas and Presently bearing Panchayath Khata No.475/507 and e-Khata No.15020020- 2000300571, in the records of Singanaya- kanahalli Gram Panchayeth, Bangalore North and commonly bounded on the :East by : Railway Line and Private Properties: West by : Road (Doddaballapur Road) North by : Private Properties; and South by : Private Properties.

SCHEDULE 'B' PROPERTY:

482,44 Sq. Ft (44,82 Sq.Mtrs) of Undivided share, right, title, interest and ownership in land in Schedule "A" Property.

SCHEDULE 'C' PROPERTY:

All that Residential Apartment bearing No.7064 on Level-6/Fifth Floor situated in Tower-7 of the Marketing Plan (Tower-6 of the sanction Plan), in the Project viz., 'PRESTIGE ROYALE GARDENS', | developed on Schedule 'A' Property and measuring 923 Sq. Ft., of carpet area and 381 Sq. Ft., of proportionate share in common areas such as passages, lobbies, lifts, staircases and other areas of common use and totally measuring 1304 Sq. Ft., of super built-up area, with right to use One Covered car parking space in the Basement/Stilt Floor and the apartment is presently bearing e-Khata No.15020020-2000324450 in the records of Singanaya-Kanahalli Gram Panchayath, Bangalore North and commonly the apartment Wooden Frames and windows of UPVC sliding Panels The walls are built out of Solid Brick and Cement with RCC Roofing and Vitrified/Ceramic Flooring and it has electricity, water and sanitary connections. The Doors are provided with all rights, appurtenances whatsoever hereunder or underneath or above the surface and bounded on; East by : Lift ATT, Apartment No. 7063 in Level-6/Fifth Floor of Tower-7 in 'PRESTIGE ROYALE GARDENS'; West by : Apartment No. 7065 in Level-6/Fifth Floor of Tower-7 in 'PRESTIGE ROYALE GARDENS'; North by: Corridor in Level-6/Fifth Floor of Tower-7 in 'PRESTIGE ROYALE GARDENS'. South by : Open towards Open Space at Tower-7 in PRESTIGE ROYALE GARDENS';

Given under my hand & seal of this office on Dated 23/04/2026 at Bangalore

Nominee of the Deputy Registrar of Chits First Zone Malleshwaram, at Bangalore

---

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

BEFORE THE NOMINEE OF DEPUTY REGISTRAR OF CHITS, FIRST ZONE, MARGOSA ROAD, MALLESWARAM, AT BANGALORE

Dispute No. DRB-1/ CFS/183/ 2025-2026

DISPUTANT: M/s Dhanalakshmi Srinivasan Chit Funds (Karnataka Pvt Ltd)

No. 32, 2nd Floor, 8th B Cross, 1st main, Near Gayathri Ganapathi Temple, Yelahanka New Town, Bengaluru-560064.

Rep, by its Foreman/Manager,

SRI.P.V. Gajendra.

OPPONENTS:

1. Mr.manoj.V S/o mallikarjuna.v #17, Indhu enclave, 1st B cross, Anugraha Layout, B Narayanapura, Mahadevapura, Bangalore - 560016

Off: No.809, New paradise Apartment, Flot No.502, Vision High School, Mahadevapura-560016

2. Mr. Damodaram.S. S/o chinnaswamy Naidu.S No.8 and 9, Flat No: 403, 4th Floor, Neni Paradise Apts Anugraha layout, Near Holy vision school, Mahadevapura, Bangalore-560010

3. Mrs. Kumari.s W/O Damodaram. S, No.8 and 9, Flat No: 403, 4th floor, Neni Paradise Apts Anugraha layout, Near Holy vision school, Mahadevapura, Bangalore-560010.

5. Mr. Vinod Kumar. V, S/o. Mallikarjuna Naidu, Rajarani coliving Apts Spice Garden Layout, Lakshmi Narayanapura, marathahalli, Bangalore-560037

Off: Livving House, 7th Cross, Ashwathnagar, Kalamandir, Marathahalli-560037

NOTICE TO OPPONENTS NO 01 to 05 THROUGH PAPER PUBLICATION

WHEREAS, the Disputant has Instituted the above dispute U/s 64 of The Chit Funds Act, 1982 before The Deputy Registrar of Chits, First Zone, Bangalore for recovery of **a sum of Rs. 10,67,185/- (Rupees Ten Lakhs Sixty Seven Thousand One Hundred and Eighty Five Only)** from the opponents.

The Summons issued By Speed Post to the opponent No.02 and 04, 23/04/2026 in this court not duly Appear for hearing on served.There fore the said opponent here by summons to appear 11/05/2026 at 3.00PM before this court in person on before The Nominee of the Deputy registrar of chits, first zone, Sitting at, No. No.32, 2nd Floor, 8th 'B' Cross, 1st Main, Near Gayathri Ganapathi Temple, Yelahanka New Town, Bengaluru-560064. If they wish to contest the above dispute with all Relavant document failing which the above dispute will be decided as per law in you absence.

Given Under my hand & seal on this office on 23/04/2026 at Bangalore.

Nominee of The Deputy Registrar of Chits, Ist Zone, Malleshwaram, Bangalore

---

BEFORE THE NOMINEE OF DEPUTY REGISTRAR OF CHITS, FIRST ZONE, MARGOSA ROAD, MALLESWARAM, AT BANGALORE

Dispute No. DRB-1/ CFS/183/ 2025-2026

DISPUTANT: M/s Dhanalakshmi Srinivasan Chit Funds (Karnataka Pvt Ltd)

No. 32, 2nd Floor, 8th B Cross, 1st main, Near Gayathri Ganapathi Temple, Yelahanka New Town, Bengaluru-560064.

Branch: **Yelahanka**

Rep, by its Foreman/Manager,

SRI.P.V. Gajendra.

OPPONENTS:Mr. Manoj V. and others

OPPONENT NO. 02

Mr. Damodaram.S S/o Chinnaswamy Naidu .S, No.8 and 9, Flat No: 403, 4th Floor, Neni Paradise Apts Anugraha layout, Near Holy vision school, Mahadevapura, Bangalore -560010

NOTICE OF CONDITIONAL ATTACHMENT OF IMMOVABLE PROPERTY OF OPPONENT NO. 02 UNDER SECTION 68 (1) OF THE CHIT FUNDS ACT, 1982. THROUGH PAPER PUBLICATION

01. WHEREAS, the dispuitant has field the above dispute U/S 64 (1)of the Chit fund Act, 1982, before the Deputy Registar of Chits, First zone, Margosa road, Malleshwaram, Banglore, for recovery of **Rs. 10,67,185/- (Rupees Ten Lakhs Sixty Seven Thousand One Hundred and Eighty Five Only)** with intrest@24 p.annum And the Court Costs From the Opponents.

02. Whereas, it is brought to my notice by the disputant through an application filed under section 68(1) of the Chit fund act 1982, accompanied by an affidavit stating that the **opponents No.02. Damodaram S**. the Subscriber/ Guarantor of this chits and now she is contemplating to dispose off the immovable property belonging to her, as mentioned in the schedule hereunder, with an intention to delay or defeat the enforcement of execution of the award that is likely to be passed in the above dispute against him.

03. The ABJ conditional notice issued by Speed Post to opponent No.02 to appear before this Hon'ble **Court On 23/04/2026, the ABJ Conditional Notice to Opponent No.02** is Not served. Therefore the opponents No.02 is hereby Summoned to appear in this Court in person Before the Nominee of the Deputy registrar of chits, first zone, Sitting at, No. No.32, 2nd Floor, 8th 'B' Cross, 1 main, Near Gayathri Ganapathi Temple, Yelahanka New Town, Bengaluru-560064, **on 11-05-2026 at 3.00. P.M.** Without Fail Opponent to Take Notice that in default of Appearance the Dispute will be heard and Disposed Ex-Party and on Merits.

04. Further the opponent No.02 is hereby informed that if he desires to have this attachment raised, he shall furnish cash secutity to the extent of the dispute Claim by depositing the amount to the disputant company and producing the original receipt issued by them to this court on before 11/05/2026 at 3. P.M without fail for raising the attachment if they fail to do so within the stipulated period, this Conditional attachment shall be deemed to have confirmed and made absolute to the extent of the dispute claim as per the award.

SCHEDULE PROPERTY

All that piece and parcel of Property bearing Site No.A-18, Old Katha No.314/29-18A, Present BBMP Katha Sl No.99,1336, Comprised in Converted Sy Nos. 21 to 24, 26 to 29, 31 to 34, (converted from to agricultural dated: 30.10.1998 non-agricultural residential purpose vide in official order conversion No.B.DIS.ALN. SR(SA)10/94-95, passed by the Special Deputy Commissioner, Bangalore District, Bangalore), situated at in the layout known as 'SILVER SPRINGS' memorandum bearing MUNNEKOLALU VILLAGE, Varthur Hobli, earlier Bangalore South Taluk presently Bangalore East Taluk, Presently within limits of Bruhat Bangalore Mahanagara Palike Ward No. 85 and measuring about East to West on the Northern Side 55 feet 6 inches and on the Southern Side 44 feet 11 inches +23 feet 11 inches +17 feet 02 inches and North to South on Eastern Side 108 feet 01 inch, on the Western Side 41 feet 09 inches, in all measuring 3826 Sq.feet; with all rights, appurtenances whatsoever hereunder or underneath or above the surface and bounded on; **East by:**Road; **West by:** Open Space; **North by:** Open Space; **South by:** Open Space.

Given under my hand & seal of this office on dated 23-04-2026 at Bangalore.

Nominee of The Deputy Registrar of Chits, Ist Zone, Malleshwaram, Bangalore

---

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ
ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HLLAMYS00468133 1. ಕೆ ಡಿ ಸಿದ್ದೇಶ್ ಅಲಿಯಾಸ್ ಸಿದ್ದೇಶ್ ಕೆ ಡಿ ಮಾಲೀಕ ಗಂಗೋತ್ರಿ ಫ್ಯಾಮಿಲಿ ರೆಸ್ಟೋರೆಂಟ್ 2. ಅನಿತಾ ಎಸ್ ಅಲಿಯಾಸ್ ಎಸ್ ಅನಿತಾ	ಆಸ್ತಿ ಸಂಖ್ಯೆ. 151600602700601823, ಖಾತಾ ಸಂಖ್ಯೆ. 1799, ಸೈಟ್ ಸಂಖ್ಯೆ. 727, ಎಂಐಜಿ- 1, ಪೂರ್ವದಿಂದ ಪಶ್ಚಿಮಕ್ಕೆ 8.00 ಮೀಟರ್ ಮತ್ತು ದಕ್ಷಿಣಕ್ಕೆ ಉತ್ತರಕ್ಕೆ 12.00 ಮೀಟರ್ ಅಳತೆ, ಒಟ್ಟು 96.00 ಚದರ ಮೀಟರ್‌ಗಳನ್ನು ಒಳಗೊಂಡಿದೆ, 104.50 ಚದರ ಮೀಟರ್ ಅಳತೆಯ ಆರ್‌ಸಿಸಿ ಕಟ್ಟಡವನ್ನು ಒಳಗೊಂಡಿದೆ ಕೆಎಚ್‌ಬಿ ಕಾಲೋನಿ, ಸತ್ಯಮಂಗಲ, ಹಾಸನ ಕಸಬಾ ಹೋಬಳಿ, ಹಾಸನ- ತಾಲ್ಲೂಕು- 573101, ಕರ್ನಾಟಕದಲ್ಲಿ ಇದೆ.	23.03.2021	ದಿನಾಂಕ 22.01.2026 ರಂತೆ ರೂ. 60,85,122.2/- (ರೂಪಾಯಿ ಅರವತ್ತು ಲಕ್ಷ ಎಂಬತ್ತ ಐದು ಸಾವಿರದ ನೂರ ಇಪ್ಪತ್ತ ಎರಡು ಮತ್ತು ಪೈಸೆ ಎರಡು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್‌ಗಾಗಿ
(ಆರ್ಸಿಲ್ ಸಿಪಿಎಸ್-IV-ಟ್ರಸ್ಟಿನ ಟ್ರಸ್ಟಿ)
ಅಧಿಕೃತ ಅಧಿಕಾರಿ

ಸ್ಥಳ : ಹಾಸನ

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ
ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HLAPBAN00077404 1. ಪ್ರಕಾಶ್ ಚಂದ್ ಜೋಷಿ ಬಿ ಅಲಿಯಾಸ್ ಬಿ ಪ್ರಕಾಶ್ ಚಂದ್ರ ಜೋಷಿ ಮಾಲೀಕ, ಕಮಲ್ ಜುವೆಲ್ಲರ್ಸ್ ಅಂಡ್ ಎಂಟರ್‌ಪ್ರೈಸಸ್ 2. ಸರೋಜ್ ಜೋಷಿ, ಮಾಲೀಕಿ, ಕಮಲಾ ಎಂಟರ್‌ಪ್ರೈಸಸ್ ಅಂಡ್ ಜುವೆಲ್ಲರ್ಸ್	ಗ್ರಾಮ ಠಾಣಾ ಸೈಟ್ ಪ್ರಾಪರ್ಟಿ ಸಂಖ್ಯೆ 2, ಹೊಸ ಮಹಾನಗರ ಪಾಲಿಕೆ ಸಂಖ್ಯೆ 162, ಪಿಐಡಿ ಸಂಖ್ಯೆ 95-42-162, ವಾರ್ಡ್ ಸಂಖ್ಯೆ 95, ಕಾವಲ್ ಭೈರಸಂದ್ರ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಸ್ಥಿತವಾಗಿದ್ದು, ಪ್ರಸ್ತುತ ಈ ಆಸ್ತಿ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 95ರ ವ್ಯಾಪ್ತಿಗೆ ಒಳಪಟ್ಟಿದ್ದು, ಮಹಾನಗರ ಸಂಖ್ಯೆ 162, ಪಿಐಡಿ ಸಂಖ್ಯೆ 95-42-162 ಹೊಂದಿದೆ, ಜಾಗದ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಅಡಿ, ಒಟ್ಟು 900 ಚದರ ಅಡಿ ಆಗಿದೆ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು.	23.03.2021	ದಿನಾಂಕ 09.04.2026 ರಂತೆ ರೂ. 92,98,056.15/- (ರೂಪಾಯಿ ತೊಂಬತ್ತ ಎರಡು ಲಕ್ಷ ತೊಂಬತ್ತ ಎಂಟು ಸಾವಿರದ ಐವತ್ತ ಆರು ಮತ್ತು ಪೈಸೆ ಹದಿನೈದು ಮಾತ್ರ)
2.	ಸಾಲ ಖಾತೆ ನಂ. HHLBGM00411376 1. ರವೀಂದ್ರನಾಥ್ ಎಂ ಬಿ ಪ್ರೊಪೈಟರ್ ಹೋಮ್ ಲೇನ್ 2. ದಿವ್ಯಾ ಆರ್	ಸೈಟ್ ಸಂಖ್ಯೆ 7 ಮತ್ತು 8, ಇ-ಖಾತಾ ಸಂಖ್ಯೆ 150300701901003962 ಹೊಂದಿದ್ದು, ಖಾತಾ ಸಂಖ್ಯೆ 309/7 ಮತ್ತು 8 ಮತ್ತು ಸರ್ವೆ ಸಂಖ್ಯೆ 41, ನಂಜಪ್ಪ ಲೇಔಟ್, ಅರಿಸಿನಕುಂಟೆ ಗ್ರಾಮ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ ಸ್ಥಿತವಾಗಿದ್ದು, ಈ ಜಾಗವು ಸರ್ವೆ ಸಂಖ್ಯೆ 41ರಲ್ಲಿ 10 ಗುಂಟೆ ಭೂಮಿಯಿಂದ ರೂಪಿಸಲ್ಪಟ್ಟಿದ್ದು ಕೃಷಿ ಭೂಮಿಯನ್ನು ವಸತಿ ಉದ್ದೇಶಕ್ಕೆ ಪರಿವರ್ತನೆ ಮಾಡಲು ಬೆಂಗಳೂರು ಗ್ರಾಮೀಣ ಜಿಲ್ಲಾಧಿಕಾರಿ ಕಚೇರಿಯಿಂದ 19.06.1993ರಂದು ಹೊರಡಿಸಿದ B.D.S.A.L.NS.R.(NE)94/1992-93 ಸಂಖ್ಯೆಯ ಪರಿವರ್ತನೆ ಆದೇಶದಂತೆ ರೂಪಿಸಲಾಗಿದೆ, ಜಾಗದ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 70 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿ, ಒಟ್ಟು 2800 ಚದರ ಅಡಿ ಆಗಿದೆ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು.	06.04.2021	ದಿನಾಂಕ 09.04.2026 ರಂತೆ ರೂ. 77,72,028.25/- (ರೂಪಾಯಿ ಎಪ್ಪತ್ತ ಏಳು ಲಕ್ಷ ಎಪ್ಪತ್ತ ಎರಡು ಸಾವಿರದ ಇಪ್ಪತ್ತ ಎಂಟು ಮತ್ತು ಪೈಸೆ ಇಪ್ಪತ್ತ ಐದು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್‌ಗಾಗಿ
(ಆರ್ಸಿಲ್ ಸಿಪಿಎಸ್-IV-ಟ್ರಸ್ಟಿನ ಟ್ರಸ್ಟಿ)
ಅಧಿಕೃತ ಅಧಿಕಾರಿ

ಸ್ಥಳ : ಬೆಂಗಳೂರು

ನಿರುದ್ಯೋಗಿಯಾಗಿದ್ದರೂ ಪತ್ನಿಗೆ ಜೀವನಾಂಶ ನೀಡಲೇಬೇಕು: ಹೈ

ಬೆಂಗಳೂರು: ಈ ಹಿಂದೆ ಹೆಚ್ಚಿನ ಆದಾಯ ಗಳಿಸುತ್ತಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರು ಪ್ರಸ್ತುತ ನಿರುದ್ಯೋಗಿಯಾಗಿದ್ದೇನೆ ಎಂಬ ಕಾರಣ ಕೊಟ್ಟು, ಪತ್ನಿಗೆ ಜೀವನಾಂಶ ನೀಡುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ತಿಳಿಸಿದೆ.

ಮಾಸಿಕ 20 ಸಾವಿರ ರು. ಪಾವತಿಸಲು ನಿರ್ದೇಶನ ನೀಡಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ, ಪತಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಾ.ಕೆ.ಮನ್ಮಥರಾವ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿತು. ಸುಪ್ರೀಂಕೋರ್ಟ್ ಆದೇಶಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, ದೇಹದಲ್ಲಿ ದುಡಿಯುವ ಶಕ್ತಿಯುಳ್ಳ ಗಂಡ ಆದಾಯ ಗಳಿಸುವ ಸಾಮರ್ಥ್ಯ ಹೊಂದಿರುತ್ತಾನೆ. ಕೇವಲ ನಿರುದ್ಯೋಗದ ಕಾರಣ ನೀಡಿ, ಕಾನೂನುಬದ್ಧ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ವಿಲ್ಲ ಎಂದು ಹೇಳಿತು. ಅಲ್ಲದೆ, ಗಂಡನ ಟಿಡಿಎಸ್ ದಾಖಲೆಗಳನ್ನು ಪರಿಗಣಿಸಿ, ಆತನಿಗೆ ಹೆಚ್ಚಿನ ಆದಾಯ ಗಳಿಸುವ ಸಾಮರ್ಥ್ಯವಿದೆ. ಪತ್ನಿ ಉದ್ಯೋಗದಲ್ಲಿದ್ದಾರೆ ಎಂಬ ಕಾರಣ ನೀಡಿ ಜೀವನಾಂಶ ಪಾವತಿಸುವುದನ್ನು ನಿರಾಕರಿಸಲಾಗುವುದಿಲ್ಲ, ಪತ್ನಿ ಲಾಭದಾಯಕ ಉದ್ಯೋಗ ಹೊಂದಿದ್ದಾರೆ ಎಂಬ ಅಂಶದ ಮೇಲೆ ಜೀವನಾಂಶ ನೀಡುವುದನ್ನು ನಿರಾಕರಿಸಲಾಗಿದೆ. ಅಲ್ಲದೆ, ಆಕೆಯ ದಾಂಪತ್ಯ ಜೀವನದಲ್ಲಿ ಅನುಭವಿಸಿದ ಜೀವನ ಶೈಲಿಗೆ ಅನುಗುಣವಾಗಿ ಆದಾಯ ಸಾಕಾಗುತ್ತದೆಯೇ ಎಂದು ಪರಿಶೀಲಿಸಬೇಕು ಎಂದು ಪೀಠ ತಿಳಿಸಿದೆ. ಅಲ್ಲದೆ, ಪತ್ನಿ 70 ಸಾವಿರ ರು. ಜೀವನಾಂಶ ಕೇಳಿದ್ದರೂ, ಕೌಟುಂಬಿಕ ನ್ಯಾಯಾಲಯ ನೀಡಿರುವ 20 ಸಾವಿರ ರು. ಮೊತ್ತ ಸಮಂಜಸವಾಗಿದೆ. ಕೌಟುಂಬಿಕ ನ್ಯಾಯಾ ಲಯದ ಆದೇಶದಲ್ಲಿ ಮಧ್ಯೆ ಪ್ರವೇಶಿಸಬೇಕು ಎಂಬ ಅಂಶ ಕಾಣುತ್ತಿಲ್ಲ ಎಂದು ತಿಳಿಸಿದ ಪೀಠ, ಈವರೆಗೂ ಬಾಕಿ ಉಳಿದಿರುವ ಪಾಲನೆ ಮೊತ್ತವನ್ನು ಮೂರು ತಿಂಗಳೊಳಗೆ ಪಾವತಿಸಬೇಕು ಎಂದು ನಿರ್ದೇಶಿಸಿ, ಅರ್ಜಿಯನ್ನು ವಜಾಗೊಳಿಸಿದೆ.

ಪ್ರಕರಣದ ಹಿನ್ನೆಲೆ

ಅರ್ಜಿದಾರರ ಪತಿ ಮತ್ತು ಪ್ರತಿವಾದಿ ಪತ್ನಿ 2021ರಲ್ಲಿ ಧಾರವಾಡದಲ್ಲಿ ವಿವಾಹವಾಗಿದ್ದರು. ಬಳಿಕ ದಂಪತಿ ನಡುವೆ ಭಿನ್ನಾಭಿಪ್ರಾಯಗಳಿಂದಾಗಿ ಸ್ವಲ್ಪ ಕಾಲ ಜತೆಯಲ್ಲಿದ್ದು, ನಂತರ ಅಂದರೆ 2022ರಲ್ಲಿ ದೂರವಾಗಿದ್ದರು. ಇದಾದ ಬಳಿಕ ಮಾಸಿಕ 70 ಸಾವಿರ ರು. ಜೀವನಾಂಶ ಕೋರಿ ಪತ್ನಿ ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಮಾಸಿಕ 20 ಸಾವಿರ ರು. ಜೀವನಾಂಶ ನೀಡುವಂತೆ ಕೋರ್ಟ್ ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಿ ಪತಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಕಟ್ಟಡದಿಂದ ಜಿಗಿದು ವ್ಯಕ್ತಿ ಆತ್ಮಹತ್ಯೆ

ಬೆಂಗಳೂರು: ಸಂಪಿಗೆಹಳ್ಳಿಯಲ್ಲಿ ನಿರ್ಮಾಣ ಹಂತದಲ್ಲಿರುವ ಅಪಾರ್ಟ್‌ಮೆಂಟ್ ಮೇಲಿಂದ ಜಿಗಿದು ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿವೇಕಾನಂದ (45) ಮೃತ ವ್ಯಕ್ತಿ. ಫ್ಲ್ಯಾಟ್ ಖರೀದಿ ಮಾಡುವ ಉದ್ದೇಶದಿಂದ ಅಪಾರ್ಟ್‌ಮೆಂಟ್‌ಗೆ ಬಂದಿದ್ದ ಅವರು, ಮೆಟ್ಟಿಲುಹಡಿಗೆ ತೆರಳಿ 13ನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರಾಥಮಿಕ ತನಿಖೆಯ ಪ್ರಕಾರ, ವಿವೇಕಾನಂದ ಅವರು ಐದಾರು ಕೋಟಿ ರು. ಸಾಲ ಮಾಡಿದ್ದರು. ಸಾಲಗಾರರು ಹಣ ವಾಪಸ್ ನೀಡುವಂತೆ ಒತ್ತಡ ಹಾಕುತ್ತಿದ್ದರೆಂಬ ಮಾಹಿತಿ ಲಭ್ಯವಾಗಿದೆ. ಘಟನೆ ತಿಳಿದು ಸ್ಥಳಕ್ಕಾಗ ಮಿಸಿದ ಸಾಲಗಾರರು ಆಕ್ರೋಶ ವ್ಯಕ್ತಪಡಿಸಿ, ತಮ್ಮ ಹಣವನ್ನು ವಾಪಸ್ ಕೊಡಿಸುವಂತೆ ಪೊಲೀಸರನ್ನು ಒತ್ತಾಯಿಸಿದ್ದಾರೆ. ಸಾಲಗಾರರ ಕಿರುಕುಳದಿಂ ದಲೇ ನನ್ನ ಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತನ ಪತ್ನಿ ಆರೋಪಿಸಿದ್ದಾರೆ.

BEFORE THE NOMINEE OF THE DEPUTY REGISTRAR OF CHITS, FIRST ZONE, MARGOSA ROAD MALLESWARAM AT BANGALORE

DISPUTE NO: DRB-1/CFS/184/2025-2026

M/s Dhanalakshmi Srinivasan Chit Funds (Karnataka) Pvt Ltd No. No.32,2nd Floor, 8th 'B' Cross, 1 Main, Near Gayathri Ganapathi Temple, Yelahanka New Town, Bengaluru-64. Rep. by its Foreman/ Manager, SRI.P.V. Gajendra ..DISPUTANT

1. Mr. Venkatesh. M, and others

3. Mr. Hanamantappa S/o. Chandrappa. Res:#71/3. Sri Krishna Nilaya. Near. AB Fashion Zone, Basavanapura main road. Bengaluru main road. K.R. Puram-560001. Off: No.25/3 Opp: Malgudi Dhaba, Chinnappanahalli Village, Marathahalli, K,R Puram, Bangalore-560001

4. Mr. Narayan k. S/o. kandaswamy. No. 05. Ediga Road. High Back side. K.R.puram. Bengaluru-560001. Off: No.25/3 Opp: Malgudi Dhaba, Chinnappanahalli Village, Marathahalli, K,R Puram, Bangalore-560001. ...OPPONENTS

NOTICE TO OPPONENTS NO 03 and 04 THROUGH PAPER PUBLICATION

WHEREAS, the Disputant has Instituted the above dispute U/s 64 of The Chit Funds Act, 1982 before The Deputy Registrar of Chits, First Zone, Bangalore for recovery of a sum of Rs. 38,940/- (Rupees Thirty Eight Thousand Nine Hundred and Forty Only) from the opponents.

The Summons issued By Speed Post to the opponent No.03 and 04 Appear for hearing on 23/04/2026 in this court not duly served There fore the said opponent here by summons to appear before this court in person on 11/05/2026 at 3.00 PM before The Nominee of the Deputy registrar of chits, first zone, Sitting at, No. No.32,2nd Floor, 8th 'B' Cross, 1st Main, Near Gayathri Ganapathi Temple, Yelahanka New Town, Bengaluru-560064. If they wish to contest the above dispute with all Relavant document failing which the above dispute will be decided as per law in you absence.

Given Under my hand and seal on this office on 23/04/2026 at Bangalore.

Nominee of the Deputy Registrar of Chits First Zone Malleshwaram, at Bangalore

---

ಹತ್ಯೆಗೈದು ಶವ ಎಸೆದು ಪರಾರಿ

ಬೆಂಗಳೂರು: ಚೀಲದಲ್ಲಿ ತುಂಬಿ ಪುರುಷನ ಶವ ಎಸೆದು ಪರಾರಿಯಾಗಿರುವ ಘಟನೆ ಬೆಂಗಳೂರಿನಲ್ಲಿ ಬೆಳಕಿಗೆ ಬಂದಿದೆ. ಗಂಗಮ್ಮನ ಗುಡಿ ಪೊಲೀಸ್ ಠಾಣಾ ವ್ಯಾಪ್ತಿಯ ಲಕ್ಷ್ಮೀಪುರದ ಬಿಡಿಎ ಲೇಔಟ್‌ನಲ್ಲಿ ಚೀಲದಲ್ಲಿ ಶವ ಪತ್ತೆಯಾಗಿದ್ದು, ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ. ಬೆಳಗ್ಗೆ ವಾಕಿಂಗ್‌ಗೆ ಬಂದ ಸ್ಥಳೀಯರು ನಾಯಿಗಳು ಚೀಲ ಎಳೆಯುತ್ತಿದ್ದನ್ನು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಘಟನಾ ಸ್ಥಳಕ್ಕೆ ಪೊಲೀಸರು ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಹತ್ಯೆಗೈದು ಶವವನ್ನು ಚೀಲಕ್ಕೆ ತುಂಬಿ ಎಸೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ವಿಧಿವಿಜ್ಞಾನ ಪ್ರಯೋಗಾಲಯ ಹಾಗೂ ಸೋಕೋ (ಸೀನ್ ಆಫ್ ಕ್ರೈಂ ಆಫೀಸರ್) ತಂಡದ ಅಧಿಕಾರಿಗಳು ಭೇಟಿ ನೀಡಿದ್ದು, ಪರಿಶೀಲನೆ ನಡೆಸಿದ್ದಾರೆ. ನಿರ್ಜನ ಪ್ರದೇಶದಲ್ಲಿ ಶವ ಪತ್ತೆಯಾಗಿದ್ದು, ಮೃತರ ಗುರುತು ಪತ್ತೆ ಹಚ್ಚಲಾಗುತ್ತಿದೆ. ಅಕ್ಕಪಕ್ಕದ ಠಾಣೆಗಳ ವ್ಯಾಪ್ತಿಯಲ್ಲಿ ಕಾಣೆಯಾದವರ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಸೋಕೋ ತಂಡದ ಪರಿಶೀಲನೆ ಬಳಿಕ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಬ್ಲೂಸ್ಟೋನ್ ಜ್ಯುವೆಲ್ಲರಿ ಅಂಡ್ ಲೈಫ್‌ಸ್ಟೈಲ್ ಲಿಮಿಟೆಡ್ ಪರವಾಗಿ

BLUESTONE

CIN: L72900KA2011PLC059678
ನೋಂದಾಯಿತ ಕಚೇರಿ : ಸೈಟ್ ಸಂ. 89/2 ಲವ ಕುಶ ಆರ್ಕೇಡ್, ಮುನ್ನೇಕೊಳಲು ಗ್ರಾಮ, ಹೊರ ವರ್ತುಲ ರಸ್ತೆ, ಮಾರತ್ತಹಳ್ಳಿ, ಬೆಂಗಳೂರು, ಕರ್ನಾಟಕ, ಭಾರತ - 560037
ದೂರವಾಣಿ: 08045146904 ವೆಬ್‌ಸೈಟ್: www.bluestone.com

31 ಮಾರ್ಚ್ 2026 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಆಡಿಟ್ ಮಾಡಲಾದ ಪ್ರತ್ಯೇಕ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳ ಸಾರಾಂಶ

(ವಿಭಿನ್ನವಾಗಿ ಉಲ್ಲೇಖಿಸದ ಹೊರತು ಎಲ್ಲ ಮೊತ್ತಗಳು ಮಿಲಿಯನ್ ರೂ. ಯಲ್ಲಿ ಇರುತ್ತದೆ)

ವಿವರಗಳು	ಪ್ರತ್ಯೇಕ ಫಲಿತಾಂಶಗಳು					ಕ್ರೋಢೀಕೃತ ಫಲಿತಾಂಶಗಳು				
	ಮುಕ್ತಾಯಗೊಂಡ ತ್ರೈಮಾಸಿಕ			ಮುಕ್ತಾಯಗೊಂಡ ವರ್ಷ		ಮುಕ್ತಾಯಗೊಂಡ ತ್ರೈಮಾಸಿಕ			ಮುಕ್ತಾಯಗೊಂಡ ವರ್ಷ	
	31-03-2026 (ಆಡಿಟ್ ಮಾಡಿದ)	31-12-2025 (ಆಡಿಟ್ ಮಾಡಿಲ್ಲದ)	31-03-2025 (ಆಡಿಟ್ ಮಾಡಿದ)	31-03-2026 (ಆಡಿಟ್ ಮಾಡಿದ)	31-03-2025 (ಆಡಿಟ್ ಮಾಡಿದ)	31-03-2026 (ಆಡಿಟ್ ಮಾಡಿದ)	31-12-2025 (ಆಡಿಟ್ ಮಾಡಿಲ್ಲದ)	31-03-2025 (ಆಡಿಟ್ ಮಾಡಿದ)	31-03-2026 (ಆಡಿಟ್ ಮಾಡಿದ)	31-03-2025 (ಆಡಿಟ್ ಮಾಡಿದ)
ಕಾರ್ಯಾಚರಣೆಗಳಿಂದ ಒಟ್ಟು ಆದಾಯ (ಇತರ ಆದಾಯವೂ ಸೇರಿದಂತೆ)	7,026.90	7,586.40	4,841.26	24,904.11	18,299.20	6,965.60	7,594.15	4,842.91	24,860.00	18,300.36
ಅವಧಿಗೆ ನಿವ್ವಳ ಲಾಭ/ (ನಷ್ಟ) (ತೆರಿಗೆ, ವಿಶೇಷ ಮತ್ತು/ಅಥವಾ ವಿಶಿಷ್ಟ ಐಟಮ್‌ಗಳಿಗೂ ಮೊದಲು)	364.42	714.55	(486.41)	260.00	(2,192.14)	311.81	688.46	(512.77)	131.79	(2,218.37)
ತೆರಿಗೆಗೂ ಮೊದಲು ಅವಧಿಗೆ ನಿವ್ವಳ ಲಾಭ / (ನಷ್ಟ) (ವಿಶೇಷ ಮತ್ತು/ಅಥವಾ ವಿಶಿಷ್ಟ ಐಟಮ್‌ಗಳ ನಂತರ)	364.42	714.55	(486.41)	260.00	(2,192.14)	311.81	688.46	(512.77)	131.79	(2,218.37)
ತೆರಿಗೆ ನಂತರ ಅವಧಿಗೆ ನಿವ್ವಳ ಲಾಭ / (ನಷ್ಟ) (ವಿಶೇಷ ಮತ್ತು/ಅಥವಾ ವಿಶಿಷ್ಟ ಐಟಮ್‌ಗಳ ನಂತರ)	364.42	714.55	(486.41)	260.00	(2,192.14)	311.81	688.46	(512.77)	131.79	(2,218.37)
ಅವಧಿಗೆ ಒಟ್ಟು ಸಮಗ್ರ ಆದಾಯ [ಅವಧಿಗೆ (ತೆರಿಗೆ ನಂತರ) ಸಂಯೋಜಿತ ಲಾಭ/ (ನಷ್ಟ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	361.00	716.94	(488.43)	259.77	(2,200.24)	308.39	690.85	(514.79)	131.56	(2,226.47)
ಈಕ್ವಿಟಿ ಷೇರು ಬಂಡವಾಳ	152.23	151.32	35.23	152.23	35.23	152.23	151.32	35.23	152.23	35.23
ಈ ಹಿಂದಿನ ವರ್ಷ ಆಡಿಟ್ ಮಾಡಿದ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿದಂತೆ ಮೀಸಲುಗಳು (ಮರುಮೌಲ್ಯಮಾನಪನ ಮೀಸಲು ಹೊರತುಪಡಿಸಿ)				18,031.85	8,836.88				17,854.70	8,771.18
ಪ್ರತಿ ಷೇರಿಗೆ ಗಳಿಕೆ (ತಲಾ ರೂ. 1 ರ ಮುಖ ಮೌಲ್ಯ) (ವಾರ್ಷಿಕಗೊಳಿಸಿಲ್ಲದ)										
1. ಪ್ರಾಥಮಿಕ:	2.40	4.72	(17.50)	2.18	(78.86)	2.05	4.55	(18.45)	1.10	(79.74)
2. ಡಿಲ್ಯೂಟೆಡ್:	2.30	4.51	(17.50)	2.07	(78.86)	1.97	4.34	(18.45)	1.05	(79.74)

ಟಿಪ್ಪಣಿ:

ಎ) ಈ ಆಡಿಟ್ ಮಾಡಲಾದ ಪ್ರತ್ಯೇಕ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳನ್ನು ಆಡಿಟ್ ಸಮಿತಿಯು ಪರಿಶೀಲಿಸಿದೆ ಮತ್ತು ನಂತರ 23 ಏಪ್ರಿಲ್ 2026 ರಂದು ನಡೆದ ಕಂಪನಿಯ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಅನುಮೋದಿಸಲಾಗಿದೆ.

ಬಿ) ಕಂಪನಿಯ ಕ್ರೋಢೀಕೃತ ಮತ್ತು ಪ್ರತ್ಯೇಕಿಸಿದ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 133 ರ ಅಡಿಯಲ್ಲಿ ಸೂಚಿಸಲಾದ ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015 ರ (ತಿದ್ದುಪಡಿ ಮಾಡಿದಂತೆ) (Ind AS) ಮತ್ತು ಅನ್ವಯವಾಗುವ ಮಟ್ಟಿಗೆ ಇತರ ಮಾನ್ಯತೆ ಪಡೆದ ಲೆಕ್ಕಪತ್ರ ಮಾನದಂಡಗಳ ಅಭ್ಯಾಸಗಳು ಮತ್ತು ನೀತಿಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ಸಿ) ಮೇಲೆ ನೀಡಲಾಗಿರುವ ಮಾಹಿತಿ ಸೆಬಿ (ಲಿಸ್ಟಿಂಗ್ ಮತ್ತು ಇತರ ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿಗಳು, 2015 ರ ನಿಯಂತ್ರಣ 33 ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಲ್ಲಿಸಲಾದ ತ್ರೈಮಾಸಿಕ ಆರ್ಥಿಕ ಫಲಿತಾಂಶಗಳ ವಿವರವಾದ ಸ್ವರೂಪದ ಸಾರಾಂಶವಾಗಿದೆ. ತ್ರೈಮಾಸಿಕ ಆರ್ಥಿಕ ಫಲಿತಾಂಶಗಳ ಸಂಪೂರ್ಣ ಸ್ವರೂಪವು ಕಂಪನಿಯ ವೆಬ್‌ಸೈಟ್ www.bluestone.com ನಲ್ಲಿ ಮತ್ತು BSE (www.bseindia.com) ಮತ್ತು NSE (www.nseindia.com) ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ.

ಬ್ಲೂಸ್ಟೋನ್ ಜ್ಯುವೆಲ್ಲರಿ ಅಂಡ್ ಲೈಫ್‌ಸ್ಟೈಲ್ ಲಿಮಿಟೆಡ್ ಪರವಾಗಿ
ಸಹಿ/-
ಗೌರವ್ ಸಿಂಗ್ ಕುಶ್ವಾಹ
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
DIN: 01674879

ಸ್ಥಳ: ಬೆಂಗಳೂರು
ದಿನಾಂಕ: 23 ಏಪ್ರಿಲ್ 2026

CONCEPT

ಸಮಾಚಾರ ಸಣ್ಣದಲ್ಲ

ಸೌಂದರ್ಯ ಶಾಲೆಗೆ ಶೇ.100ರ ಫಲಿತಾಂಶ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ -1 ರಲ್ಲಿ ಹಾವನೂರು ಬಡಾವಣೆ ಸೌಂದರ್ಯ ಶಾಲೆಯ ವಿದ್ಯಾರ್ಥಿಗಳು ಶೇ. 99 ಕ್ಕಿಂತ ಹೆಚ್ಚಿನ ಅಂಕಗಳಿಸುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗಿದ್ದ 111 ವಿದ್ಯಾರ್ಥಿಗಳ ಪೈಕಿ 30 ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಉಳಿದ ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾರೆ. 82 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಹಾಗೂ 29 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 3 ವಿದ್ಯಾರ್ಥಿಗಳು ಶೇ. 99ಕ್ಕೂ ಹೆಚ್ಚು ಅಂಕಗಳನ್ನು ಪಡೆದಿರುತ್ತಾರೆ. ಧನುಷ್.ಬಿ. 622(ಶೇ. 99.52), ಮೋಹಿತ್.ಎಸ್. 621 (ಶೇ.99.36), ಪ್ರೇರಣಾ.ಆರ್. 620(ಶೇ.99.2) ಅಂಕಗಳಿಸಿದ್ದಾರೆ. ನಮ್ಮ ಶಾಲೆಯಲ್ಲಿ ಶೇಕಡ ನೂರಕ್ಕೆ ನೂರು ಫಲಿತಾಂಶ ಬಂದಿರುತ್ತದೆ. ವಿದ್ಯಾರ್ಥಿಗಳು ನಮ್ಮ ಶಾಲೆಗೆ ಕೀರ್ತಿ ತಂದಿರುತ್ತಾರೆ ಕಾರ್ಯ ನಿರ್ವಾಹಣ ಅಧಿಕಾರಿಯಾದ ಕೀರ್ತನ್ ಕುಮಾರ್ ಮತ್ತು ಆಡಳಿತ ಮಂಡಳಿಯವರು ವಿದ್ಯಾರ್ಥಿಗಳಿಗೆ ಈ ಮೂಲಕ ಅಭಿನಂದನೆ ತಿಳಿಸಿದ್ದಾರೆ.

ಯುವಕನ ಹತ್ಯೆ: ಐವರ ಬಂಧನ

ಬೆಂಗಳೂರು: ಮೂರು ದಿನಗಳ ಹಿಂದೆ ಪಾರಿವಾಳ ವಿಚಾರಕ್ಕೆ ಯುವಕನೊಬ್ಬನ ಹತ್ಯೆಗೈದಿದ್ದ ಪ್ರಕರಣದಲ್ಲಿ ಐವರನ್ನು ರಾಜಗೋಪಾಲ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ನಂದಿನಿ ಲೇಔಟ್, ಲಗ್ಗೆರೆ ನಿವಾಸಿಗಳಾದ ದರ್ಶನ್(28), ಸುರೇಂದ್ರ(27), ಮಹೇಂದ್ರ(29), ವಿಜಯ್(26) ಹಾಗೂ ದರ್ಶನ್(26) ಬಂಧಿತರು. ಇತರೆ ನಾಲ್ವರು ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಕೊಲೆ ಯಾದ ಮಲ್ಲಿಕಾರ್ಜುನ್ ರಾವ್ ಅವರ ಸ್ನೇಹಿತ ಪ್ರಶಾಂತ್ ಪಾರಿವಾಳ ಸಾಕುತ್ತಿದ್ದ. ಕೆಲ ದಿನಗಳ ಹಿಂದೆ ಆರೋಪಿಗಳು ಆತನ ಪಾರಿವಾಳಗಳನ್ನು ಕಳವು ಮಾಡಿಕೊಂಡಿದ್ದರು. ಈ ವಿಚಾರ ಸಂಬಂಧ ಎ.21 ರಂದು ರಾತ್ರಿ ಲಗ್ಗೆರೆ ಬಳಿ ಆರೋಪಿಗಳನ್ನು ಪ್ರಶ್ನಿಸಲು ಪ್ರಶಾಂತ್ ಜತೆ ಮಲ್ಲಿಕಾರ್ಜುನ್ ರಾವ್ ಕೂಡ ಹೋಗಿದ್ದಾನೆ. ಈ ವೇಳೆ ನಡೆದ ಹೊಡೆದಾಟದಲ್ಲಿ ಆರೋಪಿಗಳು ಮಲ್ಲಿಕಾರ್ಜುನ್‌ಗೆ ಡ್ರ್ಯಾಗರ್‌ನಿಂದ ಹೊಟ್ಟೆಗೆ ಇರಿದು ಹತ್ಯೆಗೈದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ನಗರದ ಹಲವು ಪ್ರದೇಶಗಳಿಗೆ ಭೇಟಿ

ನಗರದಾದ್ಯಂತ ಸಮರ್ಪಕ ಕುಡಿವ ನೀರು ಸರಬರಾಜು

ಬೆಂಗಳೂರು: ನಗರಾದ್ಯಂತ ಕುಡಿಯುವ ನೀರಿನ ಸಮರ್ಪಕ ಸರಬರಾಜು ನಡೆಯುತ್ತಿದ್ದು, ಯಾವುದೇ ವ್ಯತ್ಯಯ ಉಂಟಾದರೂ ತಕ್ಷಣ ಸ್ಪಂದಿಸಲು ಅಗತ್ಯ ಸಿದ್ಧತೆಗಳನ್ನು ಮಾಡಲಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಕಳೆದ ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ಸಂಕಷ್ಟ ಅನುಭವಿಸಿದ್ದ ಕನಕಪುರ ರಸ್ತೆ ಭಾಗದ ಬನಗಿರಿನಗರ, ಭುವನೇಶ್ವರಿನಗರ ಸೇರಿದಂತೆ ಹಲವು ಪ್ರದೇಶಗಳಿಗೆ ಅವರು ಶುಕ್ರವಾರ ಭೇಟಿ ನೀಡಿ, ಪ್ರಸ್ತುತ ನೀರು ಪೂರೈಕೆಯ ಸ್ಥಿತಿಯನ್ನು ಪರಿಶೀಲಿಸಿದರು. ಸ್ಥಳೀಯ ನಿವಾಸಿಗಳೊಂದಿಗೆ ನೇರವಾಗಿ ಸಂವಾದ ನಡೆಸಿ ಅವರ ಅಭಿಪ್ರಾಯಗಳನ್ನು ಕೇಳಿದರು. ಈ ಬಾರಿ ನೀರಿನ ಪೂರೈಕೆ ಉತ್ತಮವಾಗಿರುವುದಾಗಿ ಸ್ಥಳೀಯರು ಸಂತಸ ವ್ಯಕ್ತಪಡಿಸಿದರು. ಬನಗಿರಿನಗರದ ನಿವಾಸಿ ಸುಬ್ಬಮ್ಮ ಮಾತನಾಡಿ, ಕಳೆದ ವರ್ಷ ನೀರಿನ ಸಮಸ್ಯೆ ಹೆಚ್ಚಾಗಿತ್ತು. ಆದರೆ ಈ ಬಾರಿ ಮುಂಜಾಗ್ರತಾ ಕ್ರಮಗಳಿಂದ ಯಾವುದೇ ತೊಂದರೆ ಇಲ್ಲ ಎಂದರು. ಮತ್ತೋರ್ವ ನಿವಾಸಿ ಮಲ್ಲಪ್ಪ, ಮಿನಿ ಟ್ಯಾಂಕ್‌ಗಳು ಮತ್ತು ಕಾವೇರಿ ನೀರಿನ ಸಂಪರ್ಕದಿಂದ ಅನುಕೂಲವಾಗಿದೆ. ಆದರೆ ಒಳಚರಂಡಿ ವ್ಯವಸ್ಥೆ ಇನ್ನೂ ಅಗತ್ಯವಿದೆ ಎಂದು ಮನವಿ ಮಾಡಿದರು.

ಈ ಕುರಿತು ಪ್ರತಿಕ್ರಿಯಿಸಿದ ಅಧ್ಯಕ್ಷ ಡಾ.ರಾಮ್ ಪ್ರಸಾತ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಿರ್ದೇಶನದಂತೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಕ್ರಮ ಕೈಗೊಳ್ಳಲಾಗಿದೆ. ದಿನನಿತ್ಯ ವರದಿಗಳನ್ನು ಪರಿಶೀಲಿಸಿ ಸಮಸ್ಯೆಗಳಿದ್ದರೆ ತಕ್ಷಣ ಪರಿಹರಿಸುತ್ತಿದ್ದೇವೆ. ಕಾವೇರಿ ನೀರನ್ನು ಟ್ಯಾಂಕರ್‌ಗಳು ಹಾಗೂ ಮಿನಿ ಟ್ಯಾಂಕರ್‌ಗಳ ಮೂಲಕ ಸಮರ್ಪಕ ಸೇವೆ ನೀಡಲಾಗುತ್ತಿದೆ ಎಂದರು. ಪರಿಶೀಲನಾ ಭೇಟಿಯಲ್ಲಿ ಜಲಮಂಡಳಿಯ ಮುಖ್ಯ ಅಭಿಯಂತರ ವೆಂಕಟೇಶ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

'ಫೋನ್-ಇನ್'ನಲ್ಲಿ 28 ದೂರು ಸ್ವೀಕಾರ

ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ 'ಫೋನ್-ಇನ್' ಕಾರ್ಯಕ್ರಮವನ್ನು ನಡೆಸಿದರು.

ಬೆಂಗಳೂರು: ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ಶೀಘ್ರ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ 'ಫೋನ್-ಇನ್' ಕಾರ್ಯಕ್ರಮವನ್ನು ನಡೆಸಿದರು.

ಈ ಕಾರ್ಯಕ್ರಮದಲ್ಲಿ ಒಟ್ಟು 28 ದೂರುಗಳನ್ನು ಸ್ವೀಕರಿಸಲಾಗಿದ್ದು, ಸಾರ್ವಜನಿಕರಿಂದ ಬಂದ ಬಹುತೇಕ ಕರೆಗಳು ನೀರಿನ ಬಿಲ್ ಪರಿಷ್ಕರಣೆ ಹಾಗೂ ಸಣ್ಣಪುಟ್ಟ ದುರಸ್ತಿ ಕಾಮಗಾರಿಗಳಿಗೆ ಸಂಬಂಧಿಸಿದ್ದವು. ತಮ್ಮ ಮನೆಗೆ ನೀರು ಸರಿಯಾದ ಪ್ರಮಾಣದಲ್ಲಿ ಬರುತ್ತಿಲ್ಲ, ನೀರು ಸರಬರಾಜಿನ ಅವಧಿ ಹೆಚ್ಚಿಸಿ ಎನ್ನುವ 14 ದೂರುಗಳು ಬಂದಿದ್ದು, ಈ ದೂರುಗಳ ಬಗ್ಗೆ ತಕ್ಷಣವೇ ಸಮಸ್ಯೆ ಬಗೆಹರಿಸಿ ಸಮರ್ಪಕ ನೀರು ಪೂರೈಸುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಥಳದಲ್ಲೇ ಸೂಚನೆ ನೀಡಿದರು.

ಹೊಸ ಪ್ರದೇಶಗಳಿಗೆ ಕಾವೇರಿ ಸಂಪರ್ಕ ಅಭಿಯಾನ: ಇದೇ ವೇಳೆ, ಜಲಮಂಡಳಿಯ ನೀರು ಸರಬರಾಜು ವ್ಯಾಪ್ತಿಗೆ ಇನ್ನೂ ಸೇರ್ಪಡೆಯಾಗದ ಕೆಲವು ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಇರುವುದನ್ನು ಸಾರ್ವಜನಿಕರು ಅಧ್ಯಕ್ಷರ ಗಮನಕ್ಕೆ ತಂದಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿ ಆ ಪ್ರದೇಶಗಳಲ್ಲಿರುವ ಮನೆಗಳಿಗೆ ಕುಡಿಯುವ ನೀರು ಒದಗಿಸಲು ಶೀಘ್ರವೇ 'ಕಾವೇರಿ ಸಂಪರ್ಕ ಅಭಿಯಾನ'ವನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ನಗರದಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಹಾಗೂ ನೀರಿನ ಸದ್ಬಳಕೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ, ನಗರದಾದ್ಯಂತ 'ಮಳೆನೀರು ಕೊಯ್ಲು' ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಬೃಹತ್ ಅಭಿಯಾನವೊಂದನ್ನು ಹಮ್ಮಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಣುಶಕ್ತಿಗಿಂತಲೂ ಯುವಶಕ್ತಿ ಮಿಗಿಲು

ಬೆಂಗಳೂರು: ಅಣುಶಕ್ತಿಗಿಂತಲೂ ಮಿಗಿಲಾದದ್ದು ಯುವಶಕ್ತಿ. ಅವರು ಮನಸ್ಸು ಮಾಡಿದರೆ ನವ ಸಮಾಜದ ನಿರ್ಮಾಣ ಮಾಡಬಹುದು. ಹೀಗಾಗಿ ಯುವಜನರನ್ನು ದುಶ್ಚಟ, ದುರ್ಗುಣಗಳಿಂದ ಮುಕ್ತಗೊಳಿಸಿ, ಆ ಅದ್ಭುತ ಶಕ್ತಿಯನ್ನು ಸುಂದರ ಸಮಾಜದ ನಿರ್ಮಾಣಕ್ಕೆ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾದ ರಾಷ್ಟ್ರೀಯ ಮಹಿಳಾ ಘಟಕ ಮತ್ತು ಯುವ ಘಟಕದ ಪದಾಧಿಕಾರಿಗಳ ಸೇವಾ ದೀಕ್ಷಾ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ಯುವಜನರು ರೀಲ್ಸ್‌ಗಳಲ್ಲಿ ಕಳೆದು ಹೋಗುತ್ತಿದ್ದಾರೆ. ಮದ್ಯ, ಧೂಮಪಾನ, ಮಾದಕದ್ರವ್ಯ ವ್ಯಸನಿಗಳಾಗುತ್ತಿ ದ್ದಾರೆ. ಇವರನ್ನು ಸರಿದಾರಿಗೆ ತರುವ ಕಾರ್ಯ ಯುವ ಘಟಕ, ಮಹಿಳಾ ಘಟಕ ಮಾಡಬೇಕಾಗಿದೆ ಎಂದರು.

ಈ ವೇಳೆ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್, ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಮಾತನಾಡಿದರು. ಾರ್ಯಕ್ರಮದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಶರಣ ಪ್ರಕಾಶ್ ಪಾಟೀಲ್, ಶರಣಬಸಪ್ಪ ದರ್ಶನಾಪೂರ, ಶಾಸಕ ವಿಜಯಾನಂದ ಕಾಶೆಪ್ಪನವರ್, ಮಾಜಿ ಸಚಿವೆ ರಾಣಿ ಸತೀಶ್, ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಕಾಶೆಪ್ಪನವರ್, ಯುವ ಘಟಕದ ಅಧ್ಯಕ್ಷ ವೆಂಕಟರೆಡ್ಡಿ ಪಾಟೀಲ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ, ಹಾನಗಲ್ಲ ಕುಮಾರೇಶ್ವರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ಮಾಜಿ ಸಿಎಂ ಜಗದೀಶ ಶೆಟ್ಟರ್, ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಶರಣ ಪ್ರಕಾಶ್ ಪಾಟೀಲ್, ಶರಣಬಸಪ್ಪ ದರ್ಶನಾಪೂರ, ಶಾಸಕ ವಿಜಯಾನಂದ ಕಾಶೆಪ್ಪನವರ್ ಮತ್ತಿತರರು ಉಪಸ್ಥಿತರಿದ್ದರು.

ತಾಮ್ರದ ತಂತಿ ಕದಿಯುತ್ತಿದ್ದ ಹೈಟೆಕ್ ಖದೀಮರ ಸೆರೆ

ಬೆಂಗಳೂರು: ವಿಮಾನದಲ್ಲಿ ಆಗಮಿಸಿ ಬಿಎಸ್‌ಎನ್‌ಎಲ್‌ನ ಲಕ್ಷಾಂತರ ರೂಪಾಯಿ ಮೌಲ್ಯದ ತಾಮ್ರದ ತಂತಿಗಳನ್ನು ಕಳ್ಳತನ ಮಾಡುತ್ತಿದ್ದ ಉತ್ತರ ಪ್ರದೇಶ ಮೂಲದ ಅಂತರಾಜ್ಯ ಕಳ್ಳರ ತಂಡವನ್ನು ಯಶವಂತಪುರ ಪೊಲೀಸರು ಸಿನಿಮೀಯ ರೀತಿಯಲ್ಲಿ ಬಂಧಿಸಿದ್ದಾರೆ.

ಬಂಧಿತರನ್ನು ಉತ್ತರ ಪ್ರದೇಶದ ನಿವಾಸಿಗಳಾದ ರವಿ ಚವ್ಹಾಣ್, ಸಂದೀಪ್ ಮತ್ತು ಸೈಯದ್ ಜಾಹೇದ್ ಎಂದು ಗುರುತಿಸಲಾಗಿದೆ. ಇವರು ಕೇವಲ ಬೆಂಗಳೂರು ಮಾತ್ರವಲ್ಲದೆ ದೇಶದ ವಿವಿಧ ರಾಜ್ಯಗಳಲ್ಲಿ ಇದೇ ಮಾದರಿಯ ಕಳ್ಳತನ ನಡೆಸುತ್ತಿದ್ದ ವಿಚಾರ ಬೆಳಕಿಗೆ ಬಂದಿದೆ. ಸಾರ್ವಜನಿಕರಿಗೆ ಅನುಮಾನ ಬರದಂತೆ ಬಿಎಸ್‌ಎನ್‌ಎಲ್ ನೌಕರರು ಧರಿಸುವ ಮಾದರಿಯಲ್ಲೇ ವಿಶೇಷ ನೀಲಿ ಬಣ್ಣದ ಸಮವಸ್ತ್ರ ಹೊಲಿಸಿಕೊಂಡಿದ್ದರು. ಬಿಎಸ್‌ಎನ್‌ಎಲ್ ಟೆಲಿಫೋನ್ ಎಕ್ಸ್‌ಚೇಂಜ್‌ಗಳು ಮತ್ತು ರಸ್ತೆ ಬದಿಯ ಪಾದಚಾರಿ ಮಾರ್ಗಗಳಲ್ಲಿರುವ ಇಂಟರ್‌ನೆಟ್ ಬಾಕ್ಸ್‌ಗಳ ಬಳಿ ರಿಪೇರಿ ಮಾಡುವ ನೆಪದಲ್ಲಿ ಹೋಗುತ್ತಿದ್ದರು. ಪಿಕಾಸಿ, ಸುತ್ತಿಗೆ, ಸ್ಕ್ರೂಡ್ರೈವರ್ ಮತ್ತು ಕಟ್ಟರ್ ಬಳಸಿ ಕಬ್ಬಿಣದ ಕಂಬಗಳನ್ನು ಒಡೆದು, ಅದರೊಳಗಿನ ಬೆಲೆಬಾಳುವ ತಾಮ್ರದ ತಂತಿ ಮತ್ತು ಮಾಡ್ಯೂಲ್‌ಗಳನ್ನು ಎಗರಿಸುತ್ತಿದ್ದರು.

ರೈಲಿನಲ್ಲಿ ಸಾಗಾಟ: ಈ ಗ್ಯಾಂಗ್ ಅತ್ಯಂತ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿತ್ತು.ಕಳ್ಳತನ ಮಾಡುವ ಉದ್ದೇಶದಿಂದಲೇ ಈ ತಂಡ ವಿಮಾನದ ಮೂಲಕ ಒಂದು ನಗರದಿಂದ ಮತ್ತೊಂದು ನಗರಕ್ಕೆ ಹಾರುತ್ತಿತ್ತು. ಬೆಂಗಳೂರಿಗೆ ಬಂದಿಳಿದ ಇವರು ಸದಾಶಿವನಗರ, ಮತ್ತಿಕೆರೆ, ಮಲ್ಲೇಶ್ವರಂ ಮತ್ತು ಯಶವಂತಪುರದಲ್ಲಿ ಜುಲೈ 17 ಮತ್ತು 19ರಂದು ಸರಣಿ ಕಳ್ಳತನ ನಡೆಸಿದ್ದರು. ಕಳ್ಳತನ ಮಾಡಿದ ನಂತರ ಕದ್ದ ಮಾಲನ್ನು ಪತ್ತೆಯಾಗದಂತೆ ರೈಲಿನ ಮೂಲಕ ಬೇರೆ ರಾಜ್ಯಗಳಿಗೆ ಸಾಗಿಸಿ ಪರಾರಿಯಾಗುತ್ತಿದ್ದರು.

ಪೊಲೀಸ್ ಕಾರ್ಯಾಚರಣೆ: ಸತತ ಕಳ್ಳತನದಿಂದ ಕಂಗೆಟ್ಟಿದ್ದ ಬಿಎಸ್‌ಎನ್‌ಎಲ್ ಸಿಬ್ಬಂದಿ ಯಶವಂತಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು, ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಜಾಲಾಡಿ ಆರೋಪಿಗಳನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಸರಕಾರಿ ಆಸ್ತಿಗೆ ಹಾನಿ ಮಾಡಿ, ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿದ್ದ ಈ 'ಫ್ಲೈಯಿಂಗ್ ಕಳ್ಳರ' ಬಂಧನದಿಂದ ಬಿಎಸ್‌ಎನ್‌ಎಲ್ ಇಲಾಖೆ ನಿಟ್ಟುಸಿರು ಬಿಟ್ಟಿದೆ. ಸದ್ಯ ಆರೋಪಿಗಳನ್ನು ಜೈಲಿಗಟ್ಟಿರುವ ಪೊಲೀಸರು, ಈ ಜಾಲದಲ್ಲಿ ಇನ್ನೂ ಯಾರಾದರೂ ಭಾಗಿಯಾಗಿದ್ದಾರೆಯೇ ಎಂಬುದನ್ನು ಪತ್ತೆಹಚ್ಚಲು ತನಿಖೆ ಮುಂದುವರಿಸಿದ್ದಾರೆ.



ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ಮಹಾಲಕ್ಷ್ಮಿ ಲೇಔಟ್‌ನ ಕುರುಬರಹಳ್ಳಿಯಲ್ಲಿ ನೂತನ ಕುಡಿಯುವ ನೀರಿನ ಘಟಕ ಮತ್ತು ಡಾ.ರಾಜ್‌ಕುಮಾರ್ ಬಸ್ ನಿಲ್ದಾಣವನ್ನು ಶಾಸಕ ಕೆ.ಗೋಪಾಲಯ್ಯ ಉದ್ಘಾಟಿಸಿದರು. ಈ ವೇಳೆ ಜಯರಾಮಣ್ಣ, ನಾಗರಾಜ್, ಶಿವಾನಂದ, ಎನ್.ರಾಘವೇಂದ್ರ, ವೆಂಕಟರೆಡ್ಡಿ, ಸುರೇಶ್, ನಿಸರ್ಗ ಜಗದೀಶ್ ಹಾಗೂ ಚಾಲುಕ್ಯ ಡಾ.ರಾಜ್ ಟ್ರಸ್ಟ್ ಪದಾಧಿಕಾರಿಗಳು ಸೇರಿ ಇತರಿದ್ದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್‌ಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ

ಕಟ್ಟಡದ ಎತ್ತರ ನಿರ್ಬಂಧ ಸಡಿಲಿಸಿ

ಬೆಂಗಳೂರು: ರಕ್ಷಣಾ ಇಲಾಖೆ ವಿಮಾನ ನಿಲ್ದಾಣ ಗಳ ಸುತ್ತಮುತ್ತಲ ಪ್ರದೇಶದಲ್ಲಿ ವಿಧಿಸಲಾಗಿರುವ ಕಟ್ಟಡಗಳ ಎತ್ತರದ ನಿರ್ಬಂಧಗಳು ಬೆಂಗಳೂರಿನ ಪ್ರಗತಿಗೆ ಅಡ್ಡಿಯಾಗಿದ್ದು, ಸುರಕ್ಷತೆ ಹಾಗೂ ಪ್ರಗತಿಯ ವಿಚಾರವನ್ನು ಗಮನದಲ್ಲಿಟ್ಟುಕೊಂಡು ನಿರ್ಬಂಧಗಳನ್ನು ಸಡಿಲಗೊಳಿಸಿ ಸಮಸ್ಯೆಗಳಿಗೆ ಪರಿಹಾರ ನೀಡುವಂತೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮನವಿ ಮಾಡಿದರು.

ದೆಹಲಿಯಲ್ಲಿ ರಾಜನಾಥ್ ಸಿಂಗ್ ಭೇಟಿಯಾದ ಡಿಕೆಶಿ, ಬೆಂಗಳೂರಿನ ರಕ್ಷಣಾ ಇಲಾಖೆ ಸುಪರ್ದಿಯ ವಿಮಾನ ನಿಲ್ದಾಣಗಳ 20 ಕಿ.ಮೀ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ನಿರಾಕ್ಷೇಪಣಾ ಪತ್ರ ನೀಡುವಾಗ ವಿಮಾನ ನಿಲ್ದಾಣದ ಅಧಿಕಾರಿಗಳು ವಿಪರೀತ ನಿರ್ಬಂಧ ಗಳನ್ನು ವಿಧಿಸುತ್ತಿದ್ದಾರೆ. ಬೆಂಗಳೂರು ವಿಶ್ವದ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ಎಚ್‌ಎಎಲ್ ವಿಮಾನ ನಿಲ್ದಾಣ ಬೆಂಗಳೂರಿನ ಹೃದಯ ಭಾಗದಲ್ಲಿದ್ದು, ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಬೇಡಿಕೆ ಇದೆ. ಆದರೆ ಹೆಚ್ಚುವರಿಯಾಗಿ ವಿಧಿಸಲಾಗಿರುವ ನಿರ್ಬಂಧಗಳು ಈ ಪ್ರದೇಶಗಳಲ್ಲಿ ಅಭಿವೃದ್ಧಿಗೆ ಅಡ್ಡಿಯಾಗಿವೆ ಎಂದು ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ.

ಈ ಸಂಬಂಧ ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿಗಳು, ರಕ್ಷಣಾ ಸಚಿವಾಲಯದ ರಕ್ಷಣಾ ಉತ್ಪಾದನಾ ಇಲಾಖೆ ಕಾರ್ಯದರ್ಶಿಗಳು ಹಾಗೂ ರಕ್ಷಣಾ ಕಾರ್ಯದರ್ಶಿ

ದೆಹಲಿಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿಯಾದರು.

ಗಳಿಗೆ ಪತ್ರಗಳನ್ನು ಬರೆಯಲಾಗಿದೆ. ವಿಮಾನ ಸುರಕ್ಷತೆ ಹಾಗೂ ನಗರದ ಅಭಿವೃದ್ಧಿ ಎರಡರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ನಡೆಸಿ, ಎದುರಾಗಿರುವ ಸಮಸ್ಯೆ ಗಳನ್ನು ಪರಿಹರಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಎಂದು ಮನವಿ ಮಾಡಿದ್ದಾರೆ.

ಪ್ರಸ್ತುತ ಬೆಂಗಳೂರಿನಲ್ಲಿ 4 ವಿಮಾನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಎಚ್‌ಎಎಲ್ ಹಾಗೂ ಯಲಹಂಕ ವಾಯುನೆಲೆ ರಕ್ಷಣಾ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ವಿಮಾನ ನಿಲ್ದಾಣಗಳ ಸುತ್ತಮುತ್ತಲ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಮಾಡಲು ವಿಮಾನ ನಿಲ್ದಾಣ ಅಧಿಕಾರಿಗಳಿಂದ ನಿರಾಕ್ಷೇಪಣ ಪತ್ರ ಪಡೆಯಬೇಕಾಗಿದೆ. ವಿಮಾನ ನಿಲ್ದಾಣದ ಸುತ್ತಮುತ್ತಲ 15 ಕಿ.ಮೀ ವ್ಯಾಪ್ತಿಯಲ್ಲಿ ಕಟ್ಟಡಗಳ ಎತ್ತರದ ಮಿತಿಯನ್ನು 150 ಮೀ. ನಿಗದಿಪಡಿಸ ಲಾಗಿದೆ ಎಂದು ನಿಯಮದಲ್ಲಿ ಸೂಚಿಸಲಾಗಿದೆ. ಆದರೆ ರಕ್ಷಣಾ ಇಲಾಖೆ ವಿಮಾನ ನಿಲ್ದಾಣಗಳು ಈ ವಿಪರೀತ ನಿರ್ಬಂಧ ಹೇರುವುದರ ಜತೆಗೆ 150 ಮೀ. ಎತ್ತರದ ಮಿತಿಯನ್ನು 15 ಕಿ.ಮೀ ಮೀರಿ 20 ಕಿ.ಮೀ ವರೆಗೂ ವಿಸ್ತರಿಸಿವೆ. ಈ ನಿರ್ಬಂಧಗಳು ಈ ಬೆಂಗಳೂರು ನಗರದ ಪ್ರಗತಿಗೆ ಮಾರಕವಾಗಿವೆ. ಸಿಂಗಾಪುರ, ಆಂಸ್ಟರ್‌ಡಾಮ್, ಡಲ್ಲಾಸ್, ಲಂಡನ್ ಹಾಗೂ ದುಬೈ ಸೇರಿದಂತೆ ಅನೇಕ ನಗರಗಳಲ್ಲಿ ವಿಮಾನ ನಿಲ್ದಾಣಗಳನ್ನು ಕಚೇರಿ, ಮನರಂಜನೆ ಸೇರಿದಂತೆ ವಿವಿಧೋದ್ದೇಶಕ್ಕೆ ಬಳಸಲಾಗುತ್ತಿದೆ. ಈ ನಗರಗಳಲ್ಲಿ ವಿಮಾನ ನಿಲ್ದಾಣಗಳು ಕೇವಲ ಸಂಚಾರ ಉದ್ದೇಶಕ್ಕೆ ಮಾತ್ರವಲ್ಲದೇ ಉದ್ಯೋಗದ ಕೇಂದ್ರವಾಗಿ ನಗರ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ಆದ್ದರಿಂದ ಜಿಎಸ್ ಆರ್ 751 (ಇ) ನಿಯಮವನ್ನು ಸಡಿಲಗೊಳಿಸಬೇಕು. 150 ಮೀ. ಎತ್ತರದ ಮಿತಿಯನ್ನು 20 ಕಿ.ಮೀ ಬದಲಿಗೆ 15 ಕಿ.ಮೀ ವ್ಯಾಪ್ತಿಗೆ ಸೀಮಿತಗೊಳಿಸಬೇಕು ಎಂದು ರಾಜ್ಯ ಸರ್ಕಾರದ ವಿವಿಧ ಅಧಿಕಾರಿಗಳು ಕೇಂದ್ರ ರಕ್ಷಣಾ ಇಲಾಖೆ ಅಧಿಕಾರಿಗಳಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದರು.

...75 ಸಾವಿರ ಮಾಸಿಕ ಪರಿಹಾರ

← ಮೊದಲಪುಟದಿಂದ

ಸರಕಾರದ ಪರ ವಕೀಲರು, ಆರೋಪಿ ಮತ್ತವರ ಕುಟುಂಬಸ್ಥರು ಸಂತ್ರಸ್ತೆಗೆ 50 ಲಕ್ಷ ರು. ನೀಡಿ ಮದುವೆಯಾಗುವುದಾಗಿ, ಮದುವೆಯ ಬಳಿಕ ವಿಚ್ಛೇದನ ನೀಡಬೇಕು ಎಂಬ ಷರತ್ತು ವಿಧಿಸಿದ್ದಾರೆ ಎಂದು ಪೀಠಕ್ಕೆ ವಿವರಿಸಿದರು. ಇದಕ್ಕೆ ಆಕ್ಷೇಪಿಸಿದ ಅರ್ಜಿದಾರರ ಪರ ವಕೀಲರು, ಸರಕಾರದ ವಕೀಲರ ವಾದ ಸತ್ಯಕ್ಕೆ ದೂರವಾಗಿದೆ. ಪ್ರಕರಣ ಸಂಬಂಧ ಮಾಧ್ಯಮಗಳ ವಿಚಾರಣೆ ನಡೆಯುತ್ತಿದೆ. ಇದಕ್ಕೆ ತಡೆ ನೀಡಲು ಮನವಿ ಮಾಡಿದರು. ವಾದ ಆಲಿಸಿದ ಪೀಠ, ಅತ್ಯಾಚಾರ ಕೇಸ್‌ಗೆ ತಡೆ ನೀಡಿ, ಮಾಧ್ಯಮದಿಂದ ದೂರವಿರುವಂತೆ ದೂರುದಾರರಿಗೆ ನಿರ್ದೇಶನ ನೀಡಿದೆ.

..ಡಿಕೆಶಿ ಪವರ್ ಗೇಮ್

← ಮೊದಲಪುಟದಿಂದ

ಇದಾದ ಬಳಿಕ ಮಾಧ್ಯಮದ ಮುಂದೆ ಮಾತನಾಡುವಾಗ, 'ದೆಹಲಿಗೆ ಗಾಳಿ ಕುಡಿಯಲು ಬಂದಿಲ್ಲ' ಎನ್ನುವ ಮೂಲಕ ಈ ಭೇಟಿಯ ಹಿಂದೆ ರಾಜಕೀಯ ಸ್ಪಷ್ಟನೆ ಪಡೆಯುವ ಉದ್ದೇಶವಿದೆ ಎನ್ನುವ ಸಂದೇಶ ರವಾನಿಸಿದ್ದಾರೆ.

ಬೆಂಗಳೂರಿಗೆ ವಾಪಸಾಗುವ ಬಗ್ಗೆ ಸ್ಪಷ್ಟನೆ ಇಲ್ಲ ವಾದರೂ, ದೆಹಲಿಯಲ್ಲಿ ಯಾರನ್ನು ಭೇಟಿಯಾಗಿ ದ್ದಾರೆ? ಯಾವ ಸಂದೇಶ ರವಾನಿಸಿದ್ದಾರೆ ಎಂದು ತಿಳಿದು ಬಂದಿದೆ. ಈ ಬಾರಿಯ ದೆಹಲಿಯ ಭೇಟಿಯ ವೇಳೆ, ಡಿ.ಕೆ. ಶಿವಕುಮಾರ್ ಅವರೊಂದಿಗೆ ಸಹೋದರ ಡಿ.ಕೆ. ಸುರೇಶ್ ಮಾತ್ರ ತೆರಳಿರುವುದರಿಂದ ಯಾವೆಲ್ಲ ಬೆಳವಣಿಗೆಗಳು ದೆಹಲಿಯಲ್ಲಿ ನಡೆದಿವೆ ಎನ್ನುವ ಸ್ಪಷ್ಟತೆ ಯಾರಿಗೂ ಸಿಕ್ಕಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಪ್ತರೊಂದಿಗೆ ಡಿನ್ನರ್ ಸಭೆ ನಡೆಸಿರುವ ಹೊತ್ತಿನಲ್ಲಿಯೇ ಡಿ.ಕೆ. ಸಹೋದರರು ದೆಹಲಿಯಲ್ಲಿಯೇ ಮೊಕ್ಕಾಂ ಹೂಡಿರುವುದು ಇನ್ನಷ್ಟು ಕುತೂಹಲಕ್ಕೆ ಕಾರಣವಾಗಿದೆ.

ಕೆಲವರ ಪ್ರಕಾರ ಡಿ.ಕೆ. ಸಹೋದರರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿಯಾಗಿದ್ದಾರೆ ಎನ್ನಲಾಗಿದೆಯಾದರೂ, ಖಚಿತ ಮಾಹಿತಿ ಸಿಕ್ಕಿಲ್ಲ.

..7 ಸಂಸದರು ಆಪ್ ತೊರೆದು ಬಿಜೆಪಿಗೆ

← ಮೊದಲಪುಟದಿಂದ

ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯವಾಗುತ್ತಾ?: ಚಡ್ಡಾ ಸೇರಿ ಒಟ್ಟು ಏಳು ಸಂಸದರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸುವಂತೆ ಎಂದು ರಾಜಸಭಾಧ್ಯಕ್ಷರಿಗೆ ಮನವಿ ಸಲ್ಲಿಸುವುದಾಗಿ ಆಪ್ ನಾಯಕ ಸಂಜಯ್ ಸಿಂಗ್ ಹೇಳಿದ್ದಾರೆ. ಆದರೆ, 10 ಸಂಸದರ ಪೈಕಿ ಏಳು ಸಂಸದರು ಪಕ್ಷಾಂತರ ಮಾಡಿರುವುದರಿಂದ ಪಕ್ಷಾಂತರ ನಿಷೇಧ ಕಾಯ್ದೆ ತೂಗುಗತ್ತಿಯಿಂದ ಚಡ್ಡಾ ಮತ್ತು ಇತರರು ಪಾರಾಗಿದ್ದಾರೆ.

ಕಾಯ್ದೆಯ ಪ್ರಕಾರ, ಯಾವುದೇ ಪಕ್ಷದ ಒಟ್ಟು ಜನಪ್ರತಿನಿಧಿಗಳಲ್ಲಿ ಮೂರನೇ ಎರಡರಷ್ಟು ಮಂದಿ ಅನ್ಯ ಪಕ್ಷಕ್ಕೆ ಹೋದರೆ ಅವರ ಜನಪ್ರತಿನಿಧಿ ಸ್ಥಾನಕ್ಕೆ ಯಾವುದೇ ತೊಂದರೆಯಾಗಲ್ಲ. ರಾಜ್ಯಸಭೆಯಲ್ಲಿ ಆಮ್ ಆದ್ಮಿ ಪಾರ್ಟಿಯ (ಆಪ್) ಒಟ್ಟು 10 ಸದಸ್ಯರಾಗಿದ್ದಾರೆ. ಅವರಲ್ಲಿ ಮೂರನೇ ಎರಡಷ್ಟು ಎಂದರೆ, 6.66 (ರೌಂಡ್ ಅಪ್ 7) ಆಗುತ್ತದೆ. ಈಗ ಚಡ್ಡಾ ಜೊತೆ ಏಳು ಮಂದಿ ಪಕ್ಷ ಬಿಟ್ಟಿರುವುದರಿಂದ ಅವರ ಸಂಸದ ಸ್ಥಾನಕ್ಕೆ ಯಾವುದೇ ಚ್ಯುತಿ ಬರುವುದಿಲ್ಲ.

...ನೂರಾರು ಟನ್ ಪಡಿತರ ಅಕ್ಕಿ ವಶ

← ಮೊದಲಪುಟದಿಂದ

ಕಳೆದ ಕೆಲ ದಿನಗಳಿಂದ ಕೊಪ್ಪಳದ ವಿವಿಧೆಡೆ ಪಡಿತರ ಅಕ್ಕಿಯನ್ನು ಅಕ್ರಮ ಸಾಗಾಣೆ ಪ್ರಕರಣ ಸಾಕಷ್ಟು ಬೆಳಕಿಗೆ ಬಂದಿದ್ದವು. ಈ ಎಲ್ಲ ಅಕ್ರಮಕ್ಕೆ ಈ ಸ್ಥಳವೇ ಮೂಲ ಎನ್ನಲಾಗಿದೆ. ಪಡಿತರ ಅಕ್ಕಿ ಅಕ್ರಮ ಸಂಗ್ರಹಣೆ ಪತ್ತೆ ಆಗಿರುವ ಕುರಿತು ಪ್ರಕರಣ ದಾಖಲಿಸಿಕೊಂಡಿರುವ ಮುನಿರಾಬಾದ್ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಸದ್ಯ ಗಾಳೆಪ್ಪ ಎಂಬುವರ ಜಮೀನಿನಲ್ಲಿ ಕಟ್ಟಡದಲ್ಲಿ ಅಕ್ಕಿ ಸಿಕ್ಕಿದ್ದು, ಇದಕ್ಕೆ ಕಿಂಗ್ ಪಿನ್ ಯಾರು ಎಂಬ ಬಗ್ಗೆಯೂ ಪೊಲೀಸರು ತನಿಖೆ ಮಾಡುತ್ತಿದ್ದಾರೆ.

...ಮೂವರು ಸಿಬ್ಬಂದಿ ಸಸ್ಪೆಂಡ್

← ಮೊದಲಪುಟದಿಂದ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬಹಳ ಸ್ಪಷ್ಟವಾಗಿ ವಸ್ತ್ರ ಸಂಹಿತೆಯ ಬಗ್ಗೆ ವಿವರಿಸಿದೆ. ಕಳೆದ ವರ್ಷದಲ್ಲಿ ನಡೆದ ಇದೇ ತರಹದ ಘಟನೆ ಉಲ್ಲೇಖಿಸಿ ಜನಿವಾರ, ಲಿಂಗ ಇತ್ಯಾದಿ ಧಾರ್ಮಿಕ ದಿರಿಸುಗಳನ್ನು ತೆಗೆಯಬಾರದೆಂದು ಸ್ಪಷ್ಟವಾಗಿ ತರಬೇತಿಯಲ್ಲಿ ತಿಳಿಸಲಾಗಿದೆ. ಆದರೂ ಇಂತಹ ಘಟನೆ ನಡೆದಿದ್ದರೆ ಯಾರೋ ಉದ್ದೇಶ ಪೂರ್ವಕವಾಗಿ ಮಾಡಿದಂತೆ ಮೇಲ್ನೋಟಕ್ಕೆ ಕಂಡುಬರುತ್ತಿದೆ. ಹೀಗಾಗಿ ಈ ಬಗ್ಗೆ ಹಿರಿಯ ಅಧಿಕಾರಿಗಳಿಂದ ವಿಚಾರಣೆ ನಡೆಸಿ ನಿಯಮಾನುಸಾರ ತಕ್ಷಣ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ಪೂರ್ಣ ವರದಿ ಸಲ್ಲಿಸುವಂತೆ ಬೆಂಗಳೂರು ನಗರ ಡಿಸಿಗೆ ಬರೆದ ಪತ್ರದಲ್ಲಿ ಕೆಇಎ ಆಗ್ರಹಿಸಿತ್ತು.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ. Telephone: 08392 -276250
e-mail: dhobellari@gmail.com
No.DHOB/ALS/MPF/02/2025-26/Call-2 Date: 21-4-2026
ಕರೆ-2 ಇ-ಟೆಂಡರ್ ಪ್ರಕಟಣೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬಳ್ಳಾರಿ ವತಿಯಿಂದ ಜಿಲ್ಲಾ ಆಸ್ಪತ್ರೆ ಬಳ್ಳಾರಿ ಇಲ್ಲಿಗೆ 02 ಎಎಲ್‌ಎಸ್ ಆಂಬುಲೆನ್ಸ್ ವಾಹನವನ್ನು ಮಾನ್ಯ ಲೋಕಸಭಾ ಸದಸ್ಯರ ಅನುದಾನದ ಅಡಿಯಲ್ಲಿ ಖರೀದಿಸಲು ಕರೆ-2 ಇ-ಟೆಂಡರ್ ಆಹ್ವಾನಿಸಲಾಗಿದೆ, ಸದರಿ ಇ-ಟೆಂಡರ್‌ನ್ನು https://kppp.karnataka.gov.in/#/portal/portal-home ನಲ್ಲಿ ವೀಕ್ಷಣೆ ಹಾಗೂ ಡೌನ್‌ಲೋಡ್‌ಗೆ ಲಭ್ಯ ವಿರುತ್ತದೆ ಇ-ಟೆಂಡರ್ ಮೊತ್ತ ಹಾಗೂ ಕೊನೆಯ ದಿನಾಂಕ & ಟೆಂಡರ್ ಇಂಡೆಂಟ್ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.
1.ಇ-ಟೆಂಡರ್ ಮೊತ್ತ ರೂ.80.00 ಲಕ್ಷಗಳು ಇರುತ್ತದೆ. ಕೊನೆಯ ದಿನಾಂಕ 04.05.2026 @ 17:00 ಗಂಟೆಗೆ ಇ-ಟೆಂಡರ್ ಇಂಡೆಂಟ್ ಸಂಖ್ಯೆ: DHFWS/2025-26/IND2424.
ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಬಳ್ಳಾರಿ ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/89

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590 018, ಕರ್ನಾಟಕ. ಭಾರತ.
ಸಂಖ್ಯೆ : ವಿ.ತಾ.ವಿ./ಬೆ/ಎಸ್.ಎ.ಪಿ./ಸಿ.ಡಬ್ಲ್ಯೂ-1/03/ಟಿ-741/2026-27/349
ದಿನಾಂಕ : 24-04-2026
ಟೆಂಡರ್ ಪ್ರಕಟಣೆ
ಕುಲಸಚಿವರು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ-ಲಕೋಟೆ ಪದ್ಧತಿಯಲ್ಲಿ) ಇ-ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. ಕೆಲಸದ ಹೆಸರು : Tender for Printing and Supply of Printing Stationery items required for the Forth Coming Examinations to VTU Examination Section, Belagavi on Annual Rate Contract Basis for period of One Year. ಟೆಂಡರಿಗಿಟ್ಟ ಮೊತ್ತ : ರೂ. 51,39,584/- ಮುಂಗಡ ಠೇವಣಿ : ರೂ. 1,03,000/-, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 08-05-2026 ರ 2.30 ರ ವರೆಗೆ. ಟೆಂಡರ್ ತೆರೆಯುವ ದಿನಾಂಕ : 09-05-2026 ರ 4.00 ಘಂಟೆಗೆ. ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ಮತ್ತು www.vtu.ac.in ನೋಡಬಹುದು.
ಸಹಿ/- ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ಡಿಐಪಿಆರ್/ ಬೆಳಗಾವಿ/153/ಮಣಿಪಾಲ್/2026-27

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು – 560070.
ಫೋನ್ ನಂ. 080-26716046 ವೆಬ್‌ಸೈಟ್: http://kppp.karnataka.gov.in
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಜಿಇ-1/ಟೆಂಡರ್/03/2026-27 ದಿನಾಂಕ:23.04.2026
ಕೆ.ಪಿ.ಪಿ.ಪಿ. ಅಲ್ಪಾವಧಿ ಸರ್ವೀಸ್ ಟೆಂಡರ್ ಪ್ರಕಟಣೆ ನೋಟೀಸ್ (ದ್ವಿ-ಲಕೋಟೆ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Service tender for Housekeeping ಕೆ.ಪಿ.ಪಿ.ಪಿ ಮುಖಾಂತರ ಸರ್ವೀಸ್ಸ್ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 30.04.2026 ರ ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್ ಸೈಟ್ http://www.KPPP.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/- ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಬೆಂಗಳೂರು ನಗರ, ಬೆಂಗಳೂರು.
ವಾಸಾಸಂಇ/ವಾಪ್ರ/345/ಎಸ್‌ಎಸ್‌ಸಿ/2026-27

ಕರ್ನಾಟಕ ಸರ್ಕಾರ
ಉಪನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ
ಸುದರ್ಶನ ವೃತ್ತದ ಬಳಿ, ಎನ್.ಜಿ.ಎಸ್.ವೈ ಕಟ್ಟಡ, ಕೊಡಗು ಜಿಲ್ಲೆ, ಮಡಿಕೇರಿ,
ದೂ: 08272-225531 Email: ddswdkodagu@gmail.com
ಸಂಖ್ಯೆ:ಉನಿಸಕಇ:SW-4:ಸಿಆರ್-28:2025-26 ದಿನಾಂಕ:24-04-2026
ಇ-ಟೆಂಡರ್ ಪ್ರಕಟಣೆ
2026-27ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯಡಿ ಮಡಿಕೇರಿ/ ಸೋಮವಾರಪೇಟೆ/ ವಿರಾಜಪೇಟೆ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಛೇರಿ/ ವಿದ್ಯಾರ್ಥಿ ನಿಲಯ/ ವಸತಿ ಶಾಲೆ/ಡಾ॥ ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ/ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಕಛೇರಿ ಬೆರಳಚ್ಚುಗಾರರು/ ಕಂಪ್ಯೂಟರ್/ಡಾಟ ಎಂಟ್ರಿ ಆಪರೇಟರ್/ನರ್ಸ್/ ಪ್ರ.ದ.ಸ/ ದ್ವಿ.ದ.ಸ/ಗ್ರೂಪ್ 'ಡಿ' ನೌಕರರ ಹುದ್ದೆಗಳನ್ನು ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯಲು ಕೆ.ಪಿ.ಪಿ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
ನಿಗಧಿತ ಟೆಂಡರ್ ಫಾರಂನ್ನು ಕೆ.ಪಿ.ಪಿ ಪೋರ್ಟಲ್ (https://kppp.karnataka.gov.in) ಮೂಲಕ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ದಿನಾಂಕ:04-05-2026 ಕೊನೆಯ ದಿನಾಂಕ ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಛೇರಿ, ಸುದರ್ಶನ ವೃತ್ತದ ಹತ್ತಿರ, ಎನ್.ಜಿ.ಎಸ್.ವೈ ಕಟ್ಟಡ ಮಡಿಕೇರಿ ಇವರನ್ನು ಸಂಪರ್ಕಿಸಬಹುದಾಗಿರುತ್ತದೆ.
ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:08272-225531
ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ,ಮಡಿಕೇರಿ

ಪುರಸಭೆ ಕಾರ್ಯಾಲಯ, ಶಿಕಾರಿಪುರ-577427
ಶಿವಮೊಗ್ಗ ಜಿಲ್ಲೆ, ಕರ್ನಾಟಕ ರಾಜ್ಯ,
ದೂರವಾಣಿ ಸಂ: 08187-222221, 08187-223861,
e-mail: ka.shikaripura.tmc@gmail.com
ಸಂಖ್ಯೆ:ಶಿಪುರ/ಸಿಬ್ಬಂದಿ/ಇ ಟೆಂಡರ್/02/2026-27 ದಿನಾಂಕ: 24.04.2026
"ಟೆಂಡರ್ ಪ್ರಕಟಣೆ"
(ಕರ್ನಾಟಕ ಸರ್ಕಾರದ ಸಾರ್ವಜನಿಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಶಿಕಾರಿಪುರ ಪುರಸಭೆಯ, ಸಾಮಾನ್ಯ ನಿಧಿಯಡಿ ಈ ಕೆಳಕಂಡ ಕಾಮಗಾರಿಯ /ಸಾಮಾಗ್ರಿ/ಯಂತ್ರೋಪಕರಣ ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಪ್ರಸಕ್ತ ನೊಂದಾಯಿತ ಅರ್ಹ ಗುತ್ತಿಗೆದಾರರರು/ಏಜನ್ಸಿಯವರು ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ಸ್‌ರಂತೆ ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರರು/ಏಜನ್ಸಿಯವರು ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದು ಭಾಗವಹಿಸಬಹುದಾಗಿದೆ.
" ಅಲ್ಪಾವಧಿ ಟೆಂಡರ್ "

Sl. No.	Indent NUMBER	Estimate Amt.(in Lakh)
	Genera Fund	
1	DMA/2026-27/OW/WORK_INDENT 57386	15.00 lk
2	DMA/2026-27/OW/WORK_INDENT 57131/CALL-3	5.00 lk

*) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 28.04.2026 ಸಮಯ: ಸಂಜೆ:17.30 ಗಂಟೆವರೆಗೆ. *) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 02.05.2026 ಸಮಯ: ಸಂಜೆ:17.30 ಗಂಟೆವರೆಗೆ. *) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.05.2026 ಸಮಯ: ಬೆಳಗ್ಗೆ : 10.30 ಗಂಟೆಗೆ. *) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 04.05.2026 ಸಮಯ: ಬೆಳಗ್ಗೆ : 11.00 ಗಂಟೆಗೆ.
" ಟೆಂಡರ್ "

Sl. No.	Indent NUMBER	Estimate Amt.(in Lakh)
	Genera Fund	
1	DMA/2025-26/BD/WORK_INDENT54184/call-2	13.00 lk
2	DMA/2025-26/SE7050/CALL-3	49.16 lk
3	DMA/2025-26/SE7049/CALL-3	47.65 lk
4	DMA/2025-26/SE6995/CALL-3	49.67 lk

*) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 04.05.2026 ಸಮಯ: ಸಂಜೆ:17.00 ಗಂಟೆವರೆಗೆ. *) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 08.05.2026 ಸಮಯ: ಸಂಜೆ:17.00 ಗಂಟೆವರೆಗೆ. *) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 11.05.2026 ಸಮಯ: ಬೆಳಗ್ಗೆ : 10.30 ಗಂಟೆಗೆ. *) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 11.05.2026 ಸಮಯ: ಬೆಳಗ್ಗೆ : 11.00 ಗಂಟೆಗೆ.
ಸಹಿ/- ಮುಖ್ಯಾಧಿಕಾರಿ, ಪುರಸಭೆ, ಶಿಕಾರಿಪುರ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/127/04/137

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ-2/ಎಇ-3/2026-27/183 ದಿನಾಂಕ:- 23.04.2026
ಅಲ್ಪಾವಧಿ ಕೆಪಿಪಿ ಟೆಂಡರ್ ಪ್ರಕಟಣೆ
ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ 2/ ಎಇ-3/2026-27 ದಿನಾಂಕ: 23.04.2026.
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಹೊನ್ನಾಳಿ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ-2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ : 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಅಡಿ 1 ಕಾಮಗಾರಿಗೆ ಮೊತ್ತ ರೂ. 200.00 ಲಕ್ಷ. (ಇಂಡೆಂಟ್ ಸಂಖ್ಯೆ 35602) ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಇಂಡೆಂಟ್ ಸಂ. 35602
(1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 27.04.2026 ಸಂಜೆ 4.00 ಗಂಟೆಗೆ (2) ಪ್ರಿಬಿಡ್ ಮೀಟಿಂಗ್ ಸ್ಥಳ : ಕಾರ್ಯಪಾಲಕ ಇಂಜಿನಿಯರ್, ಲೋಇ ವಿಭಾಗ, ಪಿ.ಬಿ ರಸ್ತೆ, ದಾವಣಗೆರೆ, ದಿ: 28.04.2026 ಬೆಳಗ್ಗೆ 11.30 ಗಂಟೆಗೆ (3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 06.05.2026 ಸಂಜೆ 4.00 ಗಂಟೆಗೆ (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿ: 07.05.2026 ಸಂಜೆ 4.30 ಗಂಟೆಗೆ
ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.
ವಾಸಾಇ/ಡಿಐಜಿ/41/ ಕೆಎಸ್‌ಎಂಸಿಎ/2026-27
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ
ವಿ. ಸಿ. ಫಾರಂ, ಮಂಡ್ಯ 571 405 ಕರ್ನಾಟಕ, ಭಾರತ
ಎಸ್. ವಿನಯ್ ಕುಮಾರ್, ಆಸ್ತಿ ಅಧಿಕಾರಿಗಳು, ಮೊ.ನಂ: 9448196321
ಮಿಂಚಂಚೆ : eouasmandya@gmail.com
ಸಂಖ್ಯೆ:ಕೃವಿವಿಮ/ಆ.ಅ/ಟೆಂಡರ್/237/2026-27 ದಿ:23.04.2026
ಟೆಂಡರ್ ಪ್ರಕಟಣೆ
(ಸಂಖ್ಯೆ: NO.UASM/EO/TN-19/2026-27 Dt. 23.04.2026)
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯದ ಅಧೀನದಲ್ಲಿರುವ ಕೃಷಿ ಮಹಾವಿದ್ಯಾಲಯ, ಕಾರೆಕೆರೆ ಹಾಸನದಲ್ಲಿ ತರಗತಿಗಳ ಮೊದಲನೆ ಮಹಡಿ ಕಟ್ಟಡ ನಿರ್ಮಾಣ ಮಾಡಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನೋಟಿಫಿಕೇಷನ್, ಶೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು https://kppp.karnataka.gov.in ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ.
ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ:- (1) ಪೂರ್ವ ಬಿಡ್ ಸಭೆ : 19.05.2026 ಬೆಳಿಗ್ಗೆ 10.30 ಗಂಟೆಗೆ. (2) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 22.05.2026 ಸಂಜೆ 4.00 ಗಂಟೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 23.05.2026 ಬೆಳಿಗ್ಗೆ 10.30 ಗಂಟೆಗೆ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 25.05.2026 ಬೆಳಿಗ್ಗೆ 10.30 ಗಂಟೆಗೆ
ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಕೆಲಸದ ಎಲ್ಲಾ ದಿನಗಳಲ್ಲಿ ಮತ್ತು ಆಸ್ತಿ ಅಧಿಕಾರಿಗಳು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯ, ವಿ.ಸಿ.ಫಾರಂ, ಮಂಡ್ಯ-571405 ಇವರನ್ನು ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ: 9448196321.
ಸಹಿ/-ಆಸ್ತಿ ಅಧಿಕಾರಿಗಳು
ವಾಸಾಸಂಇ/ಹಿಸನಿ-ಮಂ/ಕೆಎಸ್‌ಎಂಸಿ&ಎ/071/2026-27

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಸಾಮಾಜಿಕ ಅರಣ್ಯ ಉಪವಿಭಾಗ, ತಿಪಟೂರು
ಕರ್ನಾಟಕ ಅರಣ್ಯ ಇಲಾಖೆ
ಸಂಖ್ಯೆ:ಸಅಸಂ/ಸಾಅಉವಿ/ತಿಪ/ಕಾಮಗಾರಿಟೆಂಡರ್26-27/ವಿವ-50/2025-26 ದಿನಾಂಕ: 18/04/2026
ಹೊರಗುತ್ತಿಗೆ ನೌಕರರನ್ನು ಒದಗಿಸಲು ಇ-ಟೆಂಡರ್ ಪ್ರಕಟಣೆ
ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ ತಿಪಟೂರು ಸಾಮಾಜಿಕ ಅರಣ್ಯ ಉಪ ವಿಭಾಗದ ವ್ಯಾಪ್ತಿಯ ತಿಪಟೂರು, ಚಿಕ್ಕನಾಯಕನಹಳ್ಳಿ, ಗುಬ್ಬಿ, ಕುಣಿಗಲ್ ಮತ್ತು ತುರುವೇಕೆರೆ ವಲಯಗಳಲ್ಲಿ 2026-27ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ನೆಡುತೋಪು ನಿರ್ವಹಣೆ ಮತ್ತು ನೆಡುತೋಪು ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಅರಣ್ಯ ಗುತ್ತಿಗೆದಾರರಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಐಟಂವಾರು ಮರು ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಒಟ್ಟು 55 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.8,67,000./-ಗಳಿಗೆ ಇ.ಎಂ.ಡಿ ಮೊತ್ತ ರೂ.21,675/-ಗಳನ್ನು ಹಾಗೂ ಕನಿಷ್ಠ ಅಂದಾಜು ಮೊತ್ತ ರೂ.1,39,700/-ಗಳಿಗೆ ಇ.ಎಂ.ಡಿ ಮೊತ್ತ ರೂ.3,493/-ಗಳನ್ನು ಪಾವತಿಸಿ ಟೆಂಡರ್‌ನಲ್ಲಿ ಭಾಗವಹಿಸಬೇಕು. ಟೆಂಡರ್ ಸ್ವೀಕರಿಸುವ ದಿನಾಂಕ:04/05/2026 ರಂದು ಮಧ್ಯಾಹ್ನ 3.00 ಗಂಟೆಯವರೆಗೆ, ತಾಂತ್ರಿಕ ಬಿಡ್ ದಿನಾಂಕ:05/05/2026ರಂದು ಮಧ್ಯಾಹ್ನ 3.00 ಗಂಟೆಗೆ ಹಾಗೂ ಆರ್ಥಿಕ ಬಿಡ್ ದಿನಾಂಕ:06/05/2026 ರಂದು ಮಧ್ಯಾಹ್ನ 4.00 ಗಂಟೆಗೆ ತೆರೆಯಲಾಗುವುದು. ಕಾಮಗಾರಿ ವಿವರ, ಇ.ಎಂ.ಡಿ ಹಾಗೂ ಇನ್ನಿತರ ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ. ವೆಬ್‌ಸೈಟ್ ವಿಳಾಸ: https://kppp.karnataka.gov.in
ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ತಿಪಟೂರು
DIPR/TUM/RO-19/26-27/Oysters

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182-222943 Email ID: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ-ಲಕೋಟೆ ಪದ್ಧತಿ) (ಕೆ.ಪಿ.ಪಿ-ಪೋರ್ಟಲ್ ಮೂಲಕ)
ಐಎಫ್‌ಟಿ ಸಂಖ್ಯೆ. 08/2026-27 ದಿನಾಂಕ : 22.04.2026
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಶಿವಮೊಗ್ಗ ತಾಲ್ಲೂಕಿನಲ್ಲಿ 5054-80-190-0-01-132-ಕೆ.ಆರ್.ಡಿ.ಸಿ.ಎಲ್ ಸೇತುವೆಗಳ ಪುನಶ್ಚೇತನ/ದುರಸ್ಥಿ ಕಾಮಗಾರಿ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಭದ್ರಾವತಿ ತಾಲ್ಲೂಕಿನಲ್ಲಿ ಮಲ್ಪೆ-ಮೊಳಕಾಲ್ಮೂರು ರಸ್ತೆ ರಾಜ್ಯ ಹೆದ್ದಾರಿ-65 ಸರಪಳಿ 165.75ಕಿ.ಮೀ ಯಲ್ಲಿರುವ ಭದ್ರಾನದಿ ಸೇತುವೆ ದುರಸ್ತಿ/ಪುರ್ನವಸತಿ ನಿರ್ಮಾಣ ಕಾಮಗಾರಿ (ಇಂಡೆಂಟ್ ನಂ-33058) ಕಾಮಗಾರಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್ ಗಿಟ್ಟ ಮೊತ್ತ ರೂ.156.62 ಲಕ್ಷ, ಮತ್ತು ಇ.ಎಂ.ಡಿ. ಮೊತ್ತ ರೂ.2.35 ಲಕ್ಷ. ಕಾಲಾವಧಿ 11 ತಿಂಗಳು ಮಳೆಗಾಲ ಸೇರಿ ಕೆ.ಪಿ.ಪಿ. ಪೋರ್ಟ್‌ಲ್‌ನಲ್ಲಿ ನಮೂದಿಸಿದಂತೆ. ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್-4 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು, ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 22.04.2026 ರಿಂದ 29.04.2026 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 29.04.2026ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ: 30.04.2026 ರಂದು ಸಂಜೆ 5.30ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 01.05.2026 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು, ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.114-04/ ಝೇಂಕಾರ್/2026-27

ಕರ್ನಾಟಕ ಸರ್ಕಾರ
ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ
ಸಂಖ್ಯೆ:ಸಾಆಹೊ/ಹೊ.ಗು.ಟೆಂಡರು/834/2025-26 ದಿನಾಂಕ:21-04-2026
ಇ-ಟೆಂಡರ್ ಪ್ರಕಟಣೆ
2026-27 ನೇ ಸಾಲಿಗಾಗಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆಯಲ್ಲಿ ಖಾಲಿ ಇರುವ 26 ಗ್ರೂಪ್ ಡಿ ಹುದ್ದೆಗಳಿಗೆ ಶೇ 40% ಗ್ರೂಪ್-ಡಿ ಮತ್ತು ಶೇ 40% 10 ನಾನ್‌ಕ್ಲಿನಿಕ್ ಒಟ್ಟು 20 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಇ-ಪ್ರೋಕ್ಯೂರ್ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಹಾಗೂ ಅರ್ಹವುಳ್ಳ ಟೆಂಡರುದಾರರು ನಿಗದಿತ ಸಮಯದೊಳಗೆ ಇ-ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ಟೆಂಡರುಗಳನ್ನು ಸಲ್ಲಿಸಲು ಕೋರಿದೆ.
e-Tender No.: GHH/TENDER/834 /2025-26. E-Procurement Tender No: DHFWS/2025-26/SE2085 CALL-2. Commencement of downloading of e-Tender forms from website : http:// kppp.karnataka.gov.in ದಿನಾಂಕ:-22-04-2026 ರಿಂದ 06-05-2026 ರಂದು ಸಂಜೆ 4.30 ಗಂಟೆಯುವರೆಗೆ. Last Date for seeking clarification if any: ದಿನಾಂಕ: 05-05-2026 ರಂದು ಬೆಳಗ್ಗೆ 11.00 ಗಂಟೆಯುವರೆಗೆ Last date for uploading of Tender in e-procurement platform: ದಿನಾಂಕ:06-05-2026 ರಂದು ಸಂಜೆ 4.30 ಗಂಟೆಯುವರೆಗೆ. Date, Time & Venue of Opening of Tenders: ದಿನಾಂಕ:08-05-2026 ರಂದು ಬೆಳಗ್ಗೆ 11.30 ಗಂಟೆಗೆ, ಶಸ್ತ್ರಚಿಕಿತ್ಸಕರು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ ಇವರ ಕಛೇರಿಯಲ್ಲಿ ಇ-ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ತೆರೆಯಲಾಗುವುದು. EMD : Rs.1,20,000/-. ವಾರ್ಷಿಕ ಟೆಂಡರ್ ಮೊತ್ತ: 60,00,000/-
ಇ-ಪ್ರೋಕ್ಯೂರ್ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ, ಟೆಂಡರು ಫಾರಂ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/-ಶಸ್ತ್ರಚಿಕಿತ್ಸಕರು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/43

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ
ಕ್ರ.ಸಂ: ಕಾನಿಇಂ/ಸನೀ&ಅಂಅವಿ/ವಿ/ತಾಶಾ/2026-27/251 ದಿನಾಂಕ :23.04.2026
ತಿದ್ದುಪಡಿ ಅಲ್ಪಾವಧಿ ಟೆಂಡರ್ ಪ್ರಕಟಣೆ(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಉಲ್ಲೇಖ: ಈ ಕಛೇರಿ ಅಲ್ಪಾವಧಿ ಟೆಂಡರ ಪ್ರಕಟಣೆ ಸಂಖ್ಯೆ: 167 ದಿನಾಂಕ: 17.04.2026
ಮೇಲಿನ ಉಲ್ಲೇಖದಲ್ಲಿ ಪ್ರಕಟಗೊಂಡ ಟೆಂಡರನಲ್ಲಿರುವ ಕಾಮಗಾರಿಗಳ ಈ ಕೆಳಗಿನಂತೆ ಮಾರ್ಪಾಡಿಸಿ ತಿದ್ದುಪಡಿ ಟೆಂಡರ ಪ್ರಕಟಣೆಯನ್ನು ಹೊರಡಿಸಲಾಗಿದೆ.

ಮೂಲ ಟೆಂಡರ್ ಪ್ರಕಟಣೆ	ತಿದ್ದುಪಡಿ
ಗುತ್ತಿಗೆದಾರರು ಡೌನಲೋಡ್ ಮಾಡಿಕೊಳ್ಳುವ ದಿನಾಂಕ: 18.04.2026	ಗುತ್ತಿಗೆದಾರರು ಡೌನಲೋಡ್ ಮಾಡಿಕೊಳ್ಳುವ ದಿನಾಂಕ: 22.04.2026
ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.04.2026	ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.05.2026
ಪ್ರಿ ಬಿಡ್ ನಿಗದಿಪಡಿಸಿದ ದಿನಾಂಕ 22.04.2026	ಪ್ರಿ ಬಿಡ್ ನಿಗದಿಪಡಿಸಿದ ದಿನಾಂಕ 27.04.2026

ಮೇಲಿನ ಟೆಂಡರ ಅಧಿಸೂಚನೆಯ ಎಲ್ಲಾ ನಿಯಮಗಳು ಮತ್ತು ಷರತ್ತುಗಳು ಬದಲಾವಣೆಯಾಗಿರುವುದಿಲ್ಲ.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ
ವಾಸಾಸಂಇ/ವಿಜಯಪುರ/57/ಕೆಎಸ್‌ಎಂಸಿಎ/2026-27

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.
ಸಂ: ಬೆಂಅಪ್ರಾ/ನಯೋಸ/CLU-580/376/2026-27/(E-215162) ದಿನಾಂಕ: 24.04.2026
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ಕೈಗಾರಿಕಾ(ಹೈಟೆಕ್)'** ವಲಯದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	M/s. Pradhaan Tower HSR Ext. Pvt. Ltd. & Others	ಆನೇಕಲ್	ಸರ್ಜಾಪುರ	ಚೂಡಸಂದ್ರ	22(P)	0-05	ಕೈಗಾರಿಕಾ (ಹೈಟೆಕ್)	ವಸತಿ
					23	0-31		
					24	01-01		
					25	01-22		
					26	03-35		
					35	0-38		
					ಒಟ್ಟು	08-12		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಸರ್ಕಾರಕ್ಕೆ ತೆರಿಗೆಗಳು ಉತ್ಪತ್ತಿಯಾಗುತ್ತದೆ. ಜಮೀನಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಈಗಾಗಲೇ ಮಿಶ್ರ ಅಭಿವೃದ್ಧಿಗಳು ಬಂದಿರುವುದರಿಂದ ವಾಸದ ಬೆಳವಣಿಗೆಗಳನ್ನು ಕೈಗೊಂಡಿದ್ದಲ್ಲಿ ಯೋಜಿತ ಬೆಳವಣಿಗೆಗೆ ಬೇಕಾಗುವ ಮೂಲ ಸೌಕರ್ಯಗಳು ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು **'ಕೈಗಾರಿಕಾ(ಹೈಟೆಕ್)'** ವಲಯದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಸಹಾಯವಾಣಿ/ವಾಟ್ಸಪ್: 94831 66622 (24x7). X @BDAOfficialGoK
ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಸಮಾಚಾರ ಸಣ್ಣದಲ್ಲ

ಎಲ್ಲರ ಸಮ್ಮುಖದಲ್ಲಿ ಸ್ವಾಮೀಜಿ ಲೆಕ್ಕ ಕೊಡಲಿ

ಹರಿಹರ: ಕೃಷಿಕ ಸಮಾಜವೆನ್ನಿಸಿಕೊಂಡ ಹಾಗೂ ಅನ್ನದಾತರಾದ ನಮ್ಮ ಸಮಾಜದ ಅಂದಾಜು 80 ಲಕ್ಷಕ್ಕೂ ಅಧಿಕ ಸಮಾಜಭಾಂದವರು ಪಂಚಮಸಾಲಿ ಪೀಠದ ಅಭಿವೃದ್ದಿಗಾಗಿ ನೀಡಿರುವ ಹಣದ ಲೆಕ್ಕ ನಾವು ಕೇಳುತ್ತಿದ್ದೇವೆ. ವಚನಾನಂದ ಸ್ವಾಮೀಜಿ ಲೆಕ್ಕಕೊಡಲಿ ಎಂದು ಲೆಕ್ಕಕೊಡಿ ಚಳವಳಿ ಹೋರಾಟ ಸಮಿತಿ ಅಧ್ಯಕ್ಷ ಎಂ.ಜಿ ಪರಮೇಶ್ವರಗೌಡ್ರ, ಪೀಠದ ಧರ್ಮದರ್ಶಿಗಳಿಗೆ ಆಗ್ರಹಿಸಿದರು. ಮಾತನಾಡಿದ ಅವರು, ಪಂಚಮಸಾಲಿ ಪೀಠದ ಬಚಲ್ಲಿ ಕಳೆದ 2008 ರಿಂದ 2025 ರ ವರೆಗಿನ, 17 ವರ್ಷದ ಲೆಕ್ಕ ಇದೆ 27 ರಂದು ಪೀಠದ ಆವರಣದಲ್ಲಿ, ಬೃಹತ್ ವೇದಿಕೆ ಯಲ್ಲಿ ನೀಡುತ್ತೇವೆಂದು ಪೀಠದ ಧರ್ಮದರ್ಶಿ ಬಿ.ಸಿ ಉಮಾಪತಿ ಮಾಧ್ಯಮದ ಮೂ ಲಕ ಬಹಿರಂಗಪಡಿಸಿರುವುದು ಸಂತಸದ ವಿಷಯ. ಆದರೆ, ಲೆಕ್ಕ ಕೇಳಿದವರನ್ನು, ಪೀಠದ ಆಡಳಿತಾಧಿಕಾರಿಗಳನ್ನು ಅಮಾನತುಗೊಳಿಸಿದ್ದೆವೆ. ವಚನಾನಂದ ಶ್ರೀಗಳನ್ನು ಉಚಾಟಿಸಿದ್ದೇವೆಂದು, ಸಮಾಜದ ಕೆಲ ಮುಖಂಡರನ್ನು ನಮಗೆ ಸಂಭಂದ ವಿಲ್ಲವೆಂದು ಹೇಳುವ ಇವರು, ಯಾರಿಗೆ ಲೆಕ್ಕವನ್ನು ಕೊಡುತ್ತಾರೆ ಟ್ರಸ್ಟಿಗಳು ಎಂದು ಪ್ರಶ್ನಿಸಿದರು.

ಸಿಎಸ್‌ಆರ್ ನಿಧಿಯ 36 ಬೈಕ್ ಬೆಂಕಿಗೆ ಆಹುತಿ

ರಾಮನಗರ: ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿ ಗೋಡೌನ್‌ನಲ್ಲಿ ಸಂಗ್ರಹಿಸಿದ್ದ ಬೈಕ್‌ಗಳು ಸುಟ್ಟು ಭಸ್ಮ ಆಗಿರುವ ಘಟನೆ ರಾಮನಗರದಲ್ಲಿ ಗುರು ವಾರ ರಾತ್ರಿ ನಡೆದಿದೆ. ರಾಮನಗರದ ಜಿಲ್ಲಾ ಕಾರಾಗೃಹದ ಸಮೀಪ ಇರುವ ಗೋದಾಮಿನಲ್ಲಿ ಅಂಗವಿಕಲರಿಗೆ ವಿತರಣೆ ಮಾಡಲು ಸಂಗ್ರಹಿಸಿದ್ದ ಮೂರು ನಾಲ್ಕು ಚಕ್ರದ ಬೈಕ್‌ಗಳು ಬೆಂಕಿಗೆ ಆಹುತಿಯಾಗಿವೆ. ಟೊಯೋಟಾ ಕಂಪನಿ ಸಿಎಸ್‌ಆರ್ ಫಂಡ್‌ನಲ್ಲಿ ಬೈಕ್‌ಗಳನ್ನು ಖರೀದಿ ಮಾಡಿತ್ತು. ಡಿಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಅಂಗವಿಕಲರಿಗೆ ವಿತರಣೆ ಮಾಡಲು ಗೋಡೌನ್‌ನಲ್ಲಿ ಸಂಗ್ರಹಿಸಲಾಗಿತ್ತು. ಹೀರೋ ಕಂಪನಿಯಿಂದ ಟೋಯೋಟಾ ಕಂಪನಿಗೆ ಬೈಕ್‌ಗಳ ಹಸ್ತಾಂತರಿಸಿ ಖಾಸಗಿ ಗೋಡೌನ್ ನಲ್ಲಿ ಇರಿಸಲಾಗಿತ್ತು. ಆಕಸ್ಮಿಕ ಅಗ್ನಿ ಅವಘಡದಿಂದ 32 ಬೈಕ್ ಸುಟ್ಟು ಕರಕಲಾಗಿವೆ. ಒಟ್ಟು 50 ಬೈಕ್‌ಗಳ ಸಂಗ್ರಹಿಸಿಡಲಾಗಿತ್ತು ಎನ್ನಲಾಗಿದೆ. ಸ್ಥಳಕ್ಕೆ ಅಗ್ನಿ ಶಾಮಕ ಸಿಬ್ಬಂದಿ ಆಗಮಿಸಿ, ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ರಾಮನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕಾರಣ ದಾಖಲಾಗಿದೆ.

ಮೊಬೈಲ್ ಕೊಡದಿದ್ದಕ್ಕೆ ಬಾಲಕ ನೇಣಿಗೆ ಶರಣು

ಹುಬ್ಬಳ್ಳಿ: ವಿಡಿಯೊ ಗೇಮ್ ಆಡಲು ಪೋಷಕರು ಮೊಬೈಲ್ ಕೊಡದಿದ್ದಕ್ಕೆ ಬಾಲಕ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ. ಉದಯನಗರ ನಿವಾಸಿ ಸಮರ್ಥ (14) ಆತ್ಮಹತ್ಯೆ ಮಾಡಿಕೊಂಡ ಬಾಲಕ. ಮೃತ ಸಮರ್ಥ ಫ್ರೀ ಫೈರ್‌ಗೇಮ್‌ಗೆ ಅಡಿಕ್ಟ್ ಆಗಿದ್ದ. ಯಾವಾಗಲೂ ಇದೆ ಗೇಮ್ ಆಡುತ್ತ ಸಮಯ ಕಳೆಯುತ್ತಿದ್ದ. ಇದೇ ಕಾರಣಕ್ಕೆ ಆತನ ತಾಯಿ ಮೊಬೈಲ್ ಕಸಿದುಕೊಂಡು ಗೇಮ್ ಆಡದಂತೆ ಬುದ್ಧಿವಾದ ಹೇಳಿದ್ದರು. ತಾಯಿ ಮಾತಿನಿಂದ ಮನನೊಂದಿದ್ದ ಬಾಲಕ ಕೋಣೆಗೆ ಹೋಗಿ, ಸೀರೆಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಬಗ್ಗೆ ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ನಾಡ ಸಮಸ್ಯೆಗೆ ಸಿಎಂ ಪರಿಹಾರ

- ಸ್ಥಳ: ಕೊಳ್ನಾಡು, ಬಂಟ್ವಾಳ
- ಸಮಸ್ಯೆಯೇನು? ಬಂಟ್ವಾಳ ತಾಲೂಕಿನ ಕೊಳ್ನಾಡು ಗ್ರಾಮದ ಸೆರ್ಕಳ-ಮರಕಡಬೈಲು ರಸ್ತೆ ದುರಸ್ತಿ ಪಡಿಸುವ ಬಗ್ಗೆ.
- ಪರಿಹಾರ: ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲೂಕಿನ ಕೊಳ್ನಾಡು ಗ್ರಾಮದ ಸೆರ್ಕಳ-ಮರಕಡಬೈಲು ರಸ್ತೆ ದುರಸ್ತಿ ಪಡಿಸಲು ಆಗ್ರಹಿಸಿ ಸಾರ್ವಜನಿಕರೊಬ್ಬರು ದೂರು ಸಲ್ಲಿಸಿದರು. ಈ ಹಿನ್ನೆಲೆ ಸ್ಥಳ ಪರಿಶೀಲನೆ ನಡೆಸಿದ ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳು ರಸ್ತೆ ದುರಸ್ತಿಗೆ 37 ಲಕ್ಷ ರು.ಅನುದಾನಕ್ಕೆ ಡಿಪಿಆರ್ ಸಿದ್ಧ ಪಡಿಸಿದ್ದಾರೆ.

ದಿನ ವಿಶೇಷ

25 ಏಪ್ರಿಲ್ 2026 ಶನಿವಾರ

» ಸೂರ್ಯಾಸ್ತ	: 6-50
» ತಿಥಿ	: ನವಮಿ
» ನಕ್ಷತ್ರ	: ಆಶ್ಲೇಷ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ವಸಂತ
» ಮಾಸ	: ವೈಶಾಖ
» ಪಕ್ಷ	: ಶುಕ್ಲಪಕ್ಷ

ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್ | ಕೃಷಿ ಲಾಭದಾಯಕಗೊಳಿಸಲು ಸರಕಾರ ಹಲವು ಕ್ರಮ, ಕೈಗಾರಿಕೋದ್ಯಮಿಗಳ ಸಹಕಾರ ಅಗತ್ಯ

ಕೃಷಿಯಲ್ಲಿ ಎಐ ತಂತ್ರಜ್ಞಾನ ಬಳಕೆ ಆಗಲಿ: ಸಿಎಂ

ಬೆಂಗಳೂರು: ಮಾಹಿತಿ ತಂತ್ರಜ್ಞಾನದಲ್ಲಿ ಬೆಂಗಳೂರು ರಾಜಧಾನಿಯಾದಂತೆ, ಕೃಷಿ ತಂತ್ರಜ್ಞಾನದಲ್ಲಿಯೂ ಬೆಂಗಳೂರು ರಾಜಧಾನಿಯಾಗಬೇಕು. ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಕೃತಕ ಬುದ್ಧಿಮತ್ತೆ ಸೇರಿದಂತೆ ಎಲ್ಲ ಕ್ಷೇತ್ರಗಳ ತಂತ್ರಜ್ಞಾನ ಬಳಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಆಯೋಜಿಸಿದ್ದ ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್-2026ನ್ನು ಉದ್ಘಾಟಿಸಿ ಮಾತನಾಡಿ, ಭಾರತ ದೇಶ ಕೃಷಿ ಪ್ರಧಾನ ದೇಶ. ಕೃಷಿ ಸುಸ್ಥಿರಗೊಳಿಸುವುದು ಹಾಗೂ ಲಾಭದಾಯಕಗೊಳಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಇಂದಿನ ಯುವಜನತೆ ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಕೃಷಿ ಲಾಭದಾಯಕವಾದರೆ ಯುವಜನತೆ ಸಹಜವಾಗಿ ಕೃಷಿಯತ್ತ ಮುಖಮಾಡುತ್ತಾರೆ. ಸರಕಾರ ಕೃಷಿಯನ್ನು ಲಾಭದಾಯಕಗೊಳಿಸಲು ಹಲವು ಯೋಜನೆ ರೂಪಿಸಿದ್ದು ಈ ಉದ್ದೇಶಕ್ಕೆ ಕೈಗಾರಿಕೆಗಳೂ ಕೈಜೋಡಿಸಬೇಕು ಎಂದರು.

ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್ ರೈತರಿಗೆ ಸಹಕಾರಿಯಾಗಿದೆ. ರೈತರಿಗೆ ಉಪಯುಕ್ತವಾದ ಈ ಕಾರ್ಯಕ್ರಮದಲ್ಲಿ ಸಾವಯವ ಕೃಷಿ ಹಾಗೂ ಯಂತ್ರೋಪಕರಣಗಳ ವಸ್ತುಪ್ರದರ್ಶನ ಏರ್ಪಡಿಸಿರುವುದು ಉತ್ತಮವಾಗಿದೆ. ಆದರೆ ವಸ್ತುಪ್ರದರ್ಶನವನ್ನು ಪ್ರತ್ಯೇಕವಾಗಿ ಆಯೋಜಿಸುವುದು ಉತ್ತಮವಾಗಿದೆ. ಇಂತಹ ಕಾರ್ಯಕ್ರಮಗಳಲ್ಲಿ ರೈತರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸುವಂತಾಗಬೇಕು. ಕೃಷಿ ಕ್ಷೇತ್ರದಲ್ಲಿನ ಹೊಸ ಬದಲಾವಣೆಗಳು ಪ್ರತಿ ರೈತರನ್ನೂ ತಲುಪಬೇಕು. ಈ ದಿಸೆಯಲ್ಲಿ ಎಫ್‌ಕೆಸಿಸಿಐನ ಪ್ರಯತ್ನ ಉತ್ತಮವಾಗಿದೆ ಎಂದರು.

ಎಫ್‌ಕೆಸಿಸಿಐನಿಂದ ಆಯೋಜನೆ ಮಾಡಿದ್ದ ಗ್ಲೋಬಲ್ ಅಗ್ರಿಟೆಕ್ ಸಮ್ಮಿಟನ್ನು ಉದ್ಘಾಟಿಸಿ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ರಾಜ್ಯದ ಆರ್ಥಿಕತೆಗೆ ಕೃಷಿ ಕ್ಷೇತ್ರದ ಮಹತ್ವವದ್ದು: ರಾಜ್ಯದಲ್ಲಿ ಕೃಷಿ ಹಾಗೂ ಕೃಷಿ ತಂತ್ರಜ್ಞಾನ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧವಾಗಿರುವ ಸರಕಾರ, ಕೃಷಿಕರ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಕಾರ್ಯಗತಗೊಳಿಸಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಅಗ್ರಿ-ಟೆಕ್ ಸಮಿಟ್-2026ರ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ, ರಾಜ್ಯ ಆರ್ಥಿಕತೆಯಲ್ಲಿ ಕೃಷಿಯ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಒಟ್ಟು ರಾಜ್ಯದ ಆದಾಯದಲ್ಲಿ ಶೇಕಡಾ 17ರಷ್ಟು ಕೊಡುಗೆ ನೀಡುವುದರೊಂದಿಗೆ, ಶೇಕಡಾ 58ರಷ್ಟು ಜನರಿಗೆ ಉದ್ಯೋಗವನ್ನು ಒದಗಿಸುವ ಪ್ರಮುಖ ಕ್ಷೇತ್ರವಾಗಿದೆ. 2025-26ನೇ ಸಾಲಿನಲ್ಲಿ ದೇಶದ ಆಹಾರ ಉತ್ಪಾದನೆ 355 ದಶಲಕ್ಷ ಟನ್ ತಲುಪುವ ನಿರೀಕ್ಷೆಯಿದ್ದು, ಕರ್ನಾಟಕ ರಾಜ್ಯದಲ್ಲಿಯೂ ಆಹಾರ ಉತ್ಪಾದನೆ 155-160 ದಶಲಕ್ಷ ಟನ್ ಮಟ್ಟದಲ್ಲಿ ಸಾಧನೆಯಾಗಿದೆ ಎಂದರು. ರಾಜ್ಯ ಸರಕಾರದ ಸೂಕ್ತ ಯೋಜನೆಗಳು, ಕೃಷಿ ವಿಜ್ಞಾನಿಗಳ ಸಂಶೋಧನೆಗಳು ಮತ್ತು ರೈತರ ಪರಿಶ್ರಮದ ಪರಿಣಾಮವಾಗಿ ಕೃಷಿ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿ ಕಂಡುಬಂದಿದೆ. ತೋಟಗಾರಿಕೆ ಉತ್ಪಾದನೆ ಹಾಗೂ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಸಂಸ್ಕರಣೆ, ಪ್ಯಾಕೇಜಿಂಗ್, ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆ ಸಂಪರ್ಕವನ್ನು ಬಲಪಡಿಸುವ ಕ್ರಮಗಳನ್ನು ಕೈಗೊಳ್ಳಲಾಗಿದೆ. 2026-27ನೇ ಸಾಲಿನ ಬಜೆಟ್‌ನಲ್ಲಿ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆಯಡಿ ಮುಂದಿನ ಮೂರು ವರ್ಷಗಳಿಗೆ 100 ಕೋಟಿ ರು. ಅನುದಾನ ಘೋಷಿಸಲಾಗಿದೆ. ಈ ಯೋಜನೆ ಗ್ರಾಮೀಣ ರೈತರ ಆದಾಯವನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ ಎಂದರು.

ಕೃಷಿಭಾಗ್ಯ ಯೋಜನೆ ಪುನ: ಜಾರಿ

ರಾಜ್ಯದಲ್ಲಿ ಒಣಭೂಮಿಯ ಪ್ರಮಾಣ ಹೆಚ್ಚಿದ್ದು, ಸಣ್ಣಹಿಡುವಳಿದಾರರಿಗೆ ಕೃಷಿಯನ್ನು ಲಾಭದಾಯಕ ಗೊಳಿಸಬೇಕಿದೆ. ಆದ್ದರಿಂದ ನಮ್ಮ ಸರ್ಕಾರ ಕೃಷಿ ಭಾಗ್ಯ ಯೋಜನೆಯನ್ನು ಜಾರಿಗೆ ತಂದಿತು. ಹೆಚ್ಚು ಒಣಭೂಮಿಯಿರುವ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಬಿಜೆಪಿಯವರು ಅಧಿಕಾರಕ್ಕೆ ಬಂದಾಗ ಕೃಷಿಭಾಗ್ಯವನ್ನು ಸ್ಥಗಿತಗೊಳಿಸಿದ್ದು, ನಮ್ಮ ಸರಕಾರ ಈ ಯೋಜನೆಗೆ ಮರುಜಾರಿಗೊಳಿಸಿದೆ. ಸುಮಾರು 83 ಲಕ್ಷ ರೈತರಿಗೆ 70 ಸಾವಿರ ಕೋಟಿ ರು.ಗಳ ಕೃಷಿಸಾಲ ನೀಡಲಾಗಿದೆ. ಕಳೆದ ವರ್ಷ 8 ಸಾವಿರ ಕೋಟಿ ರು.ಗಳನ್ನು ಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯಗಳಿಗೆ ಇಡಲಾಗಿತ್ತು. ಬಂಡವಾಳ ಹೂಡಿಕೆ ಅಧಿಕಗೊಳ್ಳಬೇಕು. ಕೈಗಾರಿಕೆ, ಗ್ರಾಮೀಣಾಭಿವೃದ್ಧಿಯಲ್ಲಿ ಕರ್ನಾಟಕ ಮೊದಲನೇ ಸ್ಥಾನದಲ್ಲಿದ್ದು, ಕೃಷಿ ಕ್ಷೇತ್ರದಲ್ಲಿಯೂ ಹೂಡಿಕೆಗಳು ಹೆಚ್ಚಾಗಬೇಕು ಎಂದು ಸಿಎಂ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

> ರಾಜ್ಯದ 49 ಕೃಷಿ ಉತ್ಪನ್ನಗಳಿಗೆ ಎಐ ಟ್ಯಾಗ್ ದೊರೆತಿದೆ. ಇದರಿಂದ ಜಾಗತಿಕ ಮಟ್ಟದಲ್ಲಿ ರಫ್ತು ಅವಕಾಶಗಳು ವೃದ್ಧಿಯಾಗಿವೆ. ಕೃಷಿ ಉತ್ಪನ್ನಗಳ ಅಂತಾರಾಷ್ಟ್ರೀಯ ಮಾರುಕಟ್ಟೆ ಪ್ರವೇಶವನ್ನು ಮತ್ತಷ್ಟು ಬಲಪಡಿಸುವತ್ತ ಸರಕಾರ ಕ್ರಮ ಕೈಗೊಳ್ಳುತ್ತಿದೆ. ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ರಾಜ್ಯ ಮುಂಚೂಣಿಯಲ್ಲಿದ್ದು, 2020-2025 ಅವಧಿಯಲ್ಲಿ 6500 ಘಟಕಗಳನ್ನು ಸ್ಥಾಪಿಸಿ ಸುಮಾರು 90 ಸಾವಿರ ಜನರಿಗೆ ಉದ್ಯೋಗ ಒದಗಿಸಲಾಗಿದೆ.
>
> -ಚಲುವರಾಯಸ್ವಾಮಿ, ಕೃಷಿ ಸಚಿವ

ಬಾಗಲಕೋಟೆ ವಿವಿ ಗೌರವ ಡಾಕ್ಟರೇಟ್ ಪದವಿ ಪ್ರದಾನ

ಜಮಖಂಡಿ ನಗರದ ಬಿಎಲ್‌ಡಿಇ ಆವರಣದಲ್ಲಿ ನಡೆದ ಬಾಗಲಕೋಟೆ ವಿವಿ ಪ್ರಥಮ ಘಟಿಕೋತ್ಸವದಲ್ಲಿ ಪದ್ಮಭೂಷಣ ಪುರಸ್ಕೃತ ಬಾಹ್ಯಾಕಾಶ ವಿಜ್ಞಾನಿ ಎಸ್.ನಂಬಿ ನಾರಾಯಣ ಹಾಗೂ ಟೆಕ್ ಉದ್ಯಮಿ ಮಹೇಶ ಬೆಲ್ಲದ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆಸುವ ಘಟನೆ ಕೊನೆಯಾಗಲಿ: ಆರ್.ಅಶೋಕ

ಕಾಂಗ್ರೆಸ್ ಸರಕಾರದಿಂದ ಹಿಂದೂಗಳಿಗೆ ಧಕ್ಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್‌ನ ಕುಮ್ಮಕ್ಕಿನಿಂದಾಗಿ ಸಿಇಟಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸುವ ಘಟನೆಗಳು ನಡೆಯುತ್ತಿವೆ. ಈ ಘಟನೆ ಇಲ್ಲಿಗೆ ಕೊನೆಯಾಗಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದರು.

ತಪ್ಪಿತಸ್ಥ ಸಿಬ್ಬಂದಿಯ ಬಂಧನಕ್ಕೆ ಆಗ್ರಹಿಸಲು ಪೊಲೀಸ್ ಆಯುಕ್ತರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಸಿಇಟಿ ಪರೀಕ್ಷೆ ಬರೆಯಲು ಹೋದ ವಿದ್ಯಾರ್ಥಿಯ ಜನಿವಾರ ತೆಗೆಸಿ ದೌರ್ಜನ್ಯ ಮಾಡಿರುವ ಘಟನೆ ನಡೆದಿದೆ. ತಂದೆ ತಾಯಿ ತೀರಿಕೊಂಡಾಗ ಮಾತ್ರ ಮಕ್ಕಳು ಜನಿವಾರ ತೆಗೆದುಹಾಕುತ್ತಾರೆ.

ಪರೀಕ್ಷೆ ಬರೆಯಲು ಹೋದ ವಿದ್ಯಾರ್ಥಿಯ ಜನಿವಾರ ತೆಗೆಸಿದರೆ ಆತನ ಮಾನಸಿಕ ಸ್ಥಿತಿ ಏನಾಗಬಹುದು ಎಂದು ಆಲೋಚಿಸಬೇಕಿತ್ತು. ಈ ಬಗ್ಗೆ ಹೈಕೋರ್ಟ್ ಸ್ಪಷ್ಟವಾಗಿ ಆದೇಶ ಮಾಡಿದ್ದರೂ ಸರಕಾರ ಈ ತಪ್ಪು ಮಾಡಿದೆ ಎಂದರು.

ಹಿಂದೂ ವಿರೋಧಿ ಸರಕಾರ ಶೀಘ್ರ ಪತನ

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಪತನವಾಗಲಿದೆ ಎಂದು ಆರ್.ಅಶೋಕ ಹೇಳಿದ್ದಾರೆ. ಕಾಂಗ್ರೆಸ್ ಹಿಂದೂ ಆಚಾರ-ವಿಚಾರಗಳನ್ನು ದ್ವೇಷಿಸುತ್ತಿದೆ. ರಂಜಾನ್ ತಿಂಗಳಲ್ಲಿ ಉರ್ದು ಮಾಧ್ಯಮ ಶಾಲೆಗಳ ಸಮಯ ಬದಲಾವಣೆ ಮಾಡುವ ಸರಕಾರ ಪರೀಕ್ಷೆಯ ತಪಾಸಣೆ ನೆಪದಲ್ಲಿ ಮಾಂಗಲ್ಯ ತೆಗೆಯಲು, ಜನಿವಾರ ತುಂಡರಿಸಲು ಅವಕಾಶ ನೀಡುತ್ತಿದೆ. ನ್ಯಾಯಾಲಯ ಸಮಾನ ವಸ್ತ್ರಸಂಹಿತೆಗೆ ಆದೇಶ ನೀಡಿದ್ದರೂ ಸಿದ್ದರಾಮಯ್ಯ ಸಾಹೇಬರು ಸೇರಿದಂತೆ ಕಾಂಗ್ರೆಸ್ ನಾಯಕರು ಹಿಜಾಬ್ ಹಕ್ಕುಗಳ ಬಗ್ಗೆ ಮಾತನಾಡಿದರು, ಬೀದಿಗಿಳಿದರು. ಆದರೆ ಇಂದು ಜನಿವಾರ ತುಂಡರಿಸಿದಾಗ ಅವರೆಲ್ಲರೂ ಮೌನಕ್ಕೆ ಶರಣಾಗಿರುವುದು ಯಾಕೆ ಎಂದು ಪ್ರಶ್ನಿಸಿದ್ದಾರೆ.

ಶಾಸಕ ಅಶೋಕ್ ರೈ ವಿರುದ್ಧ ನ್ಯಾಯಾಂಗ ನಿಂದನೆ ಆರೋಪ

ಮಂಗಳೂರು: ಶಾಸಕ ಅಶೋಕ್ ಕುಮಾರ್ ರೈ ಹಾಗೂ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿ ಗುಡ್ಡೆ ಈಶ್ವರ ಭಟ್ ಅವರು ಅಧಿಕಾರ ದುರುಪಯೋಗಪಡಿಸಿಕೊಂಡು, ನ್ಯಾಯಾಲಯದ ಸುಪರ್ದಿಯಲ್ಲಿದ್ದ ಖಾಸಗಿ ಜಮೀನಿಗೆ ಅಕ್ರಮವಾಗಿ ನುಗ್ಗಿ ಕಟ್ಟಡ ಧ್ವಂಸ ಮಾಡಿದ್ದಾರೆ ಎಂದು ಕೋರ್ಟ್ ರಿಸೀವರ್ ಡಾ.ಅರವಿಂದ ರಾವ್ ಕೇದಿಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಮಾಧ್ಯಮಕ್ಕೆ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಘಟನೆಯನ್ನು 'ನ್ಯಾಯಾಂಗ ನಿಂದನೆ' ಮತ್ತು 'ದೊಡ್ಡ ದುರುದ್ದೇಶದ ಸಂಚು' ಎಂದು ಬಣ್ಣಿಸಿದ್ದಾರೆ. ಪುತ್ತೂರು ಮಹಿಳಾ ಪೊಲೀಸ್ ಠಾಣೆ ಎದುರಿಗಿನ ಹಳೆಯ ಕಟ್ಟಡವನ್ನು ಶಾಸಕ ಅಶೋಕ್ ಕುಮಾರ್ ರೈ, ಈಶ್ವರ ಭಟ್ ಮತ್ತು ಅವರ ಬೆಂಬಲಿಗರು ಜೆಸಿಬಿ ಹಾಗೂ ಟಿಪ್ಪರ್ ಬಳಸಿ ಭಾಗಶಃ ಧ್ವಂಸಗೊಳಿಸಿದ್ದಾರೆ. ಈ ವೇಳೆ ನ್ಯಾಯಾಲಯದ ಆದೇಶದಂತೆ ಹಾಕಲಾಗಿದ್ದ ಸೀಲ್ ಅನ್ನು ಒಡೆದು, ಸುಮಾರು 10,000 ಚದರ ಅಡಿ ವಿಸ್ತೀರ್ಣದ ಕಟ್ಟಡವನ್ನು ಕೆಡವಿ, ಅಲ್ಲಿನ ಬೆಲೆಬಾಳುವ ಸಾಮಗ್ರಿಗಳನ್ನು ಕದ್ದೊಯ್ಯಲಾಗಿದೆ ಎಂದು ಆರೋಪಿಸಲಾಗಿದೆ. ಇದರಿಂದ ಸುಮಾರು 2 ಕೋಟಿ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಕಟ್ಟಡ ಕೆಡವಲು ಕೋರ್ಟ್ ಆದೇಶ ನೀಡಿದೆ ಎಂದು ಸಾರ್ವಜನಿಕರಿಗೆ ಸುಳ್ಳು ಹೇಳಿ ಈ ಕೃತ್ಯ ಎಸಗಲಾಗಿದೆ ಎಂದು ರಿಸೀವರ್ ದೂರಿದ್ದಾರೆ.

ಕೇಸು ದಾಖಲು: ಶಾಸಕರಿಗೂ ಸಂಕಷ್ಟ?

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪುತ್ತೂರು ಪೊಲೀಸರು ಈಗಾಗಲೇ ಈಶ್ವರ ಭಟ್ ಅವರ ಮೇಲೆ ಕೇಸು ದಾಖಲಿಸಿದ್ದಾರೆ. ಇನ್ನು ಸ್ವತಃ ಜೆಸಿಬಿ ಚಲಾಯಿಸಿದ ಆರೋಪ ಹೊತ್ತಿರುವ ಶಾಸಕ ಅಶೋಕ್ ರೈ ಅವರ ಹೆಸರನ್ನು ಪ್ರಕರಣದಲ್ಲಿ ಸೇರಿಸಲು ಪೊಲೀಸರು ನ್ಯಾಯಾಲಯದ ಅನುಮತಿ ಕೋರಿದ್ದಾರೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ನ್ಯಾಯಾಲಯ ಇಬ್ಬರಿಗೂ ನೋಟೀಸ್ ಜಾರಿಗೊಳಿಸಲು ಆದೇಶಿಸಿದೆ.

ಚಿಕ್ಕಮಗಳೂರು: ಭಾರೀ ಗಾಳಿ ಮಳೆ

ಚಿಕ್ಕಮಗಳೂರು: ಜಿಲ್ಲೆಯ ಕೊಟ್ಟಿಗೆಹಾರ, ಬಣಕಲ್, ಆಲ್ದೂರು ಹಾಗೂ ಮತ್ತಿಕಟ್ಟೆಯಲ್ಲಿ ಭಾರೀ ಗಾಳಿ ಮಳೆಯಾಗುತ್ತಿದೆ. ಗುಡುಗು-ಸಿಡಿಲಿನ ಸಹಿತ ಭಾರೀ ಮಳೆ ಸುರಿಯುತ್ತಿದೆ. ಹಲವೆಡೆ ಭಾರೀ ಆಲಿಕಲ್ಲಿನ ಮಳೆಯಾಗಿದೆ. ಇದ್ದಕ್ಕಿದ್ದಂತೆ ಆರಂಭವಾದ ಮಳೆಯಿಂದ ಜನಜೀವನ ಅಸ್ತವ್ಯಸ್ತವಾಗಿದೆ. ಕಳೆದೊಂದು ವಾರದಿಂದ ಆಗಾಗ ಮಳೆ ಸುರಿಯುತ್ತಿದೆ. ಹಗಲಲ್ಲಿ ಭಾರೀ ಬಿಸಿಲು, ಸಂಜೆಯಾಗುತ್ತಿದ್ದಂತೆ ಧಾರಾಕಾರ ಮಳೆಯಾಗಿದೆ. ಬಿಸಿಲು-ಮಳೆಯಿಂದ ಭೂಮಿಯ ಧಗೆ ಹೆಚ್ಚಾಗಿ ಜನರು ಹೈರಾಣಾಗಿದ್ದಾರೆ. ಮತ್ತೊಂದೆಡೆ ಕಾಫಿ, ಅಡಿಕೆಗೆ ನೀರು ಹಾಯಿಸಲು ಪರದಾಡುತ್ತಿದ್ದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ಚಿಕ್ಕಮಗಳೂರು ತಾಲೂಕಿನ ಆಲ್ದೂರು ಪಟ್ಟಣದಲ್ಲಿ ಮಳೆ ಕಂಡು ಖುಷಿಯಾದ ವೃದ್ದರೊಬ್ಬರು, ಮಳೆಯಲ್ಲಿ ನೆನೆಯುತ್ತಾ ರಸ್ತೆ ಮಧ್ಯೆ ಸಂತೋಷದಿಂದ ಡ್ಯಾನ್ಸ್ ಮಾಡಿದ್ದಾರೆ. ಆಲ್ದೂರು ಸಮೀಪದ ಅಡ್ಡಮಕ್ಕಿ ಗ್ರಾಮದಲ್ಲಿ ಆಲಿಕಲ್ಲು ಮಳೆ ಸುರಿಯುತ್ತಿದ್ದು, ಮಹಿಳೆಯೊಬ್ಬರು ಆಲಿಕಲ್ಲುಗಳನ್ನು ಆರಿಸಿದ್ದಾರೆ. ಅಲ್ಲಿಕಲ್ಲು ಕಾಫಿ ಬೆಳೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಆತಂಕದಲ್ಲಿ ಬೆಳೆಗಾರರಿದ್ದಾರೆ.

ತ್ರಿವಳಿ ಮಕ್ಕಳಿಗೆ ಜನ್ಮ

ಬೀದರ್: ಮಹಿಳೆಯೊಬ್ಬರು ಒಂದೇ ಬಾರಿಗೆ ಮೂರು (ತ್ರಿವಳಿ) ಮಕ್ಕಳಿಗೆ ಜನ್ಮ ನೀಡಿರುವ ಅಪರೂಪದ ಘಟನೆ ನಗರದ ಬ್ರಿಮ್ಸ್ ಆಸ್ಪತ್ರೆಯಲ್ಲಿ ನಡೆದಿದೆ. ತಾಯಿ ಮತ್ತು ಮಕ್ಕಳು ಆರೋಗ್ಯವಾಗಿದ್ದಾರೆ. ಹುಮನಾಬಾದ್ ತಾಲೂಕಿನ ವಡ್ಡನಕೇರಾ ಗ್ರಾಮದ ನಿವಾಸಿ ಬಸಮ್ಮ ವಾಡೇಕರ್ ಅವರು 2 ಗಂಡು ಹಾಗೂ 1 ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ. ಏ.22ರಂದು ಹೆರಿಗೆಯಾಗಿದ್ದು, ತಾಯಿ ಮತ್ತು ಮೂವರು ಮಕ್ಕಳು ಆರೋಗ್ಯವಾಗಿದ್ದಾರೆ. ಮಕ್ಕಳನ್ನು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಈಗಾಗಲೇ 1 ಮಗುವಿಗೆ ಜನ್ಮ ನೀಡಿದ್ದ ಬಸಮ್ಮ, ತನ್ನ 2ನೇ ಹೆರಿಗೆಯ ಸಂದರ್ಭ ಈ ಬಾರಿ 3 ಮಕ್ಕಳಿಗೆ ಜನ್ಮ ನೀಡಿರುವುದು ವಿಶೇಷವಾಗಿದೆ. ಈ ಅಪರೂಪದ ಹೆರಿಗೆಯಿಂದಾಗಿ ಬ್ರಿಮ್ಸ್ ಆಸ್ಪತ್ರೆಯ ವೈದ್ಯರ ತಂಡ ಮತ್ತು ಸಿಬ್ಬಂದಿ ಸಂತಸ ವ್ಯಕ್ತಪಡಿಸಿದ್ದಾರೆ.

ರಾಯರ ಹುಂಡಿಗೆ 3.25 ಕೋಟಿ ರು. ಕಾಣಿಕೆ ಸಂಗ್ರಹ

ರಾಯಚೂರು: ಕಲಿಯುಗ ಕಾಮಧೇನು ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠದ ಏಪ್ರಿಲ್ ತಿಂಗಳಿನ 22 ದಿನದ ಕಾಣಿಕೆ ಹುಂಡಿ ಎಣಿಕೆ ಕಾರ್ಯ ಮುಕ್ತಾಯವಾಗಿದ್ದು, 3.25 ಕೋಟಿ ರು.ಕಾಣಿಕೆ ಸಂಗ್ರಹವಾಗಿದೆ. ಬಿರು ಬೇಸಿಗೆ ಯಲ್ಲೂ ಶಾಲಾ, ಕಾಲೇಜು ರಜಾ ಹಿನ್ನೆಲೆ ಭಕ್ತರು ದಂಡು ರಾಯರ ಮಠಕ್ಕೆ ಹರಿದು ಬಂದಿದೆ. ಏಪ್ರಿಲ್ ತಿಂಗಳ ಮೊದಲ 22 ದಿನಗಳಲ್ಲೇ ಗುರುರಾಘವೇಂದ್ರ ಸ್ವಾಮಿ ಮಠಕ್ಕೆ ಕೋಟ್ಯಾಂತರ ರುಪಾಯಿ ಕಾಣಿಕೆ ಹರಿದು ಬಂದಿದ್ದು, ಸಂಗ್ರಹವಾದ ಕಾಣಿಕೆ ಯಲ್ಲಿ 3,15,62,354 ರು.ನೋಟುಗಳು ಹಾಗೂ 10,34,500 ರು.ನಾಣ್ಯಗಳು ಸಂಗ್ರಹವಾಗಿವೆ. 47 ಗ್ರಾಂ ಚಿನ್ನ, 592 ಗ್ರಾಂ ಬೆಳ್ಳಿಯನ್ನ ಕಾಣಿಕೆ ರೂಪದಲ್ಲಿ ಭಕ್ತರು ನೀಡಿದ್ದಾರೆ. ಮಂತ್ರಾಲಯ ರಾಯರ ಮಠದಲ್ಲಿ ನಡೆಸಲಾದ ಹುಂಡಿ ಎಣಿಕೆ ಕಾರ್ಯ ಮುಕ್ತಾಯವಾಗಿದ್ದು, ಎಣಿಕೆ ಕಾರ್ಯದಲ್ಲಿ ಮಠದ ನೂರಾರು ಸಿಬ್ಬಂದಿ, ಭಜನಾ ಮಂಡಳಿ, ಕರಸೇವಕರು ಭಾಗವಹಿಸಿದ್ದರು.

ರಾಜ್ಯದ ಪ್ರತಿಯೊಬ್ಬರ ಮೇಲೂ ಕನಿಷ್ಠ 1 ಲಕ್ಷ ಸಾಲ ಹೇರಿದ ರಾಜ್ಯ ಸರಕಾರ: ಎಚ್‌ಡಿಕೆ

ಗ್ಯಾರಂಟಿಗಳಿಂದ ರಾಜ್ಯದ ಆರ್ಥಿಕತೆ ಕುಸಿತ

ಮೈಸೂರು: ಕಾಂಗ್ರೆಸ್ ಪಕ್ಷ ನೀಡುತ್ತಿರುವ ಗ್ಯಾರಂಟಿಗಳಿಂದ ಅಭಿವೃದ್ಧಿಶೀಲ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಆರ್ಥಿಕ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಕೆ.ಆರ್. ನಗರ ವಿಧಾನಸಭಾ ಕ್ಷೇತ್ರದ ಬಸವನ ಪುರ, ಗೇರದಡ ಹಾಗೂ ಕೆಂಚನಹಳ್ಳಿ ಗ್ರಾಮಗಳ ಮೇಲನಕಟ್ಟೆ ಗಣಪತಿ ದೇವಾಲಯ ಲೋಕಾ ರ್ಪಣೆ, ಹೊಸಅಗ್ರಹಾರ ಗ್ರಾಮದಲ್ಲಿನ ಬಸವೇ ಶ್ವರ ಸ್ವಾಮಿ ದೇವಾಲಯದ ಗೋಪುರ ಲೋಕಾರ್ಪಣೆ ಹಾಗೂ ಬಸವೇಶ್ವರ ದೇವರ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಮಾತನಾಡಿ ಅವರು, ಮಹಿಳೆಯರಿಗೆ 2ಸಾವಿರ ಕೊಡುತ್ತಿದ್ದಾರೆ ಎಂಬುದೇನೋ ಸರಿ. ಆದರೆ, ಆ ಮೊತ್ತವನ್ನು ರಾಜ್ಯ ಸರಕಾರ ಹೇಗೆ ಕೊಡುತ್ತಿದೆ ಎಂಬುದನ್ನು ಜನರು ಗಮನಿಸಬೇಕು. ಸಾಲ ಮಾಡಿ ತುಪ್ಪ ತಿನ್ನು ಎನ್ನುವಂತೆ ಸರಕಾರ ಲಕ್ಷಾಂತರ ಕೋಟಿ ರುಪಾಯಿ ಸಾಲ ಮಾಡಿ ಗ್ಯಾರಂಟಿ ಯೋಜನೆಗಳಿಗೆ ಸುರಿ ಯುತ್ತಿದೆ. ಈಗಾಗಲೇ ಈ ಸರಕಾರ 7.26 ಲಕ್ಷ ಕೋಟಿ ಸಾಲ ಮಾಡಿದೆ. ಈ ಮೂಲಕ ರಾಜ್ಯದ ಪ್ರತಿಯೊಬ್ಬರ ಮೇಲೂ ಕನಿಷ್ಠ 1 ಲಕ್ಷ ಸಾಲ ಹೇರಿದೆ ಎಂದು ದೂರಿದರು. ಇದನ್ನು ನಾನು ಎಲ್ಲಿ ಬೇಕಾದರೂ ಹೇಳುತ್ತೇನೆ. ಯಾವ ವೇದಿಕೆಯಲ್ಲಿ ಬೇಕಾದರೂ ಚರ್ಚೆಗೆ ತಯಾರಿದ್ದೇನೆ. ಅವರಿಗೆ ಧೈರ್ಯವಿದ್ದರೆ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು.

ಗ್ಯಾರಂಟಿಗಳ ಪರಿಣಾಮದಿಂದ ರಾಜ್ಯದ ಖಜಾನೆ ಖಾಲಿಯಾಗಿದೆ. ಸಕಾಲಕ್ಕೆ ಸರಕಾರಿ ನೌಕರಿಗೆ ಸಂಬಳ ಕೊಡುವ ಶಕ್ತಿಯನ್ನೂ ಸರಕಾರ ಕಳೆದುಕೊಂಡಿದೆ. ಹಾಗೆಯೇ ಗ್ಯಾರಂಟಿಗಳ ಆಮಿಷವೊಡ್ಡಿ ಹಿಮಾಚಲಪ್ರದೇಶದಲ್ಲಿ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಪಕ್ಷವು ಆ ರಾಜ್ಯವನ್ನೂ ಆರ್ಥಿಕವಾಗಿ ಹಾಳು ಮಾಡಿದೆ. ಅಧಿಕಾರಿಗಳ ವೇತನದಲ್ಲಿ ಕಡಿತಗೊಳಿಸುತ್ತಿದೆ. ಆ ರಾಜ್ಯದ ಅಧಿಕಾರಿ ವರ್ಗದ ಮುಖ್ಯಸ್ಥರಾಗಿರುವ ಮುಖ್ಯ ಕಾರ್ಯದರ್ಶಿ ವೇತನವನ್ನೂ ಕಡಿತ ಮಾಡಲಾಗಿದೆ ಎಂಬ ವರದಿಗಳು ಮಾಧ್ಯಮದಲ್ಲಿ ಬಂದಿದೆ. ಹಿಮಾಚಲ ಪ್ರದೇಶದ ಪರಿಸ್ಥಿತಿ ಕರ್ನಾಟಕಕ್ಕೂ ಬರಲಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಈ ವೇಳೆ ವಿಧಾನಪರಿಷತ್‌ಸದಸ್ಯರಾದ ಸಿ.ಎನ್. ಮಂಜೇ ಗೌಡ, ಕೆ.ವಿವೇಕಾನಂದ, ಮಾಜಿ ಸಚಿವ ಸಾ.ರಾ. ಮಹೇಶ್, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಅಶ್ವಿನ್‌ಕುಮಾರ್, ಮುಖಂಡ ಮಹದೇವ್ ಮೊದಲಾದವರು ಪಾಲ್ಗೊಂಡಿದ್ದರು.



ಮೈಸೂರು ಜಿಲ್ಲೆ ಕೆ.ಆರ್. ನಗರ ವಿಧಾನಸಭಾ ಕ್ಷೇತ್ರದ ಹಲವು ಗ್ರಾಮಗಳಲ್ಲಿ ಆಯೋಜನೆ ಮಾಡಿದ್ದ ದೇಗುಲ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಮಾತನಾಡಿದರು.

> ಮಹಿಳೆಯರು 2ಸಾವಿರ ಪಡೆದು ಸಂಸಾರ ನಿರ್ವಹಣೆ ಮಾಡಲು ಸಾಧ್ಯವೇ? ಗೃಹಲಕ್ಷ್ಮೀ ಎಂದು ಹಣ ಕೊಡುತ್ತಾರೆ. ಬೆಲೆ ಏರಿಕೆ ಮತ್ತು ತೆರಿಗೆ ಹೇರಿಕೆಯಿಂದ ಪುರುಷರ (ಗಂಡಂದಿರ) ಜೇಬಿಗೆ ಕತ್ತರಿ ಹಾಕುತ್ತಿದ್ದಾರೆ. ಅಲ್ಲದೆ ಅಲ್ಲದೆ ಮನಸೋಇಚ್ಛೆ ಸಾಲ ಮಾಡಿ ಮಕ್ಕಳ ಮೇಲೆಯೂ ಸಾಲ ಹೊರಿಸುತ್ತಿದ್ದಾರೆ.
>
> -ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

39 ಸರಕಾರಿ ಆಸ್ಪತ್ರೆಗಳಲ್ಲಿ ಕೀಲು ಬದಲಿ ಶಸ್ತ್ರಚಿಕಿತ್ಸೆ ಲಭ್ಯ

ಬೆಂಗಳೂರು: ಮೊಣಕಾಲು ಹಾಗೂ ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆ ನಡೆಸಲು ಸರಕಾರಿ ಆಸ್ಪತ್ರೆಗಳ ಸಂಖ್ಯೆಯನ್ನು 39ಕ್ಕೆ ಹೆಚ್ಚಿಸಿರುವ ಆರೋಗ್ಯ ಇಲಾಖೆ ಪರಿಣಾಮ ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸು ಆಗುವ ಪ್ರಕರಣಗಳ ಪ್ರಮಾಣ ಕಡಿಮೆಯಾಗಿದೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಖಾಸಗಿ ಸೌಲಭ್ಯಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಮತ್ತು ರೋಗಿಗಳ ಮನೆಗೆ ಹತ್ತಿರದಲ್ಲಿ ಕೈಗೆಟುಕುವ ಆರೈಕೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಮೂಳೆ ಶಸ್ತ್ರಚಿಕಿತ್ಸೆಗಳನ್ನು ಮಾಡುವ ಸಾರ್ವಜನಿಕ ಆಸ್ಪತ್ರೆಗಳನ್ನು ಅಗತ್ಯ ಮೂಲಸೌಕರ್ಯಗಳೊಂದಿಗೆ ಬಲಪಡಿಸಲಾಗುತ್ತಿದೆ ಎಂದು ಹೇಳಿದರು.

2023-24ನೇ ಸಾಲಿನ ದತ್ತಾಂಶದ ಪ್ರಕಾರ 1,709 ಮೊಣಕಾಲು ಹಾಗೂ ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆ ಪ್ರಕ್ರಿಯೆಗಳಲ್ಲಿ, 1,108 ಪ್ರಕ್ರಿಯೆಗಳನ್ನು (ಶೇ. 65) ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸು ಮಾಡಲಾಗಿತ್ತು. ಸರಕಾರಿ ವ್ಯವಸ್ಥೆಯಡಿ ಕೇವಲ 601 ಪ್ರಕ್ರಿಯೆಗಳನ್ನು (ಶೇ.35) ನಡೆಸಲಾಗಿತ್ತು. ಪರಿಣಿತ ಮೂಳೆ ಶಸ್ತ್ರಚಿಕಿತ್ಸಕರನ್ನು ಸರಕಾರಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಗೆ ನಿಯೋಜಿಸಿ, ವೈದ್ಯರಿಗೆ ಮಾರ್ಗದರ್ಶನ ಮಾಡಲು ನಿಯೋಜಿಸಲಾಗಿದೆ. ತರಬೇತಿ ಪಡೆದ ವೈದ್ಯರು ಈಗ ಸ್ವತಂತ್ರವಾಗಿ ಮೊಣಕಾಲು ಹಾಗೂ ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆ ನಡೆಸುತ್ತಿದ್ದಾರೆ. ಈ ಶಸ್ತ್ರಚಿಕಿತ್ಸೆಗೆ ಹಿಂದೆ ಸರಕಾರಿ ಆಸ್ಪತ್ರೆಗಳಿಗೆ ಶೇ. 75 ಚಿಕಿತ್ಸಾ ವೆಚ್ಚವನ್ನು ಪಾವತಿಸಲಾಗುತ್ತಿತ್ತು. ಅದನ್ನು ಶೇ.100ಕ್ಕೆ ಏರಿಕೆ ಮಾಡಲಾಗಿದೆ ಎಂದು ಹೇಳಿದರು. ಈ ಕ್ರಮದಿಂದ 2025-26ನೇ ಸಾಲಿನಲ್ಲಿ 1,119 ಶಸ್ತ್ರಚಿಕಿತ್ಸಾ ಪ್ರಕ್ರಿಯೆಗಳಲ್ಲಿ 14 ಪ್ರಕ್ರಿಯೆಗಳನ್ನು ಮಾತ್ರ ಖಾಸಗಿ ಆಸ್ಪತ್ರೆಗಳಲ್ಲಿ ನಡೆಸಲಾಗಿದೆ. ಶಸ್ತ್ರಚಿಕಿತ್ಸೆ ನಡೆಸುತ್ತಿರುವ ಆಸ್ಪತ್ರೆಗಳ ಪಟ್ಟಿಯಲ್ಲಿ 13 ಜಿಲ್ಲಾ ಆಸ್ಪತ್ರೆಗಳು, 8 ತಾಲ್ಲೂಕು ಆಸ್ಪತ್ರೆಗಳೂ ಸೇರಿವೆ. ಸರಕಾರಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಯ ಪಾಲು ಶೇ. 35ರಿಂದ ಶೇ.99ಕ್ಕೆ ಏರಿಕೆಯಾಗಿದೆ. ಈಗ ರೋಗಿಗಳು, ಮನೆಯ ಹತ್ತಿರವೇ ಚಿಕಿತ್ಸೆ ಪಡೆಯಬಹುದಾಗಿದೆ ಎಂದರು.

ಸಿಡಿಲು ಬಡಿದು ಇಬ್ಬರು ಯುವಕರು ಸಾವು

ಬೀದರ್: ಸಿಡಿಲು ಬಡಿದು ಇಬ್ಬರು ಯುವ ರೈತರು ದಾರುಣವಾಗಿ ಸಾವನ್ನಪ್ಪಿದ ಘಟನೆ ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ನಾವದಗಿ ಗ್ರಾಮದಲ್ಲಿ ನಡೆದಿದೆ. ನಾವದಗಿ ಗ್ರಾಮದ ರೇವಣಸಿದ್ದ (28) ಮತ್ತು ಜೇವರ್ಗಿಯ ಯಲ್ಲಾಲಿಂಗ (28) ಸಿಡಿಲಿಗೆ ಬಲಿಯಾದ ದುರ್ದೈವಿಗಳು. ಗುರುವಾರ ಸಂಜೆ ಜಮೀನಿನಲ್ಲಿ ಕೃಷಿ ಕೆಲಸ ಮಾಡುತ್ತಿದ್ದಾಗ ಮಳೆ ಶುರುವಾಗಿದೆ. ಹೀಗಾಗಿ ಇಬ್ಬರು ರೈತರು ಜಮೀನಿನಲ್ಲಿದ್ದ ಮಾವಿನ ಮರದ ಕಳಗಡೆ ನಿಂತಿದ್ದರು. ಈ ವೇಳೆ ಮಾವಿನ ಮರಕ್ಕೆ ಸಿಡಿಲು ಅಪ್ಪಳಿಸಿದ್ದು, ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಖಟಕ್ ಚಿಂಚೋಳಿ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ವಿಶ್ವವಾಣಿ

ಸಂಪಾದಕೀಯ

ಪಾರದರ್ಶಕ ರಾಜಕಾರಣಕ್ಕೆ ಪೂರಕ

ರಾಜ್ಯ ಚುನಾವಣಾ ಆಯೋಗವು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ನಾಮಪತ್ರದೊಂದಿಗೆ ಕಡ್ಡಾಯ ಪ್ರಮಾಣ ಪತ್ರ ಸಲ್ಲಿಸಬೇಕೆಂಬ ನಿಯಮವನ್ನು ಜಾರಿಗೊಳಿಸುವ ಮೂಲಕ ಪಾರದರ್ಶಕತೆಯ ನಿಟ್ಟಿನಲ್ಲಿ ಒಂದು ಮಹತ್ವದ ಹೆಜ್ಜೆಯನ್ನಿಟ್ಟಿದೆ. ಪ್ರಜಾಪ್ರಭುತ್ವದ ತಳಮಟ್ಟದ ವ್ಯವಸ್ಥೆಯಾದ ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಶುದ್ಧ ಹಸ್ತದ ನಾಯಕತ್ವವನ್ನು ತರುವುದು ಈ ಬಿಗಿಯಾದ ಮಾರ್ಗಸೂಚಿಗಳ ಮುಖ್ಯ ಉದ್ದೇಶವಾಗಿದೆ. ಹೊಸ ನಿಯಮದಂತೆ, ಅಭ್ಯರ್ಥಿಗಳು ಕೇವಲ ತಮ್ಮ ವಿವರಗಳನ್ನಷ್ಟೇ ಅಲ್ಲದೆ, ತಮ್ಮ ಸಂಗಾತಿ (ಪತಿ ಅಥವಾ ಪತ್ನಿ) ಮತ್ತು ಅವಲಂಬಿತರ ಆರ್ಥಿಕ ಸ್ಥಿತಿಗತಿಗಳನ್ನು ಬಹಿರಂಗಪಡಿಸುವುದು ಕಡ್ಡಾಯವಾಗಿದೆ. ಆದಾಯ ತೆರಿಗೆ ಪಾವತಿಯ ವಿವರಗಳು ಮತ್ತು ಪಾನ್ ಸಂಖ್ಯೆಯನ್ನು ಒದಗಿಸಬೇಕಿರುವುದು ಆರ್ಥಿಕ ಶಿಸ್ತನ್ನು ಅಪೇಕ್ಷಿಸುತ್ತದೆ. ಈ ಹಿಂದೆ ಆರ್ಥಿಕ ವಿವರಗಳನ್ನು ಅರೆಬರೆಯಾಗಿ ನೀಡುವ ಅಥವಾ ಮರೆಮಾಚುವ ಪ್ರವೃತ್ತಿ ಇತ್ತು. ಆದರೆ ಇನ್ಮುಂದೆ ಜಾರಿಯಾಗುವ ಕಟ್ಟುನಿಟ್ಟಾದ ಕ್ರಮಗಳು ಅಭ್ಯರ್ಥಿಯ ನೈಜ ಆರ್ಥಿಕ ಹಿನ್ನೆಲೆಯನ್ನು ಮತದಾರರ ಮುಂದೆ ತೆರೆದಿಡಲಿವೆ. ಅಲ್ಲದೇ, ಅಭ್ಯರ್ಥಿಯು ಯಾವುದೇ ಶಾಸನಬದ್ಧ ಪ್ರಾಧಿಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಅನರ್ಹಗೊಂಡಿಲ್ಲ ಎಂಬ ಪ್ರಮಾಣ ಪತ್ರವು ಚುನಾವಣಾ ಕಣವನ್ನು ಸ್ವಲ್ಪ ಮಟ್ಟಿಗಾದರೂ ಸ್ವಚ್ಛವಾಗಿಡಲಿದೆ. ಅಭ್ಯರ್ಥಿಯ ಆಸ್ತಿ ಮತ್ತು ಆದಾಯದ ವಿವರಗಳು ಸಾರ್ವಜನಿಕರಿಗೆ ಲಭ್ಯವಾಗುವುದರಿಂದ ಅಧಿಕಾರಾವಧಿಯಲ್ಲಿ ಅವರು ಗಳಿಸುವ ಅಕ್ರಮ ಆಸ್ತಿಯ ಮೇಲೆ ನಿಗಾ ಇಡಲು ಮತದಾರರಿಗೆ ಮತ್ತು ನಾಗರಿಕ ಸಮಾಜಕ್ಕೆ ಸುಲಭವಾಗುತ್ತದೆ. ಅಭ್ಯರ್ಥಿಗಳು ನೀಡುವ ಅಫಿಡವಿಟ್ ಅಥವಾ ಪ್ರಮಾಣ ಪತ್ರಗಳಲ್ಲಿನ ಮಾಹಿತಿ ಸುಳ್ಳಾಗಿದ್ದರೆ, ಅವರ ಮೇಲೆ ತಕ್ಷಣದ ಕಾನೂನು ಕ್ರಮ ಜರುಗಿಸುವ ವ್ಯವಸ್ಥೆ ಇನ್ನಷ್ಟು ಬಲಗೊಳ್ಳಬೇಕಿದೆ. ಮತದಾರರು ಕೂಡ ಕೇವಲ ಜಾತಿ, ಧರ್ಮ ಅಥವಾ ಹಣದ ಆಮಿಷಕ್ಕೆ ಒಳಗಾಗದೆ, ಅಭ್ಯರ್ಥಿಗಳು ಸಲ್ಲಿಸಿದ ಆರ್ಥಿಕ ಮತ್ತು ಶೈಕ್ಷಣಿಕ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮತ ಚಲಾಯಿಸುವ ಪ್ರಬುದ್ಧತೆಯನ್ನು ಮೆರೆಯಬೇಕಿದೆ. ಅಂದಾಗ ಮಾತ್ರ ಈ ಹೊಸ ನಿಯಮಗಳು ಅರ್ಥಪೂರ್ಣವಾಗುತ್ತವೆ. ಸದೃಢ ಪ್ರಜಾಪ್ರಭುತ್ವ ನಿರ್ಮಾಣವಾಗುತ್ತದೆ.

ಸೊಂಪಾದಕೀಯ

ಎರಡು ಇಡ್ಲಿಯ ಕಥೆ!

ತಿಂಡಿ ತಿನಿಸುಗಳಿಗೆ ಅತಿಯಾದ ದರ ವಿಧಿಸುತ್ತಾರೆಂಬ ಕಾರಣಕ್ಕಾಗಿಯೇ ರಾಮೇಶ್ವರಂ ಕೆಫೆ ಸೋಷಿಯಲ್ ಮೀಡಿಯಾದಲ್ಲಿ ಟ್ರೋಲ್ ಆಗುತ್ತಿದೆ. ಗಂಡ-ಹೆಂಡತಿ, ಇಬ್ಬರು ಮಕ್ಕಳು ಇರುವ ಫ್ಯಾಮಿಲಿಯೊಂದು ಅಲ್ಲಿಗೆ ಹೋಗಿ ಹೊಟ್ಟೆ ತುಂಬಾ ತಿಂದು ಕಾಫಿ ಕುಡಿದು ಬಂದರೆ ಕನಿಷ್ಟ 15 ದಿನದ ರೇಷನ್ನಿಗೆ ನೀಡುವಷ್ಟು ದುಡ್ಡು ಕೊಡಬೇಕಾಗುತ್ತದೆ ಎಂದು

ಹೇಳುತ್ತಾರೆ. ಇತ್ತೀಚೆಗೆ, ಸತೀಶ್ ರೆಡ್ಡಿ ಎಂಬುವರು ಇನ್‌ಸ್ಟಾಗ್ರಾಂನಲ್ಲಿ ಒಂದು ಪೋಸ್ಟ್ ಹಾಕಿದ್ದು ಅದರಲ್ಲಿ ರಾಮೇಶ್ವರಂ ಕೆಫೆಯಲ್ಲಿ ಎರಡು ಇಡ್ಲಿ- ನೀರು ಚಟ್ನಿಗೆ 200 ರು. ಬಿಲ್ ಬಂದಿದ್ದನ್ನು ಅದನ್ನು ಟೀಕಿಸುವ ಕೆಲವರು ಅಲ್ಲಿನ ಟೇಸ್ಟು ಎಲ್ಲೂ ಸಿಕ್ಕಲ್ಲ ಬಿಡಿ ಮಾರಾಯ್ರೆ ಅಂತಾರೆ. ಮತ್ತೂ ಕೆಲವರು ಟೇಸ್ಟ್ ಕೊಡ್ರೀವಂತ ಇಷ್ಟೊಂದು ರೇಟು ಜಡಿಯೋದಾ ಅಂತ ಕೇಳ್ತಾರೆ. ಇರಲಿ, ಅದೆಲ್ಲಾ ಅವರವರ ಭಾವಕ್ಕೆ ಭಕುತಿಗೆ. ಆದರೆ, ಒಂದಂತೂ ಸತ್ಯ... ರಾಮೇಶ್ವರಂ ಮಾತ್ರವಲ್ಲ ಅದಕ್ಕೂ ಮೀರಿದ ಹೋಟೆಲುಗಳಿವೆ ಬೆಂಗಳೂರಲ್ಲಿ. ಇತ್ತೀಚೆಗೆ ಸೋಷಿಯಲ್ ಮೀಡಿಯಾದ ಲ್ಲೊಬ್ಬ ಬೆಂಗಳೂರಿನ ಲೀಲಾ ಪ್ಯಾಲೆಸ್‌ನಲ್ಲಿ ಸಿಗುವ, '23 ಕ್ಯಾರಟ್ ಗೋಲ್ಡ್ ಪ್ಲೇಟೆಡ್' ಇಡ್ಲಿ ಬಗ್ಗೆ ವಿಡಿಯೋ ಮಾಡಿದ್ದ. ಎರಡು ಇಡ್ಲಿಗೆ 5,000 ರು.! ಇದಕ್ಕೇನಂತೀರಿ? ಒಂದಂತೂ ಸತ್ಯ... ಈ ಉದ್ಯಾನ ನಗರಿಯಲ್ಲಿ 5 ರುಪಾಯಿಗೊಂದು ಇಡ್ಲಿಯೂ ಸಿಕ್ಕುತ್ತೆ, 5,000 ರುಪಾಯಿಗೂ ಇಡ್ಲಿ ಸಿಕ್ಕುತ್ತೆ. ಆದರೆ ಆಯ್ಕೆ ನಿಮ್ಮದು. ತಿಂಗಳ ಸಂಬಳ ನೆಚ್ಚಿಕೊಂಡು ಸಂಸಾರ ನಡೆಸುವವರು, 'ಉಳ್ಳವರು ಚಿನ್ನದ ಇಡ್ಲಿ ತಿನ್ನುವರಯ್ಯ... ನಾನೇನ ಮಾಡಲಿ ಬಡವನಯ್ಯ' ಅಂತ ನಿಮ್ಮ ಮನೆ ಹತ್ತಿರದ ಬಜೆಟ್ ಫ್ರೆಂಡ್ಲಿ ಹೋಟೆಲಿನಲ್ಲಿ ಇಡ್ಲಿ ತಿಂದರಾಯ್ತಲ್ಲವೇ?

ಸಂಪಾದಕರ ಸದ್ಯಶೋಧನೆ

ಭ್ರಷ್ಟಾಚಾರ ಮುಕ್ತ ಭೂತಾನ್

ಭೂತಾನ್ ನೈತಿಕತೆ ಮತ್ತು ಆಡಳಿತದ ವಿಷಯದಲ್ಲಿ ಜಗತ್ತಿಗೇ ದಾರಿದೀಪವಾಗಿರುವ ದೇಶ. 'ಭೂತಾನ್‌ನಲ್ಲಿ ಭ್ರಷ್ಟಾಚಾರ ಇಲ್ಲವೇ ಇಲ್ಲ ಎನ್ನುವಷ್ಟು ಕಮ್ಮಿ. ಭೂತಾನ್ ಭಾರತದ ಪಕ್ಕದ ದೇಶವಾಗಿದ್ದರೂ ಭ್ರಷ್ಟಾಚಾರದ ಗಾಳಿ ಅಲ್ಲಿ ತಲುಪುವುದಿಲ್ಲ. ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್ ಭ್ರಷ್ಟಾಚಾರ ಸೂಚ್ಯಂಕದಲ್ಲಿ ಭೂತಾನ್ ಸತತವಾಗಿ ದಕ್ಷಿಣ ಏಷ್ಯಾದಲ್ಲೇ ಅತ್ಯಂತ ಪ್ರಾಮಾಣಿಕ ದೇಶವಾಗಿ ಗುರುತಿಸಿಕೊಂಡಿದೆ. ಭೂತಾನ್‌ನ ರಾಜರು ಕೇವಲ ಆಡಳಿತಗಾರರಲ್ಲ, ಅವರು ಜನರಿಗೆ ನೈತಿಕ ಮಾದರಿಗಳು. ನಾಲ್ಕನೇ ರಾಜ ಜಿಗ್ಮೆ ಸಿಂಗ್ಯೆ ವಾಂಗ್ಚುಕ್ ಅವರು 'ಒಟ್ಟು ರಾಷ್ಟ್ರೀಯ ಸಂತೋಷ' (Gross National Happiness) ಎಂಬ ಪರಿಕಲ್ಪನೆಯನ್ನು ಜಾರಿಗೆ ತಂದರು. ಇಲ್ಲಿ ಆರ್ಥಿಕ ಲಾಭಕ್ಕಿಂತ ಜನರ ನೆಮ್ಮದಿ ಮತ್ತು ಪ್ರಾಮಾಣಿಕತೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ರಾಜನೇ ಭ್ರಷ್ಟಾಚಾರದ ವಿರುದ್ಧ ಕಟ್ಟುನಿಟ್ಟಾದ ನಿಲುವನ್ನು ಹೊಂದಿರುವುದು ಅಲ್ಲಿನ ಅಧಿಕಾರಿಗಳಲ್ಲಿ ಮತ್ತು ಜನಸಾಮಾನ್ಯರಲ್ಲಿ ಭಯ ಮತ್ತು ಭಕ್ತಿ ಎರಡನ್ನೂ ಹುಟ್ಟುಹಾಕಿದೆ. ಭೂತಾನ್ನ ಸಂಸ್ಕೃತಿಯಲ್ಲಿ ಬೌದ್ಧ ಧರ್ಮವು ಹಾಸುಹೊಕ್ಕಾಗಿದೆ. 'ಕರ್ಮ'ದ ಮೇಲಿನ ನಂಬಿಕೆ ಅಲ್ಲಿನ ಜನರ ದೈನಂದಿನ ಬದುಕನ್ನು ನಿಯಂತ್ರಿಸುತ್ತದೆ. 'ಇನ್ನೊಬ್ಬರ ಪಾಲನ್ನು ಕಸಿದುಕೊಂಡರೆ ಅಥವಾ ಮೋಸ ಮಾಡಿದರೆ ಅದು ಮುಂದಿನ ಜನ್ಮದಲ್ಲಿ ನಮಗೆ ಕೆಟ್ಟದ್ದನ್ನು ತರುತ್ತದೆ' ಎಂಬ ಧಾರ್ಮಿಕ ನಂಬಿಕೆ ಭ್ರಷ್ಟಾಚಾರಕ್ಕೆ ದೊಡ್ಡ ತಡೆಯಾಗಿದೆ. ಅಲ್ಲಿನ ಜನರಿಗೆ ಅತಿಯಾದ ಆಸೆ ಇಲ್ಲದಿರುವುದು ಭ್ರಷ್ಟಾಚಾರ ಕಡಿಮೆ ಇರಲು ಪ್ರಮುಖ ಕಾರಣ. ಭೂತಾನ್‌ನಲ್ಲಿ ಭ್ರಷ್ಟಾಚಾರ ನಿಗ್ರಹ ದಳವು ಅತ್ಯಂತ ಸ್ವತಂತ್ರ ಮತ್ತು ಶಕ್ತಿಯುತ ಸಂಸ್ಥೆಯಾಗಿದೆ. ಇದು ಯಾವುದೇ ರಾಜಕೀಯ ಹಸ್ತಕ್ಷೇಪವಿಲ್ಲದೆ ಕಾರ್ಯನಿರ್ವಹಿಸುತ್ತದೆ. ಸಣ್ಣ ಮಟ್ಟದ ಲಂಚವನ್ನೂ ಅಲ್ಲಿ ಗಂಭೀರ ಅಪರಾಧವೆಂದು ಪರಿಗಣಿಸಲಾಗುತ್ತದೆ. ಮಂತ್ರಿಗಳೇ ಇರಲಿ ಅಥವಾ ಹಿರಿಯ ಅಧಿಕಾರಿಗಳೇ ಇರಲಿ, ಭ್ರಷ್ಟಾಚಾರದ ಆರೋಪ ಬಂದರೆ ತಕ್ಷಣ ವಿಚಾರಣೆ ಎದುರಿಸಬೇಕಾಗುತ್ತದೆ. ಭೂತಾನ್‌ನಲ್ಲಿ ಕಾನೂನು ಎಲ್ಲರಿಗೂ ಒಂದೇ. ಅಲ್ಲಿನ ಮಾಜಿ ಗೃಹ ಸಚಿವರೊಬ್ಬರು ಭ್ರಷ್ಟಾಚಾರದ ಆರೋಪದ ಮೇಲೆ ಜೈಲು ಶಿಕ್ಷೆ ಅನುಭವಿಸಿದ ಉದಾಹರಣೆಯಿದೆ. ಯಾವುದೇ ಪ್ರಭಾವಿ ವ್ಯಕ್ತಿ ಕಾನೂನಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಸಂದೇಶ ಜನರಲ್ಲಿ ಬಲವಾಗಿ ಹೋಗಿದೆ. ರಾಜಕೀಯ ಹಸ್ತಕ್ಷೇಪವಿಲ್ಲದ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ ಅಲ್ಲಿನ ದೊಡ್ಡ ಶಕ್ತಿ. ಭ್ರಷ್ಟಾಚಾರಕ್ಕೆ ಮುಖ್ಯ ಕಾರಣಗಳಲ್ಲಿ ಒಂದು 'ಅವಶ್ಯಕತೆ'. ಆದರೆ ಭೂತಾನ್ ಸರಕಾರವು ತನ್ನ ನಾಗರಿಕರಿಗೆ ಉಚಿತ ಶಿಕ್ಷಣ ಮತ್ತು ಉಚಿತ ಆರೋಗ್ಯ ಸೇವೆಯನ್ನು ನೀಡುತ್ತದೆ. ಮೂಲಭೂತ ಸೌಕರ್ಯಗಳಿಗಾಗಿ ಜನರು ಪರದಾಡುವ ಅನಿವಾರ್ಯತೆ ಇಲ್ಲದಿರುವುದರಿಂದ, ಹಣಕ್ಕಾಗಿ ಅಡ್ಡದಾರಿ ಹಿಡಿಯುವವರ ಸಂಖ್ಯೆ ತೀರಾ ಕಡಿಮೆ. ಬಾಲ್ಯದಲ್ಲೇ ಮಗುವಿಗೆ 'ಪ್ರಾಮಾಣಿಕತೆಯೇ ಅಂತಿಮ ಸುಖ' ಎಂಬ ಪಾಠವನ್ನು ಕಲಿಸಲಾಗುತ್ತದೆ. ಹಾಗಾಗಿ, ಅಲ್ಲಿನ ಜನ ಭ್ರಷ್ಟಾಚಾರವನ್ನು ಒಂದು ಅಸಹ್ಯಕರ ಎಂದೇ ಭಾವಿಸುತ್ತಾರೆ. ಭೂತಾನ್‌ನ ಜನಸಂಖ್ಯೆ ಸುಮಾರು ಎಂಟು ಲಕ್ಷ ಮಾತ್ರ. ಅಲ್ಲಿ ಸಮಾಜವು ತುಂಬಾ ಚಿಕ್ಕದಾಗಿದ್ದು, ಒಬ್ಬರನ್ನೊಬ್ಬರು ಚೆನ್ನಾಗಿ ಬಲ್ಲರು. ಯಾರಾದರೂ ಭ್ರಷ್ಟಾಚಾರ ಮಾಡಿ ಸಿಕ್ಕಿಬಿದ್ದರೆ, ಅದು ಅವರ ಕುಟುಂಬಕ್ಕೆ ಮತ್ತು ಇಡೀ ವಂಶಕ್ಕೆ ದೊಡ್ಡ ಅವಮಾನ ಎಂದು ಪರಿಗಣಿಸಲಾಗುತ್ತದೆ. ಈ 'ಸಾಮಾಜಿಕ ಕಳಂಕ'ಕ್ಕೆ (Social Stigma) ಹೆದರಿ ಜನರು ತಪ್ಪು ಮಾಡಲು ಹಿಂಜರಿಯುತ್ತಾರೆ. ಭೂತಾನಿಯರು ಪ್ರಕೃತಿಯನ್ನು ದೇವರೆಂದು ಪೂಜಿಸುತ್ತಾರೆ. ಕಾಡುಗಳನ್ನು ಕಡಿದು ಹಣ ಮಾಡುವ ಭೂಮಾಫಿಯಾಗಳು ಅಲ್ಲಿಲ್ಲ. ದೇಶದ ಶೇ. 70ಕ್ಕೂ ಹೆಚ್ಚು ಭಾಗ ಕಾಡಿನಿಂದ ಆವೃತವಾಗಿರಲೇಬೇಕು ಎಂಬ ಸಂವಿಧಾನದ ನಿಯಮವಿದೆ. ನೈಸರ್ಗಿಕ ಸಂಪನ್ಮೂಲಗಳ ಲೂಟಿ ಅಲ್ಲಿ ಅಸಾಧ್ಯವಾದ ಮಾತು. ಭೂತಾನ್‌ನಿಂದ ಜಗತ್ತು ಕಲಿಯಬೇಕಾದದ್ದು ಬಹಳಷ್ಟಿದೆ. ಅಭಿವೃದ್ಧಿ ಎಂದರೆ ಕೇವಲ ಜಿಡಿಪಿ ಬೆಳೆಸುವುದಲ್ಲ, ಮನುಷ್ಯನ ನೈತಿಕತೆಯನ್ನು ಕಾಪಾಡಿಕೊಳ್ಳುವುದು ಎಂಬುದನ್ನು ಭೂತಾನ್ ಸಾಬೀತುಪಡಿಸಿದೆ. ಅಲ್ಲಿನ ರಾಜಕಾರಣಿಗಳು ಮತ್ತು ಅಧಿಕಾರಿಗಳು ಸೇವೆಯನ್ನು ಒಂದು ತಪಸ್ಸಿನಂತೆ ಮಾಡುತ್ತಾರೆ. ಕಾನೂನಿಗಿಂತ ಮನುಷ್ಯನ ಮನಃಸಾಕ್ಷಿ ಜಾಗೃತವಾಗಿದ್ದಾಗ ಮಾತ್ರ ಭ್ರಷ್ಟಾಚಾರ ಮುಕ್ತ ಸಮಾಜ ಸಾಧ್ಯ. ಭೂತಾನ್ ಆ ಮನಃಸಾಕ್ಷಿಯ ಜೀವಂತ ಉದಾಹರಣೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಭ್ರಷ್ಟಾಚಾರದ ಸುಳಿಯಲ್ಲಿ ಸಿಲುಕಿ ಒದ್ದಾಡುತ್ತಿರುವಾಗ, ಭೂತಾನ್ ತನ್ನ ಹಿಮಾಲಯದ ತಪ್ಪಲಿನಲ್ಲಿ ಮೌನವಾಗಿ ನೈತಿಕತೆಯ ಸಾಮ್ರಾಜ್ಯವನ್ನು ಕಟ್ಟಿದೆ.

ಸೋಲಿನ ಹತಾಶೆ ಮೋದಿ ವಿರುದ್ಧ ಅವಹೇಳನಕಾರಿ ಭಾಷೆ

ಕಾಂಗ್ರೆಸ್‌ನ ನಾಯಕಿ ಸೋನಿಯಾ ಗಾಂಧಿ ಮೋದಿಯವರನ್ನು 'ಮೌತ್ ಕಾ ಸೌದಾಗರ್', ಮತ್ತೊಬ್ಬ ಕಾಂಗ್ರೆಸ್‌ನ ನಾಯಕ ಮಣಿ ಶಂಕರ್ ಅಯ್ಯರ್ ಮೋದಿಯವರನ್ನು 'ನೀಚ್ ಆದ್ಮಿ' , ರಾಹುಲ್ ಗಾಂಧಿ 'ಚೌಕಿದಾರ್ ಚೋರ್ ಹೈ' ಪದವನ್ನು ಚುನಾವಣಾ ಪ್ರಚಾರದಲ್ಲಿ ಬಳಸಿದ್ದರು.

ಮೋಹನ್ ವಿಶ್ವ
ವೀಕೆಂಡ್ ವಿತ್ ಮೋಹನ್
vveditoped@gmail.com

ಭಾರತದ ಪ್ರಜಾಪ್ರಭುತ್ವ ವಿಶ್ವದಲ್ಲೇ ಅತಿ ದೊಡ್ಡದು ಎಂಬ ಹೆಗ್ಗಳಿಕೆಯನ್ನು ಹೊಂದಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಸಂಭಾಷಣೆಯ ಮಟ್ಟ ಕುಸಿಯುತ್ತಿರುವುದು ಗಂಭೀರ ಚಿಂತನೆಯ ವಿಷಯವಾಗಿದೆ. ಭಿನ್ನಾಭಿಪ್ರಾಯಗಳು ಪ್ರಜಾಪ್ರಭುತ್ವದ ಮೂಲಭೂತ ಅಂಶವಾಗಿದ್ದರೂ, ಅವಮಾನ, ನಿಂದನೆ ಮತ್ತು ವೈಯಕ್ತಿಕ ದಾಳಿಗಳು ಅದನ್ನು ದುರ್ಬಲಗೊಳಿಸುತ್ತಿವೆ. ವಿಶೇಷವಾಗಿ ಪ್ರಧಾನಮಂತ್ರಿಯಾಗಿರುವ ನರೇಂದ್ರ ಮೋದಿಯವರ ವಿರುದ್ಧ ಬಳಸಲಾಗುತ್ತಿರುವ ಭಾಷೆ, ರಾಜಕೀಯ ಟೀಕೆಯನ್ನೂ ಮೀರಿದ ಒಂದು ವಿಷಕಾರಿ ಪ್ರವೃತ್ತಿಯನ್ನು ಸೂಚಿಸುತ್ತದೆ. ವಿಮರ್ಶೆ ಮತ್ತು ನಿಂದನೆಗಳ ನಡುವಿನ ರೇಖೆ ಸ್ಪಷ್ಟವಾಗಿರಬೇಕು, ಸರಕಾರದ ನೀತಿಗಳನ್ನು ಪ್ರಶ್ನಿಸುವುದು, ನಿರ್ಧಾರಗಳನ್ನು ವಿಮರ್ಶಿಸುವುದು, ಆಡಳಿತದ ಬಗ್ಗೆ ಚರ್ಚಿಸುವುದು, ಪ್ರಜಾಪ್ರಭುತ್ವದ ಆರೋಗ್ಯಕರ ಲಕ್ಷಣಗಳು. ಆದರೆ ಕೆಲವು ಸಂದರ್ಭಗಳಲ್ಲಿ ಆ ಟೀಕೆಗಳು ವೈಯಕ್ತಿಕ ಅವಹೇಳನಗಳಾಗಿ ಬದಲಾಗುತ್ತಿರುವುದು ವಿಪರ್ಯಾಸದ ಸಂಗತಿ.

ಕಾಂಗ್ರೆಸ್‌ನ ನಾಯಕಿ ಸೋನಿಯಾ ಗಾಂಧಿ ಮೋದಿಯವರನ್ನು 'ಮೌತ್ ಕಾ ಸೌದಾಗರ್' ಎಂದು ಹೇಳಿದ್ದರು, ಮತ್ತೊಬ್ಬ ಕಾಂಗ್ರೆಸ್‌ನ ನಾಯಕ ಮಣಿ ಶಂಕರ್ ಅಯ್ಯರ್ ಮೋದಿಯವರನ್ನು 'ನೀಚ್ ಆದ್ಮಿ' ಎಂದು ಅವಹೇಳನ ಮಾಡಿದ್ದರು, ರಾಹುಲ್ ಗಾಂಧಿ 'ಚೌಕಿದಾರ್ ಚೋರ್ ಹೈ' ಪದವನ್ನು ಚುನಾವಣಾ ಪ್ರಚಾರದಲ್ಲಿ ಬಳಸಿದ್ದರು. ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯ ಮೋದಿಯವರನ್ನು 2023ರ ಕರ್ನಾಟಕ ವಿಧಾನಸಭಾ ಚುನಾವಣಾ ಸಮಯದಲ್ಲಿ 'ವಿಷ ಸರ್ಪ' ಎಂದು ಕರೆದಿದ್ದರು, ಅಸ್ಸಾಂನ ಚುನಾವಣಾ ಪ್ರಚಾರ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಬಿಜೆಪಿಯನ್ನು ವಿಷಸರ್ಪಕ್ಕೆ ಹೋಲಿಸಿ ಕೊಲ್ಲುವಂತೆ ಪ್ರಚೋದನಕಾರಿ ಹೇಳಿಕೆಯನ್ನು ನೀಡಿದ್ದರು, ಕೇರಳ ಚುನಾವಣೆ ಸಂದರ್ಭದಲ್ಲಿ ಮೋದಿಯವರನ್ನು ಗುರಿಯನ್ನಾಗಿಸಿ ಗುಜರಾತಿಗಳನ್ನು ಅನಕ್ಷರಸ್ತರೆಂದು ಹೇಳಿದ್ದರು, ತಮಿಳುನಾಡಿ ನಲ್ಲಿ ಮೋದಿಯವರನ್ನು 'ಭಯೋತ್ಪಾದಕ' ಎನ್ನುವ ಮೂಲಕ ಮೋದಿಯವರ ಮೇಲಿನ ವೈಯಕ್ತಿಕ ದಾಳಿಯನ್ನು ಮುಂದುವರೆಸಿ, ಅತ್ಯಂತ ಕೀಳುಮಟ್ಟದ ಭಾಷೆ ಬಳಸಿದ್ದಾರೆ.

ಸತತ ಚುನಾವಣಾ ಸೋಲಿನಿಂದ ಕಂಗೆಟ್ಟಿರುವ ಕಾಂಗ್ರೆಸ್ ಪಕ್ಷದ ನಾಯಕಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯನ್ನು ಕಾಂಗ್ರೆಸ್‌ನ ನಾಯಕರು ಮೆಚ್ಚಿಸಬೇಕೆಂದರೆ ಮೋದಿ ಅಥವಾ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಆಗಾಗ ತೆಗಳುತ್ತಿರಬೇಕು, ಎಂಬುದು ಅಲ್ಲಿನ ಅಲಿಖಿತ ನಿಯಮ. ಒಂದೆಡೆ ಮಲ್ಲಿಕಾರ್ಜುನ ಖರ್ಗೆಯವರಿಗೆ ತಮ್ಮ ಅಧ್ಯಕ್ಷ ಸ್ಥಾನವನ್ನು ಉಳಿಸಿಕೊಳ್ಳಬೇಕು, ಮತ್ತೊಂದೆಡೆ ಅವರ ಪುತ್ರ ಪ್ರಿಯಾಂಕ್ ಖರ್ಗೆ ರಾಜ್ಯದಲ್ಲಿ ಬದಲಾವಣೆ ಗಾಳಿ ಬೀಸಿದರೆ ಮುಖ್ಯಮಂತ್ರಿ ಅಥವಾ ಉಪಮುಖ್ಯಮಂತ್ರಿಯಾಗಬೇಕು. ಇಬ್ಬರ ಉದ್ದೇಶ ಸ್ಪಷ್ಟವಾಗಿರುವುದರಿಂದ ರಾಜಕೀಯದ ನೈತಿಕ ಗಡಿಗಳನ್ನು ಮೀರಿ ನಾಲಗೆಯ ಮೇಲೆ ಹಿಡಿತವಿಲ್ಲದಂತೆ ಮಾತನಾಡುತ್ತಿದ್ದಾರೆ.

ಪ್ರಧಾನಿ ಮೋದಿಯವರ ಮೇಲಿನ ಈ ರೀತಿಯ ಭಾಷೆಯ ಬಳಕೆ ಕೇವಲ ಒಬ್ಬ ನಾಯಕನ ವಿರುದ್ಧದ ದಾಳಿ ಮಾತ್ರವಲ್ಲ, ದೇಶದ ಪ್ರಜಾಪ್ರಭುತ್ವದ ಮೌಲ್ಯಗಳ ಮೇಲೆ ದೊಡ್ಡ ಪರಿಣಾಮವನ್ನು ಉಂಟುಮಾಡುತ್ತದೆ. ಪ್ರಧಾನಮಂತ್ರಿಯ ಸ್ಥಾನ ಕೇವಲ ವ್ಯಕ್ತಿಯದ್ದಲ್ಲ, ಅದು ದೇಶದ ಗೌರವ ಮತ್ತು ಜನರ ಮತದ ಪ್ರತಿನಿಧಿಯಾಗಿದೆ. ಆ ಸ್ಥಾನಕ್ಕೆ ಅವಹೇಳನಕಾರಿ ಪದಗಳನ್ನು ಬಳಸುವುದು, ಅನೇಕ ಜನರ ಅಭಿಪ್ರಾಯವನ್ನು ತಿರಸ್ಕರಿಸುವಂತೆ ಕಂಡುಬರುತ್ತದೆ. ಇದರಿಂದ ರಾಜಕೀಯ ಚರ್ಚೆಗಳು ಅಭಿವೃದ್ಧಿ, ಆರ್ಥಿಕತೆ, ರಾಷ್ಟ್ರೀಯ ಭದ್ರತೆ ಮುಂತಾದ ಪ್ರಮುಖ ವಿಷಯಗಳಿಂದ ದೂರ ಸರಿದು ವೈಯಕ್ತಿಕ ಹೇಳಿಕೆಗಳತ್ತ ತಿರುಗುತ್ತವೆ. ಈ ಪ್ರವೃತ್ತಿಯ ಮತ್ತೊಂದು ಪರಿಣಾಮ ಸಾಮಾಜಿಕ ಮಾಧ್ಯಮಗಳಲ್ಲಿ ಕಾಣಿಸುತ್ತದೆ, ರಾಜಕೀಯ ನಾಯಕರು ಬಳಸುವ ಭಾಷೆ, ಅವರ ಅನುಯಾಯಿಗಳಲ್ಲಿಯೂ ಪ್ರತಿಫಲಿಸುತ್ತದೆ. ಪರಿಣಾಮ, ದ್ವೇಷಪೂರಿತ ಮತ್ತು ಅವಹೇಳನಕಾರಿ ಭಾಷೆ ಬಳಕೆ ಸಾಮಾನ್ಯವಾಗಿಬಿಡುತ್ತದೆ. ಇದು ಸಮಾಜದಲ್ಲಿ ವಿಭಜನೆಗೆ ಕಾರಣವಾಗುತ್ತದೆ ಮತ್ತು ಯುವಜನತೆಗೆ ತಪ್ಪು ಮಾದರಿಯನ್ನು ಒದಗಿಸುತ್ತದೆ. ಆರೋಗ್ಯಕರ ಚರ್ಚೆಗಳ ಬದಲಾಗಿ, ಕಟುವಾದ ವಾದ - ವಿವಾದಗಳು ಹೆಚ್ಚಾಗುತ್ತವೆ.

ಭಾರತದ ರಾಜಕೀಯ ಇತಿಹಾಸದಲ್ಲಿ ಗೌರವಯುತ ಸಂಭಾಷಣೆಗೆ ಉದಾಹರಣೆಯಾಗಿರುವ ನಾಯಕರು ಅನೇಕರಿದ್ದಾರೆ. ಭಾರತ ಕಂಡಂತಹ ಧೀಮಂತ ನಾಯಕ 'ಅಟಲ್ ಬಿಹಾರಿ ವಾಜಪೇಯಿ' ರಂತಹ ನಾಯಕರು ವಿರೋಧ ಪಕ್ಷದಲ್ಲಿ ಕುಳಿತು, ಆಡಳಿತ ಪಕ್ಷದ ತೀರ್ಮಾನಗಳ ಬಗ್ಗೆ ತೀವ್ರವಾಗಿ ವಿರೋಧ ವ್ಯಕ್ತಪಡಿಸಿದರೂ, ಭಾಷೆಯಲ್ಲಿ ಸೌಜನ್ಯವನ್ನು ಕಾಪಾಡುತ್ತಿದ್ದರು. ಭಿನ್ನಾಭಿಪ್ರಾಯಗಳು ಇರಬಹುದು, ಆದರೆ ಅವುಗಳನ್ನು ವ್ಯಕ್ತಪಡಿಸುವ ವಿಧಾನ ಪ್ರಜಾಪ್ರಭುತ್ವದ ಗುಣಮಟ್ಟವನ್ನು ನಿರ್ಧರಿಸುತ್ತದೆ. ರಾಜಕೀಯದಲ್ಲಿ ನಿಂದನೆ ಮತ್ತು ಅವಹೇಳನಗಳಿಗೆ ತಾತ್ಕಾಲಿಕ ಪ್ರಭಾವ ಇರಬಹುದು, ಆದರೆ ದೀರ್ಘಕಾಲದಲ್ಲಿ ಜನರು ವಿಷಯಾಧಾರಿತ ಚರ್ಚೆಗಳನ್ನು ಮತ್ತು ಫಲಿತಾಂಶಗಳನ್ನು ಗಮನಿಸುತ್ತಾರೆ, ಗೌರವಪೂರ್ಣ ಭಾಷೆಯೊಂದಿಗೆ ನಡೆಯುವ ಚರ್ಚೆಗಳು ಮಾತ್ರ ಪ್ರಜಾಪ್ರಭುತ್ವವನ್ನು ಮತ್ತಷ್ಟು ಬಲಪಡಿಸುತ್ತವೆ. ಮೋದಿಯವರನ್ನು ಭಯೋತ್ಪಾದಕ ಎಂದು ಕರೆಯುವ ಮಲ್ಲಿಕಾರ್ಜುನ ಖರ್ಗೆಯವರು, ಸಂವಿಧಾನವನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಂಡು 50 ಬಾರಿ ರಾಜ್ಯ ಸರಕಾರಗಳನ್ನು ಉರುಳಿಸಿದ ತಮ್ಮದೇ ಪಕ್ಷದ ಇಂದಿರಾ ಗಾಂಧಿಯವರನ್ನು ಏನೆಂದು ಕರೆಯುತ್ತಾರೆ?

ಭಯೋತ್ಪಾದಕರ ವಿಷಯದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರು ಈ ಹಿಂದೆ ನೀಡಿರುವ ಹೇಳಿಕೆಗಳನ್ನು ಒಮ್ಮೆ ತಿರುವು ಹಾಕಿದರೆ, ಭಯೋತ್ಪಾದನೆ ವಿರುದ್ಧದ ಆ ಪಕ್ಷದ ನಿಲುವು ಕನ್ನಡಿಯ ಮುಂದೆ ಬೆತ್ತಲಾಗಿಸುತ್ತದೆ. ರಾಹುಲ್ ಗಾಂಧಿ ಪಾಕಿಸ್ತಾನ ಮೂಲದ 'ಜೈಷೆ ಮೊಹಮ್ಮದ್' ಉಗ್ರ ಸಂಘಟನೆಯ ನಾಯಕ 'ಮಸೂದ್ ಅಜ್ಹರ್'ನನ್ನು ಅಜ್ಹರ್ ಜೀ ಎಂದು ಕರೆದಿದ್ದರು. ದಿಗ್ವಿಜಯ ಸಿಂಗ್ 'ಲಷ್ಕರೆ ತಯ್ಬಾ' ಉಗ್ರ ಸಂಘಟನೆಯ ನಾಯಕ 'ಹಫೀಜ್ ಸಯೀದ್' ನನ್ನು ಸಯೀದ್ ಸಾಬ್ ಎಂದು ಕರೆದಿದ್ದರು, 2008ರ 'ಬಾಟ್ಲಾ ಹೌಸ್ ಎನ್ಕೌಂಟರ್' ಕುರಿತು ದಿಗ್ವಿಜಯ ಸಿಂಗ್ ಸಂಶಯ ವ್ಯಕ್ತಪಡಿಸಿದ್ದರು. ಕಾಶ್ಮೀರಿ ಪಂಡಿತರ ಸಾವಿಗೆ ಕಾರಣನಾದ ಉಗ್ರ 'ಯಾಸೀನ್ ಮಲಿಕ್'ನನ್ನು ಕರೆಸಿ ರಾಜ ಮರ್ಯಾದೆ ನೀಡಿದ್ದು ಕಾಂಗ್ರೆಸ್ ಪಕ್ಷ. 2001ರ ಸಂಸತ್ ದಾಳಿಯ ರೂವಾರಿ ಉಗ್ರ 'ಅಫ್ಜಲ್ ಗುರು'ನನ್ನು ಸುರ್ಜೆವಾಲಾ 'ಅಫ್ಜಲ್ ಜಿ'ಎಂದು ಕರೆದಿದ್ದರು. ಮಾಜಿ ವಿತ್ತ ಸಚಿವ ಪಿ. ಚಿದಂಬರಂ ಹಿಂದೂ ತೀವ್ರವಾದ ಎಂಬ ಪದ ಬಳಸಿದ್ದರು,ನಿಜವಾದ ಭಯೋತ್ಪಾದಕರಿಗೆ ಸಹಾನುಭೂತಿ ತೋರಿಸುವುದು ಆ ಪಕ್ಷದ ನಾಯಕರ ನಿತ್ಯಚಾಳಿಯಾಗಿದೆ. ರಾಜಕೀಯದಲ್ಲಿ ಬಳಸುವ ಪದಗಳು ಕೇವಲ ಹೇಳಿಕೆಗಳಲ್ಲ, ಅವು ಜನರ ಮನಸ್ಥಿತಿಯನ್ನು ಪ್ರಭಾವಿಸುತ್ತವೆ.

ಜಗತ್ತಿನ ವಿವಿಧ ದೇಶಗಳು ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳು ನರೇಂದ್ರ ಮೋದಿಯವರನ್ನು ತಮ್ಮ ಅತ್ಯುನ್ನತ ಪ್ರಶಸ್ತಿಗಳು ಮತ್ತು ಗೌರವಗಳಿಂದ ಸನ್ಮಾನಿಸಿವೆ, ಈ ಗೌರವಗಳು ಭಾರತವು ಜಾಗತಿಕ ವೇದಿಕೆಯಲ್ಲಿ ಪಡೆದಿರುವ ಪ್ರಾಮುಖ್ಯತೆಯ ಸೂಚಕವಾಗಿದೆ. 2016 ರಲ್ಲಿ ಸೌದಿ ಅರೇಬಿಯಾ ಮೋದಿಯವರಿಗೆ ತನ್ನ ಅತ್ಯುನ್ನತ ನಾಗರಿಕ ಗೌರವಗಳಲ್ಲಿ ಒಂದಾದ Order of Abdulaziz Al Saud ನೀಡಿತ್ತು. 2018ರಲ್ಲಿ ಪ್ಯಾಲೆಸ್ಟೀನ್ Grand Collar of the State of Palestine ಪ್ರಶಸ್ತಿಯನ್ನು ನೀಡಿದೆ, ದ್ವಿಪಕ್ಷೀಯ ಸಂಬಂಧಗಳ ಬಲವರ್ಧನೆಗೆ ಅವರ ಕೊಡುಗೆಯನ್ನು ಮೆಚ್ಚಿ ನೀಡಿತ್ತು. ಮಧ್ಯಪ್ರಾಚ್ಯದ ಮತ್ತೊಂದು ಪ್ರಮುಖ ರಾಷ್ಟ್ರ ಯುಎಇ - 2019ರಲ್ಲಿ ಮೋದಿಯವರಿಗೆ ತನ್ನ ಅತ್ಯುನ್ನತ ನಾಗರಿಕ ಗೌರವ Order of Zayed ಅನ್ನು ಪ್ರದಾನ ಮಾಡಿತ್ತು. ಈ ಪ್ರಶಸ್ತಿ, ಭಾರತ - ಯುಎಇ ಸಂಬಂಧಗಳ ಅಭಿವೃದ್ಧಿಗೆ ನೀಡಿದ ಪ್ರೇರಣೆಯನ್ನು ಗುರುತಿ ಸುತ್ತದೆ. ಅದೇ ಸಮಯದಲ್ಲಿ, ಬಹರೇನ್ ದೇಶ King Hamad Order of the Renaissance ಗೌರವವನ್ನು ನೀಡಿ, ಮೋದಿಯವರ ನಾಯಕತ್ವವನ್ನು ಶ್ಲಾಘಿಸಿತು. ಆಫ್ರಿಕಾ ಖಂಡದಲ್ಲಿಯೂ ಮೋದಿಯವರ ಪ್ರಭಾವ ಸ್ಪಷ್ಟವಾಗಿ ಕಾಣಿಸಿದೆ, ಈಜಿಪ್ಟ್ 2023ರಲ್ಲಿ ತನ್ನ ಅತ್ಯುನ್ನತ ಗೌರವ Order of the Nile ನೀಡಿ, ಭಾರತ-ಈಜಿಪ್ಟ್ ಸಂಬಂಧಗಳನ್ನು ಬಲಪಡಿಸುವಲ್ಲೂ ಮೋದಿಯವರ ಪಾತ್ರವನ್ನು ಪ್ರಶಂಶಿಸಿತ್ತು.

ಅಂತರಾಷ್ಟ್ರೀಯ ವೇದಿಕೆಯಲ್ಲಿ, ಮೋದಿ ಯವರು ವಿಶ್ವ ಸಂಸ್ಥೆಯಿಂದಲೂ ಗೌರವಿಸಲ್ಪಟ್ಟಿದ್ದಾರೆ. 2018ರಲ್ಲಿ ಅವರಿಗೆ Champions of the Earth ಪ್ರಶಸ್ತಿ ಲಭಿಸಿತು, ಇದು ಪರಿಸರ ಸಂರಕ್ಷಣೆ ಮತ್ತು ಹವಾಮಾನದಲ್ಲಿ ಅವರ ಮುಂದಾಳತ್ವವನ್ನು ಗುರುತಿಸುತ್ತದೆ. ವಿಶೇಷವಾಗಿ ಅಂತರಾಷ್ಟ್ರೀಯ ಸೌರ ಮೈತ್ರಿ (International Solar Alliance) ಸ್ಥಾಪನೆಗೆ ನೀಡಿದ ಕೊಡುಗೆ ಈ ಪ್ರಶಸ್ತಿಗೆ ಪ್ರಮುಖ ಕಾರಣವಾಗಿದೆ. ಇದಲ್ಲದೆ, 2018ರಲ್ಲಿ ದಕ್ಷಿಣ ಕೊರಿಯಾದಿಂದ Seoul Peace Prize ಪ್ರಶಸ್ತಿ ದೊರೆತಿದ್ದು, ಜಾಗತಿಕ ಶಾಂತಿ, ಆರ್ಥಿಕ ಬೆಳವಣಿಗೆ ಮತ್ತು ಅಂತರಾಷ್ಟ್ರೀಯ ಸಹಕಾರಕ್ಕೆ ಅವರ ಕೊಡುಗೆಯನ್ನು ಮೆಚ್ಚಲಾಗಿದೆ. ಈ ಪ್ರಶಸ್ತಿ ಮೋದಿಯವರನ್ನು ಜಾಗತಿಕ ನಾಯಕತ್ವದ ಪ್ರಮುಖ ವ್ಯಕ್ತಿಯಾಗಿ ಗುರುತಿಸುವ ಮತ್ತೊಂದು ಉದಾಹರಣೆ. ಮೋದಿಯವರ ಅಂತರಾಷ್ಟ್ರೀಯ ಗೌರವಗಳು ಕೇವಲ ಪ್ರಶಸ್ತಿಗಳ ಮಟ್ಟದಲ್ಲೇ ಸೀಮಿತವಾಗಿಲ್ಲ. ಅನೇಕ ದೇಶಗಳಲ್ಲಿ ಅವರಿಗೆ ಸಂಸತ್ ಭಾಷಣ ಮಾಡುವ ಅವಕಾಶ, ವಿಶಿಷ್ಟ ಸ್ವಾಗತ, ಮತ್ತು ಭಾರತೀಯ ಸಮುದಾಯದಿಂದ ಭಾರೀ ಬೆಂಬಲ ದೊರೆತಿರುವುದು ಕೂಡ ಗಮನಾರ್ಹ.ಅಮೆರಿಕದ ಕಾಂಗ್ರೆಸ್‌ನಲ್ಲಿ ಮಾಡಿದ ಭಾಷಣ, ಆಸ್ಟ್ರೇಲಿಯಾ, ಜಪಾನ್, ಯುರೋಪಿಯನ್ ರಾಷ್ಟ್ರಗಳಲ್ಲಿ ದೊರೆತ ಗೌರವಪೂರ್ಣ ಸ್ವಾಗತಗಳು ಭಾರತವು ಜಾಗತಿಕ ರಾಜಕೀಯದಲ್ಲಿ ಹೊಂದಿರುವ ಮಹತ್ವವನ್ನು ಪ್ರತಿಬಿಂಬಿಸುತ್ತವೆ.

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಒಳ ಮೀಸಲಾತಿಯೆಂಬ ಕಗ್ಗಂಟು!

ಒಳ ಮೀಸಲಾತಿ ವಿಚಾರವೂ 30 ವರ್ಷಗಳಿಂದ ಕಗ್ಗಂಟಾಗಿ ಇಂದಿನವರೆಗೂ ಮುಂದುವರೆದಿದೆ. ಈಗ ಏಪ್ರಿಲ್ 24ರಂದು ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರಕಾರ ಅಂತಿಮ ನಿರ್ಧಾರ ಕೈಗೊಳ್ಳಲು ವಿಶೇಷ ಕ್ಯಾಬಿನೆಟ್ ಸಭೆ ಕರೆದಿದೆ. ಈ ಸಭೆಯಲ್ಲಿ ಸಿಎಸ್‌ರವರ ನೇತೃತ್ವದಲ್ಲಿ ತಾಂತ್ರಿಕ ಸಮಿತಿ ಒಂದನ್ನು ರಚಿಸಿದೆ. ಈ ಸಮಿತಿಯು ಒಳ ಮೀಸಲಾತಿ ಹಂಚಿಕೆಯ ವರ್ಗೀಕರಣ ಯಾವ ರೀತಿ ಮಾಡಿದೆ ಅನ್ನೋದು ಸ್ಪಷ್ಟವಾಗಿ ಗೊತ್ತಿಲ್ಲ. ಆದರೂ ಮಾಧ್ಯಮಗಳಲ್ಲಿ ಬಂದಂತ ಗಾಳಿ ಸುದ್ದಿಯ ಮಾಹಿತಿಯಂತೆ. ಎ5.4, ಬಿ5.4, ಸಿ4.2 ಒಳ ಮೀಸಲಾತಿ ಹಂಚಿಕೆ ಮಾಹಿತಿ ಕಂಡು ಬಂದಿದೆ. ಇದು ಒಂದು ವೇಳೆ ಸತ್ಯವಾಗಿದ್ದರೆ ಇದೇ ಪ್ರಕಾರ ಒಳ ಮೀಸಲಾತಿಯನ್ನು ಪ್ರವರ್ಗ ಎ, ಬಿ, ಸಿ ರೀತಿಯಲ್ಲಿ ಹಂಚಿಕೆ ಮಾಡಿದರೆ ಮತ್ತೆ ರೋಸ್ಟರ್ ಬಿಂದು ಸಮಸ್ಯೆ ಉದ್ಭವಿಸುವುದು. ಇದರಿಂದ ಸರಕಾರದ ತೀರ್ಮಾನ ವ್ಯರ್ಥವಾಗಲಿದೆ. ಸರಕಾರದ ನಿರ್ಣಯ ಸಾರ್ಥಕವಾಗಬೇಕಾದರೆ ಈ ರೀತಿ ಬಿಟ್ಟು ಪ್ರವರ್ಗ ಎ1, ಎ2, ಎ3 ಮತ್ತು ಪರಿಶಿಷ್ಟ ಜಾತಿ ಇತರೆ ಈ ರೀತಿ ರೋಸ್ಟರ್ ಬಿಂದು ಜಾರಿ ಮಾಡಿದರೆ ಒಳ ಮೀಸಲಾತಿ ಸ್ಪಷ್ಟವಾಗಿ ಪರಿಹಾರವಾಗಲಿದೆ.

- ಭೀಮಾಶಂಕರ ದಾದೇಲಿ, ಹಳಿಸಗರ, ಶಹಾಪುರ.

ಮೇಲಧಿಕಾರಿಗಳಿಗೆ ಗೊತ್ತಿಲ್ಲವೇ?

ವಿನಾಯಕ ಭಟ್ಟರ ಲೇಖನ ಮತ್ತು ಶಿಶಿರ ಹೆಗಡೆಯವರ ಬರಹ ಎರಡನ್ನು ಓದಿದಾಗ ಅನಿಸಿದ್ದು, ಪ್ರತಿಷ್ಠಿತ ದೊಡ್ಡ ಸಂಸ್ಥೆಯಲ್ಲಿ ಇಂತ ಅಪದ್ಧಗಳು ನಡೆಯುತ್ತಿರುವ ಸಂಗತಿ ಮೇಲ್ಮಟ್ಟದ ಅಧಿಕಾರಿಗಳ ಗಮನಕ್ಕೆ ಬರಲಿಲ್ಲವೇ? ಟಿಸಿಎಸ್‌ನಂತಹ ದೈತ್ಯ ಕಂಪನಿಗಳಲ್ಲಿ ಪ್ರತಿ ಕ್ಷಣದ ಸುದ್ದಿಗಳು ಆಗಿಂದಾಗ್ಗೆ ವ್ಯವಸ್ಥಾಪಕರಿಗೆ ತಲುಪುತ್ತವೆ ಹೀಗಿರುವಾಗ ಮಾನವ ಸಂಪನ್ಮೂಲ ವಿಭಾಗದ ಈ ವಿಷಯ ಅವರಿಗೆ ತಿಳಿಯ ಲಿಲ್ಲವೆಂದರೆ ಒಂದೋ ಮೇಲಧಿಕಾರಿಗಳಿಗೆ ಇದು ಗೊತ್ತಾಗದಂತೆ ನೋಡಿಕೊಳ್ಳಲಾಗಿದೆ ಅಥವಾ ವ್ಯವಸ್ಥಾಪಕರು ಗೊತ್ತಿದ್ದು ಸುಮ್ಮನಿದ್ದಾರೆ. ಈಗ ಪೊಲೀಸ್ ಇಲಾಖೆ ತನಿಖೆ ಶುರು ಮಾಡಿದ್ದಾರೆ. ನಿದಾ ಖಾನ್, ಸಂಚಿನ ಸೂತ್ರಧಾರಿ ಕಾಣೆಯಾಗಿದ್ದಾಳೆ. ಅವಳ ಗಂಡ ನನಗೇನೂ ಗೊತ್ತಿಲ್ಲ ಎಂದಿದ್ದಾನೆ. ತನಿಖೆಯನ್ನು ತೀವ್ರಗೊಳಿಸಿ ಅಪರಾಧಿಗಳ ಹೆಡೆಮುರಿ ಕಟ್ಟಬೇಕು ಹಾಗೂ ಎಲ್ಲ ಕಡೆಯಲ್ಲು ಹೆಣ್ಣು ಮಕ್ಕಳು ಎಚ್ಚರವಾಗಿರಬೇಕಿರುವುದು ಇಂದಿನ ತುರ್ತು.

- ಬಿ.ಎಸ್. ಮೋಹನ್ ಕುಮಾರ್, ಬೆಂಗಳೂರು.

ನಕಲಿ ಪನ್ನೀರ್ ಹಾವಳಿ ತಡೆಗಟ್ಟಿ

ಇತ್ತೀಚಿನ ದಿನಗಳಲ್ಲಿ ಹಾಲಿನ ಬದಲಾಗಿ ಹಾನಿಕಾರಕ ಎಣ್ಣೆ, ಪಾಮ್ ಆಯಿಲ್ ಮತ್ತು ಸ್ಟಾರ್ಚ್ ಬಳಸಿ ತಯಾರಿಸಿದ ನಕಲಿ ಪನ್ನೀರ್ ಮಾರುಕಟ್ಟೆಯಲ್ಲಿ ಹೆಚ್ಚಾಗುತ್ತಿದೆ. ಇದು ಅಸಲಿ ಪನ್ನೀರ್‌ನಂತೆ ಕಂಡರೂ ಇದರಲ್ಲಿ ಹಾಲಿನ ಪ್ರೋಟೀನ್ ಮತ್ತು ಕೊಬ್ಬು ಇರುವುದಿಲ್ಲ, ಅಸಲಿ ಪನ್ನೀರ್

ಕಿಲೋಗೆ ರು.500ಇದ್ದರೆ ಈ ನಕಲಿ ಪನ್ನೀರ್ ಕೇವಲ ರು.150ಕ್ಕೆ ಸಿಗುತ್ತದೆ. ಹೋಟೆಲ್ ಮತ್ತು ಸಮಾರಂಭಗಳಲ್ಲಿ ಹೆಚ್ಚಾಗಿ ಬಳಸಲಾಗುವ ಈ ಪನ್ನೀರ್‌ನಲ್ಲಿನ ಕೆಟ್ಟ ಕೊಬ್ಬು ಹೃದಯದ ಆರೋಗ್ಯಕ್ಕೆ ಹಾನಿಕಾರಕ. ಇದರಲ್ಲಿ ಅಗತ್ಯ ಪೋಷಕಾಂಶಗಳ ಕೊರತೆಯಿದ್ದು, ರಾಸಾಯನಿಕಗಳ ಬಳಕೆ ಹೆಚ್ಚಾಗಿರುತ್ತದೆ ಎಂಬುದು ಜನಜನಿತ. ಗ್ರಾಹಕರು ಪ್ಯಾಕೆಟ್ ಮೇಲಿರುವ ಎಫ್‌ಎಸ್‌ಎಸ್‌ಎಐ 'ಹಾಲಿನ ಹನಿ' ಗುರುತು ಬಗ್ಗೆ ಮಾಹಿತಿ ಕೊರತೆಯಿದೆ. ಅಗ್ಗದ ಬೆಲೆಗೆ ಮಾರುಹೋಗಿ ಜನರು ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಸಸ್ಯಾಹಾರಿಗಳಿಗೆ ಪ್ರೋಟೀನ್ ನೀಡಬೇಕಾದ ಪನ್ನೀರ್ ವಿಷವಾಗದಂತೆ ಎಚ್ಚರ ವಹಿಸಬೇಕಿದೆ. ಅನಧಿಕೃತ ತಯಾರಿಕಾ ಘಟಕಗಳ ಮೇಲೆ ನಿರಂತರ ನಿಗಾ ಇಡುವುದು ಮತ್ತು ಹಾಲಿನ ಅಂಶವಿಲ್ಲದ ಉತ್ಪನ್ನಗಳಿಗೆ ಪನ್ನೀರ್ ಎಂಬ ಹೆಸರನ್ನು ಬಳಸುವವರ ವಿರುದ್ಧ ಭಾರಿ ದಂಡ ಹಾಗೂ ಪರವಾನಗಿ ರದ್ದು ಮಾಡುವ ಕ್ರಮ ಸರಕಾರ ಜರುಗಿಸಬೇಕು.

- ಡಾ. ವಿಜಯಕುಮಾರ ಎಚ್.ಕೆ.,ರಾಯಚೂರು.

ಮಾರಾಟಕ್ಕಿವೆ ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್‌ಗಳು!?

ಜ್ಞಾನ ಅನ್ವೇಷಣೆ
ಡಾ.ಡಿ.ಸಿ. ನಂಜುಂಡ
vveditoped@gmail.com

ಗೌರವ ಡಾಕ್ಟರೇಟ್ ಎಂಬುದು ಘನತೆವೆತ್ತ ವಿಶ್ವವಿದ್ಯಾಲಯಗಳು ಸಮಾಜದಲ್ಲಿ ಜೀವಮಾನ ಸಾಧನೆ ಮಾಡಿದ ವ್ಯಕ್ತಿಗಳಿಗೆ ನೀಡುವ ಅತ್ಯುನ್ನತ ಗೌರವಗಳಲ್ಲಿ ಒಂದಾಗಿದೆ. ಇದು ಶೈಕ್ಷಣಿಕ ಪರೀಕ್ಷೆ ಅಥವಾ ಸಂಶೋಧನೆಯ ಮೂಲಕ ಪಡೆಯುವ ಪದವಿ ಅಲ್ಲ, ಬದಲಾಗಿ ಶಿಕ್ಷಣ, ವಿಜ್ಞಾನ, ಕಲೆ, ಸಾಹಿತ್ಯ, ಸಾಮಾಜಿಕ ಸೇವೆ ಅಥವಾ ಸಾರ್ವಜನಿಕ ಜೀವನದಲ್ಲಿ ಅಪಾರ ಕೊಡುಗೆ ನೀಡಿದ ವ್ಯಕ್ತಿಗಳನ್ನು ಗುರುತಿಸಲು ನೀಡಲಾಗುವ ಗೌರವವಾಗಿದೆ. ವಿಶ್ವದ ಶ್ರೇಷ್ಠ ವಿವಿಗಳು ಈ ಗೌರವವನ್ನು ಅತ್ಯಂತ ಕಠಿಣ ಮಾನದಂಡಗಳ ಆಧಾರದ ಮೇಲೆ ನೀಡುತ್ತವೆ ಮತ್ತು ಯಾವುದೇ ಹಣಕಾಸು ಅಥವಾ ರಾಜಕೀಯ ಪ್ರಭಾವಕ್ಕೆ ಅವಕಾಶ ನೀಡುವುದಿಲ್ಲ.

ಗೌರವ ಡಾಕ್ಟರೇಟ್ ಎಂಬುದು ಅತ್ಯಂತ ಗೌರವಪೂರ್ಣ ಪದವಿ ಆಗಿದ್ದು, ಅದು ಸಮಾಜಕ್ಕೆ ನೀಡಿದ ವಿಶಿಷ್ಟ ಕೊಡುಗೆಗಳಿಗೆ ನೀಡಲಾಗುವ ಗುರುತಾಗಿದೆ. ಆದರೆ, ಇತ್ತೀಚೆಗೆ ಭಾರತದ ಹಲವಾರು ವಿಶ್ವವಿದ್ಯಾನಿಲಯಗಳಲ್ಲಿ ಈ ಗೌರವ ಪದವಿಯ ನೈಜ ಅರ್ಥ ಮತ್ತು ಮೌಲ್ಯವನ್ನು ಕುಗ್ಗಿಸುವಂತಹ ಘಟನೆಗಳು ಬೆಳೆಯುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಗೌರವ ಡಾಕ್ಟರೇಟ್‌ಗಳ ದುರುಪಯೋಗ, ಹಣಕ್ಕಾಗಿ ನೀಡುವ ಪದವಿಗಳು, ಸ್ವಜನ ಪಕ್ಷಪಾತ, ಜಾತಿ, ದಾಕ್ಷಿಣ್ಯ ಮತ್ತು ರಾಜಕೀಯ ಪ್ರಭಾವದ ಕುರಿತು ಗಂಭೀರ ಚರ್ಚೆಗಳು ನಡೆಯುತ್ತಿವೆ. ಇಂತಹ ಪದವಿ ಪಡೆದವರು ತಮ್ಮ ಹೆಸರಿನ ಮುಂದೆ ಡಾ. ಎಂದು ಬರೆದುಕೊಳ್ಳುವಂತಿಲ್ಲ ಎಂಬ ಕನಿಷ್ಠ ಜ್ಞಾನವು ಹೆಚ್ಚಿನವರಿಗೆ ಇರುವುದಿಲ್ಲ ಎನ್ನುವ ಅಂಶ ಕಂಡುಬಂದಿದೆ!

ಭಾರತದಲ್ಲಿ ಹೆಚ್ಚಿನ ಸರಕಾರಿ ವಿವಿಗಳು ಅರ್ಹತೆ ಇಲ್ಲದ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ ನೀಡುತ್ತವೆ ಮತ್ತು ನಿಜವಾದ ಸಾಧಕರನ್ನು ಕಡೆಗಣಿಸಲಾಗುತ್ತದೆ ಎನ್ನುವ ಆರೋಪ ಬಹಳಷ್ಟು ವರ್ಷಗಳಿಂದ ಕೇಳಿ ಬರುತ್ತಿದೆ. ಘಟಿಕೋತ್ಸವ ಬಂತೆಂದರೆ ಗೌರವ ಡಾಕ್ಟರೇಟ್ ಪದವಿಗಳಿಗೆ ಸುಗ್ಗಿ ಕಾಲ. ನಮ್ಮ ಹೆಚ್ಚಿನ ವಿವಿಗಳಲ್ಲಿ ಸ್ವಜನ ಪಕ್ಷಪಾತ ಆಧಾರಿತ ಗೌರವ ಡಾಕ್ಟರೇಟ್‌ಗಳೇ ಸಾಮಾನ್ಯ. ಕೆಲವು ವಿಶ್ವವಿದ್ಯಾಲಯಗಳಲ್ಲಿ ಗೌರವ ಡಾಕ್ಟರೇಟ್‌ಗಳನ್ನು ನಿಜವಾದ ಸಾಧನೆ ಆಧಾರದ ಮೇಲೆ ಅಲ್ಲದೆ, ಉಪಕುಲಪತಿಗಳ ಮತ್ತು ಆಡಳಿತ ಮಂಡಳಿಗಳ ವೈಯಕ್ತಿಕ ಸಂಬಂಧಗಳು, ರಾಜಕೀಯ ಪ್ರಭಾವ ಅಥವಾ ಆರ್ಥಿಕ ಶಕ್ತಿಯ ಆಧಾರದ ಮೇಲೆ ನೀಡಲಾಗುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ ಮತ್ತು ಹೆಚ್ಚಿನವು ಸಾಬೀತಾಗಿವೆ ಕೂಡ. ಇಂತಹ ಪದವಿ ವಿಜೇತರ ಸಾಧನೆ ದುರ್ಬಿನ್ ಹಾಕಿ ಹುಡುಕಿದರೂ ನಮಗೆ ಸಿಗುವುದಿಲ್ಲ!

ಇಂತಹ ಘಟನೆಗಳು ಶಿಕ್ಷಣ ಸಂಸ್ಥೆಗಳ ನೈತಿಕತೆಯನ್ನು ಕುಗ್ಗಿಸುತ್ತದೆ ಮತ್ತು ಸಾರ್ವಜನಿಕ ನಂಬಿಕೆಯನ್ನು ಹಾನಿಗೊಳಿಸುತ್ತದೆ. ವಿವಿಗಳಿಗೆ ದಾನ ನೀಡಿದ ವ್ಯಕ್ತಿಗಳು, ಮಂತ್ರಿಗಳು ಅಥವಾ ರಾಜಕೀಯವಾಗಿ ಪ್ರಭಾವಶಾಲಿಗಳು ಗೌರವ ಡಾಕ್ಟರೇಟ್ ಪಡೆಯುತ್ತಿರುವುದು ವಿವಾದಕ್ಕೆ ಇನ್ನೊಂದು ಕಾರಣವಾಗಿದೆ. ಇಂತಹ ಬೆಳವಣಿಗೆಗಳು ಶಿಕ್ಷಣದ ಸ್ವತಂತ್ರತೆಯನ್ನು ಪ್ರಶ್ನೆಗೆ ಒಳಪಡಿಸುತ್ತವೆ ಮತ್ತು ವಿಶ್ವವಿದ್ಯಾಲಯಗಳ ಮೇಲಿನ ಗೌರವವನ್ನು ಕಡಿಮೆ ಮಾಡುತ್ತವೆ.

ಭಾರತದಲ್ಲಿ ಅನೇಕ ವಿಶ್ವವಿದ್ಯಾಲಯಗಳು ಸರಕಾರದ ಅನುದಾನ ಮತ್ತು ಆಡಳಿತಾತ್ಮಕ ಅನುಮೋದನೆಗಳ ಮೇಲೆ ಅವಲಂಬಿತವಾಗಿರುವುದರಿಂದ, ಕೆಲವೊಮ್ಮೆ ರಾಜಕೀಯ ಒತ್ತಡ ಅಥವಾ ಸಂಬಂಧಗಳ ಕಾರಣದಿಂದ ವಿವಿಗಳು ಗೌರವ ಡಾಕ್ಟರೇಟ್‌ಗಳನ್ನು ನೀಡುತ್ತಿವೆ ಎಂಬ ಅಭಿಪ್ರಾಯ ಸಹ ವ್ಯಕ್ತವಾಗುತ್ತಿದೆ. ರಾಜಕೀಯ ನಾಯಕರಿಗೆ ಅಥವಾ ಸಾರ್ವಜನಿಕ ವ್ಯಕ್ತಿಗಳಿಗೆ ಅವರ ಶೈಕ್ಷಣಿಕ ಸಾಧನೆಗಿಂತ ರಾಜಕೀಯ ಸ್ಥಾನಮಾನ ಅಥವಾ ಪ್ರಭಾವದ ಆಧಾರದ ಮೇಲೆ ಗೌರವ ನೀಡಲಾಗುತ್ತದೆ ಎಂಬ ಆರೋಪಗಳು ಸಾಮಾನ್ಯವಾಗಿವೆ. ಇದರಿಂದ ಶಿಕ್ಷಣ ಸಂಸ್ಥೆಗಳು ತಮ್ಮ ಮೂಲ ಉದ್ದೇಶದಿಂದ ದೂರ ಸರಿಯುವ ಸಾಧ್ಯತೆ ಹೆಚ್ಚುತ್ತದೆ ಮತ್ತು ಗೌರವ ಪದವಿಯ ನೈಜ ಅರ್ಥ ಹಾನಿಯಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ವಿವಿಗಳ ಗೌರವ ಡಾಕ್ಟರೇಟ್ ನೀಡುವ ಪ್ರಕ್ರಿಯೆ ಕುರಿತು ಹಲವು ವಿವಾದಗಳು ಮತ್ತು ಚರ್ಚೆಗಳು ನಡೆದಿವೆ. ಕರಾವಳಿ ಭಾಗದ ಒಂದು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಆಯ್ಕೆ ಪ್ರಕ್ರಿಯೆಯ ಬಗ್ಗೆ ಇತ್ತೀಚೆಗೆ ವಿವಾದಗಳು ಉಂಟಾಗಿತ್ತು. ಗೌರವ ಡಾಕ್ಟರೇಟ್ ಆಯ್ಕೆ ಪ್ರಕ್ರಿಯೆಯಲ್ಲಿಯೇ ನಿಯಮ ಉಲ್ಲಂಘನೆ ಮತ್ತು ಪಾರದರ್ಶಕತೆಯ ಕೊರತೆ ಇದೆ ಎಂಬ ಆರೋಪಗಳು ಕೂಡ ಕೇಳಿಬಂದಿತ್ತು. ಈ ವಿಶ್ವವಿದ್ಯಾಲಯವು ಉದ್ಯಮಿಗಳು ಮತ್ತು ಆರ್ಥಿಕವಾಗಿ ಶಕ್ತಿಶಾಲಿ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ ನೀಡಿದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಪ್ರಶ್ನೆಗಳು ಅಂದು ಎದ್ದಿತ್ತು. ಇತ್ತೀಚೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನೀಡಿದ ಗೌರವ ಡಾಕ್ಟರೇಟ್ ವಿಚಾರದಲ್ಲಿ ಬೋರ್ಡ್ ಸದಸ್ಯರ ನಡುವೆ ಬಹಿರಂಗ ಅಸಮಾಧಾನ ಉಂಟಾಗಿತ್ತು. ಸಮಿತಿಯ ಸದಸ್ಯರು ತಮ್ಮ ಪಾತ್ರವನ್ನು ಸರಿಯಾಗಿ ನಿರ್ವಹಿಸಲು ಅವಕಾಶ ನೀಡಲಾಗಲಿಲ್ಲ ಎಂಬ ದೂರುಗಳನ್ನು ನೀಡಿದ್ದು, ಪ್ರಕ್ರಿಯೆಯ ನ್ಯಾಯತೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದಾರೆ. ಇಂತಹ ಆಯ್ಕೆಗಳಲ್ಲಿ ಶೈಕ್ಷಣಿಕ ಸಾಧನೆಗಿಂತ ತಮಗೆ ಬೇಕಾದವರಿಗೆ ಪದವಿ ನೀಡಲಾಗಿದೆ ಎಂಬ ಆರೋಪವಿದೆ. ಇಂತಹ ನಡೆಗಳು ಶಿಕ್ಷಣದ ಮೂಲ ಮೌಲ್ಯವನ್ನು ಹಾಳುಮಾಡುತ್ತವೆ ಎಂದು ವಿಮರ್ಶಕರು ಹೇಳುತ್ತಾರೆ. ಇನ್ನೊಂದು ಗಮನಾರ್ಹ ವಿಷಯವೆಂದರೆ ಕೆಲವು ಪ್ರಸಿದ್ಧ ವ್ಯಕ್ತಿಗಳು ತಮ್ಮಿಗೆ ಬಂದ ಗೌರವ ಡಾಕ್ಟರೇಟ್‌ಗಳನ್ನು ಸ್ವೀಕರಿಸಲು ನಿರಾಕರಿಸುತ್ತಿರುವುದು ಹೊಸ ಚರ್ಚೆಯನ್ನು ಹುಟ್ಟುಹಾಕುತ್ತಿದೆ. ಇಂತಹ ಪದವಿಗಳು ಅವರಿಗೇ ಮುಜುಗರ ಉಂಟುಮಾಡುತ್ತಿವೆ!.

ಕರ್ನಾಟಕದಲ್ಲಿನ ವಿವಿಗಳ ಈ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಸರಕಾರವು ಇತ್ತೀಚೆಗೆ ವಿಶ್ವವಿದ್ಯಾಲಯಗಳಲ್ಲಿ ಗೌರವ ಡಾಕ್ಟರೇಟ್ ನೀಡುವ ಪ್ರಕ್ರಿಯೆಯನ್ನು ನಿಯಂತ್ರಿಸಲು ಹೊಸ ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ ಚರ್ಚೆ ಆರಂಭಿಸಿ ಕೆಲವು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿತ್ತು. ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಒಂದೇ ರೀತಿಯ ಮಾನದಂಡ ಮತ್ತು ಪಾರದರ್ಶಕತೆಯನ್ನು ತರಲು ತಜ್ಞ ಸಮಿತಿ ರಚಿಸುವ ಪ್ರಸ್ತಾವನೆ ಕೂಡ ಮುಂದೆ ಇಡಲಾಗಿತ್ತು. ಒಂದು ವಿವಿ ಕೇವಲ ಇಬ್ಬರಿಗೆ ಮಾತ್ರ ಗೌರವ ಡಾಕ್ಟರೇಟ್ ಕೊಡುವ ಪದ್ಧತಿಯನ್ನು ಜಾರಿಗೆ ತರುವ ಕುರಿತು ಆಲೋಚಿಸಲಾಗಿತ್ತು. ಆದರೆ, ಇದ್ಯಾವುದೂ ಜಾರಿಗೆ ಬಂದಂತಿಲ್ಲ. ವಿವಿಗಳು ಕಳಿಸುವ ಪಟ್ಟಿಯನ್ನು ರಾಜ್ಯಪಾಲರು ಕಣ್ಣುಮುಚ್ಚಿ ಒಪ್ಪಿಕೊಳ್ಳುತ್ತಿದ್ದಾರೆ ಅಥವಾ ಪಟ್ಟಿಗೆ ತಮಗೆ ಬೇಕಾದವರ ಹೆಸರನ್ನು ಸೇರಿಸಿ ಪಟ್ಟಿಯ ಗಾತ್ರವನ್ನು ಹಿಗ್ಗಿಸುತ್ತಿದ್ದಾರೆ ಎನ್ನುವ ಮಾತಿದೆ. ಖಾಸಗಿ ಮತ್ತು ಡೀಮ್ಡ್ ವಿವಿಗಳಲ್ಲಂತು ಗೌರವ ಡಾಕ್ಟರೇಟ್‌ಗಳ ಬಗ್ಗೆ ಮಾತನಾಡದಿರುವುದೇ ಒಳ್ಳೆಯದು.

ಈ ಸಮಸ್ಯೆಗಳ ಪರಿಣಾಮಗಳು ಬಹಳ ಗಂಭೀರವಾಗಿವೆ. ಮೊದಲನೆಯದಾಗಿ, ನಿಜವಾದ ಸಾಧಕರಿಗೆ ನೀಡುವ ಗೌರವದ ಮೌಲ್ಯ ಕುಗ್ಗುತ್ತಿದೆ. ಎರಡನೆಯದಾಗಿ, ಸಾರ್ವಜನಿಕರು

ವಿಶ್ವವಿದ್ಯಾಲಯಗಳ ಮೇಲೆ ಇಟ್ಟಿರುವ ನಂಬಿಕೆ ಕಡಿಮೆಯಾಗುತ್ತಿದೆ. ಮೂರನೆಯದಾಗಿ, ಶಿಕ್ಷಣ ಕ್ಷೇತ್ರದಲ್ಲಿ ವಂಚನೆ ಮತ್ತು ನಕಲಿ ಸಂಸ್ಥೆಗಳ ಬೆಳವಣಿಗೆಗೆ ಪ್ರೋತ್ಸಾಹ ಸಿಗುತ್ತಿದೆ. ನಾಲ್ಕನೆಯದಾಗಿ, ಪರಿಶ್ರಮದಿಂದ ಸಾಧನೆ ಮಾಡಿದ ವ್ಯಕ್ತಿಗಳ ಗೌರವ ಕಡಿಮೆಯಾಗುತ್ತಿದೆ ಮತ್ತು ಇದು ಸಾಮಾಜಿಕ ಅನ್ಯಾಯಕ್ಕೆ ಕಾರಣವಾಗುತ್ತಿದೆ. ಇಂತಹ ಪರಿಸ್ಥಿತಿ ಮುಂದುವರಿದರೆ, ಶಿಕ್ಷಣದ ಮೂಲ ಉದ್ದೇಶವೇ ಹಾನಿಯಾಗುವ ಅಪಾಯ ಇದೆ.

ಇದೆಲ್ಲದರ ಮಧ್ಯೆ, ಗೌರವ ಡಾಕ್ಟರೇಟ್ ನೀಡುವ ನಕಲಿ ಸಂಸ್ಥೆಗಳ ಬಗ್ಗೆ ಇಲ್ಲಿ ಹೇಳಬೇಕು. ದೇಶದ ಕೆಲ ಭಾಗಗಳಲ್ಲಿ 'ಹಣ ಪಾವತಿಸಿದರೆ ಡಾಕ್ಟರೇಟ್ ನೀಡಲಾಗುತ್ತದೆ' ಎಂಬ ರೀತಿಯ ಮೋಸ ಪ್ರಕರಣಗಳು ದಾಖಲಾಗಿವೆ. ಇಂತಹ ಸಂಸ್ಥೆಗಳು ಅಧಿಕೃತ ಮಾನ್ಯತೆ ಇಲ್ಲದೆ ಕಾರ್ಯನಿರ್ವಹಿಸುತ್ತಿದ್ದು, ಜನರನ್ನು ತಪ್ಪು ದಾರಿಯಲ್ಲಿ ನಡೆಸುತ್ತಿವೆ. ಭಾರತದಲ್ಲಿ ಕೆಲವು ಅನಧಿಕೃತ ಸಂಸ್ಥೆಗಳು 'ಇನ್ಸ್ಟಂಟ್ ಗೌರವ ಡಾಕ್ಟರೇಟ್', 'ಡಾಕ್ಟರೇಟ್ ಖರೀದಿಸಿ' ಎಂಬ ರೀತಿಯ ಜಾಹೀರಾತುಗಳನ್ನು ನೀಡಿ ಜನರನ್ನು ಮೋಸಗೊಳಿಸುತ್ತಿರುವ ಘಟನೆಗಳು ಕಂಡುಬಂದಿವೆ. ಇಂತಹ ಸಂಸ್ಥೆಗಳು ಯಾವುದೇ ಮಾನ್ಯತೆ ಹೊಂದಿಲ್ಲದ ವಿವಿಗಳ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತವೆ ಮತ್ತು ಹಣ ಪಾವತಿಸಿದರೆ ಗೌರವ ಡಾಕ್ಟರೇಟ್ ನೀಡುತ್ತವೆ. ಇತ್ತೀಚೆಗೆ ಮಂಡ್ಯ ಜಿಲ್ಲೆ ಒಂದರಲ್ಲೇ ತಮಿಳುನಾಡಿನ ಖಾಸಗಿ ವಿವಿಯೊಂದು ಸುಮಾರು 350 ಜನರಿಗೆ ಗೌರವ ಡಾಕ್ಟರೇಟ್ ನೀಡಿ ಸುದ್ದಿಯಾಗಿತ್ತು.

ಈ ರೀತಿಯ ಗೌರವ ಪದವಿಗಳು ಯಾವುದೇ ಶೈಕ್ಷಣಿಕ ಮೌಲ್ಯ ಹೊಂದಿರುವುದಿಲ್ಲ ಮತ್ತು ಮಾನ್ಯತೆ ಪಡೆಯುವುದಿಲ್ಲ. ಇಂತಹ ವಂಚನೆಗಳು ಜನರಲ್ಲಿ ಶಿಕ್ಷಣದ ಬಗ್ಗೆ ತಪ್ಪು ಕಲ್ಪನೆಗಳನ್ನು ಹುಟ್ಟಿಸುತ್ತವೆ ಮತ್ತು ನಿಜವಾದ ಸಾಧಕರ ಗೌರವವನ್ನು ಕುಗ್ಗಿಸುತ್ತವೆ. ವಿಶೇಷವಾಗಿ ಸಾಮಾಜಿಕ ಮಾಧ್ಯಮಗಳ ಮೂಲಕ ಇಂತಹ ಮೋಸಗಳು ಹೆಚ್ಚುತ್ತಿರುವುದು ಗಮನಾರ್ಹವಾಗಿದೆ. ಕರ್ನಾಟಕದಲ್ಲಿಯೂ ಇತ್ತೀಚೆಗೆ ಇಂತಹ ಜಾಹೀರಾತುಗಳು ಕಂಡುಬಂದಿದ್ದು, ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯ. ಬಹಳಷ್ಟು ಜನರು ಇಂತಹ ನಕಲಿ ಪದವಿಗಳ ಬಗ್ಗೆ ತಿಳಿಯದೇ ಮೋಸಕ್ಕೆ ಒಳಗಾಗುತ್ತಾರೆ.

ಇದಕ್ಕೆ ಪರಿಹಾರ ಎಂದರೆ ಮೊದಲನೆಯದಾಗಿ, ಗೌರವ ಡಾಕ್ಟರೇಟ್ ನೀಡುವ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕವಾಗಿರಬೇಕು ಮತ್ತು ಆಯ್ಕೆ ಮಾನದಂಡಗಳನ್ನು ಮತ್ತು ಸಾಧಕರ ವಿವರವನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಎರಡನೆಯದಾಗಿ, ವಿವಿಗಳಿಗೆ ಸಾಧಕರ ಆಯ್ಕೆ ಮಾಡುವ ಅಧಿಕಾರ ನೀಡಬಾರದು. ಬದಲಾಗಿ ವಿವಿಗಳ ಪರವಾಗಿ ಸ್ವತಂತ್ರ ಮತ್ತು ನೈತಿಕ ಸಮಿತಿಗಳ ಮೂಲಕ ಮಾತ್ರ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ಕೇವಲ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಿಗೆ ಮಾತ್ರ ಈ ಪದವಿಯನ್ನು ನೀಡುವ ಅಧಿಕಾರ ಇರಬೇಕು. ನಾಲ್ಕನೆಯದಾಗಿ, ಸರಕಾರ ನಕಲಿ ವಿಶ್ವವಿದ್ಯಾಲಯಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಇವುಗಳ ಮಧ್ಯೆ, ಕೆಲ ವಿವಿಗಳು ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿವೆ ಮತ್ತು ಗೌರವ ಡಾಕ್ಟರೇಟ್ ನೀಡುವಲ್ಲಿ ನಿರ್ದಿಷ್ಟ ಪ್ರಕ್ರಿಯೆಗಳನ್ನು ಪಾಲಿಸುತ್ತಿವೆ.

ಒಟ್ಟಿನಲ್ಲಿ, ವಿವಿಗಳ ಗೌರವ ಡಾಕ್ಟರೇಟ್ ವ್ಯವಸ್ಥೆಯಲ್ಲಿ ಕೆಲವೊಂದು ಕಡೆಗಳಲ್ಲಿ ಪಾರದರ್ಶಕತೆ ಕೊರತೆ, ಪ್ರಭಾವದ ಬಳಕೆ ಮತ್ತು ಮಾನದಂಡಗಳ ಅಸಮತೋಲನ ಇದೆ ಎನ್ನುವುದಂತು ಸತ್ಯ. ಆದರೆ ಮತ್ತೊಂದೆಡೆ ಕೆಲವು ವಿವಿಗಳು ಇನ್ನೂ ಶ್ರೇಷ್ಠ ಸಾಧಕರಿಗೆ ಮಾತ್ರ ಈ ಗೌರವವನ್ನು ನೀಡುತ್ತಿವೆ ಎಂಬುದನ್ನೂ ಗಮನಿಸಬೇಕು. ಶಿಕ್ಷಣ ವ್ಯವಸ್ಥೆಯಲ್ಲಿ ಖಾಸಗಿ ವಿವಿಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಕೆಲವು ಸಂದರ್ಭಗಳಲ್ಲಿ ಪಾರದರ್ಶಕತೆ ಮತ್ತು ಮಾನದಂಡಗಳ ಕುರಿತು ಪ್ರಶ್ನೆಗಳು ಸಹ ಎದ್ದಿವೆ. ಇದು ಸಂಪೂರ್ಣ ವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಯಾಗಿದ್ದು, ಎಲ್ಲ ಸಂಸ್ಥೆಗಳನ್ನು ಒಂದೇ ರೀತಿಯಲ್ಲಿ ನೋಡಲಾಗುವುದಿಲ್ಲ ಎನ್ನುವುದು ಸಹ ಸತ್ಯ.

ಗೌರವ ಡಾಕ್ಟರೇಟ್ ಎಂಬುದು ಅತ್ಯಂತ ಗೌರವಪೂರ್ಣ ಪದವಿ ಆಗಿದ್ದು, ಅದು ಸಮಾಜಕ್ಕೆ ನೀಡಿದ ವಿಶಿಷ್ಟ ಕೊಡುಗೆಗಳಿಗೆ ನೀಡಲಾಗುವ ಗುರುತಾಗಿದೆ. ಆದರೆ ಹಣ, ರಾಜಕೀಯ ಪ್ರಭಾವ ಮತ್ತು ಸ್ವಜನ ಪಕ್ಷಪಾತ ಕಾರಣದಿಂದ ಅದರ ನೈಜ ಮೌಲ್ಯಕ್ಕೆ ಹಾನಿಯಾಗುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಪಾರದರ್ಶಕತೆ, ನೈತಿಕತೆ ಮತ್ತು ನ್ಯಾಯತೆಯು ಉಳಿದಾಗ ಮಾತ್ರ ವಿವಿಗಳ ಗೌರವ ಡಾಕ್ಟರೇಟ್ ತನ್ನ ನಿಜವಾದ ಅರ್ಥವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಅದು ಸಮಾಜಕ್ಕೆ ಉತ್ತಮ ಸಂದೇಶ ನೀಡಿದಂತಾಗುತ್ತದೆ.

ಭಟ್ಟರ್ ಸ್ಕಾಚ್

- **ಶೇಷರಾಘವ, ಬೆಂಗಳೂರು**
ಭಟ್ರೇ, ಆನ್ಲೈನ್ ಶಾಪಿಂಗ್ ಅಂದರೆ ಏನು?
- **ನಮಗೆ ಬೇಡದ ವಸ್ತುವನ್ನು, ನಮ್ಮಲ್ಲಿಲ್ಲದ ಹಣದಿಂದ, ನಮಗೆ ಇಷ್ಟವಿಲ್ಲದವರಿಗೆ ತೋರಿಸಲು ರಿಯಾಯಿತಿ ದರದಲ್ಲಿ ಖರೀದಿಸುವುದು!**

- **ಲತೀಫ್, ಚಾಮರಾಜಪೇಟೆ**
ಭಟ್ರೇ, ಸಾಲ ಕೊಟ್ಟವನು ಯಾಕೆ ಯಾವಾಗಲೂ ಸಿಟ್ಟಾಗಿ ಇರ್ತಾನೆ?
- **ಸಾಲ ತಗೊಂಡವನು ಐಷಾರಾಮಿ ಟೂರ್ ಹೋಗಿರುವ ಫೋಟೋಗಳನ್ನು ಫೇಸ್‌ಬುಕ್‌ನಲ್ಲಿ ನೋಡುವ ಶಾಪ ಅವನಿಗೆ ಇರುತ್ತಲ್ವಾ, ಅದಕ್ಕೆ!**

- **ಸಂಡೂರು ಭೋಗಶೆಟ್ಟಿ, ಮೈಸೂರು**
ಭಟ್ರೇ, ಇಂದಿನ ಕಾಲದಲ್ಲಿ ಅತೀ ದೊಡ್ಡ ಸಾಹಸ ಯಾವುದು?
- **ಮೊಬೈಲ್ ಚಾರ್ಜ್ ಶೇ.5 ಇರುವಾಗ, ಚಾರ್ಜರ್ ಹುಡುಕದೇ 'ಇನ್ನೊಂದು ವಿಡಿಯೋ ನೋಡೋಣ' ಅಂತ ಧೈರ್ಯ ಮಾಡೋದು!**

- **ದಿವಾಕರ ಕಣ್ವ, ಬೆಂಗಳೂರು**
ಭಟ್ರೇ, ಹಳೆಯ ಫೋಟೋಗಳನ್ನು ನೋಡಿದಾಗ ನಮಗೆ ಯಾಕೆ ನಗು ಬರುತ್ತದೆ?
- **ಅಂದು ನಾವು ಅಷ್ಟು ಚೆನ್ನಾಗಿ ಕಾಣುತ್ತಿದ್ದೆವು ಎಂದಲ್ಲ, ಅಂದು ಅಂಥ ಹೇರ್ ಸ್ಟೈಲ್ ಇಟ್ಟುಕೊಂಡು ಹೇಗೆ ಓಡಾಡುತ್ತಿದ್ದೆವು ಎಂಬ ಆಶ್ಚರ್ಯಕ್ಕೆ!**

- **ರಮೇಶ ಗೌಡ, ಬೆಂಗಳೂರು**
ಭಟ್ರೇ, ಒಬ್ಬ ಮನುಷ್ಯ ಪ್ರಾಮಾಣಿಕನಾಗಿ ಇರೋಕೆ ಸಾಧ್ಯವೇ ಇಲ್ಲವಾ?
- **ಸಾಧ್ಯವಿದೆ, ಆದ್ರೆ ಅವನ ಹತ್ರ ಬ್ಯಾಂಕ್ ಬ್ಯಾಲೆನ್ಸ್ ಮತ್ತು ಫ್ರೆಂಡ್ಸ್ ಎರಡೂ ಇರೋದಿಲ್ಲ ಅಷ್ಟೇ!**

- **ಸಿ.ಚಂದ್ರು, ಬೇಲೂರು**
ಭಟ್ರೇ, ಒಬ್ಬ ಪತ್ರಕರ್ತನಿಗೆ ಅತಿ ದೊಡ್ಡ ಶಿಕ್ಷೆ ಏನು?
- **ಯಾರೂ ಇಲ್ಲದ ದ್ವೀಪದಲ್ಲಿ ಅವನನ್ನು ಬಿಟ್ಟು, ಅಲ್ಲಿ 'ಬ್ರೇಕಿಂಗ್ ನ್ಯೂಸ್'ಗೆ ಅವಕಾಶ ಕೊಡದೇ ಮೌನವಾಗಿ ಕೂರಿಸುವುದು!**

- **ಎಸ್.ರಮೇಶ್ ಬರ್ಕಲಿ, ಕಿರಗಂದೂರು**
ಭಟ್ರೇ, ಸಾರ್ವಜನಿಕವಾಗಿ ಸುಳ್ಳು ಹೇಳುವವರಿಗೂ ಮತ್ತು ಸಮಾಜ ಸೇವಕರಿಗೂ ಏನು ವ್ಯತ್ಯಾಸ?
- **ವ್ಯತ್ಯಾಸವೇನಿಲ್ಲ, ಎರಡನೆಯವರು ಅದನ್ನೇ 'ಚುನಾವಣಾ ಪ್ರಣಾಳಿಕೆ' ಎಂಬ ಸುಂದರವಾದ ಹೆಸರಿನಲ್ಲಿ ಮುದ್ರಿಸಿ ಹಂಚುತ್ತಾರೆ ಅಷ್ಟೇ!**

- **ಕೆ.ವಿ.ಸುಧಾ, ಚಿಕ್ಕಬಳ್ಳಾಪುರ**
ಭಟ್ರೇ, ಸೋಷಿಯಲ್ ಮೀಡಿಯಾದಲ್ಲಿ ಇರುವ 'ಫ್ರೆಂಡ್ಸ್' ಮತ್ತು ನಿಜವಾದ ಫ್ರೆಂಡ್ಸ್ ನಡುವಿನ ವ್ಯತ್ಯಾಸ?
- **ಸೋಷಿಯಲ್ ಮೀಡಿಯಾ ಫ್ರೆಂಡ್ಸ್ ನೀವು ಸತ್ತರೆ 'ಆರ್‌ಐಪಿ' ಅಂತ ಕಮೆಂಟ್ ಹಾಕ್ತಾರೆ, ನಿಜವಾದ ಫ್ರೆಂಡ್ಸ್ ಸಾಯುವ ಮೊದಲೇ 'ಯಾವಾಗ ಸಾಯ್ತೀಯೋ ಮಗನೇ' ಅಂತ ಪ್ರೀತಿಯಿಂದ ಕೇಳ್ತಾರೆ!**

ಅಂಕಪಟ್ಟಿ ನಗುತ್ತಿದೆ, ಮಕ್ಕಳು ಅಳುತ್ತಿದ್ದಾರೆ, ಇದು ಯಾವ ಶಿಕ್ಷಣ?!

ವಾಸ್ತವದಲ್ಲಿ ವಿದ್ಯಾರ್ಥಿಯನ್ನು ಸತ್ಯವಂತನನ್ನಾಗಿ ಮಾಡುವುದೇ ಶಿಕ್ಷಣದ ಮೂಲ ಉದ್ದೇಶ. ಆದರೆ ಇವತ್ತು ನಮ್ಮ ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳನ್ನು ಕೇವಲ ಅಂಕವಂತನನ್ನಾಗಿ ಮಾಡುತ್ತಿದೆಯೇ ಹೊರತು ಸತ್ಯವಂತನನ್ನಾಗಿ ಮಾಡುತ್ತಿಲ್ಲ ಎನ್ನುವ 'ಅಬ್ದುಲ್ ಕಲಾಂ'ರು ಹೇಳಿದ ಈ ಸತ್ಯ ಮನಗಾಣಬೇಕು. ವಿಕಸಿತ ಭಾರತ 2047ರ ಕನಸು ನನಸಾಗುವುದು ಅರಿವಿನಿಂದ ಹೊರತು ಅಂಕಪಟ್ಟಿಯಿಂದಲ್ಲ ಎಂಬ ಸತ್ಯವನ್ನು ಈಗಲಾದರೂ ಅರಿಯೋಣ.

ಕಲಿಕೆ ಕಿರಣ

ಡಾ. ಜಗದೀಶ ಮಾನೆ

vveditoped@gmail.com

ಇದೀಗ ಹತ್ತನೇ ತರಗತಿಯ ಫಲಿತಾಂಶ ಬಂದಿದೆ. ಅದರಲ್ಲಿ ಸುಮಾರು ಏಳೆಂಟು ವಿದ್ಯಾರ್ಥಿಗಳು ಔಟ್ ಆಫ್ ಔಟ್ ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಬಂದ ಖುಷಿಯಲ್ಲಿದ್ದರೆ, ಇನ್ನು ಕೆಲವರಿಗೆ ಮೂರು-ನಾಲ್ಕು ಅಂಕಗಳ ಕಡಿತದಿಂದ ಈ ಗುರಿ ಮುಟ್ಟದೇ ಮುಖ ಸಪ್ಪೆ ಮಾಡಿದ್ದಾರೆ. ಇನ್ನು 90ಕ್ಕಿಂತ ಮೇಲ್ಪಟ್ಟು ಅಂಕ ಪಡೆದರೂ ಅಂಕ ಕಡಿಮೆ ಆಯಿತು ಅಂತ ಮನನೊಂದವರೂ ಬಹುತೇಕರಿದ್ದಾರೆ. ಅದರಲ್ಲಿ ಒಬ್ಬ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡ ನಿದರ್ಶನವೂ ಇದೆ. ಮೊನ್ನೆಯ ಪಿಯುಸಿ ಫಲಿತಾಂಶದಲ್ಲೂ ಬಹುತೇಕ ಹೀಗೇ ಆಗಿತ್ತು. ಆದರೆ ಹಿಂದೆ ಒಂದು ಕಾಲವಿತ್ತು, ಅದು 1980ದಶಕ, ಆಗ ಹತ್ತನೇ ತರಗತಿ ಹಾಗೂ ಪದವಿ ಪರೀಕ್ಷೆ ಗಳಲ್ಲಿ ಅತಿಹೆಚ್ಚು ಅಂಕ ಪಡೆದು ತಾಲೂಕಿಗೊಬ್ಬ, ಅಥವಾ ಜಿಲ್ಲೆಗೆ ಒಬ್ಬಿಬ್ಬರು ಟಾಪರ್. ಆ ಮೂಲಕ ಅವರೆ ಜೀನಿಯಸ್. ಶೇ.62ರಷ್ಟು ತೆಗೆದ ಹುಡುಗನಿಗೆ ಊರತುಂಬೆಲ್ಲ ಸನ್ಮಾನ ಸತ್ಕಾರಗಳಾಗುತ್ತಿದ್ದವು. ಆದರೆ ಇಂದು ಶೇ.92ರಷ್ಟು ತೆಗೆದ ಹುಡುಗಿ 'ಮಾರ್ಕ್ಸ ಕಡಿಮೆ ಆಯ್ತು' ಅಂತ ಅಳುತ್ತಾಳೆ. ಆಕೆಯ ಪೋಷಕರು ಸ್ವಾಭಿಮಾನಕ್ಕೆ ಧಕ್ಕೆ ಬಂದವರಂತೆ ಆಡುತ್ತಾರೆ. ವಾಸ್ತವದಲ್ಲಿ ಬದಲಾದದ್ದು ಅಂಕವೋ? ನಮ್ಮ ನಿರೀಕ್ಷೆಯೋ? ಮೌಲ್ಯವೋ? ಎಂಬುದನ್ನು ತಿಳಿಯಬೇಕಿದೆ. ಕಳೆದ ಈ 30 ವರ್ಷದಲ್ಲಿ ನಮ್ಮ ಮಕ್ಕಳು ಬುದ್ಧಿವಂತರಾದರೋ? ಅಥವಾ ನಮ್ಮ ಅಳತೆಗೋಲು ಮಂದವಾಯಿತೋ? ಈ ಲೆಕ್ಕಾಚಾರ ತಪ್ಪಿದ್ದೆಲ್ಲಿ ಎಂಬುದನ್ನು ಅರಿಯಬೇಕು. ವಾಸ್ತವದಲ್ಲಿ ವಿದ್ಯಾರ್ಥಿಯನ್ನು ಸತ್ಯವಂತನನ್ನಾಗಿ ಮಾಡುವುದೇ ಶಿಕ್ಷಣದ ಮೂಲ ಉದ್ದೇಶ. ಆದರೆ ಇವತ್ತು ನಮ್ಮ ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳನ್ನು ಕೇವಲ ಅಂಕವಂತನನ್ನಾಗಿ ಮಾಡುತ್ತಿದೆಯೇ ಹೊರತು ಸತ್ಯವಂತನನ್ನಾಗಿ ಮಾಡುತ್ತಿಲ್ಲ ಎನ್ನುವ 'ಅಬ್ದುಲ್ ಕಲಾಂ'ರು ಹೇಳಿದ ಈ ಸತ್ಯವನ್ನು ಅರಿಯಬೇಕು.

ಎಲ್ಲರೂ ಪ್ರಥಮ ಅನ್ನುವ ಈಗಿನ ಶಿಕ್ಷಣ ಪದ್ಧತಿ ಸಿಹಿಯಾದ ವಿಷ ಇದ್ದಂತೆ. ಇದರಿಂದ ತಾತ್ಕಾಲಿಕ ಸಂತೋಷ ಸಿಕ್ಕರೂ ದೀರ್ಘಕಾಲದಲ್ಲಿ ಸಮಾಜ ಮತ್ತು ದೇಶದ ಬುನಾದಿಯನ್ನ ಅಲುಗಾಡಿಸುತ್ತದೆ, ಈ ಅಂಕಗಳ ಅತಿರೇಕವು ನೈಜ ಶಿಕ್ಷಣವನ್ನು ಸಂಕಷ್ಟಕ್ಕೆ ತಳ್ಳುತ್ತದೆ. ಬಾಯಿಪಾಠಕ್ಕೆ ಬಹುಮಾನ ನೀಡಿ ಯೋಚನೆಗಳಿಗೆ ಶಿಕ್ಷೆ ಕೊಡುವುದು ಸಮಾಜಕ್ಕೆ ದೊಡ್ಡ ಮಾರಕವಾಗುತ್ತದೆ. ಈ ಮೂಲಕ ಅಂಕಗಳ ಕಾರ್ಖಾನೆಗಳಲ್ಲಿ ಅರಿವಿನ ಕಗ್ಗೊಲೆ ಆಗುತ್ತಿರುವುದರ ಪರಿಣಾಮವಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಪಲ್ಲಟಗಳಾಗುತ್ತವೆ. ಈ ಹಂತದಲ್ಲಿ ನಿರ್ಮಾಣ ಆಗುವವರು ಜಾತೀಯತೆ, ಭ್ರಷ್ಟಾಚಾರದಂತಹ ಕೃತ್ಯಗಳಲ್ಲಿ ತೊಡಗುತ್ತ ರಾಷ್ಟ್ರ ವಿರೋಧಿಗಳಾಗುತ್ತಿದ್ದಾರೆ. ಈ ಪರಿಣಾಮ ಇಂದು ಆರ್ಥಿಕ ಮತ್ತು ಉದ್ಯೋಗ ಕ್ಷೇತ್ರಗಳ ಮೇಲೆ ಸಾಕಷ್ಟು ಪ್ರಭಾವಗಳು ಬೀರುತ್ತವೆ.

ಇಂದು ಕೋಟ್ಯಂತರ ವಿದ್ಯಾರ್ಥಿಗಳು ಶೇ.90ರಿಂದ 95ರಷ್ಟು ಅಂಕಗಳೊಂದಿಗೆ ಪದವಿಗಳನ್ನು ಪಡೆಯುತ್ತಾರೆ. ಆದರೆ NASSCOM ವರದಿಯ ಪ್ರಕಾರ ಎಂಜಿನಿಯರಿಂಗ್ ಪದವೀಧರರಲ್ಲಿ ಕೇವಲ ಶೇ.20ರಷ್ಟು ಜನ ಮಾತ್ರ ಕೆಲಸಕ್ಕೆ ನೇರವಾಗಿ ನೇಮಕವಾಗುವಷ್ಟು ಕೌಶಲ್ಯತೆ ಹೊಂದಿರುತ್ತಾರೆ. ಪರಿಣಾಮ, ಇಲ್ಲಿ ಕೇವಲ ಪ್ರಥಮ ದರ್ಜೆಯ ನಿರುದ್ಯೋಗಿಗಳ ಸೈನ್ಯ ಸೃಷ್ಟಿಯಾಗುತ್ತದೆ. ಈ ಮೂಲಕ ಉತ್ಪಾದಕತೆಯಲ್ಲೂ ಕುಸಿತವಾಗುತ್ತದೆ. ಅಂಕ ಆಧಾರಿತ ಕಲಿಕೆಯಿಂದ ಬಂದವರು ಕೆಲಸದ ಜಾಗದಲ್ಲಿ ಸಮಸ್ಯೆಗಳನ್ನು ಬಿಡಿಸಲು, ನಿರ್ಧಾರ ತೆಗೆದುಕೊಳ್ಳಲು ತಿಣಕಾಡುತ್ತಾರೆ. ಕಂಪನಿಗಳು ಇವರಿಗೆ ಪುನಃ ಆರು ತಿಂಗಳಿಂದ ಒಂದು ವರ್ಷ ಕಾಲ ತರಬೇತಿ ಕೊಡಬೇಕಾಗುತ್ತದೆ. ಹೀಗಾಗುವುದರಿಂದ ದೇಶದ ಉತ್ಪಾದಕತೆ ಮತ್ತು ಸ್ಪರ್ಧಾತ್ಮಕತೆ ಬಹಳಷ್ಟು ಕಡಿಮೆ ಆಗುತ್ತದೆ. ಇನ್ನು ಸ್ಟಾರ್ಟ್‌ಅಪ್, ಸಂಶೋಧನೆಗೂ ಬಹಳ ದೊಡ್ಡ ಪೆಟ್ಟು ಬೀಳುತ್ತದೆ. ನಾವೀನ್ಯತೆ ಬೇಕಿರುವ ಕ್ಷೇತ್ರಗಳಿಗೆ ಕೇವಲ 'ಪತ್ಯ ಉಗುಳುವ' ಮನಸ್ಥಿತಿ ಹೊಂದಿದವರಲ್ಲ, ಪ್ರಶ್ನೆ ಕೇಳುವ ಮನಸ್ಥಿತಿ ಬೇಕು. ಶೇ.95ರಷ್ಟು ಸಂಸ್ಕೃತಿ ಪ್ರಶ್ನಿಸುವ ಧೈರ್ಯವನ್ನೇ ಕಿತ್ತುಕೊಳ್ಳುತ್ತದೆ. ಪರಿಣಾಮ ದೇಶದ RD, ಪೇಟೆಂಟ್ ಸಂಖ್ಯೆ, ಹೊಸ ಆವಿಷ್ಕಾರಗಳ ಮೇಲೆ ನೇರ ಪರಿಣಾಮ ಬೀಳುತ್ತದೆ. ಅರ್ಹತೆಯ ಮಾನದಂಡವೂ ಕೂಡಾ ನಾಶವಾಗುತ್ತದೆ. ಮೊದಲು ಶೇ.60ರಷ್ಟು ತೆಗೆದವನನ್ನು ಈ ಸಮಾಜವು ಪ್ರತಿಭಾವಂತ ಅಂತಲೇ ಗುರುತಿಸುತ್ತಿತ್ತು. ಆದರೆ ಈಗ ಎಲ್ಲರಿಗೂ ಶೇ.90–95ರಷ್ಟು ಅಂಕಗಳು ಇರುವುದರಿಂದ ಇಲ್ಲಿ ನಿಜವಾದ ಪ್ರತಿಭೆ ಯಾರು, ಸಾಧಾರಣರು ಯಾರು ಅಂತ ಗುರುತಿಸುವುದೇ ಬಲು ಕಷ್ಟ. ಇದರಿಂದ ಸಹಜವಾಗಿ ಮೀಸಲಾತಿ, ಸ್ಕಾಲರ್‌ಶಿಪ್, ಕೆಲಸ ಎಲ್ಲದರಲ್ಲೂ ಗೊಂದಲವಾಗುತ್ತದೆ.

ಸುಳ್ಳು ಆತ್ಮವಿಶ್ವಾಸ ಮತ್ತು ನಂತರದ ಹತಾಶೆ, ಶಾಲಾ-ಕಾಲೇಜುಗಳಲ್ಲಿ ಶೇ.95ರಷ್ಟು ತೆಗೆದ ಬಹುತೇಕರು ತಾವೇ ದೊಡ್ಡ ಬುದ್ಧಿವಂತರು ಅನ್ನೋ ಭ್ರಮೆಯಲ್ಲಿ ಬೆಳೆಯುತ್ತಾರೆ. ಯಾವಾಗ NEET, KPSC ಹಾಗೂ UPSC, ಸಂದರ್ಶನಗಳಲ್ಲಿ ಸೋತಾಗ ತೀವ್ರ ಹತಾಶೆ, ಖಿನ್ನತೆಗೆ ಒಳಗಾಗುತ್ತಾರೆ. ಉದಾಹರಣೆ NCRB ಡೇಟಾ ಪ್ರಕಾರ ಪರೀಕ್ಷೆ-ಫಲಿತಾಂಶಗಳ ಒತ್ತಡಗಳಿಂದ ಇಂದು ಸಾಕಷ್ಟು ವಿದ್ಯಾರ್ಥಿಗಳ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚುತ್ತಿವೆ. ಕೆಲವರು ಕಷ್ಟಪಟ್ಟು ಓದುತ್ತಾರೆ, ಹಲವರು ಶ್ರಮ ಪಡದೇ ಸುಲಭವಾಗಿ ಅಂಕಗಳನ್ನು ಪಡೆಯುತ್ತಾರೆ. ಕೊನೆಗೆ ಇಬ್ಬರಿಗೂ ಒಂದೇ ಪ್ರಮಾಣದಲ್ಲಿ ಅಂಕಗಳು ಬರುತ್ತವೆ. ಇದರಿಂದಾಗಿ ನಿಜವಾಗಿಯೂ ಶ್ರಮ ಹಾಕುವವರಿಗೆ ಬಹಳ ಅವಮಾನವಾಗುತ್ತದೆ. 'ವ್ಯವಸ್ಥೆ ಹೇಗಿದ್ದರೂ ಪಾಸ್ ಮಾಡುತ್ತದೆ ಯಾಕೆ ಕಷ್ಟಪಡಬೇಕು' ಎಂಬ ಮನೋಭಾವ ಬೆಳೆಯುತ್ತದೆ. ಶಿಕ್ಷಕರು ಜ್ಞಾನ ದೀವಿಗೆ ಅಲ್ಲ, ಬದಲಿಗೆ ಅವರು ಕೇವಲ ಅದುರ್ಬಲವಾಗುತ್ತಿದ್ದಾರೆ. ರಿಸಲ್ಟ್ ಕಡಿಮೆ ಆಯ್ತು ಅಂತ ಶಿಕ್ಷಕರಿಗೆ ನೋಟಿಸ್ ಕೊಡುವ ವ್ಯವಸ್ಥೆ ಬಂದಾಗ, ಶಿಕ್ಷಕರು ಗುಣಮಟ್ಟ ಬಿಟ್ಟು ಅಂಕದ ಹಿಂದೆ ಬೀಳುವುದೇ ಹೆಚ್ಚು.

ಈ ರೀತಿಯ ಶಿಕ್ಷಣದಿಂದ ತಯಾರಾದ ದುರ್ಬಲ ಮಾನವ ಸಂಪನ್ಮೂಲದ ಪ್ರಭಾವವು ಈ ದೇಶದ ಭವಿಷ್ಯ ಹಾಗೂ ಆಡಳಿತದ ಮೇಲೆ ಬೀಳುತ್ತದೆ. ಯಾವುದೇ ದೇಶದ ನಿಜವಾದ ಸಂಪತ್ತು ಅದರ ಯುವಶಕ್ತಿ. ಆ ಯುವಶಕ್ತಿ ಕೇವಲ ಅಂಕಪಟ್ಟಿಯಲ್ಲಿ ಬಲಿಷ್ಠವಾಗಿ, ನಿಜ ಜೀವನದ ಸವಾಲು ಎದುರಿಸುವಲ್ಲಿ ದುರ್ಬಲವಾದರೆ ದೇಶದ ಪ್ರಗತಿ ಕುಂಠಿತವಾಗುತ್ತದೆ.

ಮುಂದಿನ ಪೀಳಿಗೆಯ ವಿಜ್ಞಾನಿ, ವೈದ್ಯ, ಆಡಳಿತಾಧಿಕಾರಿ, ಶಿಕ್ಷಕ ಎಲ್ಲರೂ ಈ ವ್ಯವಸ್ಥೆಯಿಂದಲೇ ಬರಬೇಕು. ಗ್ರಹಿಕಾ ಶಕ್ತಿ, ವಿಮರ್ಶಾತ್ಮಕ ಚಿಂತನೆ ಇಲ್ಲದೆ ಕೇವಲ ಅಂಕ ಪಡೆದವರು ಆಡಳಿತಕ್ಕೆ ಬಂದರೆ, ನೀತಿ ನಿರೂಪಣೆ, ಸಮಸ್ಯೆ ಪರಿಹಾರ ಎಲ್ಲವೂ ದುರ್ಬಲವಾಗುತ್ತದೆ. ಈ ಮೂಲಕ ಭವಿಷ್ಯದಲ್ಲಿ ನಾಯಕತ್ವದ ಕೊರತೆ ಉಂಟಾಗುತ್ತದೆ. ಜಾಗತಿಕ ಸ್ಪರ್ಧೆಯಲ್ಲಿಯೂ ಹಿನ್ನಡೆ PISA ರೀತಿಯ ಅಂತಾರಾಷ್ಟ್ರೀಯ ಪರೀಕ್ಷೆಗಳಲ್ಲಿ ಭಾರತದ ಮಕ್ಕಳ ಪ್ರದರ್ಶನ ಕಳಪೆಗೊಳ್ಳುತ್ತದೆ. ಕಾರಣ ನಮ್ಮ ಪರೀಕ್ಷೆಗಳು ಕೇವಲ ನೆನಪಿನ ಶಕ್ತಿಗೆ, ಅವರದು ಗ್ರಹಿಕೆಗೆ. ಪರಿಣಾಮ ಶೇ.95ರಷ್ಟು ಪಡೆದ ನಮ್ಮ ಮಗು ಜಾಗತಿಕ ವೇದಿಕೆಯಲ್ಲಿ ಸ್ಪರ್ಧಿಸಲಾಗದೆ ಹಿಂದೆ ಬೀಳುತ್ತದೆ.

ಶಾರ್ಟ್‌ಕಟ್ ಸಂಸ್ಕೃತಿ, 'ಕಷ್ಟಪಡದೆ ಅಂಕ ಬರುತ್ತೆ' ಅನ್ನುವ ನಮ್ಮ ಈ ವ್ಯವಸ್ಥೆಯು ಮಕ್ಕಳಿಗೆ ಶಾರ್ಟ್‌ಕಟ್ ರೂಟ್‌ಗಳನ್ನು ಕಲಿಸುವುದರಲ್ಲಿಯೇ ತಲ್ಲೀನಗೊಂಡಿದೆ. ಹೀಗಾಗಿ ಅವರು ತಮ್ಮ ಮುಂದಿನ ಜೀವನದ ಎಲ್ಲ ಹಂತದಲ್ಲೂ ಅದನ್ನೇ ಹುಡುಕುತ್ತಾರೆ. ನೈತಿಕತೆ ಹಾಗೂ ಪ್ರಾಮಾಣಿಕತೆಯ ಬೆಲೆಗಳು ಕಡಿಮೆಯಾಗುವ ಮೂಲಕ ನಮ್ಮ ಮೌಲ್ಯಗಳ ಮೇಲಿನ ಪ್ರಭಾವವು ಕಡಿಮೆಯಾಗುತ್ತವೆ. ಎಲ್ಲರೂ ಪ್ರಥಮ, ಎಲ್ಲರೂ ಗೆಲ್ಲಬೇಕು. ಸೋಲು, ಎರಡನೇ ಸ್ಥಾನ ಅನ್ನುವುದನ್ನು ಅರಗಿಸಿಕೊಳ್ಳುವ ಶಕ್ತಿಯೇ ಇಲ್ಲದ ಪೀಳಿಗೆಯ ಸೃಷ್ಟಿಯಾಗುತ್ತದೆ. ಅಂತವರು ಜೀವನದಲ್ಲಿ ಬರುವ ಸಣ್ಣಪುಟ್ಟ ಸೋಲುಗಳಿಗೂ ಕುಗ್ಗಿ ಹೋಗುತ್ತಾರೆ. ಕಾರಣ ಅವರೊಳಗೆ ಸೋಲುಗಳನ್ನು ಸ್ವೀಕರಿಸುವ ಮನಸ್ಥಿತಿಗಳೇ ಹೆಚ್ಚಾಗಿ ಅಡಗಿಕೊಳ್ಳುತ್ತವೆ.

ಅಂಕಪಟ್ಟಿಗಳನ್ನೇ ಪ್ರಮುಖ ಮಾನದಂಡವಾಗಿಸಿದ್ದರ ಪರಿಣಾಮ ತಲೆಗಳು ಖಾಲಿಯಾಗುತ್ತಿವೆ. ಇಂದು ಶೇ.95ರಷ್ಟು ಅಂಕ ಪಡೆದು ಸಂಭ್ರಮಿಸುವ ಆ ಮಗು,

ನಾಳೆ ಎಲ್ಲೋ ಒಂದುಕಡೆ ಕೇವಲ 35-40 ಸಾವಿರ ಸಂಬಳದ ಕೆಲಸಕ್ಕೆ 20ರಿಂದ30 ಲಕ್ಷದವರೆಗೆ ಲಂಚ ಕೊಡಬೇಕಾಗುತ್ತದೆ. ಈಗ ನಡೆದಿರುವುದು ಕೂಡಾ ಅದೆ. ವಾಸ್ತವವಾಗಿ ಕೇವಲ ಪರೀಕ್ಷೆಗಳಲ್ಲಿ ಮಾತ್ರ ಎಲ್ಲರನ್ನೂ ಪಾಸ್ ಮಾಡುವುದು ನಮ್ಮ ಶಿಕ್ಷಣದ ಮೂಲ ಉದ್ದೇಶವಲ್ಲ! ಬದಲಿಗೆ, 'ಎಲ್ಲರೊಳಗೂ ಸಮರ್ಥವಾದ ವ್ಯಕ್ತಿತ್ವವನ್ನು ನಿರ್ಮಿಸುವುದು'. ಆದರೆ, ಈಗ ಶಿಕ್ಷಣದ ಆ ಮೂಲ ಉದ್ದೇಶವೇ ಮರೆತುಹೋಗಿದೆ. ಪರೀಕ್ಷೆಯಲ್ಲಿ ಶೇ.90ರಷ್ಟು ಅಂಕ ಪಡೆದವರು ಬದುಕೆಂಬ ಪರೀಕ್ಷೆಯಲ್ಲಿ ಕೇವಲ ಶೇ.40 ರಷ್ಟು ಅಂಕ ತೆಗೆದರೆ ಪ್ರಯೋಜನವಿಲ್ಲ, ಹಾಗಾಗಿ ನಮ್ಮ ಶಿಕ್ಷಣ ವ್ಯವಸ್ಥೆ ಈಗಲೇ ಎಚ್ಚೆತ್ತುಕೊಳ್ಳಬೇಕು. ಇಲ್ಲದಿದ್ದರೆ ಮುಂದೊಂದು ದಿನ ಭಾರತ 'ಸಾಕ್ಷರಸ್ಥ ನಿರುದ್ಯೋಗಿಗಳ ದೇಶವಾಗುವುದರಲ್ಲಿ ಅನುಮಾನವಿಲ್ಲ'!

ಮೌಲ್ಯಮಾಪನ ಪದ್ಧತಿಯಲ್ಲಿ ಬದಲಾವಣೆ ಆಗಬೇಕಿದೆ, ಹಿಂದೆ ಸಿಲಬಸ್ ಕಡಿಮೆ, ಪ್ರಶ್ನೆಪತ್ರಿಕೆ ಕಠಿಣ, ಹಾಗೂ ಮೌಲ್ಯಮಾಪನ ತುಂಬಾ ಕಟ್ಟುನಿಟ್ಟಾಗಿ ನಡೆಯುತ್ತಿತ್ತು. ಒಂದೇ ಒಂದು ಅಕ್ಷರ ತಪ್ಪಿದರೂ ಅಂಕ ಕಡಿತವಾಗುತ್ತಿತ್ತು. ಹೀಗಾಗಿ ಅಂದು ಶೇ.60ರಷ್ಟು ಪಡೆಯುದೇ ಒಂದು ದೊಡ್ಡ ಪರಸಾಹಸವಾಗುತ್ತಿತ್ತು. ಆದರೆ ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ CCE, ಗ್ರೇಸ್ ಮಾರ್ಕ್ಸ್, ಆಂತರಿಕ ಮೌಲ್ಯಮಾಪನ, ಬಹು ಆಯ್ಕೆಯ ಪ್ರಶ್ನೆಗಳು, ಚಾಯ್ಸ್ ಉತ್ತರ ಬರೆದರೆ ಅಂಕ ಕೊಡುವ ವ್ಯವಸ್ಥೆ ಇದೆ. ಹೀಗಿರುವಾಗ ಶೇ.90ರಷ್ಟು ಸಾಮಾನ್ಯವಾಗಿದೆ. ಮೊದಲು ವಿಶ್ಲೇಷಣಾತ್ಮಕ ಪ್ರಶ್ನೆಗಳು ಜಾಸ್ತಿ ಇರುತ್ತಿದ್ದವು. ಆದರೀಗ ನೆನಪಿನ ಶಕ್ತಿಗೆ ಹೆಚ್ಚಿನ ಒತ್ತು ಕೊಡಲಾಗಿದೆ. ಜತೆಗೆ ಗೈಡ್/ನೋಟ್ಸ್ ಆಧಾರಿತ ಪ್ರಶ್ನೆಗಳು.

ಅಂಕ ವರ್ಸಸ್ ಜ್ಞಾನ, ಇಂದು ಶೇ.95ರಷ್ಟು ತೆಗೆದ ಮಕ್ಕಳಿಗೆ ಸರಿಯಾಗಿ ಒಂದು ಅರ್ಜಿಯನ್ನು ಬರೆಯಲು ಬರುವುದಿಲ್ಲ, ಅವರಿಗೆ ಮೂಲ ಗಣಿತವೂ ಗೊತ್ತಿಲ್ಲ ಅಂತ ಕಂಪನಿಗಳು ಹೇಳುತ್ತಿವೆ. ASER ವರದಿ ಪ್ರಕಾರ 8ನೇ ತರಗತಿಯ ಮಕ್ಕಳಿಗೆ 2ನೇ ತರಗತಿಯ ಪಠ್ಯ ಓದಲು ಬರುವುದಿಲ್ಲ. ಈಗಿನ ಪರೀಕ್ಷೆಗಳು ಕೇವಲ ಮಾಹಿತಿ ಉಗುಳುವುದಕ್ಕೆ ಅಂಕ ಕೊಡುತ್ತವೆ. ಸಮಸ್ಯೆ ಬಿಡಿಸುವುದು, ವಿಮರ್ಶಾತ್ಮಕ ಚಿಂತನೆ, ಸೃಜನಶೀಲತೆ ಇವುಗಳಿಗೆ ಮಾನದಂಡವಿಲ್ಲ. ಕಾಲೇಜುಗಳ ರ್‍ಯಾಂಕಿಂಗ್, ಶಿಕ್ಷಕರ ಕಾರ್ಯಕ್ಷಮತೆ ಎಲ್ಲವೂ ಫಲಿತಾಂಶದ ಮೇಲೆ ನಿಂತಿರುತ್ತದೆ. ಹಾಗಾಗಿ ಎಲ್ಲರನ್ನೂ ಪಾಸ್ ಮಾಡಿ, ಪರ್ಸೆಂಟೇಜ್ ನೀಡಲು ಒತ್ತಡ ಹೆಚ್ಚುತ್ತಿದೆ.

ಈ ರೀತಿಯ ವ್ಯವಸ್ಥೆಗೆ ಕಾರಣಗಳೆಂದರೆ, ವಾಣಿಜ್ಯೀಕರಣ; ಖಾಸಗಿ ಶಾಲಾ-ಕಾಲೇಜುಗಳ ಪೈಪೋಟಿ. ಶೇ.100ರಷ್ಟು ಫಲಿತಾಂಶ, ಶೇ.90+ರಷ್ಟು ವಿದ್ಯಾರ್ಥಿಗಳು ಅನ್ನೋದು ಮಾರ್ಕೆಟಿಂಗ್ ಟೂಲ್ ಆಗಿದೆ. ಮತ್ತು ತಮ್ಮ ಮಗು ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದರೆ ತಮ್ಮ ಗೌರವಕ್ಕೆ ಧಕ್ಕೆ ಬರುತ್ತದೆಂಬ ಕಾರಣಕ್ಕೆ ಶಿಕ್ಷಕರ ಮೇಲೆ, ಮೌಲ್ಯಮಾಪಕರ ಮೇಲೆ ಪೋಷಕರ ಒತ್ತಡ ಹೆಚ್ಚುತ್ತಿದೆ. ಹಾಗೂ ಸಾಕ್ಷರತೆ ಪ್ರಮಾಣ, ತೇರ್ಗಡೆ ಪ್ರಮಾಣವನ್ನು ಹೆಚ್ಚಿಸುವುದು ಸರಕಾರದ ಮೂಲ ಗುರಿಯೂ ಆಗಿದೆ. ಈ ಪರಿಣಾಮವಾಗಿ 'ಸರ್ವರಿಗೂ ಶಿಕ್ಷಣ' ಮತ್ತು 'ಎಲ್ಲರೂ ಪಾಸ್' ಎಂಬ ನೀತಿಯಿಂ ದಾಗಿ ಅಡ್ಡಪರಿಣಾಮಗಳಿಂದು ಹೆಚ್ಚುತ್ತಿವೆ. ಮೇಲಾಗಿ LKGಯಿಂದಲೇ ಟ್ಯೂಷನ್, ಪ್ರಶ್ನೆಪತ್ರಿಕೆ ಊಹಿಸಿ ತಯಾರಿ ಮಾಡಿಸು ವುದು, ಉತ್ತರ ಬಾಯಿಪಾಠ ಮಾಡಿಸುವ ಈ ಟ್ಯೂಷನ್-ಕೋಚಿಂಗ್ ಹಾವಳಿಗಳೂ ಹೆಚ್ಚುತ್ತಿವೆ. ಈ ಎಲ್ಲ ಅಂಶಗಳು ಶಿಕ್ಷಣ ವ್ಯವಸ್ಥೆಯನ್ನು ಬಹಳ ಗಂಭೀರ ಸ್ಥಿತಿಗೆ ಕೊಂಡೊಯ್ಯುತ್ತಿವೆ.

ಇಲ್ಲಿ ಯಾರು ದಡ್ಡರು? ಬುದ್ಧಿವಂತರಾರು? ಮೊದಲು ಶೇ.60ರಷ್ಟು ತೆಗೆದವನು ಆತ ಅತ್ಯಂತ ಕಠಿಣ ಸ್ಪರ್ಧೆಯಲ್ಲಿ, ಕಡಿಮೆ ಸಂಪನ್ಮೂಲದಲ್ಲಿ ಗೆಲ್ಲುತ್ತಿದ್ದ. ಮತ್ತು ಆತನ ಗ್ರಹಿಕೆ, ಶ್ರಮ ಜಾಸ್ತಿ ಇರುತ್ತಿತ್ತು. ಆದರೆ ಈಗ ಶೇ.95ರಷ್ಟು ತೆಗೆಯುವವನು ಇಂದಿನ ವ್ಯವಸ್ಥೆ ಕೊಟ್ಟ ಚೌಕಟ್ಟಿನಲ್ಲಿ ಚೆನ್ನಾಗಿ ಆಡುತ್ತಿದ್ದಾನೆ. ಆದರೆ ಅದು ನಿಜವಾದ ಬುದ್ಧಿಮತ್ತೆಯ ಮಾನದಂಡವಂತೂ ಅಲ್ಲವೇ ಅಲ್ಲ. ಮಧ್ಯಮ ವರ್ಗದ ಪ್ರತಿಭಾವಂತ ಮಗು ಮತ್ತು ನಿಜಕ್ಕೂ ಕಲಿಕೆಯಲ್ಲಿ ಹಿಂದುಳಿದ ಮಗು, ಈ ಇಬ್ಬರಿಗೂ ಶೇ.90ರಷ್ಟು ಸಿಗುತ್ತೆ. ಹೀಗಾದಾಗ ಇದರಲ್ಲಿ ಯಾರು ಪ್ರತಿಭಾವಂತ ಅಂತ ಗುರುತಿಸುವುದು ಬಹಳ ಕಷ್ಟ.

ಇಂದು ಬಿಎ ಮತ್ತು ಬಿಕಾಂ ಪದವಿಗಳಲ್ಲಿ ಪ್ರಥಮ ದರ್ಜೆ ಪಡೆದ ಲಕ್ಷಾಂತರ ಪದವೀಧರರಿದ್ದಾರೆ. ಆದರೆ ಅವರ ಕೆಲಸಕ್ಕೆ ತಕ್ಕ ಕೌಶಲ್ಯಗಳಿಲ್ಲ. ಇನ್ನು SSLC, PUCಯಲ್ಲಿ ಶೇ.98ರಷ್ಟು ತೆಗೆದ ವಿದ್ಯಾರ್ಥಿಗಳು NEET, CET, KPSC ಮತ್ತು UPSC ಅಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮಕಾಡೆ ಮಲಗುತ್ತಾರೆ. ಕಾರಣ, ಅಲ್ಲಿ ಗ್ರಹಿಕೆಗೆ ತರಬೇತಿ ಇಲ್ಲ. ಅದರಲ್ಲಿ ಇವರೆಲ್ಲ ಬಿಗ್ ಜೀರೋ. ಹೀಗಾದಾಗ ಸಹಜವಾಗಿ ಉದ್ಯೋಗ ಸೃಷ್ಟಿಯಲ್ಲಿ ಬಿಕ್ಕಟ್ಟುಗಳು ಉಂಟಾಗುತ್ತದೆ; ಕಂಪನಿಗಳು ನಾವು ಶೇ.95ರಷ್ಟು ನೋಡಲ್ಲ, ನಮಗೆ ಸ್ಕಿಲ್ ಬೇಕು ಅಂತ ಮತ್ತೆ ಪ್ರತ್ಯೇಕ ಪರೀಕ್ಷೆ ಮಾಡುತ್ತವೆ.

ಒಂದು ವರದಿಯ ಪ್ರಕಾರ 14-18 ವಯಸ್ಸಿನ ಶೇ.25ರಷ್ಟು ಮಕ್ಕಳಿಗೆ 2ನೇ ತರಗತಿಯ ಪಠ್ಯ ಓದಲು ಬರಲ್ಲ, ಆದ್ರೆ ಅವರಿಗೆ 10ನೇ ತರಗತಿಯಲ್ಲಿ ಶೇ.85-90ರಷ್ಟಿದೆ. ಮತ್ತೊಂದೆಡೆ ಶೇ.90ರಷ್ಟು ಕಡಿಮೆ ಆಯ್ತು ಅಂತ ಅನೇಕ ಮಕ್ಕಳು ಮಾನಸಿಕ ಖಿನ್ನತೆ ಮತ್ತು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇಂದು ಎಲ್ಲರೂ ಹೀಗೆ ಕೇವಲ ಅಂಕಗಳ ಹಿಂದೆ ಓಡುತ್ತಿದ್ದರ ಪರಿಣಾಮವಾಗಿ ಪ್ರಶ್ನೆ ಕೇಳುವ ಮತ್ತು ಹೊಸದನ್ನು ಕಂಡುಹಿಡಿಯುವ ಧೈರ್ಯ ಯಾರಿಗೆ ತಾನೆ ಬರುತ್ತದೆ ಹೇಳಿ! ಹೀಗಾವುದರಿಂದ ಸಂಶೋಧನೆ, ನಾವೀನ್ಯತೆಗೆ ಬಹಳ ದೊಡ್ಡ ಪೆಟ್ಟು ಬೀಳುತ್ತಿದೆ.

ಇನ್ನು ಪರಿಹಾರಗಳೆಂದರೆ ಮೌಲ್ಯಮಾಪನ ಸುಧಾರಣೆಯಾಗಬೇಕು. ಅಂಕದ ಜತೆಗೆ ಕೌಶಲ್ಯ ಆಧಾರಿತ ಗ್ರೇಡಿಂಗ್ ನೀಡುವುದು. ಪ್ರಾಜೆಕ್ಟ್, ವಾಚಿಕ ಪರೀಕ್ಷೆ ನಡೆಸುವುದು ಮತ್ತು ಆಂತರಿಕ ಅಂಕ ಕಡಿತಗೊಳಿಸಿ ಬೋರ್ಡ್ ಪರೀಕ್ಷೆಗಳಿಗೆ ಹೆಚ್ಚಿನ ಮಹತ್ವ ನೀಡಬೇಕು. ಮಗುವಿನ ಆಸಕ್ತಿ, ಕೌಶಲ್ಯ ಗುರುತಿಸಿ ಪ್ರೋತ್ಸಾಹಿಸಬೇಕು. ಮುಖ್ಯವಾಗಿ ಪ್ರಶ್ನೆಪತ್ರಿಕೆಗಳಲ್ಲಿ ಬದಲಾವಣೆ ತರಬೇಕಿದೆ. ನೆನಪಿನ ಶಕ್ತಿ ಶೇ.20ರಷ್ಟು ಅನ್ವಯ, ವಿಶ್ಲೇಷಣೆ, ಸೃಜನಶೀಲತೆಗೆ ಶೇ.80ರಷ್ಟು ಒತ್ತು ನೀಡಬೇಕು.

ಉದಾಹರಣೆಗೆ ಈ ಪಾಠವನ್ನು ನಿಜ ಜೀವನದಲ್ಲಿ ಹೇಗೆ ಬಳಸುವೆ? ಎಂಬ ಈ ತರಹದ ಪ್ರಶ್ನೆಗಳಿಗೆ ಆದ್ಯತೆ ನೀಡಬೇಕು. ಮುಖ್ಯವಾಗಿ ಶಿಕ್ಷಕರಿಗೆ ಮೊದಲಿನಂತೆ ವಿದ್ಯಾರ್ಥಿಗಳನ್ನು ಗದರಿಸಿ ಬೆದರಿಸುವ ಮತ್ತು ಅಗತ್ಯವೆನಿಸಿದರೆ ನಾಲ್ಕು ತಳಿಸುವ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡಬೇಕು. ಮತ್ತು ಮೌಲ್ಯಮಾಪನದಲ್ಲಿ ಕಡ್ಡಾಯವಾಗಿ ಅಂಕಗಳನ್ನು ಕೊಡಲೇಬೇಕೆನ್ನುವ, ಯಾರನ್ನೂ ಫೇಲ್ ಮಾಡಬಾರದೆಂಬ ಒತ್ತಡವನ್ನು ತೆಗೆಯಬೇಕು. ಇವೆಲ್ಲದರ ಜತೆಗೆ ಪೋಷಕರ ಮನಸ್ಥಿತಿಯೂ ಬದಲಾಗಬೇಕಿದೆ.

ಮಕ್ಕಳ ಪರೀಕ್ಷೆಯ ಫಲಿತಾಂಶ ಬಂದಾಗ 'ಎಷ್ಟು ಪರ್ಸೆಂಟ್?' ಅಂತ ಕೇಳುವುದರ ಬದಲಿಗೆ 'ಹೊಸದೇನು ಕಲಿತೆ ಮಗು ಅಂತ ಕೇಳಿ. ಎಷ್ಟು ಅಂಕ ಅಂತಲ್ಲ. ನಿಮ್ಮ ಈ ಒಂದು ಪ್ರಶ್ನೆ ಇಡೀ ಶಿಕ್ಷಣ ವ್ಯವಸ್ಥೆಯ ದಿಕ್ಕೇ ಬದಲಾಗುತ್ತದೆ'. ಹೀಗಾದಾಗ ಮಕ್ಕಳಲ್ಲಿ ಆತ್ಮವಿಶ್ವಾಸ, ಸ್ವಾಭಿಮಾನ ಮತ್ತು ಗಟ್ಟಿತನ ಬೆಳೆಯುತ್ತದೆ. ಏಕೆಂದರೆ ಬದಲಾವಣೆ ಬೋರ್ಡ್ ರೂಮ್‌ನಲ್ಲಿ ಅಲ್ಲ, ಮನೆಯ ಹಾಲ್‌ನಲ್ಲಿ ಶುರುವಾಗಬೇಕು.

ಶಿಕ್ಷಣವು ಮನುಷ್ಯನ ಒಳಗಡೆ ಅವಿತಿರುವ ಪರಿಪೂರ್ಣತೆಯ ಅಭಿವ್ಯಕ್ತಿಯೇ ಆಗಿದೆ. ನಾವು ಅಂಕದ ಹಿಂದೆ ಬಿದ್ದು ಆ ಪರಿಪೂರ್ಣತೆಯನ್ನೇ ಹುದುಗಿಸುತ್ತಿದ್ದೇವೆ. ಇನ್ನಾದರೂ ಎಚ್ಚೆತ್ತುಕೊಳ್ಳೋಣ. ನಾಳಿನ ಭಾರತವನ್ನು ಕಟ್ಟಬೇಕಾದರೆ ನಮಗೆ ಬೇಕಾಗಿರುವುದು ಶೇ.90ರಷ್ಟು ಅಂಕವಂತರಲ್ಲ, ಬದಲಿಗೆ ಶೇ.100ರಷ್ಟು ಪ್ರಾಮಾಣಿಕ, ಕೌಶಲ್ಯವಂತ ಮನುಷ್ಯರು. ಹಾಗಾಗಿ ಅವರನ್ನು ರೂಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಅಂಕದ ಹಣದುಬ್ಬರಕ್ಕೆ ಪರಿಹಾರ ಒಂದೇ, ಅದು 'ಮೌಲ್ಯಮಾಪನದ ಪ್ರಾಮಾಣಿಕತೆ'. ಫೇಲಾಗುವ ಧೈರ್ಯವನ್ನು ಮಕ್ಕಳಿಗೆ, ಫೇಲ್ ಮಾಡುವ ಧೈರ್ಯವನ್ನು ಶಿಕ್ಷಕರಿಗೆ, ಮಗು ಫೇಲಾದರೆ ಒಪ್ಪಿಕೊಳ್ಳುವ ವಿಶಾಲತೆಯನ್ನು ಪೋಷಕರಿಗೆ ಕೊಡೋಣ. ಆಗ ಮಾತ್ರ ಪಾಸಾದ ಪ್ರತಿ ಮಕ್ಕಳೂ ನಿಜವಾಗಿ 'ಪಾಸ್' ಆಗುತ್ತವೆ.

ಈ ವ್ಯವಸ್ಥೆಯನ್ನು ಸರಕಾರ ಬದಲಾಯಿಸಲಿ ಅಂತ ಕಾಯುವುದು ಬೇಡ. ಈ ಬದಲಾವಣೆಯು ನಮ್ಮಿಂದ ಹಾಗೂ ನಿಮ್ಮಿಂದಲೇ ಶುರುವಾಗಲಿ. ಇವತ್ತಿಂದ ನಿಮ್ಮ ಮಗುವನ್ನು 'ನೀನು ಫಸ್ಟ್ ಬರಬೇಕು' ಅಂತ ಒತ್ತಾಯಿಸುವ ಬದಲು 'ನೀನು ಬೆಸ್ಟ್ ಆಗು' ಅಂತ ಹಾರೈಸಿ. ಆಗ ಆ ಮಗು ಜೀವನದಲ್ಲಿ ಫಸ್ಟ್ ಬರುತ್ತೆ. ಅದೇ ನಿಜವಾದ ಶಿಕ್ಷಣ, ಅದೇ ನೈಜ ರಾಷ್ಟ್ರ ನಿರ್ಮಾಣ. ವಿಕಸಿತ ಭಾರತ 2047ರ ಕನಸು ನನಸಾಗುವುದು ಅರಿವಿನಿಂದ ಹೊರತು ಅಂಕಪಟ್ಟಿಯಿಂದಲ್ಲ ಎಂಬ ಸತ್ಯವನ್ನು ಈಗಲಾದರೂ ಅರಿಯೋಣ.

ಮೊರಾರ್ಜಿ ದೇಸಾಯಿಯವರ ಬಗೆಗಿನ ಇನ್ನಷ್ಟು ಘಟನೆಗಳು

ರಾಮಾಯಣವನ್ನು ರಾಮನು ಬರೆಯಲಿಲ್ಲ. ಮಹಾಭಾರತವನ್ನು ಕೃಷ್ಣನು ಬರೆಯಲಿಲ್ಲ. ಮೊರಾರ್ಜಿಯನ್ನು ಹತ್ತಿರದಿಂದ ಕಂಡವರೇ ಅವರ ಬಗ್ಗೆ ಬರೆದಿದ್ದಾರೆ. ನಾವು ಓದುತ್ತಿರುವ ಇತಿಹಾಸ, ಎಲ್ಲೆಲ್ಲಿಂದಲೋ ಭಾರತಕ್ಕೆ ಬಂದ ಪ್ರವಾಸಿಗಳು ಬರೆದ ಪುಸ್ತಕದ ಆಧಾರದ ಮೇಲೆಯೇ. ನಮಗೆ ಬೇಕಾದ್ದನ್ನು ಮಾತ್ರ ತಿರುಚಿ ಉಳಿದಿದ್ದನ್ನು ಬಿಸಾಡುವುದು ಒಳ್ಳೆಯ ಜಾಯಮಾನವಲ್ಲ.

ಪ್ರತಿಕ್ರಿಯೆ

ಲೀನಾ ಜೋಶಿ

vveditoped@gmail.com

ನಾನು ಕಳೆದ ವಾರ ಸ್ವಮೂತ್ರಪಾನಿ ಪ್ರಧಾನಿ ಮೊರಾರ್ಜಿ ದೇಸಾಯಿ ಬಗ್ಗೆ ಲೇಖನ ಬರೆದಾಗ, ಬಹಳಷ್ಟು ಜನ ಪ್ರತಿಕ್ರಿಯೆ ನೀಡಿ, ಈ ಲೇಖನ ಅಪೂರ್ಣವಾಗಿದೆ, ನೀವು ಇನ್ನಷ್ಟು ಇದರ ಬಗ್ಗೆ ಬರೆಯಬೇಕಿತ್ತು ಅಂತ ಅಭಿಪ್ರಾಯ ವ್ಯಕ್ತಪಡಿಸಿದ್ದರು. ವಿಶೇಷವಾಗಿ ಚಂದ್ರಮೌಳಿ ಅವರಿಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅವರು ನೀಡಿದ ಪ್ರತಿಕ್ರಿಯೆಯಿಂದಾಗಿ ವಿಷಯವನ್ನು ಇನ್ನಷ್ಟು ವಿಸ್ತಾರವಾಗಿ ಓದುಗರ ಮುಂದೆ ಇಡುವ ಅವಕಾಶ ಲಭಿಸಿದೆ.

ನಾನು ಎಲ್ಲೂ ಮೊರಾರ್ಜಿ ದೇಸಾಯಿಯನ್ನು ಭೇಟಿಯಾಗಲು ಪ್ರಯತ್ನಿಸಿದ ಬಗ್ಗೆ ಕಾವ್ ಬಾಯ್ಸ್ ಕೃತಿಯಲ್ಲಿ ಉಲ್ಲೇಖವಾಗಿದೆ ಎಂದು ಹೇಳಿಲ್ಲ. RAW ನಲ್ಲಿ ದಶಕಗಳ ಕಾಲ ಸೇವೆ ಸಲ್ಲಿಸಿದ ಆರ್.ಕೆ. ಯಾದವ್, 'Mission RAW' ಪುಸ್ತಕ ಬರೆದಿದ್ದಾರೆ. ಅವರಿಗೆ ನೀಡಿದ ಸಂದರ್ಶನದಲ್ಲಿ ಆರ್.ಎನ್. ಕಾವ್ ಹೇಳಿದ್ದು, ಸಾಮಾನ್ಯವಾಗಿ ಪ್ರಧಾನಮಂತ್ರಿಗಳಾಗಲಿ ಅಥವಾ ಯಾವುದೇ ಮಂತ್ರಿಗಳಾಗಲಿ ಅವರನ್ನು ಭೇಟಿಯಾಗಲು ಬಯಸುವವರು ಮೊದಲು ಅವರ ಕಾರ್ಯದರ್ಶಿಯನ್ನು ಭೇಟಿ ಮಾಡುವುದು ಒಂದು ಆಡಳಿತಾತ್ಮಕ ನಿಯಮವಾಗಿದೆ. ಯಾರೂ ನೇರವಾಗಿ ಸಚಿವರ ಅಥವಾ ಪ್ರಧಾನಮಂತ್ರಿಯವರ ಕ್ಯಾಬಿನ್ ಒಳಗೆ ಪ್ರವೇಶಿಸಲು ಸಾಧ್ಯವಿಲ್ಲ. Appointment ಕೊಟ್ಟಿದ್ದ ನಿಗದಿತ ಸಮಯಕ್ಕೆ, ಕಾವ್ ಪ್ರಧಾನಮಂತ್ರಿ ಕಾರ್ಯಾಲಯಕ್ಕೆ ಪ್ರವೇಶಿಸಿದಾಗ, ವ್ಯಕ್ತಿಯೊಬ್ಬ ಕಿಲ್ಲರ್ ಆಫ್ ಎಮರ್ಜೆನ್ಸಿ ಎಂದು ಕೂಗುತ್ತಾ ಅವರ ಮೇಲೆ ದೈಹಿಕ ಹಲ್ಲೆಗೆ ಯತ್ನಿಸಿದ. ಅಲ್ಲಿದ್ದ ಪ್ರೈವೇಟ್ ಸೆಕ್ರೆಟರಿ ತಕ್ಷಣ ಮಧ್ಯಪ್ರವೇಶ ಮಾಡಿ, ಆ ವ್ಯಕ್ತಿಯನ್ನು ತಡೆದು, ಕಾವ್ ಅವರಿಗೆ ಯಾವುದೇ ಹಾನಿಯಾಗದಂತೆ ನೋಡಿಕೊಂಡರು. ನಂತರ ಅವರನ್ನು ಪ್ರಧಾನಮಂತ್ರಿಯವರ ಬಳಿಗೆ ಕರೆದುಕೊಂಡು ಹೋಗಲಾಯಿತು. ಕಾವ್, ಪ್ರಧಾನಮಂತ್ರಿಗೆ ಹೊರಗಡೆ ನಡೆದ ಘಟನೆಯನ್ನು ವಿವರಿಸಿದಾಗ, ಮೊರಾರ್ಜಿ ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ತೋರಿಸಲಿಲ್ಲ. ಆವಾಗ ಕಾವ್‌ಗೆ ಅರ್ಥವಾಗುತ್ತದೆ, ಇದೆಲ್ಲಾ ಪ್ರೀ-ಪ್ಲಾನ್ಡ್ ಎಂದು.

'ಕೈ ತಪ್ಪಿ ಹೋಗುತ್ತಿದ್ದ ಸಿಕ್ಕಿಂ' ಅನ್ನು ಭಾರತದಲ್ಲಿ ವಿಲೀನಗೊಳಿಸಿದ, ಬಾಂಗ್ಲಾದೇಶ ಉದ್ಭವಕ್ಕೆ ಕಾರಣವಾದ ಒಬ್ಬ ಪ್ರಾಮಾಣಿಕ ಅಧಿಕಾರಿಗೆ ಮೊರಾರ್ಜಿ ಹೇಳುತ್ತಾರೆ, 'ಎಮರ್ಜೆನ್ಸಿ' ಟೈಮ್‌ನಲ್ಲಿ ನೀವು ನಿಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದೀರಿ. ನಿಮ್ಮ ಗುಪ್ತಚರ ಮಾಹಿತಿಗಳಿಂದಾಗಿಯೇ ಎಮರ್ಜೆನ್ಸಿಯಲ್ಲಿ ಅನಾಚಾರಗಳು ನಡೆದವು. ಇಂದಿರಾ ಗಾಂಧಿಗೆ ನಿಷ್ಠವಾಗಿರೋ ನಿಮ್ಮ ಅವಶ್ಯಕತೆ ದೇಶಕ್ಕಿಲ್ಲ, ನಿಮ್ಮನ್ನು ಕೆಲಸದಿಂದ ವಜಾ ಮಾಡುತ್ತಿದ್ದೇವೆ, ಆಗ ಕಾವ್ ಹೇಳುತ್ತಾರೆ, ನಾನೇ ರಾಜೀನಾಮೆ ಕೊಡುತ್ತೇನೆ, ನನ್ನ ಮೇಲೆ ಯಾವುದೇ ಆರೋಪಗಳಿದ್ದರೆ ತನಿಖೆ ನಡೆಸಿ. ಗೃಹಮಂತ್ರಿ ಚೌಧರಿ ಚರಣ್ ಸಿಂಗ್ ಆದೇಶದ ಮೇಲೆ, ಎಸ್.ಪಿ. ಸಿಂಗ್ ನೇತೃತ್ವದಲ್ಲಿ ಒಂದು ಕಮಿಟಿಯನ್ನು ರಚಿಸಲಾಗುತ್ತದೆ. ಸುಮಾರು ಆರು ತಿಂಗಳ ಕಾಲ ನಡೆದ ಪರಿಶೀಲನೆಯ ನಂತರ, ಎಸ್.ಪಿ. ಸಿಂಗ್ ಸಮಿತಿ ತನ್ನ ಅಂತಿಮ ವರದಿಯನ್ನು ಸರಕಾರಕ್ಕೆ ಸಲ್ಲಿಸಿತು. ವರದಿಯ ಪ್ರಮುಖ ಅಂಶವೆಂದರೆ ಆರ್.ಎನ್. ಕಾವ್ ಅವರ ವಿರುದ್ಧ ಗಂಭೀರವಾದ ವೈಯಕ್ತಿಕ ದೋಷಾರೋಪಣೆಗಳನ್ನು ದೃಢಪಡಿಸುವಂತಹ ಸ್ಪಷ್ಟ ಸಾಕ್ಷ್ಯಗಳು ದೊರಕಲಿಲ್ಲ ಎಂಬ ನಿರ್ಣಯ.

ಸಮಿತಿಯ ವರದಿಯ ಪ್ರಕಾರ, ತುರ್ತು ಪರಿಸ್ಥಿತಿ ಅವಧಿಯಲ್ಲಿ ತೆಗೆದುಕೊಳ್ಳಲಾದ ಕೆಲವು ಕ್ರಮಗಳು ಆಡಳಿತಾತ್ಮಕ ನಿರ್ಧಾರಗಳಾಗಿದ್ದು, ಅವುಗಳನ್ನು ವೈಯಕ್ತಿಕ ದುರುಪಯೋಗ ಎಂದು ಪರಿಗಣಿಸಲು ಸೂಕ್ತವಾದ ಸಾಕ್ಷ್ಯಗಳು ಲಭ್ಯವಾಗಲಿಲ್ಲ. 6 ತಿಂಗಳಲ್ಲಿ ಎಸ್.ಪಿ. ಸಿಂಗ್ ಕಮಿಟಿ ಎಲ್ಲ ವಿಚಾರಣೆ ಮುಗಿಸಿ 'ಕಾವ್ ದೋಷಮುಕ್ತ' ಎಂದು ರಿಪೋರ್ಟ್ ಅನ್ನು ನೀಡುತ್ತದೆ. 'ಎಸ್.ಪಿ. ಸಿಂಗ್ ಸಮಿತಿಯ ತನಿಖೆ' ಭಾರತೀಯ ಆಡಳಿತ ವ್ಯವಸ್ಥೆಯಲ್ಲಿ ಜವಾಬ್ದಾರಿತ್ವ (accountability) ಮತ್ತು ಪಾರದರ್ಶಕತೆ (transparency) ಕುರಿತು ನಡೆದ ಪ್ರಮುಖ ಪ್ರಯತ್ನಗಳಲ್ಲಿ ಒಂದು.

'ಕಾವ್' ಅಂಥಹ ಅಧಿಕಾರಿ ಭಾರತ ದೇಶಕ್ಕೆ ಸಿಕ್ಕಿದ್ದು ನಮ್ಮ ಸುದೈವ. ಜನಪ್ರಿಯತೆಯಿಂದ ಕಾವ್ ಎಷ್ಟು ದೂರ ಅನ್ನುವುದಕ್ಕೆ ಇದೊಂದೇ ಘಟನೆ ಸಾಕ್ಷಿ. 1996ರಲ್ಲಿ ದೆಹಲಿಯಲ್ಲಿ ನಡೆದ ಬಾಂಗ್ಲಾದೇಶದ ಸ್ವಾತಂತ್ರ್ಯದ 25ನೇ ವರ್ಷದ ಸಮಾರಂಭದ ಸಂದರ್ಭದಲ್ಲಿ ನಡೆದ ಒಂದು ಘಟನೆ ಕಾವ್ ಅವರ ವಿನಯಶೀಲತೆಯನ್ನು ಪ್ರತಿಬಿಂಬಿಸುತ್ತದೆ. ವೇದಿಕೆಯಲ್ಲಿ ಗಣ್ಯರು ಕುಳಿತಿದ್ದಾಗ, ಕೊನೆಯ ಸಾಲಿನಲ್ಲಿ ಕುಳಿತಿದ್ದ ಕಾವ್ ಅವರನ್ನು ಒಬ್ಬ ಬಾಂಗ್ಲಾದೇಶಿ ಪತ್ರಕರ್ತ ಗುರುತಿಸಿ, ಸರ್, ನೀವು ಇರಬೇಕಾಗಿದ್ದು ವೇದಿಕೆ ಮೇಲೆ, ಇಲ್ಲಲ್ಲ , ನಿಮ್ಮಿಂದಲೇ ನಾವು ಸ್ವಾತಂತ್ರ್ಯವನ್ನು ಕಾಣುವಂತಾಯಿತು ಎಂದು ಕೃತಜ್ಞತೆ ವ್ಯಕ್ತಪಡಿಸಿದ. ಕಾವ್‌ಗೆ ತುಂಬಾ ಮುಜುಗರವಾಗುತ್ತೆ, ಸಂಕೋಚದಿಂದಲೇ ಕಾವ್ ಅವರು, ನಾನು ವಿಶೇಷವಾಗಿ ಏನೂ ಮಾಡಿಲ್ಲ; ವೇದಿಕೆಯಲ್ಲಿ ಕುಳಿತಿರುವವರ ಕೊಡುಗೆ ಬಹಳ ದೊಡ್ಡದು ಎಂದು ಹೇಳಿ, ಬೇರೆ ಯಾರಾದರೂ ಅವರನ್ನು ನೋಡುವುದುಕ್ಕಿಂತ ಮುಂಚೆ ಮೆಲ್ಲನೆ ಹೊರಗಡೆ ಹೊರಟು ಹೋಗುತ್ತಾರೆ. 1971ರ ಬಾಂಗ್ಲಾದೇಶ ವಿಮೋಚನಾ ಯುದ್ಧದಲ್ಲಿ ಆರ್.ಎನ್. ಕಾವ್ ಅವರು ನಿರ್ವಹಿಸಿದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅವರು ಸಂಗ್ರಹಿಸಿದ ಗುಪ್ತಚರ ಮಾಹಿತಿಗಳು ಅತ್ಯಂತ ನಿಖರವಾಗಿದ್ದವು. ಪಾಕಿಸ್ತಾನ ಯಾವ ಸಮಯದಲ್ಲಿ ದಾಳಿ ನಡೆಸಬಹುದು, ಅವರ ಮುಂದಿನ ಸೈನಿಕ ಚಲನವಲನಗಳು ಯಾವ ದಿಕ್ಕಿನಲ್ಲಿ ಇರಬಹುದು ಎಂಬ ವಿಷಯಗಳ ಕುರಿತು ಮುಂಚಿತ ಮಾಹಿತಿಗಳನ್ನು ಸಂಗ್ರಹಿಸುವಲ್ಲಿ ರಾ ಏಜೆಂಟ್‌ಗಳ ಪಾತ್ರ ಮಹತ್ವದ್ದಾಗಿತ್ತು. ಪಾಕಿಸ್ತಾನದ ವಿವಿಧ ಪ್ರದೇಶಗಳಲ್ಲಿ ನೆಲೆಸಿದ್ದ ರಾ ಏಜೆಂಟ್‌ಗಳು ಸಂಗ್ರಹಿಸಿದ ಮಾಹಿತಿಗಳು ಯುದ್ಧತಂತ್ರ ರೂಪಿಸುವಲ್ಲಿ ಪ್ರಮುಖ ಸಹಾಯ ಮಾಡಿದ್ದವು. ಅವರು ತಮ್ಮ ಜೀವಿತಾವಧಿಯಲ್ಲಿ ಇಂಟರ್‌ವ್ಯೂ ಕೊಟ್ಟಿದ್ದು ಒಂದೇ ಒಂದು ಸಾರಿ. ಯಾವುದೇ ರೀತಿಯ ವೈಯಕ್ತಿಕ ಕ್ರೆಡಿಟ್ ಪಡೆಯುವ ಆಸೆಯೂ ಅವರಿಗೆ ಇರಲಿಲ್ಲ.

ಅವರ ಗೌಪ್ಯ ದಾಖಲೆಗಳು (Secret Papers) ದೆಹಲಿಯ ನೆಹರೂ ಮೆಮೋರಿಯಲ್ ಮ್ಯೂಸಿಯಂ ಮತ್ತು ಲೈಬ್ರರಿಯಲ್ಲಿವೆ. ಕಾವ್ ಅವರು ತಮ್ಮ ಜೀವನದಲ್ಲಿ ಸಂಗ್ರಹಿಸಿದ ಕೆಲವು ಮಹತ್ವದ ದಾಖಲೆಗಳು ಹಾಗೂ ಧ್ವನಿ ಮುದ್ರಿತ ದಾಖಲೆಗಳನ್ನು ಭವಿಷ್ಯದಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ, ಅವುಗಳನ್ನು ನಿರ್ದಿಷ್ಟ ಅವಧಿಯ ನಂತರ ಪ್ರಕಟಿಸಬೇಕು ಎಂಬ ಸೂಚನೆಯನ್ನು ತಮ್ಮ ಇಚ್ಛಾಪತ್ರ (ವಿಲ್)ದಲ್ಲಿ ದಾಖಲಿಸಿದ್ದಾರೆ. ಈ ದಾಖಲೆಗಳ ಸಂರಕ್ಷಣೆಯ ಜವಾಬ್ದಾರಿಯನ್ನು 'ನೆಹರು ಮೆಮೋರಿಯಲ್' ಸಂಸ್ಥೆ ವಹಿಸಿಕೊಂಡಿದೆ. 2002ರಲ್ಲಿ ನಿಧನರಾಗುವ ಮುನ್ನ ತಮ್ಮ ಆತ್ಮಕಥೆಯನ್ನು ರೆಕಾರ್ಡ್ ಮಾಡಿದ್ದರು, ಅದನ್ನು ಏಳು ಕಡತಗಳಾಗಿ ವಿಭಜಿಸಿ, ನೆಹರೂ ಮೆಮೋರಿಯಲ್ ಲೈಬ್ರರಿಯಲ್ಲಿ ಇರಿಸಲಾಗಿದೆ. ಏಳು ಫೈಲ್‌ಗಳ ಪೈಕಿ ನಾಲ್ಕು ಫೈಲ್‌ಗಳನ್ನು ಈಗಾಗಲೇ ಸಾರ್ವಜನಿಕ/ಸಂಶೋಧಕರಿಗೆ ಬಿಡುಗಡೆ ಮಾಡಲಾಗಿದೆ. ಅವರು ಮರಣ ಹೊಂದಿದ 25 ವರ್ಷಗಳ ನಂತರ (ಅಂದರೆ 2027ರ ಸುಮಾರಿಗೆ) ಬಿಡುಗಡೆ ಮಾಡಬೇಕೆಂದು ಮೂರು ಪ್ರಮುಖ ಕಡತಗಳ ಮೇಲೆ ಸೂಚನೆ ನೀಡಿದ್ದಾರೆ. ಬಾಂಗ್ಲಾದೇಶ ವಿಮೋಚನೆ, ಸಿಕ್ಕಿಂ ವಿಲೀನ, ಇಂದಿರಾ ಗಾಂಧಿ ಹತ್ಯೆಗೆ ಸಂಬಂಧಿಸಿದ ಸೂಕ್ಷ್ಮ ಸಂಗತಿಗಳು ಹೊರಬರಲು ಇನ್ನು ಕೆಲವೇ ತಿಂಗಳುಗಳಿವೆ.

ಮೊರಾರ್ಜಿ ದೇಸಾಯಿ, ಸ್ಪೆಷಾಲಿಟಿ ಏನಂದ್ರೆ, ಅವರಿಗೆ ಏನಾದರೂ ಪ್ರಶ್ನೆ ಕೇಳಿದರೆ, ಉತ್ತರವನ್ನು ಪ್ರಶ್ನೆ ರೂಪದಲ್ಲೇ ಕೊಡುತ್ತಿದ್ದರು. ಅವರು ಹೇಳಿದ ಒಂದು ಧ್ವನಿ ಮುದ್ರಿಕೆ ಇದೆ, ಆದರೆ ಧ್ವನಿ ಮುದ್ರಿಕೆಯನ್ನು ಲೇಖನದಲ್ಲಿ ಪ್ರಕಟಿಸಲು ಸಾಧ್ಯವಿಲ್ಲ, ಚಂದ್ರಮೌಳಿಯವರು ಆ ಧ್ವನಿ ಮುದ್ರಿಕೆಯನ್ನು ಹುಡುಕಿ ತೆಗೆದು ಕೇಳಬಹುದು. ಅದರಲ್ಲಿ ಅವರು ಹೇಳುತ್ತಾರೆ, ಭಾರತ ಸಮೃದ್ಧ ದೇಶ ವಾಗಬೇಕೆಂದು ನಾನು ಬಯಸುವುದಿಲ್ಲ, ಭಾರತ ಸುಖಮಯ ದೇಶವಾಗಿರಬೇಕು, ಸುಖಪಡಲು ಸಮೃದ್ಧಿಯ ಅವಶ್ಯಕತೆ ಇಲ್ಲ, ಸಮೃದ್ಧಿತನ ಅಸೂಯೆಯನ್ನು ತನ್ನ ಜತೆಗೆ ತರುತ್ತದೆ. ಇದು ಭಾರತದ ಬಗ್ಗೆ ಮೊರಾರ್ಜಿಗೆ ಇದ್ದ Vision !

ಮೊರಾರ್ಜಿಗೆ ಪ್ರಧಾನಮಂತ್ರಿಯಾಗಬೇಕೆಂಬ ಆಸೆ ಸ್ವಾತಂತ್ರ್ಯ ಬಂದಾಗಿನಿಂದಲೂ ಇತ್ತು. ತಮ್ಮ ಬಯಕೆಯನ್ನು ಬಹಳ ಬಾರಿ ವ್ಯಕ್ತಪಡಿಸಿದ್ದರು ಕೂಡ. ನೆಹರು ನಿಧನದ ನಂತರ, ಪ್ರಧಾನ ಮಂತ್ರಿಯಾಗಲು ಪ್ರಯತ್ನಪಟ್ಟರು ಕೂಡ, ಕುರ್ಚಿ ಸಿಗಲಿಲ್ಲ. ಶಾಸ್ತ್ರೀ ಪ್ರಧಾನಿಯಾದರು. ಶಾಸ್ತ್ರೀಯವರ ಚಿತೆಯ ಬೆಂಕಿ ಕೂಡ ಆರಿರಲಿಲ್ಲ, ಮೊರಾರ್ಜಿ ಪ್ರಧಾನಮಂತ್ರಿಯ ಚೇರ್ ಮೇಲೆ ಟವಲ್ ಹಾಕಿ ತಾನೇ ಪ್ರಧಾನಮಂತ್ರಿಯಾಗಬೇಕೆಂಬ ಕನಸು ಕಾಣಲು ಶುರುಮಾಡಿದ್ದರು. ಆದರೆ ಕಾಂಗ್ರೆಸ್ ಪಕ್ಷದಲ್ಲೇ ಮೊರಾರ್ಜಿಯನ್ನು ದ್ವೇಷಿಸುವ ಒಂದು ಗುಂಪಿತ್ತು. ಕಾಮರಾಜ್ ಸಹಾಯದಿಂದ ಇಂದಿರಾ ಗಾಂಧಿ ಪ್ರಧಾನಮಂತ್ರಿಯಾದರು. ಇಂದಿರಾ ಗಾಂಧಿಗೆ ಮೊರಾರ್ಜಿಯ ಬಯಕೆಯ ಬಗ್ಗೆ ಗೊತ್ತಿತ್ತು. ಮೊರಾರ್ಜಿಗೆ ಉಪ ಪ್ರಧಾನಮಂತ್ರಿ ಪಟ್ಟ ಮತ್ತು ವಿತ್ತ ಮಂತ್ರಿಯ ಸ್ಥಾನವನ್ನು ನೀಡಿದರು. ಮೊರಾರ್ಜಿ ಕನಸು ಕಾಣುತ್ತಿದ್ದರು, ಒಂದಲ್ಲ ಒಂದು ದಿನ ಇಂದಿರಾ ಗಾಂಧಿ ಫೇಲ್ ಆಗಬಹುದು ಮತ್ತು ತಾನು ಪ್ರಧಾನಮಂತ್ರಿ ಆಗಬಹುದು ಅಂತ.

ದಿಲ್ಲಿಯಲ್ಲಿ ಪ್ಲಾನಿಂಗ್ ಕಮಿಷನ್‌ನ ಮೀಟಿಂಗ್ ಇತ್ತು, ಅದರಲ್ಲಿ ದೇಶದ ಎಲ್ಲ ಮುಖ್ಯಮಂತ್ರಿಗಳು ಭಾಗವಹಿಸಿದ್ದರು. ಒಬ್ಬ ಮುಖ್ಯಮಂತ್ರಿ ಇಂದಿರಾ ಗಾಂಧಿಯವರಿಗೆ ಒಂದು ಕ್ಲಿಷ್ಟಕರವಾದ ಪ್ರಶ್ನೆಯನ್ನು ಕೇಳಿದ. ಆಗ ಮೊರಾರ್ಜಿ ಮಧ್ಯದಲ್ಲಿ ಬಾಯಿ ಹಾಕಿ ಇಂದಿರಾ ಬೆನ್, ನೀವು ಸುಮ್ಮನಿರಿ, 'ಲೆಟ್ ಮಿ ಹ್ಯಾಂಡಲ್ ದಿಸ್ ಕ್ವಶ್ಚನ್' ಅಂತ ಹೇಳಿದರು. ಇಂದಿರಾ ಗಾಂಧಿಗೆ ಎಲ್ಲ ಮುಖ್ಯಮಂತ್ರಿಗಳ ಎದುರು ಅವಮಾನವಾಯಿತು. ಅದೇ ದಿನ ಅವರು ಡಿಸೈಡ್ ಮಾಡಿದ್ದು, ಈ ಮನುಷ್ಯನನ್ನ ದೂರ ಇಡಬೇಕು ಅಂತ. ಇಂದಿರಾ ಗಾಂಧಿ ಭಾರತದ ಬ್ಯಾಂಕುಗಳ ರಾಷ್ಟ್ರೀಕರಣ ಮಾಡುವ ನಿರ್ಣಯವನ್ನು ತೆಗೆದುಕೊಂಡರು. ಇದಕ್ಕೆ ಮೊರಾರ್ಜಿಯ ವಿರೋಧವಿತ್ತು. ನೀಲಂ ಸಂಜೀವ್ ರೆಡ್ಡಿಯನ್ನು ರಾಷ್ಟ್ರಪತಿ ಮಾಡಲು ಕೂಡ ಅವರಿಬ್ಬರಲ್ಲಿ ಹೊಂದಾಣಿಕೆ ಇರಲಿಲ್ಲ, ಇಬ್ಬರ ವೈಮನಸ್ಯ ತಾರಕಕ್ಕೇರಿತ್ತು. ಇಂದಿರಾ ಗಾಂಧಿ ಒಂದು ಪತ್ರವನ್ನು ಬರೆದರು ಮೊರಾರ್ಜಿಗೆ. ನಾನು ಯೋಜಿಸುತ್ತಿರುವ ಹೊಸ ಹಣಕಾಸು ನೀತಿ ನಿಮಗೆ ಇಷ್ಟವಾಗಿರಲಿಕ್ಕಿಲ್ಲ, I am taking over your portfolio of finance. ಈ ಅವಮಾನದಿಂದ ಮೊರಾರ್ಜಿ ಕೊನೆವರೆಗೂ ಇಂದಿರಾರನ್ನು ನಖಶಿಖಾಂತ ದ್ವೇಷಿಸಿದರು.

ಸ್ವಮೂತ್ರ ಪಾನಿ ಪ್ರಧಾನಿಯ ಮತ್ತೊಂದು ಘಟನೆ, ಆ.ಎ. 'Verghese ಬರೆದ First Draft' ಪುಸ್ತಕದಲ್ಲಿ ದಾಖಲಾಗಿದೆ. ಎಕನಾಮಿಸ್ಟ್ 'ಲಕ್ಷ್ಮೀಕಾಂತ್ ಝಾ' ಜತೆಗೆ ಮೊರಾರ್ಜಿ ದೇಸಾಯಿ ಕೆನಡಾಗೆ ಹೋಗಿದ್ದರು. ಮೊರಾರ್ಜಿ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದಾಗ 'ಪಾನ್ ನಿಷೇಧ' ಕಾಯ್ದೆಯನ್ನು ತಂದಂತಹ ವ್ಯಕ್ತಿ. ಅವರು ಸಾರಾಯಿಯನ್ನ ಕುಡಿಯುತ್ತಿರಲಿಲ್ಲ. ಸಾರಾಯಿ ಕುಡಿಯುವವರನ್ನು ಕೂಡ ಇಷ್ಟಪಡುತ್ತಿರಲಿಲ್ಲ. ನಿಮ್ಮ 'ಸಾರಾಯಿ ದ್ವೇಷ' ಗೊತ್ತು. ಸಾರಾಯಿಯನ್ನು ಕುಡಿಯದೆ ಅದನ್ನು ದ್ವೇಷಿಸುವುದು ಹೇಗೆ ಸಾಧ್ಯ ಅಂತ ಅವರ ಮನವೊಲಿಸಿ ಝಾ, ಮೊರಾರ್ಜಿಯನ್ನು ಒಂದು ನೈಟ್ ಕ್ಲಬ್‌ಗೆ ಕರೆದುಕೊಂಡು ಹೋಗುತ್ತಾರೆ. ಕ್ಲಬ್‌ನಲ್ಲಿ ಒಂದು ಹುಡುಗಿ ಬಂದು ಮೊರಾರ್ಜಿಗೆ ಕೇಳುತ್ತಾರೆ, ವಾಟ್ ಡು ಯು ವಾಂಟ್ ಟು ಡ್ರಿಂಕ್? ಆಗ ಮೊರಾರ್ಜಿ ಹೇಳುತ್ತಾರೆ, ಐ ಡೋಂಟ್ ಡ್ರಿಂಕ್ ಅಂತ. ಎಷ್ಟೇ ಸಾಗಿ ಹಾಕಿದರೂ, ಹುಡುಗಿ ಕದಲದಿದ್ದಾಗ, ಮೊರಾರ್ಜಿ ಗುಡುಗುತ್ತಾರೆ. I dont like girls. ಅವಾಗ ಆ ಹುಡುಗಿ ಹೇಳುತ್ತಾಳೆ, ಹುಡುಗಿಯರನ್ನು ಇಷ್ಟಪಡದೆ ಇರುವವನು ಜೆಂಟಲ್ ಮ್ಯಾನ್ ಆಗಲು ಸಾಧ್ಯವೇ ಇಲ್ಲ ಅಂತ. ಇದು ಕೆನಡಾದ ನೈಟ್‌ಕ್ಲಬ್‌ನಲ್ಲಿ ನಡೆದ ಘಟನೆ. ಇದನ್ನು ಬೇಕಾದರೆ ಚಂದ್ರಮೌಳಿಯವರು ವರ್ಗೀಸ್ ಬರೆದ 'ಫಸ್ಟ್ ಡ್ರಾಫ್ಟ್' ಪುಸ್ತಕ ಓದಿ ಪರಾಮರ್ಶಿಸಬಹುದು.

ಮೊರಾರ್ಜಿಯ ಬಗ್ಗೆ ಹೇಳುವಂತಹ ತುಂಬಾ ಘಟನೆಗಳಿವೆ. ಅವರು ಕೂಡ ನೆಹರುವಿನಂತೆ nominated ಪ್ರಧಾನ ಮಂತ್ರಿ because of ಆಚಾರ್ಯ ಕೃಪಲಾನಿ ಮತ್ತು ಜೆಪಿ (ಜಯಪ್ರಕಾಶ). ಮೊರಾರ್ಜಿಯ ಪುತ್ರಮೋಹದ ಬಗ್ಗೆ ಒಂದು ಪುಸ್ತಕವಷ್ಟು ದಾಖಲೆಯಿದೆ. ಜಗಜೀವನ ರಾಮ್ ಮತ್ತು ಚೌಧರಿ ಚರಣ್ ಸಿಂಗ್ ಜತೆ ಪ್ರತಿ ದಿನವೂ argument ಮಾಡುತ್ತಿದ್ದ ಸ್ವಮೂತ್ರ ಪಾನಿಯ ಬಗ್ಗೆ ನಾನು ಪ್ರತಿವಾರವೂ ಕೂಡ ಬರೆಯಬಹುದು. 'But it is waste of my time and readers' time! ಕೊನೆಯದಾಗಿ, ಪಾಕಿಸ್ತಾನದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ನಿಶಾನ್-ಎ-ಪಾಕಿಸ್ತಾನ್ (ನಮ್ಮ ಭಾರತ ರತ್ನಕ್ಕೆ ಸಮಾನ) ಪ್ರಶಸ್ತಿಯನ್ನು ಭಾರತ ದೇಶದ 3 ವ್ಯಕ್ತಿಗಳಿಗೆ ನೀಡಲಾಗಿದೆ ಎಂಬುದು ಗಮನಾರ್ಹ ಸಂಗತಿ. ಒಂದು ಮೊರಾರ್ಜಿ ದೇಸಾಯಿ, ಮತ್ತೊಬ್ಬರು ಕಾಶ್ಮೀರ ಪ್ರತ್ಯೇಕತೆ ಹೋರಾಟಗಾರ Syde Ali Shah Geelani, ಮತ್ತೊಬ್ಬರು ಬೋಹ್ರಾ ಪಂಥದ ಧರ್ಮ ಗುರು Syedna Mufaddal Saifuddinn. ಇವಿಷ್ಟರಿಂದಲೇ ನಿಮಗೆ ಅರ್ಥವಾಗಬಹುದು, ಆ ಪಟ್ಟಿಯಲ್ಲಿ ಮೊರಾರ್ಜಿ ದೇಸಾಯಿ ಅವರ ಹೆಸರು ಯಾಕಿದೆ? ಈ ವಿಷಯವನ್ನು ಹಿಂದಿನ ಲೇಖನದೊಂದಿಗೆ ಹೋಲಿಕೆ ಮಾಡಿದರೆ ಓದುಗರಿಗೆ ಹೆಚ್ಚಿನ ಸ್ಪಷ್ಟತೆ ದೊರಕುತ್ತೆ.ರಾಮಾಯಣವನ್ನು ರಾಮನು ಬರೆಯಲಿಲ್ಲ, ಮಹಾಭಾರತ ವನ್ನು ಕೃಷ್ಣನು ಬರೆಯಲಿಲ್ಲ. ಮೊರಾರ್ಜಿಯನ್ನು ಹತ್ತಿರದಿಂದ ಕಂಡವರೇ ಅವರ ಬಗ್ಗೆ ಬರೆದಿದ್ದಾರೆ. ನಾವು ಓದುತ್ತಿರುವ ಇತಿಹಾಸ, ಎಲ್ಲೆಲ್ಲಿಂದಲೋ ಭಾರತಕ್ಕೆ ಬಂದ ಪ್ರವಾಸಿಗಳು ಬರೆದ ಪುಸ್ತಕದ ಆಧಾರದ ಮೇಲೆಯೇ. ನಮಗೆ ಬೇಕಾದ್ದನ್ನು ಮಾತ್ರ ತಿರುಚಿ ಉಳಿದಿದ್ದನ್ನು ಬಿಸಾಡುವುದು ಒಳ್ಳೆಯ ಜಾಯಮಾನವಲ್ಲ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 99

ಸಮಾಚಾರ ಸಣ್ಣದಲ್ಲ

ಖೇರಾಗೆ ಜಾಮೀನಿಲ್ಲ: ಗುವಾಹಟಿ ಹೈಕೋರ್ಟ್

ಗುವಾಹಟಿ: ಕಾಂಗ್ರೆಸ್ ಪ್ರಮುಖ ನಾಯಕರಲ್ಲೊಬ್ಬರಾದ ಪವನ್ ಖೇರಾಗೆ ಅಸ್ಸಾಂ ಮುಖ್ಯಮಂತ್ರಿ, ಹಿಮಂತ ಬಿಸ್ವಾ ಶರ್ಮಾ ಅವರ ಪತ್ನಿ ರಿನಿಕಿ ಭುಯಾನ್ ಶರ್ಮಾ ದಾಖಲಿಸಿರುವ ಮಾನಹಾನಿ ಕೇಸ್‌ನಲ್ಲಿ ನಿರೀಕ್ಷಣಾ ಜಾಮೀನು

ನೀಡಲು ಗುವಾಹಟಿ ಹೈಕೋರ್ಟ್ ನಿರಾಕರಿಸಿದೆ. ಖೇರಾ ಅವರಿಗೆ ಈಗ ಬಂಧನ ಭೀತಿ ಎದುರಾಗಿದೆ. ಪ್ರಕರಣದಲ್ಲಿ ಖೇರಾ ಈಗ ಸುಪ್ರೀಂ ಕೋರ್ಟ್ ಮೊರೆ ಹೋಗುವ ಸಾಧ್ಯತೆ ಇದೆ. ಮಂಗಳವಾರ ಎರಡೂ ಕಡೆಯ ವಾದ-ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಪಾರ್ಥಿವಜ್ಯೋತಿ ಸೈಕಿಯ ಅವರ ಪೀಠ ತೀರ್ಪು ಕಾಯ್ದಿರಿಸಿತ್ತು. ಶುಕ್ರವಾರ ಅಂತಿಮ ಆದೇಶ ಹೊರಡಿಸಿದ ನ್ಯಾಯಾಲಯ, ಖೇರಾಗೆ ಜಾಮೀನು ನೀಡಲು ನಿರಾಕರಿಸಿತು. ಈಗಾಗಲೇ ಪ್ರಧಾನಿ ಮೋದಿ ಅವರ ಹೆಸರಿನ ಕುರಿತ ಹೇಳಿಕೆಗಾಗಿ ಕಾನೂನು ಹೋರಾಟ ನಡೆಸುತ್ತಿರುವ ಪವನ್ ಖೇರಾಗೆ, ಅಸ್ಸಾಂ ಪ್ರಕರಣ ಮತ್ತೊಂದು ತಲೆನೋವಾಗಿದೆ.

ಬಲೂಚಿಸ್ತಾನ್ ಗಣಿಗೆ ಉಗ್ರ ದಾಳಿ: 10 ಬಲಿ

ಬಲೂಚ್: ಪಾಕಿಸ್ತಾನದ ನೈಋತ್ಯದಲ್ಲಿನ ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ತಾಮ್ರ ಮತ್ತು ಚಿನ್ನದ ಗಣಿ ಮೇಲೆ ಭಯೋತ್ಪಾದಕರು ಗುರುವಾರ ದಾಳಿ ನಡೆಸಿದ್ದು 10 ಕಾರ್ಮಿಕರು ಸಾವನ್ನಪ್ಪಿದ್ದಾರೆ. ಮತ್ತೊಬ್ಬ ಟರ್ಕಿಶ್ ಕಾರ್ಮಿಕನನ್ನು ಒತ್ತೆಯಾಳಾಗಿ ಇರಿಸಿಕೊಂಡಿದ್ದಾರೆ. ಒಬ್ಬ ಟರ್ಕಿಶ್ ಪ್ರಜೆ, 6 ಕಾರ್ಮಿಕರು ಮತ್ತು ಮೂವರು ಕಾವಲುಗಾರರು ಸೇರಿ ಒಟ್ಟು 10 ಜನರು ಸಾವನ್ನಪ್ಪಿದ್ದು ಮೃತದೇಹ ಗಳನ್ನು ದಲ್ಬಂದಿನ್‌ನ ಪ್ರಿನ್ಸ್ ಫಹಾದ್ ಆಸ್ಪತ್ರೆಗೆ ಸಾಗಿಸಲಾಗಿದೆ. ಗಣಿಗಾರಿಕೆ ಸ್ಥಳದಲ್ಲಿ ತಾಮ್ರ, ಚಿನ್ನ, ಸೀಸ ಮತ್ತು ಸತು ನಿಕ್ಷೇಪಗಳು ಪತ್ತೆಯಾಗಿವೆ ಎಂಬ ವರದಿ ಇತ್ತೀಚೆಗೆ ಪ್ರಕಟವಾಗಿತ್ತು. ಅದಾದ ಬಳಿಕವೇ ಉಗ್ರರು ಟಾರ್ಗೆಟ್ ಮಾಡಿ ಗಣಿ ಮೇಲೆ ದಾಳಿ ನಡೆಸಿದ್ದಾರೆ. ನ್ಯಾಷನಲ್ ರಿಸೋರ್ಸಸ್ ಲಿ.(ಎನ್‌ಆರ್‌ಎಲ್) ಗಣಿಗಾರಿಕೆ ನಡೆಸುವ ಚಾಗೈ ಜಿಲ್ಲೆಯ ದರಿಗ್ವಾನ್ ಸ್ಥಳದಲ್ಲಿ ಈ ದಾಳಿ ನಡೆದಿದೆ ಎಂದೂ ಬಲೂಚ್ ಅಧಿಕಾರಿಗಳು ತಿಳಿಸಿದ್ದಾರೆ.

ತಿರುಪತಿದರ್ಶನ ಟಿಕೆಟ್ ಜುಲೈ ಕೋಟಾ ಪ್ರಕಟ

ತಿರುಪತಿ: ವಿಶ್ವಪ್ರಸಿದ್ಧ ಪುಣ್ಯಕ್ಷೇತ್ರ ತಿರುಮಲ ತಿರುಪತಿಯಲ್ಲಿನ ಶ್ರೀ ವೆಂಕಟೇಶ್ವರ ಸ್ವಾಮಿಯ ದರ್ಶನಕ್ಕೆ ಜುಲೈ ತಿಂಗಳ ದರ್ಶನ ಕೋಟಾವನ್ನು ಶುಕ್ರವಾರ ಪ್ರಕಟಿಸಲಾಗಿದೆ. 300 ರು. ವಿಶೇಷ ಪ್ರವೇಶ-ದರ್ಶನ ಹಾಗೂ ಕೊಠಡಿ ಬುಕಿಂಗ್‌ಗಾಗಿ



ಟಿಕೆಟ್ ಕಾಯ್ದಿರಿಸುವ ಪ್ರಕ್ರಿಯೆ ಶುಕ್ರವಾರ ಬೆಳಗ್ಗೆ 10 ಗಂಟೆಗೂ, ಕೊಠಡಿಗಳ ಬುಕ್ಕಿಂಗ್ ಮಧ್ಯಾಹ್ನ 3ರಿಂದಲೂ ಆರಂಭವಾಗಿದೆ. ಜುಲೈನಲ್ಲಿ ತಿಮ್ಮಪ್ಪನ ದರ್ಶನಕ್ಕೆ ಯೋಜಿಸುತ್ತಿದ್ದರೆ ಭಕ್ತರು ಮಧ್ಯವರ್ತಿಗಳ ಮೊರೆಹೋಗದೆ ನೇರವಾಗಿ ಆನ್‌ಲೈನ್ ಮೂಲಕವೇ ಟಿಕೆಟ್ ಕಾಯ್ದಿರಿಸಬಹುದಾಗಿದೆ. ಟಿಟಿಡಿ ಅಧಿಕೃತ ವೆಬ್‌ಸೈಟ್ (ttdevasthanams.ap.gov.in) ಮೂಲಕವೇ ಟಿಕೆಟ್ ಬುಕ್ಕಿಂಗ್ ಮಾಡಲು ಸೂಚಿಸಲಾಗಿದೆ. ಬೇಸಿಗೆ ಶಾಲಾ ರಜೆ ಕಾರಣ ಪ್ರವಾಸಿಗರ ಸಂಖ್ಯೆ ಅಧಿಕವಾಗಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಟಿಟಿಡಿ ತಿಳಿಸಿದೆ.

ಸದ್ಯಕ್ಕೆ ಇರಾನ್‌ಗೆ ಪ್ರಯಾಣ ಸಲ್ಲದು

ದೆಹಲಿ: ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಉದ್ವಿಗ್ನತೆ ಮುಂದುವರಿದಿರುವ ಕಾರಣ ಇರಾನ್‌ಗೆ ಅನಗತ್ಯ ಸಂಚಾರ ಮಾಡದಿರಿ ಎಂದು ಭಾರತೀಯರಿಗೆ ಟೆಹರಾನ್‌ನಲ್ಲಿನ ಭಾರತೀಯ ರಾಯಭಾರ ಕಚೇರಿ ಶುಕ್ರವಾರ ಸಲಹೆ ನೀಡಿದೆ. ಭಾರತೀಯರು ಸದ್ಯ ಇರಾನ್‌ಗೆ ಪ್ರಯಾಣಿಸುವುದನ್ನು ತಪ್ಪಿಸಬೇಕು. ಈಗಾಗಲೇ ಇರಾನ್‌ಗೆ ಬಂದಿರುವವರು ರಾಯಭಾರ ಕಚೇರಿ ಜತೆ ಸಮನ್ವಯದಿಂದಿದ್ದು, ಆದಷ್ಟು ಬೇಗ ಇರಾನ್‌ನಿಂದ ಹೊರಡುವಂತೆ ರಾಯಭಾರ ಕಚೇರಿ ಸೂಚನೆ ನೀಡಿದೆ. ಅಲ್ಲದೇ, ಪ್ರಸ್ತುತ ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳು ಗೊತ್ತುಪಡಿಸಿದ ಭೂ ಗಡಿ ಮಾರ್ಗವಾಗಿಯೇ ಇರಾನ್‌ನಿಂದ ಹೊರಡಬೇಕು ಎಂದೂ ಸೂಚಿಸಲಾಗಿದೆ. ಭಾರತ-ಇರಾನ್ ನಡುವೆ ಕೆಲವು ವಿಮಾನಯಾನ ಸಂಸ್ಥೆಗಳು ವಿಮಾನ ಸಂಚಾರ ಸೇವೆ ಆರಂಭಿಸಲಿವೆ ಎಂಬ ವರದಿಗಳನ್ನು ಗಮನದಲ್ಲಿಟ್ಟುಕೊಂಡು, ಭಾರತೀಯರು ವಿಮಾನ ಅಥವಾ ಭೂ ಮೂಲಕ ಇರಾನ್‌ಗೆ ಪ್ರಯಾಣಿಸಬಾರದು.

{ ಹಿಮಂತ ಬಿಸ್ವಾ ಶರ್ಮಾ } ಅಸ್ಸಾಂ ಸಿಎಂ

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಿಂದೂಗಳನ್ನು ಕಡೆಗಣಿಸುತ್ತಿದ್ದಾರೆ. ಮಮತಾ ದೀದಿ ಸದಾ ವೇದಿಕೆ ಭಾಷಣದಲ್ಲಿ 'ಇನ್ಶಾ ಅಲ್ಲಾ', 'ಖುದಾ ಹಫೀಜ್' ಎಂದು ಹೇಳುತ್ತಲೇ ಇರುತ್ತಾರೆ. ಕೆಲವು ಬಾರಿಯಾದರೂ 'ಜೈ ಶ್ರೀರಾಮ್' ಎಂದು ಹೇಳುವುದನ್ನು ಕಲಿಯಬೇಕು. ದೇವತೆಯರಾದ ದುರ್ಗಾ, ಕಾಳಿ ಹೆಸರನ್ನು ತೆಗೆದುಕೊಳ್ಳಬೇಕು.

ಮಹಿಳೆ ನಮಾಜ್ ಮಾಡಲು ಮಸೀದಿ ಪ್ರವೇಶಕ್ಕೆ ಅವಕಾಶ

ಆದರೆ, ಮುಖ್ಯ ಅಥವಾ ನಿಗದಿತ ದ್ವಾರದಲ್ಲಿ ಪ್ರವೇಶಕ್ಕೆ ಅವಕಾಶವಿಲ್ಲ: ಎಐಎಂಪಿಎಲ್‌ಬಿ
9 ನ್ಯಾಯಮೂರ್ತಿಗಳ ಪೂರ್ಣ ಸಂವಿಧಾನ ಪೀಠದೆದುರು ಹೇಳಿಕೆ ದಾಖಲಿಸಿದ ಮಂಡಳಿ

ದೆಹಲಿ: ಮುಸ್ಲಿಂ ಮಹಿಳೆಯರು ನಮಾಜ್ ಮಾಡಲು ಮಸೀದಿ ಪ್ರವೇಶಿಸುವುದಕ್ಕೆ ಯಾವುದೇ ನಿರ್ಬಂಧ ಇಲ್ಲ. ಆದರೆ, ಮುಖ್ಯ ದ್ವಾರದಲ್ಲಿ ಪ್ರವೇಶಿಸಲು ಅವಕಾಶವಿಲ್ಲ ಎಂದು 'ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ'(ಎಐಎಂಪಿಎಲ್‌ಬಿ)

ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ಹೇಳಿಕೆ ಸಲ್ಲಿಸಿದೆ.

ಮಹಿಳೆ ನಮಾಜ್‌ಗಾಗಿ ಮಸೀದಿ ಪ್ರವೇಶಿಸಬಹುದು. ಆದರೆ ನಿರ್ದಿಷ್ಟ ಬಾಗಿಲಿನ ಮೂಲಕವೇ ಪ್ರವೇಶ ಅವಕಾಶಕ್ಕಾಗಿ ಒತ್ತಾಯಿಸಲಾಗದು. ಅಲ್ಲದೇ, ಪುರುಷ-ಮಹಿಳೆ ಬೇರ್ಪಡಿಸುವ ಅಡ್ಡಪರದೆಗಳನ್ನು ತೆಗೆದುಹಾಕಲು ಸಾಧ್ಯವಿಲ್ಲ ಎಂದು 'ಎಐಎಂಪಿಎಲ್‌ಬಿ' ಶಬರಿಮಲೆಯಲ್ಲಿನ ಅಯ್ಯಪ್ಪ ದೇಗುಲಕ್ಕೆ ಮಹಿಳೆಯರ ಪ್ರವೇಶ ಕೋರಿದ ಅರ್ಜಿಗಳ ವಿಚಾರಣೆ ನಡೆಸುತ್ತಿರುವ 9 ನ್ಯಾಯಮೂರ್ತಿಗಳ ಪೂರ್ಣ ಪ್ರಮಾಣದ ಸಂವಿಧಾನ ಪೀಠಕ್ಕೆ ಈ ಹೇಳಿಕೆ ನೀಡಿದೆ.

ಸಂವಿಧಾನ ಪೀಠದ ನೇತೃತ್ವ ವಹಿಸಿದ್ದ ಭಾರತದ ಮುಖ್ಯ ನ್ಯಾಯಮೂರ್ತಿ(ಸಿಜೆಐ) ಸೂರ್ಯಕಾಂತ್ ಅವರು ಮಹಿಳೆಗೆ ಮಸೀದಿ ಪ್ರವೇಶಿಸಲು ಅವಕಾಶ ಇದೆಯೇ? ಎಂದು ಪ್ರಶ್ನೆ ಮಾಡಿದಾಗ, ಮಹಿಳೆ ಮಸೀದಿ ಪ್ರವೇಶಿಸುವುದನ್ನು ಇಸ್ಲಾಂನಲ್ಲಿ ನಿರ್ಬಂಧಿಸಿಲ್ಲ. ಮಹಿಳೆ ಬಯಸಿದರೆ ಮಸೀದಿಗೆ ಹೋಗಬಹುದು. ಪ್ರವಾದಿ ಮಹಮ್ಮದ್ ಅವರೇ ಮಹಿಳೆ ಮಸೀದಿ ಪ್ರವೇಶವನ್ನು ತಡೆಯಬಾರದು ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಈ ಬಗ್ಗೆ ಎಲ್ಲಾ ಇಸ್ಲಾಮಿಕ್ ಪಂಗಡಗಳಲ್ಲಿಯೂ ಒಮ್ಮತವಿದೆ ಎಂದು 'ಎಐಎಂಪಿಎಲ್‌ಬಿ' ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಎಂ.ಆರ್.ಶಂಶಾದ್ ಉತ್ತರಿಸಿದರು.

ಮಹಿಳೆಗೆ ಯಾವುದೇ ನಿರ್ಬಂಧವಿಲ್ಲದೆ ಮಸೀದಿ ಪ್ರವೇಶಿಸಿ ಪ್ರಾರ್ಥನೆ ಮಾಡಲು ಅವಕಾಶ ನೀಡಬೇಕು ಎಂದು ಆದೇಶಿಸುವಂತೆ ಕೋರಿ ಸಲ್ಲಿಸಲಾಗಿರುವ ರಿಟ್ ಅರ್ಜಿ ವಿಚಾರಣೆ ಸಂದರ್ಭ ಎಂ.ಆರ್.ಶಂಶಾದ್, ಪೀಠದೆದುರು ಈ ಹೇಳಿಕೆ ದಾಖಲಿಸಿದರು.

ಇಸ್ಲಾಂ ಧರ್ಮ ಸಂಪೂರ್ಣ ಲಿಖಿತ ರೂಪದಲ್ಲಿದೆ. ಯಾವುದಕ್ಕೆ ನಿಷೇಧವಿದೆ, ಯಾವ ನಿಯಮ ಕಡ್ಡಾಯವಿದೆ ಮತ್ತು ಯಾವುದನ್ನು ಶಿಫಾರಸು ಮಾಡಲಾಗಿದೆ ಎಂಬ ಕುರಿತು ಸ್ಪಷ್ಟ ಮತ್ತು ವಿವರವಾದ ಮಾರ್ಗದರ್ಶನವನ್ನು ಇಸ್ಲಾಂ ಧರ್ಮ ಹೊಂದಿದೆ. ಇಸ್ಲಾಂ ಧಾರ್ಮಿಕ ಆಚರಣೆಗಳನ್ನು ಸ್ಪಷ್ಟವಾಗಿ ವರ್ಗೀಕರಣ ಮಾಡಲಾಗಿದೆ. ಹಾಗಾಗಿ 'ಇಆರ್‌ಪಿ' ಪರೀಕ್ಷೆ ಅನ್ವಯಿಸುವಾಗ ಇಸ್ಲಾಂನಲ್ಲಿನ ಈ ರಚನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು ಎಂದು ಪೀಠದ ಗಮನ ಸೆಳೆದರು.

ಮುಸ್ಲಿಂ ಮಹಿಳೆಯರು ಮಸೀದಿ ಪ್ರವೇಶಿಸಲು, ಪ್ರಾರ್ಥನೆ ಸಲ್ಲಿಸಲು ಅನುಮತಿ ಇದೆ. ಈ ಬಗ್ಗೆ ಇಸ್ಲಾಮಿಕ್ ಪಂಗಡಗಳಲ್ಲಿ ಯಾವುದೇ ವಿವಾದ ಇಲ್ಲ. ಇಸ್ಲಾಂ ಪಂಗಡಗಳಲ್ಲಿ ಪ್ರಾರ್ಥನೆಗಾಗಿ ಯಾವುದೇ ಜಗಳವಿಲ್ಲ. ಆದರೆ ಕೆಲವು ಶಿಸ್ತು ಕಡ್ಡಾಯ ಅನುಸರಿಸಬೇಕು. ಮಸೀದಿಯಲ್ಲಿ ಗರ್ಭಗುಡಿ ರೀತಿಯ ಸ್ಥಳ ಎಂಬುದು ಇರುವುದಿಲ್ಲ. ದರ್ಗಾಗಳಲ್ಲಿ ಮಾತ್ರ ಇರುತ್ತದೆ. ಆದ ಕಾರಣ, ಯಾವುದೇ ವ್ಯಕ್ತಿ ಮಸೀದಿಯೊಳಗೆ ನಿರ್ದಿಷ್ಟ ಸ್ಥಳದಲ್ಲಿಯೇ ನಿಲ್ಲುವುದಕ್ಕೆ ಅಥವಾ ಪ್ರಾರ್ಥನೆ ಸಲ್ಲಿಸುವ ಹಕ್ಕನ್ನು ಪಡೆಯುವುದಕ್ಕೆ ಒತ್ತಾಯ ಮಾಡಲು ಸಾಧ್ಯವಿಲ್ಲ ಎಂದು ಶಂಶಾದ್ ಪೀಠಕ್ಕೆ ಅರುಹಿದರು.

ಮಸೀದಿ ಸಭೆಯ ಭಾಗವಾಗಬಹುದೇ?

ಮಸೀದಿ ಪ್ರವೇಶಿದ ಮಹಿಳೆ ಅಲ್ಲಿನ ಧಾರ್ಮಿಕ ಸಭೆಯ ಭಾಗ ಆಗಬಹುದೇ? ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಪ್ರಶ್ನೆ ಮಾಡಿದರು. ಮಹಿಳೆ ಮಸೀದಿ ಪ್ರವೇಶಿಸಿದಾಗ ಸಭೆಯ ಪ್ರಾರ್ಥನೆಯಲ್ಲಿ ಭಾಗವಹಿಸುತ್ತಾರೆ. ಅವರು ಸಭೆಯ ಭಾಗವಾಗುತ್ತಾರೆ ಎಂದು ವಕೀಲ ಶಂಶಾದ್ ಉತ್ತರಿಸಿದರು. ಅವರಿಗೆ ಮಸೀದಿ ಸಭೆಯಲ್ಲಿ ಭಾಗವಹಿಸುವುದಕ್ಕೆ ಅನುಮತಿ ಇದೆ ಎಂದು ಹೇಳಿದ ಶಂಶಾದ್, ಆದರೆ, ಮಹಿಳೆ ಮಸೀದಿಯಲ್ಲಿನ ಸಭೆಗೆ ಹಾಜರಾಗುವುದು ಉತ್ತಮವಲ್ಲ ಎಂದೂ ಅಭಿಪ್ರಾಯಪಟ್ಟರು.

ನ್ಯಾ. ಸೂರ್ಯ ಕಾಂತ್

ನ್ಯಾ.ಅಮಾನುಲ್ಲಾ

ಮಹಿಳೆ ಮನೆಯಲ್ಲಿಯೇ ಪ್ರಾರ್ಥನೆ ಸಲ್ಲಿಸಲಿ ಎಂಬುದರ ಹಿಂದೆ ವಾಸ್ತವಿಕ ಕಾರಣಗಳಿರಬಹುದೇ? ಮನೆಯಲ್ಲಿದ್ದವರೆಲ್ಲರೂ ಮಸೀದಿಗೆ ಹೋದರೆ, ಮಕ್ಕಳನ್ನು ನೋಡಿಕೊಳ್ಳಲು ಯಾರಾದರೂ ಮನೆಯಲ್ಲಿ ಇರಬೇಕಾಗುತ್ತದೆ ಎಂಬ ಉದ್ದೇಶವೇನಾದರೂ ಇರಬಹುದೇ? ಎಂದು ನ್ಯಾ.ಅಮಾನುಲ್ಲಾ ಅವರು ಶಂಶಾದ್ ಅವರಿಗೆ ಪ್ರಶ್ನೆ ಮಾಡಿದರು.

ವಾಟ್ಸಾಪ್ ಯುನಿವರ್ಸಿಟಿ!?

ಈ ಮಧ್ಯೆ, ಕಾಂಗ್ರೆಸ್ ಸಂಸದ ಶಶಿತರೂರ್ ಅವರು ಧಾರ್ಮಿಕ ನಂಬಿಕೆ, ಶ್ರದ್ಧೆಗೆ ಸಂಬಂಧಿಸಿದ ವಿಚಾರಗಳಲ್ಲಿ ನ್ಯಾಯಾಲಯಗಳು ಮಧ್ಯಪ್ರವೇಶಿಸಬಾರದು ಎಂದು ಹೇಳಿರುವುದನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಉಲ್ಲೇಖಿಸಿದರು.

ಆಗ ಹಿರಿಯ ವಕೀಲ ನೀರಜ್ ಕಿಶನ್ ಕೌಲ್ ಅವರು, ಜ್ಞಾನವಂತರು, ವಿಶ್ವವಿದ್ಯಾಲಯಗಳು ಮೊದಲಾದೆಡೆಯಿಂದ ಬರುವ ಅನುಭವ ನುಡಿಗಳನ್ನು ಪರಿಗಣಿಸುವುದಕ್ಕೆ ಯಾವುದೇ ಸಮಸ್ಯೆ ಇಲ್ಲ ಎಂದು ಪ್ರತಿಕ್ರಿಯಿಸಿದರು. ಅದಕ್ಕೆ ಸಂವಿಧಾನ ಪೀಠದಲ್ಲಿರುವ ಏಕಮೇವ ಮಹಿಳಾ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಥಟ್ಟನೆ 'ವಾಟ್ಸಾಪ್ ಯುನಿವರ್ಸಿಟೀಸ್‌ಗಳಿಂದ ಬರುವ ಮಾಹಿತಿಗಳನ್ನು ನಂಬಲಾಗದು. ಹಾಗಾಗಿ ಯಾವುದೇ ಕಾರಣ ಅವುಗಳನ್ನು ಸ್ವೀಕರಿಸಲೂ ಆಗದು' ಎಂದು ಕಟುವಾಗಿ ಪ್ರತಿಕ್ರಿಯಿಸಿದರು.

ಮಹಿಳಾ ನ್ಯಾ. ಬಿ.ವಿ.ನಾಗರತ್ನ

'ಸಾಮೂಹಿಕ ನಮಾಜ್'ಗೆ ಮಹಿಳೆ ಭಾಗವಹಿಸಬೇಕಿಲ್ಲ

ಮುಸ್ಲಿಂ ಮಹಿಳೆಯರು ವಿಶೇಷ ಸಂದರ್ಭಗಳಲ್ಲಿ ಸಾಮೂಹಿಕ ನಮಾಜ್‌ಗಳಲ್ಲಿ ಭಾಗವಹಿಸುವುದು ಅನಿವಾರ್ಯ ಅಲ್ಲ. ಈ ಕುರಿತೂ ಎಲ್ಲಾ ಇಸ್ಲಾಮಿಕ್ ಪಂಗಡ ಗಳಲ್ಲಿಯೂ ಒಮ್ಮತವಿದೆ ಎಂದು ಹಿರಿಯ ವಕೀಲ ಶಂಶಾದ್ ಅವರು ಸಂವಿಧಾನ ಪೀಠಕ್ಕೆ ತಿಳಿಸಿದರು.

ಹಿರಿಯ ವಕೀಲ ಶಂಶಾದ್

ಇದೇ ವೇಳೆ, ಸಂವಿಧಾನ ಪೀಠದಲ್ಲಿದ್ದ ನ್ಯಾಯಮೂರ್ತಿ ಅಹ್ಸಾನುದ್ದೀನ್ ಅಮಾನುಲ್ಲಾ ಅವರು, ಇಸ್ಲಾಂನಲ್ಲಿ ಮೊದಲಿನಿಂದಲೂ ಮಹಿಳೆ ಮಸೀದಿ ಪ್ರವೇಶಿಸುವ ವಿಚಾರದಲ್ಲಿ ಯಾವುದೇ ವಿವಾದ ಇಲ್ಲ. ಮತ್ತು ಈ ಪದ್ಧತಿ ಪ್ರವಾದಿ ಅವರ ಕಾಲದಿಂದಲೂ ಇದೆ ಎಂಬುದನ್ನು ಸಾಂದರ್ಭಿಕವಾಗಿ ಉಲ್ಲೇಖಿಸಿದರು.

ಈ ಮಾತಿಗೆ ಸಮ್ಮತಿ ವ್ಯಕ್ತಪಡಿಸಿದ ವಕೀಲ ಶಂಶಾದ್ ಅವರು, ಮಹಿಳೆ ಮಸೀದಿಗೆ ಬರುವುದನ್ನು ತಡೆಯಬಾರದು ಎಂದು ಪ್ರವಾದಿ ಸ್ಪಷ್ಟವಾಗಿ ಹೇಳಿದ್ದಾರೆ.

ಆದರೆ, ಪುರುಷರು ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ. ಮಹಿಳೆಯರಿಗೆ ಅದು ಕಡ್ಡಾಯವಲ್ಲ. ಏಕೆಂದರೆ, ಮಹಿಳೆ ಮನೆಯಲ್ಲಿ ಪ್ರಾರ್ಥನೆ ಮಾಡುವುದೇ ಉತ್ತಮ. ಅಲ್ಲಿ ಅವರಿಗೆ ಅದೇ ಧಾರ್ಮಿಕ ಪ್ರತಿಫಲ ಸಿಗುತ್ತದೆ. ಆದಾಗ್ಯೂ, ಒಬ್ಬ ಮಹಿಳೆ ಮಸೀದಿಗೆ ಹೋಗಲು ಆಯ್ಕೆ ಮಾಡಿಕೊಂಡರೆ, ಆಕೆಗೆ ಹಾಗೆ ಮಾಡಲು ಅನುಮತಿ ಇದೆ ಎಂದು ಹೇಳಿದರು.

ಅಮೆರಿಕದ ಹಡ್ಸನ್ ಇನ್‌ಸ್ಟಿಟ್ಯೂಟ್‌ನಲ್ಲಿ ಆರೆಸ್ಸೆಸ್ ಸಹಕಾರ್ಯವಾಹ ಸಂವಾದ

ಪ್ರಗತಿ ಪಥದಲ್ಲಿರುವ ಭಾರತ: ಹೊಸಬಾಳೆ

ಅಮೆರಿಕದ ಹಡ್ಸನ್ ಇನ್‌ಸ್ಟಿಟ್ಯೂಟ್‌ನಲ್ಲಿ ಗುರುವಾರ ವಾಲ್ಟರ್ ರಸೆಲ್ ಮೀಡ್ ಜತೆ ಸಂವಾದದಲ್ಲಿ ದತ್ತಾತ್ರೇಯ ಹೊಸಬಾಳೆ.

ವಾಷಿಂಗ್ಟನ್: ಭಾರತ ಈಗ ತಂತ್ರಜ್ಞಾನದ ಕೇಂದ್ರ. ವಿಶ್ವದ ದೊಡ್ಡ ಆರ್ಥಿಕತೆಗಳಲ್ಲೊಂದು. ಆದರೆ, ಭಾರತದ ಈ ಚಿತ್ರಣವನ್ನು ಪಾಶ್ಚಿಮಾತ್ಯರು ಈಗಲೂ ಹಳೆ ದೃಷ್ಟಿಕೋನದಿಂದ ನೋಡುತ್ತಿರುವುದು ಸರಿಯಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದ್ದಾರೆ.

ಅಮೆರಿಕದ ಹಡ್ಸನ್ ಇನ್‌ಸ್ಟಿಟ್ಯೂಟ್‌ನಲ್ಲಿ ಗುರುವಾರ ಆಯೋಜಿಸಿದ್ದ 'ನವ ಭಾರತ ಸಮ್ಮೇಳನ'ದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಆರ್‌ಎಸ್‌ಎಸ್ ಮತ್ತು ಭಾರತದ ಬಗ್ಗೆ ಪಾಶ್ಚಿಮಾತ್ಯ ದೇಶಗಳಲ್ಲಿನ ತಪ್ಪು ಕಲ್ಪನೆಗಳ ಕುರಿತು 'ಹೀಗೇಕೆ'? ಎಂದು ಪ್ರಶ್ನೆ ಮಾಡಿದರು. ಭಾರತದ ಈಗಿನ ಸ್ಥಿತಿ ವಿವರಿಸಿದರು.

ಆಧುನಿಕ ತಂತ್ರಜ್ಞಾನ, ಉದ್ಯಮಶೀಲತೆ ಮತ್ತು ವೇಗವಾದ ಆರ್ಥಿಕ ಪ್ರಗತಿಯಿಂದಾಗಿ ಭಾರತ ಈಗ ಪ್ರಗತಿಪರ ಮತ್ತು ಆತ್ಮವಿಶ್ವಾಸದಿಂದ ತುಂಬಿದ ರಾಷ್ಟ್ರವಾಗಿದೆ. ಆದರೂ ಅಮೆರಿಕ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಭಾರತವನ್ನು ಇನ್ನೂ ಬಡ, ಹಿಂದುಳಿದ, ಹಳೆ ಚಿಂತನೆಯ ದೇಶ ಎಂದೇ ಕಾಣಲಾಗುತ್ತಿದೆ. ಈ ಗ್ರಹಿಕೆ ಪೂರ್ಣ ತಪ್ಪು ಎಂದರು.

ಅಮೆರಿಕದ 'ಕು ಕ್ಲುಕ್ಸ್ ಕ್ಲಾನ್' (ಕೆಕೆಕೆ) ಸಂಘಟನೆಗೆ ಆರ್‌ಎಸ್‌ಎಸ್ ಅನ್ನು ಹೋಲಿಸುವುದು ಬಲು ದೊಡ್ಡ ಅನ್ಯಾಯ. ಏಕೆಂದರೆ, ಆರ್‌ಎಸ್‌ಎಸ್ ಯಾವುದೇ ಜಾತಿ, ಸಮುದಾಯ ಅಥವಾ ಧರ್ಮದ ವಿರುದ್ಧ ದ್ವೇಷ ಹರಡುವ ಸಂಘಟನೆ ಅಲ್ಲ. ಅದು ಭಾರತದ ಪ್ರಾಚೀನ ನಾಗರಿಕತೆ, ಸಂಸ್ಕೃತಿ ಮತ್ತು ಮೌಲ್ಯಗಳಿಂದ ಪ್ರೇರಿತವಾದ ಸ್ವಯಂ ಸೇವಾ ಚಳವಳಿ. ಉತ್ತಮ ವ್ಯಕ್ತಿತ್ವದ ನಿರ್ಮಾಣ, ಚಾರಿತ್ರ್ಯ, ಶಿಸ್ತು, ನಾಯಕತ್ವ ಗುಣಗಳು ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಮೈಗೂಡಿಸಿಕೊಂಡ ನಾಗರಿಕರನ್ನು ಬೆಳೆಸುವುದೇ ಅದರ ಮುಖ್ಯ ಉದ್ದೇಶ ಎಂದು ವಿವರಿಸಿದರು.

ಸೇವಾ ಕಾರ್ಯಗಳಲ್ಲಿ ಆರ್‌ಎಸ್‌ಎಸ್

ವಾಲ್ಟರ್ ರಸೆಲ್ ಮೀಡ್ ಅವರ ಜತೆಗಿನ ಸಂವಾದದಲ್ಲಿ, ಹೊಸಬಾಳೆ ಆರ್‌ಎಸ್‌ಎಸ್‌ನ ತಳಮಟ್ಟದ ಕೆಲಸಗಳು ರಾಷ್ಟ್ರ ನಿರ್ಮಾಣಕ್ಕೆ ಬೆನ್ನೆಲುಬಾಗಿವೆ ಎಂದು ವಿವರಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು (ಆರ್‌ಎಸ್‌ಎಸ್ ಕಾರ್ಯಕರ್ತರು) ಹೆಸರಿಗೆ ತಕ್ಕಂತೆಯೇ ಪ್ರವಾಹ, ಭೂಕಂಪ, ಕರೋನಾ ಮೊದಲಾದ ಸಂಕಷ್ಟದ ಸಮಯಗಳಲ್ಲಿ ಧರ್ಮ, ಜಾತಿ, ಭಾಷೆ ಎಂಬ ಬೇಧಭಾವ ಮಾಡದೇ ಜನರ ರಕ್ಷಣೆಗೆ, ಸೇವೆಗೆ, ಆಹಾರ, ಔಷಧಿ, ಆಶ್ರಯ ಒದಗಿಸಲು ಶ್ರಮಿಸುತ್ತಾರೆ. ದೇಶಾದ್ಯಂತ 40ಕ್ಕೂ ಹೆಚ್ಚು ನಾಗರಿಕ ಸೇವಾ ಸಂಸ್ಥೆಗಳನ್ನು ಸ್ಥಾಪಿಸಿರುವ ಆರ್‌ಎಸ್‌ಎಸ್, ಶಿಕ್ಷಣ, ಆರೋಗ್ಯ, ಗ್ರಾಮೀಣ ಅಭಿವೃದ್ಧಿ, ಬಡವರ ಪುನರ್ವಸತಿಗಾಗಿ ನಿರಂತರ ಕೆಲಸ ಮಾಡುತ್ತಿದೆ ಎಂದು ವಿವರಿಸಿದರು.

ಪ.ಬಂಗಾಳದ ಆತ್ಮದಲ್ಲಿ ಗಂಗಾಮಾತೆ ಹರಿಯುತ್ತಾಳೆ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಬಿರುಸಿನಿಂದ ಚುನಾವಣಾ ಪ್ರಚಾರ ಕಾರ್ಯ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಸ್ವಲ್ಪ ಸಮಯ ಬಿಡುವು ಮಾಡಿಕೊಂಡು ಕೊಲ್ಕತ್ತಾದ ಹೂಗ್ಲಿ ನದಿಯಲ್ಲಿ ದೋಣಿ ಸಂಚಾರ ನಡೆಸಿದರು. ಜತೆಗೆ ಕೈಯಲ್ಲಿ ಕ್ಯಾಮರಾ ಹಿಡಿದು ನದಿ, ನದಿ ಪಾತ್ರ, ದಂಡೆ, ದಂಡೆಯಲ್ಲಿನ ಮರ ಗಿಡಗಳು, ಪಕ್ಷಿಗಳ ಹಾರಾಟ ದೃಶ್ಯಗಳ ಫೋಟೊ ತೆಗೆದು ಕ್ಯಾಮೆರಾದಲ್ಲಿ ಮನದಲ್ಲಿ ದಾಖಲಿಸಿಕೊಂಡರು. ಸ್ವಲ್ಪ ಸಮಯ ಹೂಗ್ಲಿ ನದಿ ತೀರದಲ್ಲಿಯೂ ಕಾಲ ಕಳೆದರು. ಬಳಿಕ ದೋಣಿ ಸಂಚಾರದ ಚಿತ್ರಗಳನ್ನು 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡರು.

ಪ್ರಧಾನಿ ಮೋದಿ ದೋಣಿ ಸಂಚಾರ ವೇಳೆ ಹಿನ್ನೆಲೆಯಲ್ಲಿ ವಿದ್ಯಾಸಾಗರ ಸೇತು ಕಾಣಿಸುತ್ತದೆ.

'ಪಶ್ಚಿಮ ಬಂಗಾಳದಲ್ಲಿನ ಪ್ರತಿ ವ್ಯಕ್ತಿಯ ಮನದಲ್ಲೂ ಗಂಗಾ ನದಿಗೆ ವಿಶೇಷ ಸ್ಥಾನವಿರುತ್ತದೆ. ಗಂಗಾ ನದಿ ಬಂಗಾಳದ ಆತ್ಮದ ಮೂಲಕ ಹರಿಯುತ್ತದೆ ಎಂದು ಹೇಳಬಹುದು. ಗಂಗಾಮಾತೆಯ ದೈವಿಸ್ವರೂಪದ ಜಲವು ಪೂರ್ಣ ನಾಗರಿಕತೆಯ ಶಾಶ್ವತ ಆತ್ಮವನ್ನು ಹೊತ್ತುಕೊಂಡಿದೆ. ಶುಕ್ರವಾರ ಬೆಳಗ್ಗೆ ಹೂಗ್ಲಿ ನದಿತೀರದಲ್ಲಿ ಸ್ವಲ್ಪ ಸಮಯ ಕಳೆದೆ. ಆಗ ಗಂಗಾಮಾತೆಗೆ ಕೃತಜ್ಞತೆ ಸಲ್ಲಿಸುವ ಅವಕಾಶ ಸಿಕ್ಕಿತು' ಎಂದು ಪ್ರಧಾನಿ ಮೋದಿ 'ಎಕ್ಸ್'ನಲ್ಲಿ ಮನದ ಮಾತು ಹಂಚಿಕೊಂಡಿದ್ದಾರೆ.

'ದೋಣಿ ನಡೆಸುವ ಪರಿಶ್ರಮಿಗಳು, ಬೆಳಗಿನ ವಾಯು ವಿಹಾರ ನಡೆಸುವವರನ್ನು ಭೇಟಿ ಮಾಡುವ ಅವಕಾಶವೂ ಸಿಕ್ಕಿತು. ಹೂಗ್ಲಿ ನದಿಯ ಮೇಲೆ, ಪಶ್ಚಿಮ ಬಂಗಾಳದ ಅಭಿವೃದ್ಧಿ ಮತ್ತು ಮಹಾನ್ ಬಂಗಾಳಿ ಜನರ ಸಮೃದ್ಧಿಗಾಗಿ ನಮ್ಮ ಪಕ್ಷದ ಬದ್ಧತೆಯನ್ನು ಪುನರುಚ್ಚರಿಸಿದ್ದೇವೆ' ಎಂದು ಮೋದಿ ಬರೆದಿದ್ದಾರೆ.

ಇದಕ್ಕೂ ಮುನ್ನ, ಸ್ವಾಮಿ ವಿವೇಕಾನಂದರು ಸ್ಥಾಪಿಸಿದ ಸಂಸ್ಥೆ 'ರಾಮಕೃಷ್ಣ ಮಿಷನ್'ನ ಮುಖ್ಯ ಕಚೇರಿ ಬೇಲೂರು ಮಠಕ್ಕೆ ಭೇಟಿ ನೀಡಿದ್ದರು. ಈ ಭೇಟಿ ತಮಗೆ ಅತ್ಯಂತ ವಿಶೇಷವಾದುದಾಗಿದೆ ಎಂದು ಮೋದಿ ಹೇಳಿದ್ದಾರೆ. ನಂತರ, ಹೌರಾದಿಂದ ಕೋಲ್ಕತ್ತ ನಗದ್ದವರೆಗೂ ರೋಡ್ ಶೋ ನಡೆಸಿದರು. ದೊಡ್ಡ ಪ್ರಮಾಣದ ಜನಸಮೂಹ ಮೋದಿ ಸ್ವಾಗತಕ್ಕೆ ನೆರೆದಿತ್ತು.

ಆನ್‌ಲೈನ್ ಗೇಮಿಂಗ್ ನಿಯಂತ್ರಣ ಹೊಸ ಕಾಯಿದೆ ಮೇ 1ರಿಂದ ಜಾರಿ

ದೆಹಲಿ: ದೇಶದ ನಾಗರಿಕರನ್ನು, ಮುಖ್ಯವಾಗಿ ಯುವ ಸಮೂಹವನ್ನು ಗುರಿಯಾಗಿಸಿಕೊಂಡು ಕೋಟ್ಯಂತರ ರು. ದೋಚುತ್ತಿರುವ ಆನ್‌ಲೈನ್ ಗೇಮಿಂಗ್ ಆಪ್‌ಗಳು, ಗೇಮಿಂಗ್ ಪ್ಲಾಟ್ ಫಾರ್ಮ್‌ಗಳನ್ನು ನಿಯಂತ್ರಿಸುವ ಸಲುವಾಗಿಯೇ ಕೇಂದ್ರ ಸರಕಾರ ಇದೇ ಮೇ 1ರಿಂದ ಹೊಸ ಆನ್‌ಲೈನ್ ನೀತಿಯನ್ನು ಜಾರಿಗೊಳಿಸುತ್ತಿದೆ. ಈ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಸಲುವಾಗಿ 'ಆನ್‌ಲೈನ್ ಗೇಮಿಂಗ್ ಅಥಾರಿಟಿ ಆಫ್ ಇಂಡಿಯ'(ಆನ್‌ಲೈನ್ ಆಟಗಳ ನಿಯಂತ್ರಣ ಪ್ರಾಧಿಕಾರ)ವನ್ನೂ ರಚಿಸುತ್ತಿದ್ದು, ಆ ಸಂಬಂಧ ಅಧಿಸೂಚನೆಯನ್ನು ಕೇಂದ್ರದ ಮಾಹಿತಿ ಮತ್ತು ತಂತ್ರಜ್ಞಾನ ಸಚಿವಾಲಯ ಇತ್ತೀಚೆಗೆ ಹೊರಡಿಸಿದೆ.

'ದಿ ಪ್ರೊಮೋಷನ್ ಅಂಡ್ ರೆಗ್ಯುಲೇಷನ್ ಆಫ್ ಆನ್‌ಲೈನ್ ಗೇಮಿಂಗ್ ಆಕ್ಟ್-2025' ಮೇ 1ರಂದು ಜಾರಿಗೊಳ್ಳುತ್ತಿದೆ. ಇದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕೇಂದ್ರದ 'ಎಲೆಕ್ಟ್ರಾನಿಕ್ಸ್ ಅಂಡ್ ಇನ್‌ಫರ್ಮೇಷನ್ ಟೆಕ್ನಾಲಜಿ', 'ಗೃಹ ಸಚಿವಾಲಯ', ವಿತ್ತ ಸಚಿವಾಲಯ, ಮಾಹಿತಿ ಮತ್ತು ಪ್ರಸಾರ ಸಚಿವಾಲಯ, ಯುವಜನ ವ್ಯವಹಾರಗಳು ಮತ್ತು ಕ್ರೀಡೆ, ಕಾನೂನು ಮತ್ತು ನ್ಯಾಯ ಸಚಿವಾಲಯಗಳ ಹಿರಿಯ

ಸೈಬರ್ ವಂಚನೆ ತಡೆಗೆ 6 ಸಚಿವಾಲಯಗಳಿಂದ ಹೊಸ ಪ್ರಾಧಿಕಾರ

ಅಧಿಕಾರಿಗಳನ್ನು ಒಳಗೊಂಡ ಆನ್‌ಲೈನ್ ಗೇಮಿಂಗ್ ಪ್ರಾಧಿಕಾರವನ್ನು ರಚಿಸಲಾಗಿದೆ.

ಇದಲ್ಲದೇ, ದೇಶಾದ್ಯಂತದ ಎಲ್ಲಾ ರ‍್ಯಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಪೊಲೀಸ್ ಇಲಾಖೆಯ ಸೈಬರ್ ಸೆಲ್‌ಗಳನ್ನೂ ಕೇಂದ್ರ ಸರಕಾರ ಚುರುಕುಗೊಳಿಸಿದೆ. 'ದಿ ಪ್ರೊಮೋಷನ್ ಅಂಡ್ ರೆಗ್ಯುಲೇಷನ್ ಆಫ್ ಆನ್‌ಲೈನ್ ಗೇಮಿಂಗ್ ಆಕ್ಟ್-2025' ಅನ್ವಯವೇ ಆನ್‌ಲೈನ್ ಗೇಮಿಂಗ್ ವಂಚನೆ ಪ್ರಕರಣಗಳ ತನಿಖೆ ನಡೆಸಲು ನಿರ್ದೇಶನ ನೀಡಿದೆ. ಅಲ್ಲದೇ, ಹೊಸ ಕಾಯಿದೆಯನ್ನು ಸಾರ್ವಜನಿಕವಾಗಿ ಪ್ರಚುರಪಡಿಸಿ ಜನರಲ್ಲಿ ಜಾಗೃತಿಗೊಳಿಸುವ ಹೊಣೆಯನ್ನೂ ವಹಿಸಿಕೊಡಲಾಗಿದೆ.

ಇಸ್ರೇಲ್-ಲೆಬನಾನ್ ಕದನ ವಿರಾಮ 3 ವಾರ ವಿಸ್ತರಣೆ

ವಾಷಿಂಗ್ಟನ್: ಇಸ್ರೇಲ್ ಮತ್ತು ಲೆಬನಾನ್ ನಡುವಿನ ಕದನ ವಿರಾಮ 3 ವಾರಗಳವರೆಗೆ ವಿಸ್ತರಣೆಯಾಗಿದೆ. ಎರಡೂ ದೇಶಗಳು ಕದನ ವಿರಾಮ ವಿಸ್ತರಣೆಗೆ ಒಪ್ಪಿಕೊಂಡಿವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಕಟಿಸಿದ್ದಾರೆ.

ಶ್ವೇತಭವನದಲ್ಲಿ 2ನೇ ಸುತ್ತಿನ ಸಭೆ ಯಶಸ್ವಿ: ಟ್ರಂಪ್

ಶ್ವೇತಭವನದಲ್ಲಿ ಗುರುವಾರ ನಡೆದ 2ನೇ ಸುತ್ತಿನ ಉನ್ನತ ಮಟ್ಟದ ಮಾತುಕತೆ ನಂತರ ಈ ಮಹತ್ವದ ನಿರ್ಧಾರಕ್ಕೆ ಬರಲಾಗಿದೆ. ಎರಡೂ ರಾಷ್ಟ್ರಗಳ ಪ್ರತಿನಿಧಿಗಳ ಜತೆ ನಡೆಸಿದ ಸಭೆ ಯಶಸ್ವಿಯಾಗಿದೆ ಎಂದು ಟ್ರಂಪ್ ತಮ್ಮ ಟ್ರೂತ್ ಸೋಶಿಯಲ್' ಖಾತೆಯಲ್ಲಿ ಬರೆದುಕೊಂಡಿದ್ದಾರೆ. ಟ್ರಂಪ್ ಮಧ್ಯಸ್ಥಿಕೆಯಲ್ಲಿ ಮೊದಲ ಬಾರಿಗೆ ಏ.16ರಂದು 10 ದಿನಗಳ ಕದನ ವಿರಾಮ ಘೋಷಿಸಲಾಗಿತ್ತು.

ಹಿಜ್ಬುಲ್ಲಾ ಉಗ್ರ ಸಂಘಟನೆಯಿಂದ ತನ್ನನ್ನು ರಕ್ಷಿಸಿಕೊಳ್ಳಲು ಲೆಬನಾನ್‌ಗೆ ಅಮೆರಿಕ ಪೂರ್ಣ ಬೆಂಬಲ ನೀಡಲಿದೆ ಎಂದೂ ಟ್ರಂಪ್ ಭರವಸೆ ನೀಡಿದ್ದಾರೆ. ಮುಂಬರುವ ವಾರಗಳಲ್ಲಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಶ್ವೇತಭವನಕ್ಕೆ ಭೇಟಿ ನೀಡಲಿದ್ದಾರೆ ಮತ್ತು ಶಾಶ್ವತ ಶಾಂತಿ ಮಾತುಕತೆ ನಡೆಸಲಿದ್ದಾರೆ ಎಂದೂ ಟ್ರಂಪ್ ಹೇಳಿದ್ದಾರೆ. ಈ ಕದನ ವಿರಾಮ ಒಪ್ಪಂದವು ಕೇವಲ ದಾಳಿಯನ್ನು ನಿಲ್ಲಿಸುವುದಲ್ಲದೆ ಕೆಲವು ಪ್ರಮುಖ ಷರತ್ತನ್ನು ಒಳಗೊಂಡಿದೆ. ಹಿಜ್ಬುಲ್ಲಾ ಸಂಘಟನೆಗೆ ಧನ ಸಹಾಯ ಮಾಡುವುದನ್ನು ಇರಾನ್ ತಕ್ಷಣ ನಿಲ್ಲಿಸಬೇಕು ಮತ್ತು ಹೊರ್ಮುಜ್ ಜಲಸಂಧಿಯಲ್ಲಿ ನೌಕೆಗಳ ಸಂಚಾರಕ್ಕೆ ಅಡಚಣೆ ಮಾಡಬಾರದು ಎಂದು ಟ್ರಂಪ್ ಇರಾನ್‌ಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಅಲ್ಲದೇ, ಲೆಬನಾನ್ ಸರಕಾರ ತನ್ನ ನೆಲದಲ್ಲಿ ಹಿಜ್ಬುಲ್ಲಾ ಅಥವಾ ಬೇರಾವುದೇ ಸಶಸ್ತ್ರ ಗುಂಪು ಇಸ್ರೇಲ್ ಮೇಲೆ ದಾಳಿ ನಡೆಸದಂತೆ ತಡೆಯಲು ಕ್ರಮ ಕೈಗೊಳ್ಳಬೇಕು ಎಂದೂ ಒಪ್ಪಂದದಲ್ಲಿ ಹೇಳಲಾಗಿದೆ.

ಪ್ಲಾಸ್ಟಿಕ್ ಸರ್ಜರಿ ಬಳಿಕ ಇರಾನ್ ಸರ್ವೋಚ್ಚ ನಾಯಕನಿಗೆ ಮಾತು ಸಾಧ್ಯ | ನಿಗೂಢ ಸ್ಥಳದಲ್ಲಿ ಮಲಗಿದಲ್ಲೇ ಚಿಕಿತ್ಸೆ, ಕೈಬರಹ ಚೀಟಿಗಳಿಂದಲೇ ಆಡಳಿತ

ಕಾಲು ಮುರಿದಿದೆ, ಮುಖ ಸುಟ್ಟಿದೆ, ಮೊಜ್ತಬಾಗೆ ಮಾತನಾಡಲು ಆಗುತ್ತಿಲ್ಲ

ಟೆಹರಾನ್: ತಂದೆ ಅಯತೊಲ್ಲಾ ಅಲಿ ಖಮೇನಿ ಫೆ.28ರಂದು ಅಮೆರಿಕ-ಇಸ್ರೇಲ್ ದಾಳಿಯಲ್ಲಿ ಹತರಾದ ಬಳಿಕ ಇರಾನ್ ಸರ್ವೋಚ್ಚ ನಾಯಕ ಹುದ್ದೆಗೇರಿರುವ ಮೊಜ್ತಬಾ ಖಮೇನಿ ಈಗ ಎಲ್ಲಿದ್ದಾರೆ? ಹೇಗಿದ್ದಾರೆ? ಜೀವಂತ ಇದ್ದಾರೆಯೋ ಇಲ್ಲವೋ? ಈ ಪ್ರಶ್ನೆಗಳಿಗೆ ಸದ್ಯ ಸ್ಪಷ್ಟ ಉತ್ತರ ಸಿಕ್ಕಿದೆ.

ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಜೀವಂತವಾಗಿದ್ದಾರೆ. ಆದರೆ, ಅವರು ಅಧಿಕಾರ ನಡೆಸುತ್ತಿರುವ ರೀತಿ ಮತ್ತು ಅವರ ಪ್ರಸ್ತುತ ಆರೋಗ್ಯ ಸ್ಥಿತಿ ಅಕ್ಷರಶಃ ಬೆಚ್ಚಿಬೀಳಿಸುವಂತಿದೆ. ಫೆ.28ರ ಅಮೆರಿಕ-ಇಸ್ರೇಲಿ ವೈಮಾನಿಕ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿರುವ ಅವರು, ಈಗ ಮಾತಿಲ್ಲದೆ ನಿಗೂಢವಾಗಿದ್ದಾರೆ.

ಫೆ.28ರಂದು ಅಮೆರಿಕ-ಇಸ್ರೇಲ್ ನಡೆಸಿದ ಹತ್ತಾರು ಕ್ಷಿಪಣಿಗಳ ಜಂಟಿ ದಾಳಿಯಲ್ಲಿ ಮೊಜ್ತಬಾ ಖಮೇನಿ ತೀವ್ರವಾಗಿ ಗಾಯಗೊಂಡಿದ್ದಾರೆ. ಅವರ ಮುಖವೆಲ್ಲಾ ಸುಟ್ಟು ಹೋಗಿ ಸುಲಭಕ್ಕೆ ಗುರುತೇ ಸಿಗದಂತಾಗಿದೆ. ಅಷ್ಟೇ ಅಲ್ಲದೇ, ಒಂದು ಕಾಲು ಕತ್ತರಿಸಿಹೋಗಿದೆ.

ಮುಖ ಸುಟ್ಟು ಹೋಗಿರುವುದರಿಂದ ಮುಖದ ಚರ್ಮ, ಸ್ನಾಯುಗಳೆಲ್ಲಾ ಬಿಗಿದುಕೊಂಡಿವೆ. ತುಟಿಗಳಲ್ಲೂ ತೀವ್ರವಾದ ಸುಟ್ಟಗಾಯಗಳಾಗಿವೆ. ಹಾಗಾಗಿ ಸದ್ಯ ಮೊಜ್ತಬಾ ಅವರಿಗೆ ಮಾತನಾಡಲು ಆಗುತ್ತಿಲ್ಲ. ಏನಿದ್ದರೂ ಪ್ಲಾಸ್ಟಿಕ್ ಸರ್ಜರಿ ಬಳಿಕವಷ್ಟೇ ಮಾತನಾಡಲು ಸಾಧ್ಯ ಎಂದು ವೈದ್ಯರು ಹೇಳಿರುವುದಾಗಿ ಮೂಲಗಳನ್ನು ಉಲ್ಲೇಖಿಸಿ ಅಮೆರಿಕದ 'ದಿ ನ್ಯೂಯಾರ್ಕ್ ಟೈಮ್ಸ್' ಸೇರಿದಂತೆ ಕೆಲವು ವಿದೇಶಿ ಮಾಧ್ಯಮಗಳು ವರದಿ ಪ್ರಕಟಿಸಿವೆ.

ಮೊಜ್ತಬಾ ಸಹಜ ಸ್ಥಿತಿಗೆ ಮರಳಲು, ಮಾತನಾಡುವಂತಾಗಲು ಪ್ಲಾಸ್ಟಿಕ್ ಸರ್ಜರಿ ಅಗತ್ಯವಿದೆ. ಅವರ ಒಂದು ಕಾಲಿಗೆ ಈಗಾಗಲೇ ಮೂರು ಶಸ್ತ್ರಚಿಕಿತ್ಸೆಗಳಾಗಿದ್ದು, ಅವರು ಈಗ ಕೃತಕ ಅಂಗದ ಜೋಡಣೆಗಾಗಿ ಕಾಯುತ್ತಿದ್ದಾರೆ. ಒಂದು ಕೈ ಕೂಡ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಸದ್ಯ ಚೇತರಿಕೆ ಹಂತದಲ್ಲಿದೆ. ನಿಗೂಢ ಸ್ಥಳದಲ್ಲಿ ಮಲಗಿದ್ದಲ್ಲೇ ಚಿಕಿತ್ಸೆ ನೀಡಲಾಗುತ್ತಿದೆ. ಹಾಗಾಗಿ ಮೊಜ್ತಬಾ ಕೈಬರಹದ ಚೀಟಿಗಳ ಮೂಲಕ ಆಡಳಿತ ನಡೆಸುತ್ತಿದ್ದಾರೆ. ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಮತ್ತು ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ಮೊಜ್ತಬಾ ಅವರ ದೈಹಿಕ ಅಸಮರ್ಥತೆ ಮತ್ತು ಸುರಕ್ಷತೆಯ ಕಾರಣದಿಂದಾಗಿ ದೇಶದ ಪ್ರಮುಖ ನಿರ್ಧಾರಗಳನ್ನು ಪ್ರಸ್ತುತ ಮಿಲಿಟರಿ ನಾಯಕರಿಗೆ ವಹಿಸಲಾಗಿದೆ. ಭದ್ರತೆಗೆ ಸಂಬಂಧಿಸಿದ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರವನ್ನು ಇರಾನ್ ಸೇನಾಪಡೆಗೆ(ಮುಖ್ಯವಾಗಿ ಐಆರ್‌ಜಿಸಿಗೆ) ಬಿಡಲಾಗಿದೆ. ಅಂದರೆ, ಇರಾನ್‌ಗೆ ಈಗ ಸಮರ್ಥ ನಾಯಕತ್ವ ಇಲ್ಲದಂತಾಗಿದ್ದು, ಪರೋಕ್ಷವಾಗಿ ದೇಶವನ್ನು ಸದ್ಯ ಐಆರ್‌ಜಿಸಿಯೇ ಮುನ್ನಡೆಸುತ್ತಿದೆ. ಹಾಗಾಗಿ, ಅದು ಹಾಲಿ ಸರಕಾರ, ಸಚಿವರ ಮಾತುಗಳನ್ನು ಕೇಳದಂತಾಗಿದೆ. ಅದರಿಂದಾಗಿಯೇ ಹೊರ್ಮುಜ್ ಜಲಸಂಧಿಯಲ್ಲಿ ಇರಾನ್‌ನ ಮಿತ್ರ ದೇಶ ಭಾರತದ ಹಡಗುಗಳ ಮೇಲೆಯೂ ದಾಳಿ ನಡೆಯುತ್ತಿದೆ ಎಂದು ವಿಶ್ಲೇಷಿಸಲಾಗಿದೆ.

ಕೈಬರಹದ ಚೀಟಿ

ಅತ್ಯಂತ ಆಶ್ಚರ್ಯದ ಸಂಗತಿ ಏನೆಂದರೆ ಈಗಿನ ಡಿಜಿಟಲ್ ಯುಗದಲ್ಲಿ ಮೊಜ್ತಬಾ ಖಮೇನಿ, ಇರಾನ್ ಆಡಳಿತ ನಡೆಸುತ್ತಿರುವುದು 'ಕೈಬರಹದ ಚೀಟಿಗಳ' ಮೂಲಕ. ಐಆರ್‌ಜಿಸಿ ಕಮಾಂಡರ್‌ಗಳಾಗಲೀ, ಸಚಿವರುಗಳಾಗಲೀ ಮೊಜ್ತಬಾ ಅವರನ್ನು ನೇರವಾಗಿ ಭೇಟಿ ಮಾಡಲಾಗುತ್ತಿಲ್ಲ. ಇಸ್ರೇಲ್‌ನ ಬೇಹುಗಾರರು ಮೊಜ್ತಬಾ ಅವರನ್ನು ಪತ್ತೆ ಹಚ್ಚಿ ಕೊಲ್ಲಬಹುದು ಎಂಬ ಭಯದಿಂದಲೇ ಸಚಿವರಾಗಲೀ, ಸರಕಾರಿ ಅಧಿಕಾರಿಗಳಾಗಲೀ ಮೊಜ್ತಬಾರನ್ನು ಭೇಟಿ ಮಾಡಲು ಹೋಗುತ್ತಿಲ್ಲ ಎನ್ನಲಾಗಿದೆ. ಸೀಲ್ ಮಾಡಿದ ಲಕೋಟೆಗಳಲ್ಲಿ ಮೊಜ್ತಬಾ ಕೈಬರಹದ ಸಂದೇಶಗಳು ರಸ್ತೆ ಮಾರ್ಗವಾಗಿ ವಿಶ್ವಾಸಾರ್ಹ ಕೊರಿಯರ್‌ಗಳ ಮೂಲಕ ರವಾನೆ ಆಗುತ್ತಿವೆ. ಮೊಜ್ತಬಾ ಅವರ ಪ್ರತಿಕ್ರಿಯೆಗಳು ಕೂಡ ಇದೇ ಮಾದರಿಯಲ್ಲಿ ಮಾಧ್ಯಮ ಜಗತ್ತಿಗೆ ಬರುತ್ತಿವೆ ಎಂದು ತಿಳಿದುಬಂದಿದೆ.

ಸಂಧಾನ: ಸಿಎನ್‌ಎನ್ ವರದಿ ಪ್ರಕಾರ, ಮೊಜ್ತಬಾ ಖಮೇನಿ ಸಕ್ರಿಯ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಿಂದ ದೂರವಿರುವುದು ಇರಾನ್ ನಾಯಕತ್ವದಲ್ಲಿ ಬಿರುಕು ಮೂಡಲು ಕಾರಣವಾಗಿದೆ. ಅಮೆರಿಕ ಜತೆ ಸಂಧಾನ ಹೇಗೆ ಮಾಡಿಕೊಳ್ಳಬೇಕು? ಯಾವ ಷರತ್ತುಗಳನ್ನು ವಿಧಿಸಬೇಕು? ಎಂಬ ಬಗ್ಗೆ ಒಮ್ಮತ ಮೂಡುತ್ತಿಲ್ಲ. ಸಂಧಾನಕಾರರಿಗೆ ಎಷ್ಟು ಅಧಿಕಾರ ನೀಡಬೇಕು ಎಂಬ ಬಗ್ಗೆಯೂ ಗೊಂದಲಗಳಿವೆ.

ಸಿಎಂಆರ್ ವಿವಿಯಿಂದ ಜಾಗತಿಕ ನಾವೀನ್ಯತೆ ಸವಾಲು ಚಿಂತನಾ ದಿನ ಕಾರ್ಯಕ್ರಮ

ಕೌಶಲ್ಯಗಳೇ ವಿದ್ಯಾರ್ಥಿಗಳ ಯಶಸ್ಸಿನ ಗುಟ್ಟು

ಬೆಂಗಳೂರು: ಸಿಎಂಆರ್ ವಿಶ್ವವಿದ್ಯಾಲಯದ ವತಿಯಿಂದ ಬಾಗಲೂರಿನ ಲೇಕ್ ಸೈಡ್ ಕ್ಯಾಂಪಸ್‌ನಲ್ಲಿ 'ಸಿಎಂಆರ್ ಕಾಸ್ – 2026' 'ದಿ ಫ್ಯೂಚರ್ ಇಸ್ ಲೋಕಲ್' ಎಂಬ ವಿಷಯಾಧಾರಿತ ಎರಡು ದಿನಗಳ 'ಜಾಗತಿಕ ನಾವೀನ್ಯತೆ ಸವಾಲು' ಚಿಂತನಾ ದಿನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಕೆ.ಸಿ.ರಾಮ ಮೂರ್ತಿ ಮಾತನಾಡಿ, ಸಿಎಂಆರ್ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಪ್ರಸ್ತುತಪಡಿಸು ತ್ತಿರುವ ನವೀನ ವಿಚಾರಗಳು ಮತ್ತು ತಾಂತ್ರಿಕ ಆವಿಷ್ಕಾರಗಳು ಹೆಮ್ಮೆ ತರುವಂತಹದ್ದು. ನಾವಿನ್ಯತೆ, ಸೃಜನಾತ್ಮಕ ಚಿಂತನೆಗಳೊಂದಿಗೆ ಯುವ ಸಮುದಾಯವನ್ನು ರೂಪಿಸುವ ನಿಟ್ಟಿನಲ್ಲಿ ವಿನ್ಯಾಸ ಚಿಂತನಾ ಕಾರ್ಯಕ್ರಮ ಪ್ರಮುಖವಾಗಲಿದೆ. ಕೌಶಲ್ಯಗಳೇ ಯಶಸ್ಸಿನ ಗುಟ್ಟು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಮಾಜದ ವಿವಿಧ ಸಮಸ್ಯೆಗಳಿಗೆ ಇಂದು ವಿಭಿನ್ನ ಪರಿಹಾರಗಳನ್ನು ಹಾಗೂ ನವೀನ ಮಾದರಿಗಳನ್ನು ಕಂಡುಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ಬಲವಾದ ಸಾಮಾನ್ಯ ಜ್ಞಾನ ಮತ್ತು ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸುವ ಕೌಶಲ್ಯವಿದ್ದರೆ ಅಂತಹ ನವೀನ ವಿಚಾರಗಳಿಗೆ ಜೀವ ತುಂಬಲು ಸಾಧ್ಯ ಎಂದರು.

ಗಮನ ಸೆಳೆದ ನವೀನ ಯೋಜನೆಗಳು: ಸಿಎಂಆರ್ ಕಾಸ್–2026ರ ವಿನ್ಯಾಸ ಚಿಂತನಾ ದಿನ (ಗ್ಲೋಬಲ್ ಓಪನ್ ಇನ್ನೋವೇಷನ್ ಚಾಲೆಂಜ್) ಕಾರ್ಯಕ್ರಮದಲ್ಲಿ 10 ದೇಶಗಳು ಮತ್ತು 127 ನಗರಗಳಾದ್ಯಂತ 120 ಸಂಸ್ಥೆಗಳಿಂದ 893 ಕ್ಕೂ ಹೆಚ್ಚು ತಂಡಗಳಿಂದ 3500 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಮುದಾಯದ ಅಗತ್ಯತೆಗಳನ್ನು ಅರ್ಥೈಸಿ, ದೈನಂದಿನ ಅನುಭವಗಳ ಆಧಾರದ ಮೇಲೆ ಸ್ಥಳೀಯ ಸಮಸ್ಯೆಗಳಿಗೆ ಹೊಸತನದ ಪರಿಹಾರಗಳನ್ನು ಕಂಡುಕೊಳ್ಳಲು ಯುವ ಮನಸ್ಸುಗಳನ್ನು ಪ್ರೇರೇಪಿಸಿದ್ದು, ಪ್ರದರ್ಶನದಲ್ಲಿ ಒಟ್ಟು 100ಕ್ಕೂ ಹೆಚ್ಚು ನವೀನ ಯೋಜನೆಗಳನ್ನು ಪ್ರದರ್ಶಿಸಲಾಯಿತು. ಇವುಗಳಲ್ಲಿ ಮುಖ್ಯವಾಗಿ ಅಂಗವಿಕಲರಿಗೆ ಪೂರಕವಾದ ಎಐ ವೇದಿಕೆ, ವಿಪತ್ತು ರಕ್ಷಣಾ ತಂತ್ರಜ್ಞಾನ ಮತ್ತು ಕಾನೂನು ಬಾಹಿರವಾಗಿ ಬೇಟೆಯಾಡುವುದನ್ನು ತಡೆಗಟ್ಟುವ ಎಐ ಮೇಲ್ವಿಚಾರಣಾ ವ್ಯವಸ್ಥೆಗಳು ಗಮನ ಸೆಳೆದವು. ಇವುಗಳ ಜತೆಗೆ ರಸ್ತೆ ಸುರಕ್ಷತೆಗಾಗಿ ಅಪಘಾತ ಎಚ್ಚರಿಕೆ ಸಾಧನಗಳು, ಮೀನುಗಾರರ ರಕ್ಷಣೆಗಾಗಿ ಸ್ಮಾರ್ಟ್ ಗಡಿ ಗುರುತಿಸುವಿಕೆ ಹಾಗೂ ನೀರು ಅಥವಾ ಅನಿಲ ಸೋರಿಕೆ ತಡೆಗಟ್ಟುವ ಸ್ಮಾರ್ಟ್ ಪೈಪ್‌ಲೈನ್ ಮತ್ತು ಜಿಐಎಸ್ ತಂತ್ರಜ್ಞಾನ ಆಧಾರಿತ ವಿತರಣಾ ಮಾದರಿಗಳು ಪ್ರದರ್ಶನಗೊಂಡವು.

ಈ ವೇಳೆ ಕಾರ್ಯಕ್ರಮದಲ್ಲಿ ಕ್ಯಾಪ್ಜೆಮಿನಿಯ ಹಿರಿಯ ನಿರ್ದೇಶಕ ಮತ್ತು ಮುಖ್ಯ ವಾಸ್ತುಶಿಲ್ಪಿ ಅನ್ವರ್ ಖಾನ್, ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಡಾ. ಎಚ್. ಬಿ. ರಾಘವೇಂದ್ರ, ಸಹ–ಕುಲಪತಿ ಹಾಗೂ ಕುಲಸಚಿವ ಡಾ. ಪ್ರವೀಣ್ ಆರ್, ವಿಶ್ವವಿದ್ಯಾಲಯದ ಡೀನ್‌ಗಳು, ನಿರ್ದೇಶಕರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಿಎಂಆರ್ ಕಾಸ್–2026ರ ವಿನ್ಯಾಸ ಚಿಂತನಾ ದಿನ (ಗ್ಲೋಬಲ್ ಓಪನ್ ಇನ್ನೋವೇಷನ್ ಚಾಲೆಂಜ್) ಕಾರ್ಯಕ್ರಮದಲ್ಲಿ ವಿಜೇತ ತಂಡಗಳಿಗೆ ಟ್ರೋಫಿ, ನಗದು ಬಹುಮಾನ, ಪ್ರಶಸ್ತಿ ಪತ್ರ ನೀಡಲಾಯಿತು.

ಆನೆ ಕಾರ್ಯಪಡೆಗೆ 13 ಹೊಸ ವಾಹನ

ಬೆಂಗಳೂರು: ಆನೆಗಳ ಹಾವಳಿ ಹೆಚ್ಚಿರುವ ಹಾಸನ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಮಾಹಿತಿ ನೀಡಲು ಮತ್ತು ಆನೆಗಳನ್ನು ಕಾಡಿಗೆ ಮರಳಿಸಲು ಜಿಲ್ಲಾ ಆನೆ ಕಾರ್ಯಪಡೆಗೆ 13 ಹೊಸ ವಾಹನಗಳು ಸೇರ್ಪಡೆ ಯಾಗಿದ್ದು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಹಸಿರು ನಿಶಾನೆ ತೋರಿಸಿದರು.

ಮಲ್ಲೇಶ್ವರದ ಅರಣ್ಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವರು, 1 ಸ್ಕಾರ್ಪಿ ಯೋ, 2 ಕ್ಯಾಂಪರ್ ಹಾಗೂ 10 ದ್ವಿಚಕ್ರವಾಹನಗಳಿಗೆ ಹಸಿರು ನಿಶಾನೆ ತೋರಿ, ತಾವೇ ಬೈಕ್ ಓಡಿಸುವ ಮೂಲಕ ಚಾಲನೆ ನೀಡಿದರು.

ಮಾನವ–ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕೆ ಇದು ಹೊಸ ಉಪಕ್ರಮವಾಗಿದೆ. ಈ ಎಲ್ಲ ವಾಹನ ಗಳಿಗೆ ವಾಕಿಟಾಕಿ ಮತ್ತು ಧ್ವನಿವರ್ಧಕ ಅಳವಡಿಸಲಾಗಿದ್ದು ಜಿಲ್ಲಾ ಆನೆ ಕಾರ್ಯಪಡೆ ಸಿಬ್ಬಂದಿ ವಾಹನಗಳಲ್ಲಿ ಗಸ್ತು ಮಾಡುತ್ತಾ, ಆನೆಗಳು ತೋಟ ಅಥವಾ ವಸತಿ ಪ್ರದೇಶಗಳ ಬಳಿ ಬಂದಾಗ ಸ್ಥಳೀಯರಿಗೆ ಧ್ವನಿ ವರ್ಧಕಗಳ ಮೂಲಕ ಎಚ್ಚರಿಕೆ ನೀಡುತ್ತಾರೆ ಮತ್ತು ಆನೆ ಗಳನ್ನು ಕಾಡಿಗೆ ಮರಳಿಸುತ್ತಾರೆ. ಈ ವಾಹನಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತನ್ನ ಸಿಎಸ್‌ಆರ್ ನಿಧಿ ಯಿಂದ ಅರಣ್ಯ ಇಲಾಖೆಗೆ ನೀಡಿದೆ ಎಂದು ಖಂಡ್ರೆ ತಿಳಿಸಿದರು.

ಆನೆಗಳ ಹಾವಳಿ ಹೆಚ್ಚಿರುವ ಹಾಸನ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಮಾಹಿತಿ ನೀಡಲು ಮತ್ತು ಆನೆಗಳನ್ನು ಕಾಡಿಗೆ ಮರಳಿಸಲು ಜಿಲ್ಲಾ ಆನೆ ಕಾರ್ಯಪಡೆಗೆ 13 ಹೊಸ ವಾಹನಗಳಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಚಾಲನೆ ನೀಡಿದರು.

ಫಾರ್ಮ್ ನಂ. URC-2

ಕಂಪನಿಗಳ ಕಾಯ್ದೆ, 2013 ರ ಅಧ್ಯಾಯ XXI ಭಾಗ–I ಅಡಿಯಲ್ಲಿ ನೋಂದಣಿ ಕುರಿತು ಸಾರ್ವಜನಿಕ ಪ್ರಕಟಣೆ

(ಕಂಪನಿಗಳ ಕಾಯ್ದೆ, 2013 ರ ಕಲಂ 374(b) ಮತ್ತು ಕಂಪನಿಗಳ (Authorised to Register) ನಿಯಮಗಳು, 2014 ರ ನಿಯಮ 4(1) ಅನ್ವಯ)

1. ಕಂಪನಿಗಳ ಕಾಯ್ದೆ, 2013 ರ ಕಲಂ 366(2) ಅನ್ವಯವಾಗಿ, **M/s. KGS Logistics** ಎಂಬ **ಪಾಲುದಾರಿಕೆ ಸಂಸ್ಥೆಯನ್ನು** ಷೇರುಗಳಿಂದ ಮಿತಿಗೊಳಿಸಲಾದ ಕಂಪನಿಯಾಗಿ ಕಂಪನಿಗಳ ಕಾಯ್ದೆಯ ಅಧ್ಯಾಯ XXI ಭಾಗ–I ಅಡಿಯಲ್ಲಿ ನೋಂದಣಿ ಮಾಡುವ ಸಲುವಾಗಿ, ಈ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳ ನಂತರ ಆದರೆ ಮೂವತ್ತು ದಿನಗಳೊಳಗೆ Registrar, Central Registration Centre (CRC), Indian Institute of Corporate Affairs (IICA), Plot No.6,7,8, Sector-5, IMT Manesar, District Gurgaon (Haryana) – 122050 ಇವರಿಗೆ ಅರ್ಜಿ ಸಲ್ಲಿಸಲು ಉದ್ದೇಶಿಸಲಾಗಿದೆ ಎಂಬುದಾಗಿ ಈ ಮೂಲಕ ತಿಳಿಸಲಾಗುತ್ತದೆ.
2. ಪ್ರಸ್ತಾವಿತ ಕಂಪನಿಯ ಮುಖ್ಯ ಉದ್ದೇಶಗಳು ಕೆಳಗಿನಂತಿವೆ:
   ಸಂಪೂರ್ಣ ಸಾರಿಗೆ ಸೇವೆಗಳನ್ನು ಒಳಗೊಂಡ ಲಾಜಿಸ್ಟಿಕ್ ಸೇವೆಗಳು (ಭೂಮಿ, ಗಾಳಿ, ಸಮುದ್ರ), ಗೋದಾಮು ಸೇವೆಗಳು, ಕಾರ್ಗೋ ಹ್ಯಾಂಡ್ಲಿಂಗ್, ಫ್ರೈಟ್ ಫಾರ್ವರ್ಡಿಂಗ್ ಹಾಗೂ ಸರಕು ಸರಪಳಿ ನಿರ್ವಹಣೆ.
3. ಪ್ರಸ್ತಾವಿತ ಕಂಪನಿಯ Memorandum of Association ಮತ್ತು Articles of Association ಕರಡು ಪ್ರತಿಯನ್ನು ಕೆಳಗಿನ ವಿಳಾಸದಲ್ಲಿರುವ ಕಚೇರಿಯಲ್ಲಿ ಪರಿಶೀಲಿಸಬಹುದು: No.101/2, 1ನೇ ಮಹಡಿ, ಕಾವೇರಿ ಅಪಾರ್ಟ್‌ಮೆಂಟ್ಸ್, ಬೆಂದ್ರೆ ನಗರ, ಬೆಂಗಳೂರು–560070.
4. ಈ ಅರ್ಜಿಗೆ ವಿರೋಧ ವ್ಯಕ್ತಪಡಿಸುವ ಯಾವುದೇ ವ್ಯಕ್ತಿ ಇದ್ದಲ್ಲಿ, ಈ ಪ್ರಕಟಣೆಯ ದಿನಾಂಕದಿಂದ 21 ದಿನಗಳೊಳಗೆ ತಮ್ಮ ಲಿಖಿತ ಆಕ್ಷೇಪಣೆಗಳನ್ನು ಮೇಲ್ಕಂಡ Registrar ಅವರಿಗೆ ಕಳುಹಿಸಬಹುದು. ಅದರ ಪ್ರತಿಯನ್ನು ಕಂಪನಿಯ ನೋಂದಾಯಿತ ಕಚೇರಿಗೂ ಕಳುಹಿಸಬೇಕು.

ದಿನಾಂಕ: 23 ಏಪ್ರಿಲ್ 2026

M/s. KGS Logistics ಪರವಾಗಿ

Sd/- Avinash M, Partner
Sd/- Yogesh M K, Partner

ಫಾರ್ಮ್ ನಂ. URC-2

ಕಂಪನಿಗಳ ಕಾಯ್ದೆ, 2013 ರ ಅಧ್ಯಾಯ XXI ಭಾಗ–I ಅಡಿಯಲ್ಲಿ ನೋಂದಣಿ ಕುರಿತು ಸಾರ್ವಜನಿಕ ಪ್ರಕಟಣೆ

(ಕಂಪನಿಗಳ ಕಾಯ್ದೆ, 2013 ರ ಕಲಂ 374(b) ಮತ್ತು ಕಂಪನಿಗಳ (Authorised to Register) ನಿಯಮಗಳು, 2014 ರ ನಿಯಮ 4(1) ಅನ್ವಯ)

1. ಕಂಪನಿಗಳ ಕಾಯ್ದೆ, 2013 ರ ಕಲಂ 366(2) ಅನ್ವಯವಾಗಿ, **M/s. KGS Buildcon** ಎಂಬ ಪಾಲುದಾರಿಕೆ ಸಂಸ್ಥೆಯನ್ನು ಷೇರುಗಳಿಂದ ಮಿತಿಗೊಳಿಸಲಾದ ಕಂಪನಿಯಾಗಿ ಕಂಪನಿಗಳ ಕಾಯ್ದೆಯ ಅಧ್ಯಾಯ XXI ಭಾಗ–I ಅಡಿಯಲ್ಲಿ ನೋಂದಣಿ ಮಾಡುವ ಸಲುವಾಗಿ, ಈ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳ ನಂತರ ಆದರೆ ಮೂವತ್ತು ದಿನಗಳೊಳಗೆ Registrar, Central Registration Centre (CRC), Indian Institute of Corporate Affairs (IICA), Plot No.6,7,8, Sector-5, IMT Manesar, District Gurgaon (Haryana)-122050 ಇವರಿಗೆ ಅರ್ಜಿ ಸಲ್ಲಿಸಲು ಉದ್ದೇಶಿಸಲಾಗಿದೆ ಎಂಬುದಾಗಿ ಈ ಮೂಲಕ ತಿಳಿಸಲಾಗುತ್ತದೆ.
2. ಪ್ರಸ್ತಾವಿತ ಕಂಪನಿಯ ಮುಖ್ಯ ಉದ್ದೇಶಗಳು ಕೆಳಗಿನಂತಿವೆ:
   ಸಿವಿಲ್ ನಿರ್ಮಾಣ ಕಾರ್ಯಗಳು / ಸರ್ಕಾರಿ ಮತ್ತು ಖಾಸಗಿ ನಿರ್ಮಾಣ ಕಾರ್ಯಗಳು.
3. ಪ್ರಸ್ತಾವಿತ ಕಂಪನಿಯ Memorandum of Association ಮತ್ತು Articles of Association ಕರಡು ಪ್ರತಿಯನ್ನು ಕೆಳಗಿನ ವಿಳಾಸದಲ್ಲಿರುವ ಕಚೇರಿಯಲ್ಲಿ ಪರಿಶೀಲಿಸಬಹುದು: NO 101/2, 1ನೇ ಮಹಡಿ, ಕಾವೇರಿ ಅಪಾರ್ಟ್‌ಮೆಂಟ್ಸ್, ಬೆಂದ್ರೆ ನಗರ, ಬೆಂಗಳೂರು – 560070.
4. ಈ ಅರ್ಜಿಗೆ ವಿರೋಧ ವ್ಯಕ್ತಪಡಿಸುವ ಯಾವುದೇ ವ್ಯಕ್ತಿ ಇದ್ದಲ್ಲಿ, ಈ ಪ್ರಕಟಣೆಯ ದಿನಾಂಕದಿಂದ 21 ದಿನಗಳೊಳಗೆ ತಮ್ಮ ಲಿಖಿತ ಆಕ್ಷೇಪಣೆಗಳನ್ನು ಮೇಲ್ಕಂಡ Registrar ಅವರಿಗೆ ಕಳುಹಿಸಬಹುದು. ಅದರ ಪ್ರತಿಯನ್ನು ಕಂಪನಿಯ ನೋಂದಾಯಿತ ಕಚೇರಿಗೂ ಕಳುಹಿಸಬೇಕು.

ದಿನಾಂಕ: 23 ಏಪ್ರಿಲ್ 2026

M/s. KGS Buildcon ಪರವಾಗಿ

Sd/- Avinash M, Partner
Sd/- Yogesh M K, Partner

ಪ್ರವಾಹದ ಹಾನಿ ಕಡಿಮೆಗೊಳಿಸಲು ಕ್ರಮ

ಬೆಂಗಳೂರು: ಮುಂಗಾರು ಸಮಯದಲ್ಲಿ ಉಂಟಾಗುವ ಪ್ರವಾಹ ಹಾನಿ ತಡೆಯಲು ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಆಯುಕ್ತ ಕೆ.ಎನ್.ರಮೇಶ್ ತಿಳಿಸಿದರು.

ಎಚ್.ಎಸ್.ಆರ್ ಬಡಾವಣೆ, ಜೆಪಿ ನಗರದ ಸಿಂಧೂರ ಮಂಟಪ, ಬೆಳ್ಳಂದೂರು ಕೆರೆ ಸೇರಿದಂತೆ ಪ್ರವಾಹ ಪೀಡಿತ ಪ್ರದೇಶಗಳನ್ನು ಹಿರಿಯ ಅಧಿಕಾರಿಗಳೊಂದಿಗೆ ಪರಿಶೀಲಿಸಿದ ನಂತರ ಆಯುಕ್ತ ಮಾತನಾಡಿ, ಎಚ್.ಎಸ್.ಆರ್ ಬಡಾವಣೆಯ 12ನೇ ಮುಖ್ಯ ರಸ್ತೆ, 7ನೇ ಸೆಕ್ಟರ್ ಪ್ರದೇಶದಲ್ಲಿ ಮಳೆ ನೀರು ನಿಂತು ಪ್ರವಾಹ ಉಂಟಾಗುತ್ತಿರುವುದನ್ನು ಗಮನಿಸಿ, ರಸ್ತೆ ಬದಿ ಚರಂಡಿ ನಿರ್ಮಿಸಿ ಅದನ್ನು ಬೃಹತ್ ನೀರುಗಾಲುವೆಗೆ ಸಂಪರ್ಕಿಸುವ ಕಾರ್ಯವನ್ನು ತ್ವರಿತಗೊಳಿಸಲು ಸೂಚಿಸಿದರು.

ಬಿಟಿಎಂ ಬಡಾವಣೆಯ ಜಕ್ಕಸಂದ್ರ, ಭಾಗದ ಕೋರಮಂಗಲ ವ್ಯಾಲಿ (ಕೆ–100) ಕಾಲುವೆ ಪರಿಶೀಲನೆಯ ವೇಳೆ, ಬೆಳ್ಳಂದೂರು ಕೆರೆಗೆ ನೀರು ಹರಿವಿನ ವ್ಯವಸ್ಥೆ ಸುಧಾರಿಸಲು ಮತ್ತು ಹೂಳು ತೆರವುಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆಯಲು ಸೂಚಿಸಲಾಯಿತು. ಹೆಚ್ಚು ಮಳೆಯ ಸಂದರ್ಭದಲ್ಲಿ ನೀರು ಸರಾಗವಾಗಿ ಹರಿಯದಿದ್ದರೆ ಮೇಲ್ದಂಡೆಯ ಪ್ರದೇಶಗಳಲ್ಲಿ ಪ್ರವಾಹದ ಅಪಾಯವಿದೆ. ಕೆ.ಎ.ಎಸ್ ಅಧಿಕಾರಿಗಳ ಬಡಾವಣೆಯಲ್ಲಿ ಈ ಹಿಂದೆ ಉಂಟಾಗುತ್ತಿದ್ದ ಪ್ರವಾಹ ಸಮಸ್ಯೆಗೆ ಪರಿಹಾರವಾಗಿ ಸಮನಾಂತರ ಮೋರಿ ನಿರ್ಮಿಸಿರುವುದರಿಂದ ಮುಂದಿನ ದಿನಗಳಲ್ಲಿ ಪ್ರವಾಹ ಸಂಭವಿಸುವ ಸಾಧ್ಯತೆ ಕಡಿಮೆ ಎಂದರು. ಈ ಸಂದರ್ಭದಲ್ಲಿ ಮುಖ್ಯ ಅಭಿಯಂತರರಾದ ಬಸವರಾಜ ಕಬಾಡೆ, ಕೆ.ವಿ. ರವಿ, ವಿಪತ್ತು ನಿರ್ವಹಣಾ ಸಮಾಲೋಚಕಿ ವಿನುತಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಕಾಮಗಾರಿಗಳನ್ನು ಆಯುಕ್ತ ಕೆ.ಎನ್. ರಮೇಶ್ ಪರಿಶೀಲಿಸಿದರು. ಈ ವೇಳೆ ಮುಖ್ಯ ಅಭಿಯಂತರರಾದ ಬಸವರಾಜ ಕಬಾಡೆ, ಕೆ.ವಿ. ರವಿ, ವಿಪತ್ತು ನಿರ್ವಹಣಾ ಸಮಾಲೋಚಕಿ ವಿನುತಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಸವಶ್ರೀ, ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ 27ಕ್ಕೆ

ಬೆಂಗಳೂರು: 'ಬಸವಶ್ರೀ ಪ್ರಶಸ್ತಿ'ಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ 'ವಚನ ಸಾಹಿತ್ಯಶ್ರೀ ಪ್ರಶಸ್ತಿ'ಗೆ ಶಿಕ್ಷಣ ತಜ್ಞ ಗುರುರಾಜ ಕರಜಗಿ ಅವರನ್ನು ಆಯ್ಕೆ ಮಾಡಲಾಗಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಸವ ವೇದಿಕೆಯ ಅಧ್ಯಕ್ಷ ಸಿ.ಸೋಮಶೇಖರ್, ಬಸವ ವೇದಿಕೆ ವತಿಯಿಂದ ಏ.27 ರಂದು ಸಂಜೆ 5.30ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ 2026ನೇ ಸಾಲಿನ ಕಾರ್ಯಕ್ರಮದಲ್ಲಿ 'ಬಸವಶ್ರೀ ಪ್ರಶಸ್ತಿ' ಹಾಗೂ 'ವಚನ ಸಾಹಿತ್ಯಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಗುತ್ತಿದ್ದು, 'ಬಸವಶ್ರೀ ಪ್ರಶಸ್ತಿ'ಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ 'ವಚನ ಸಾಹಿತ್ಯಶ್ರೀ ಪ್ರಶಸ್ತಿ'ಗೆ ಶಿಕ್ಷಣ ತಜ್ಞ ಗುರುರಾಜ ಕರಜಗಿ ಅವರನ್ನು ಆಯ್ಕೆ ಮಾಡಲಾಗಿದೆ. ಬಸವಶ್ರೀ ಪ್ರಶಸ್ತಿಯು ಬಸವಣ್ಣನವರ ಪುತ್ಥಳಿ, ಸ್ಮರಣಿಕೆ ಒಳಗೊಂಡಿದ್ದು, ವಚನ ಸಾಹಿತ್ಯಶ್ರೀ ಪ್ರಶಸ್ತಿಯು 10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ ಎಂದರು.

ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಪೀಠಾಧ್ಯಕ್ಷ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಕೇಂದ್ರ ಸಚಿವ ವಿ. ಸೋಮಣ್ಣ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಸಂಸದ ಬಸವರಾಜು ಬೊಮ್ಮಾಯಿ, ಕಾನೂನು ಸಚಿವ ಎಚ್.ಕೆ.ಪಾಟೀಲ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದು, ಮಹಿಳಾ ಮತ್ತು ಮಕ್ಕಳ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಬಸವಜ್ಯೋತಿ ವಿಶೇಷ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ ಎಂದರು. ಈ ವೇಳೆ ಸುದ್ದಿಗೋಷ್ಠಿಯಲ್ಲಿ ರುದ್ರಯ್ಯ, ಚಂದ್ರಮೌಳಿ, ಸಿದ್ದಲಿಂಗ ಸ್ವಾಮಿ, ಮಹಾಬಲೇಶ್ವರ, ಮಲ್ಲಿಕಾರ್ಜುನ ಸೇರಿದಂತೆ ಮತ್ತಿತರರು ಇದ್ದರು.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HLLAMYS00472083 1. ಜಾವೀದ್ ಹುಸೇನ್ ಮಾಲೀಕ ಜಾವೇದ್ ಬೆಡ್ಡಿಂಗ್ ಹೌಸ್ ಮತ್ತು ಫರ್ನಿಶಿಂಗ್ಸ್ 2. ಅಮೀನಾ ಬೇಗಂ 3. ವಿಕ್ವಾರ್ ಯೂನಸ್ ಅಲಿಯಾಸ್ ವಿಕ್ಹರ್ ಯೂನಸ್	ಆಸ್ತಿಯು ಹಾಸನ ನಗರದ ಸುಭಾಷ್ ಸ್ಕ್ವೇರ್ ಮುಖ್ಯ ರಸ್ತೆಯಲ್ಲಿ ಇರುವ, ಸೆಲ್ಲರ್ ಮಹಡಿ, ಭೂ ಮಹಡಿ ಮತ್ತು ಮೊದಲ ಮಹಡಿ ಹೊಂದಿರುವ ಆರ್.ಸಿ.ಸಿ. ಅಂಗಡಿ ಕಟ್ಟಡ ಸಮೇತ ಜಾಗವನ್ನು ಒಳಗೊಂಡಿದೆ. ಈ ಆಸ್ತಿಯು ಹೊಂದಿರುವ ಸಂಖ್ಯೆ 25, ಆಸ್ತಿ ಐಡಿ ಸಂಖ್ಯೆ 23-1-508-25, ಹಳೆಯ ಖಾತಾ ಸಂಖ್ಯೆ 600-660-661, ಎಸ್‌ಎಎಸ್ ಸಂಖ್ಯೆ 401, ವಾರ್ಡ್ ಸಂಖ್ಯೆ 23, ಹಾಸನ ನಗರ ಪಾಲಿಕೆಯ ಶರೀಫ್ ಕಾಲೋನಿಯಲ್ಲಿ ಇದೆ. ಜಾಗದ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 10.6680 ಮೀಟರ್ (35 ಅಡಿ) ಮತ್ತು ಉತ್ತರದಿಂದ ದಕ್ಷಿಣಕ್ಕೆ 6.096012 ಮೀಟರ್ (20 ಅಡಿ), ಅಂದರೆ ಒಟ್ಟು 65.0323 ಚದರ ಮೀಟರ್ ಆಗಿದೆ. ಈ ಜಾಗದ ಮೇಲೆ ನಿರ್ಮಿಸಲಾದ ಆರ್.ಸಿ.ಸಿ. ಕಟ್ಟಡದಲ್ಲಿ: ಸೆಲ್ಲರ್ ಮಹಡಿ: 55.7418 ಚದರ ಮೀಟರ್, ಭೂ ಮಹಡಿ: 55.7418 ಚದರ ಮೀಟರ್, ಮೊದಲ ಮಹಡಿ: 55.7418 ಚದರ ಮೀಟರ್ ಇದ್ದು, ಒಟ್ಟು ಆರ್.ಸಿ.ಸಿ. ಕಟ್ಟಡದ ವಿಸ್ತೀರ್ಣ 167.2254 ಚದರ ಮೀಟರ್ ಆಗಿದ್ದು, ಹಾಸನ - 5732101, ಕರ್ನಾಟಕದಲ್ಲಿ ಸ್ಥಿತವಾಗಿದೆ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು.	04.07.2024	ದಿನಾಂಕ 31.03.2026 ರಂತೆ ರೂ. 1,41,81,696/- (ರೂಪಾಯಿ ಒಂದು ಕೋಟಿ ನಲವತ್ತ ಒಂದು ಲಕ್ಷ ಎಭತ್ತ ಒಂದದು ಸಾವಿರದ ಆರು ನೂರ ತೊಂಬತ್ತ ಆರು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದ್ದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ–ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಅಧಿಕೃತ ಅಧಿಕಾರಿ
ಇಂಡಿಯಾ ಎಸ್‌ಎಂಇ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ ಪರವಾಗಿ
(ಐಎಸ್‌ಎಆರ್‌ಸಿ) – 2025-2026-5 ಟ್ರಸ್ಟ್

ಸ್ಥಳ : ಹಾಸನ

THIS IS A PUBLIC ANNOUNCEMENT FOR INFORMATION PURPOSES ONLY AND IS NOT A PROSPECTUS ANNOUNCEMENT AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES UNDER THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED ("SEBI ICDR REGULATIONS"). INITIAL PUBLIC OFFERING OF EQUITY SHARES ON THE MAIN BOARD OF BSE LIMITED ("BSE") AND NATIONAL STOCK EXCHANGE OF INDIA LIMITED ("NSE") (TOGETHER, THE "STOCK EXCHANGES") IN COMPLIANCE WITH CHAPTER II OF THE SEBI ICDR REGULATIONS. NOT FOR RELEASE, PUBLICATION OR DISTRIBUTION DIRECTLY OR INDIRECTLY, OUTSIDE INDIA.

(Please scan this QR code to view the Draft Red Herring Prospectus and the Draft Abridged Prospectus)

PUBLIC ANNOUNCEMENT

PLAYSIMPLE

PLAYSIMPLE GAMES LIMITED

Our Company was originally incorporated as 'PlaySimple Games Private Limited' as a private limited company under the Companies Act, 2013, pursuant to a certificate of incorporation dated November 24, 2014, issued by the Registrar of Companies, Karnataka at Bangalore. Subsequently, our Company was converted to a public limited company pursuant to the Board and the Shareholders' resolution each dated January 22, 2026. Consequently, the name of our Company was changed to 'PlaySimple Games Limited' and a fresh certificate of incorporation dated February 4, 2026, was issued by the Registrar of Companies, Central Processing Centre. For more details, see *"History and Certain Corporate Matters"* beginning on page 199 of the draft red herring prospectus dated April 23, 2026 (**"DRHP"**).

Registered and Corporate Office: Anjaneya Techno Park No.147, Kodihalli, HAL Old Airport Road, Bangalore – 560 008, Karnataka, India
Telephone: +91 80 4092 3927 **Website:** www.playsimple.in; **Contact person:** Manasa Rama, Company Secretary and Compliance Officer; **E-mail:** secretarial@playsimple.in
Corporate Identity Number: U72900KA2014PLC077406

THE PROMOTERS OF OUR COMPANY: MTGx GAMING HOLDING AB AND MODERN TIMES GROUP MTG AB (PUBL)

INITIAL PUBLIC OFFER OF UP TO [●] EQUITY SHARES OF FACE VALUE OF ₹1 EACH ("EQUITY SHARES") OF PLAYSIMPLE GAMES LIMITED ("COMPANY") FOR CASH AT A PRICE OF ₹[●] PER EQUITY SHARE (INCLUDING A SHARE PREMIUM OF ₹[●] PER EQUITY SHARE) ("OFFER PRICE") AGGREGATING UP TO ₹31,500.00 MILLION (THE "OFFER") THROUGH AN OFFER FOR SALE OF UP TO [●] EQUITY SHARES OF FACE VALUE OF ₹1 EACH AGGREGATING UP TO ₹31,500.00 MILLION BY MTGx GAMING HOLDING AB (THE "PROMOTER SELLING SHAREHOLDER") (SUCH SALE, THE "OFFER FOR SALE").

THE OFFER INCLUDES A RESERVATION OF [●] EQUITY SHARES OF FACE VALUE OF ₹1, AGGREGATING UP TO ₹ [●] MILLION (CONSTITUTING UP TO [●] % OF THE POST-OFFER PAID-UP EQUITY SHARE CAPITAL), FOR SUBSCRIPTION BY ELIGIBLE EMPLOYEES ("EMPLOYEE RESERVATION PORTION"). THE OFFER LESS THE EMPLOYEE RESERVATION PORTION IS HEREINAFTER REFERRED TO AS THE "NET OFFER". THE OFFER AND THE NET OFFER SHALL CONSTITUTE [●] % AND [●] % OF THE POST-OFFER PAID-UP EQUITY SHARE CAPITAL OF OUR COMPANY, RESPECTIVELY.

In case of any revision in the Price Band, the Bid/ Offer Period will be extended by at least three additional Working Days after such revision in the Price Band, subject to the Bid/Offer Period not exceeding 10 Working Days. In cases of *force majeure*, banking strike or similar unforeseen circumstances, our Company and the Promoter Selling Shareholder, in consultation with the BRLMs, may for reasons to be recorded in writing, extend the Bid/Offer Period for a minimum of one Working Day, subject to the Bid/Offer Period not exceeding 10 Working Days. Any revision in the Price Band and the revised Bid/ Offer Period, if applicable, shall be widely disseminated by notification to the Stock Exchanges, by issuing a public notice, and also by indicating the change on the respective websites of the BRLMs and at the terminals of the Syndicate Members and by intimation to Self-Certified Syndicate Banks **("SCSBs")**, the Designated Intermediaries and the Sponsor Banks, as applicable.

This is an Offer in terms of Rule 19(2)(b) of the SCRR read with Regulation 31 of the SEBI ICDR Regulations. This Offer is being made through the Book Building Process in compliance with Regulation 6(1) of the SEBI ICDR Regulations wherein in terms of Regulation 32(1) of the SEBI ICDR Regulations not more than 50% of the Net Offer shall be available for allocation on a proportionate basis to Qualified Institutional Buyers (**"QIBs"** and such portion the **"QIB Portion"**) provided that our Company and the Promoter Selling Shareholder, in consultation with the BRLMs, may allocate up to 60% of the QIB Portion to Anchor Investors on a discretionary basis in accordance with the SEBI ICDR Regulations (**"Anchor Investor Portion"**), of which 33.33% shall be reserved for domestic Mutual Funds, and 6.67% shall be reserved for life insurance companies and pension funds subject to valid Bids being received from domestic Mutual Funds, Life Insurance Companies and Pension Funds at or above the Anchor Investor Allocation Price, in accordance with the SEBI ICDR Regulations. In the event of under-subscription or non-allocation in the Anchor Investor Portion, the balance Equity Shares shall be added to the QIB Portion (other than the Anchor Investor Portion) (**"Net QIB Portion"**). Further, 5% of the Net QIB Portion shall be available for allocation on a proportionate basis to Mutual Funds only and the remainder of the Net QIB Portion shall be available for allocation on a proportionate basis to all QIBs (other than Anchor Investors) including Mutual Funds, subject to valid Bids being received at or above the Offer Price. However, if the aggregate demand from Mutual Funds is less than 5% of the Net QIB Portion, the balance Equity Shares available for allocation in the Mutual Fund Portion will be added to the remaining QIB Portion for proportionate allocation to QIBs. Further, not less than 15% of the Net Offer shall be available for allocation to Non- Institutional Bidders **("NIBs")** of which (a) one third portion shall be reserved for Bidders with application size of more than ₹0.20 million and up to ₹1 million; and (b) two-thirds of the portion shall be reserved for Bidders with application size of more than ₹1 million, provided that the unsubscribed portion in either of such sub-categories may be allocated to Bidders in other sub-category of the NIBs in accordance with SEBI ICDR Regulations and not less than 35% of the Net Offer shall be available for allocation to Retail Individual Bidders **("RIBs")** in accordance with the SEBI ICDR Regulations, subject to valid Bids being received from them at or above the Offer Price. Further, Equity Shares will be allocated on a proportionate basis to Eligible Employees applying under the **("Employee Reservation Portion")**, subject to valid Bids received from them at or above the Offer Price. All Bidders (except Anchor Investors) are required to mandatorily utilise the Application Supported by Blocked Amount **("ASBA")** process by providing details of their respective ASBA accounts and UPI ID (in case of UPI Bidders *(defined herein)* using the UPI Mechanism), in which case the corresponding Bid Amounts will be blocked by the SCSBs or under the UPI Mechanism, as applicable to participate in the Offer. Anchor Investors are not permitted to participate in the Anchor Investor Portion of the Offer through the ASBA process. For details, see *"Offer Procedure"* beginning on page 348 of the DRHP.

This public announcement is being made in compliance with the provisions of Regulation 26(2) of the SEBI ICDR Regulations to inform the public that our Company is proposing, subject to applicable statutory and regulatory requirements, receipt of requisite approvals, market conditions and other considerations, to make an initial public offering of its Equity Shares pursuant to the Offer and has filed the DRHP along with the Draft Abridged Prospectus dated April 23, 2026, with the Securities and Exchange Board of India ("**SEBI**") and with the Stock Exchanges. Pursuant to Regulation 26(1) of the SEBI ICDR Regulations, the DRHP along with the Draft Abridged Prospectus filed with SEBI and the Stock Exchanges have been made available to the public for comments, if any, for a period of at least 21 days from the date of publication of this public announcement by hosting it on the website of SEBI at www.sebi.gov.in, websites of the Stock Exchanges at, www.bseindia.com and www.nseindia.com, on the website of the Company at www.playsimple.in; and on the websites of the Book Running Lead Managers ("**BRLMs**"), i.e. Axis Capital Limited, J.P. Morgan India Private Limited and Morgan Stanley India Company Private Limited at www.axiscapital.co.in, www.jpmipl.com and www.morganstanley.com, respectively. Our Company invites the public to give their comments on the DRHP along with the Draft Abridged Prospectus filed with SEBI and the Stock Exchanges, with respect to disclosures made in the DRHP along with the Draft Abridged Prospectus. The public is requested to send a copy of the comments to SEBI, to the Company Secretary and Compliance Officer of our Company and/or the BRLMs at their respective addresses mentioned herein. All comments must be received by SEBI and/or our Company and/or the Company Secretary and Compliance Officer of our Company and/or the BRLMs in relation to the Offer on or before 5.00 p.m. on the 21st day from the date of publication of this public announcement.

Investments in equity and equity-related securities involve a degree of risk and Bidders should not invest any funds in the Offer unless they can afford to take the risk of losing their entire investment. Bidders are advised to read the risk factors carefully before taking an investment decision in the Offer. For taking an investment decision, Bidders must rely on their own examination of our Company and the Offer, including the risks involved. The Equity Shares in the Offer have neither been recommended, nor approved by SEBI, nor does SEBI guarantee the accuracy or adequacy of the contents of the Draft Red Herring Prospectus. Specific attention of the Bidders is invited to *"Risk Factors"* beginning on page 24 of the DRHP.

Any decision to invest in the Equity Shares described in the DRHP may only be taken after the Red Herring Prospectus ("**RHP**") has been filed with the RoC and must be made solely on the basis of such RHP as there may be material changes in the RHP from the DRHP and the Draft Abridged Prospectus. The Equity Shares, when issued through the RHP, are proposed to be listed on the Stock Exchanges.

For details of the share capital and capital structure and the names of the signatories to the Memorandum of Association and the number of shares subscribed by them of our Company, please see the section titled *"Capital Structure"* beginning on page 76 of the DRHP. The liability of the members of our Company is limited by their shares. For details of the main objects of our Company as contained in the Memorandum of Association, please see the section titled *"History and Certain Corporate Matters"* beginning on page 199 of the DRHP.

BOOK RUNNING LEAD MANAGERS			REGISTRAR TO THE OFFER
AXIS CAPITAL	J.P.Morgan	Morgan Stanley	MUFG MUFG Intime
Axis Capital Limited 1st Floor, Axis House, Pandurang Budhkar Marg, Worli Mumbai - 400 025, Maharashtra, India **Tel:** +91 22 4325 2183 **E-mail:** playsimple.ipo@axiscap.in **Website:** www.axiscapital.co.in **Investor Grievance ID:** investor.grievance@axiscap.in **Contact Person:** Pavan Naik **SEBI Registration Number:** INM000012029	**J.P. Morgan India Private Limited** J.P. Morgan Tower, Off C.S.T. Road Kalina, Santacruz East Mumbai - 400 098, Maharashtra, India **Tel:** +91 22 6157 3000 **E-mail:** PlaySimple_IPO@jpmorgan.com **Website:** www.jpmipl.com **Investor Grievance ID:** investorsmb.jpmipl@jpmorgan.com **Contact Person:** Darshil Mehta **SEBI Registration Number:** INM000002970	**Morgan Stanley India Company Private Limited** Altimus, Level 39 & 40, Pandurang Budhkar Marg, Worli, Mumbai - 400 013 Maharashtra, India **Tel:**+91 22 6118 1000 **E-mail:** playsimpleipo@morganstanley.com **Website:** www.morganstanley.com **Investor Grievance ID:** investors_india@morganstanley.com **Contact Person:** Priyank Rekhan **SEBI Registration No:** INM000011203	**MUFG Intime India Private Limited** ***(Formerly Link Intime India Private Limited)*** C-101, Embassy 247, L.B.S Marg, Vikhroli (West), Mumbai - 400 083 Maharashtra, India Tel: +91 810 811 4949 **E-mail:** playsimplegames.ipo@in.mpms.mufg.com **Investor Grievance ID:** playsimplegames.ipo@in.mpms.mufg.com **Website:** www.in.mpms.mufg.com **Contact Person:** Shanti Gopalkrishnan SEBI Registration No.: INR000004058

All capitalized terms used herein and not specifically defined shall have the same meaning as ascribed to them in the DRHP.

For **PLAYSIMPLE GAMES LIMITED**
(Formerly known as PlaySimple Games Private Limited)
On behalf of the Board of Directors
Sd/-
Manasa Rama
Company Secretary and Compliance Officer

Place: Bangalore, Karnataka
Date: April 24, 2026

PLAYSIMPLE GAMES LIMITED is proposing, subject to applicable statutory and regulatory requirements, receipt of requisite approvals, market conditions and other considerations, to make an initial public offering of its Equity Shares and has filed the DRHP along with the Draft Abridged Prospectus dated April 23, 2026 with SEBI and the Stock Exchanges. The DRHP along with the Draft Abridged Prospectus is available on the website of SEBI at www.sebi.gov.in, as well as on the websites of the Stock Exchanges i.e. BSE and NSE at www.bseindia.com and www.nseindia.com, respectively, on the website of the Company at www.playsimple.in; and on the websites of the Book Running Lead Managers ("**BRLMs**"), i.e. Axis Capital Limited, J.P. Morgan India Private Limited and Morgan Stanley India Company Private Limited at www.axiscapital.co.in, www.jpmipl.com and www.morganstanley.com, respectively. Any potential Bidders should note that investment in equity shares involves a high degree of risk and for details relating to such risk, see ***"Risk Factors"*** beginning on page 24 of the DRHP and the details set out in the RHP, when filed. Potential Bidders should not rely on the DRHP or the Draft Abridged Prospectus filed with SEBI and the Stock Exchanges for making any investment decision and should instead rely on the RHP, when filed, for making investment decision.

This announcement is not an offer of securities for sale in the United States or elsewhere. The Equity Shares offered in the Offer have not been, and will not be, registered under the United States Securities Act of 1933, as amended ("U.S. Securities Act") or any state securities laws in the United States, and unless so registered, may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable U.S. state securities laws. Accordingly, the Equity Shares are being offered and sold (i) to persons in the United States that are "qualified institutional buyers" as defined in Rule 144A under the U.S. Securities Act in transactions exempt from, or not subject to, the registration requirements of the U.S. Securities Act and (ii) outside the United States in "offshore transactions" in reliance on Regulation S under the U.S. Securities Act and the applicable laws of the jurisdictions where such offers and sales occur. There will be no public offering in the United States.

Adfactors 018/26

ಪಂಚರಾಜ್ಯ ಪವರ್ ವಾರ್

ಚುನಾವಣಾ ಚುರುಮುರಿ

ಪ್ರಚಾರದ ಪ್ರಭಾವ

ಕಾಂಗ್ರೆಸ್ ನಾಯಕರಿಗೆ ಈಗ ಬಿಡುವೆಂಬುದೇ ಇಲ್ಲ. ತಮಿಳುನಾಡು ವಿಧಾನಸಭಾ ಚುನಾವಣೆಯ ಪ್ರಯುಕ್ತ ಅಲ್ಲಿ ಪ್ರಚಾರ ಕಾರ್ಯದಲ್ಲಿ 'ಬ್ಯುಸಿ'ಯಾಗಿದ್ದ ಅವರು, ಈಗ ಪಶ್ಚಿಮ ಬಂಗಾಳದೆಡೆಗೆ ಮುಖ ಮಾಡಿದ್ದಾರೆ, ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಕ್ಕೆ ಓಗೊಡುವಂತೆ ಅವರು ಮತ ದಾರರನ್ನು ಆಗ್ರಹಿಸುತ್ತಿದ್ದಾರೆ. ಇದು ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ಅರವಿಂದ ಕೇಜ್ರಿವಾಲರಿಗೂ ಅನ್ವಯಿಸುವ ಮಾತು. ಬಂಗಾಳದಲ್ಲಿ ಎರಡನೇ ಹಂತದ ಮತದಾನವು ಏ.29 ರಂದು ನಡೆಯಲಿದ್ದು, ಎರಡು ದಿನಗಳ ಪ್ರಚಾರಕಾರ್ಯದಲ್ಲಿ ವ್ಯಸ್ತರಾಗಿ ಟಿಎಂಸಿ ಪಕ್ಷವನ್ನು ಬೆಂಬಲಿಸುವಂತೆ ಮತದಾರರನ್ನು ಕೋರಲಿದ್ದಾರಂತೆ ಕೇಜ್ರಿವಾಲ್. ತಾವೇನು ಕಮ್ಮಿ ಎನ್ನುವಂತೆ ಶಿವಸೇನೆ (ಉದ್ಧವ್ ಠಾಕ್ರೆ ಬಣ) ನಾಯಕ ಉದ್ಧವ್ ಠಾಕ್ರೆ, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್, ಜಾರ್ಖಂಡ್ ಮುಕ್ತಿ ಮೋರ್ಚಾ ಪಕ್ಷದ ಹೇಮಂತ್ ಸೊರೇನ್ ಮತ್ತು ಕಲ್ಪನಾ, ರಾಷ್ಟ್ರೀಯ ಜನತಾದಳದ ತೇಜಸ್ವಿ ಯಾದವ್ ಕೂಡ ಪಶ್ಚಿಮ ಬಂಗಾಳದ ಕಡೆಗೆ ಮುಖ ಮಾಡಲಿದ್ದಾರಂತೆ. ಆದರೆ, ಇಲ್ಲೊಂದು ವಿಲಕ್ಷಣ ಸಂಗತಿಯನ್ನು ಗಮನಿಸಬೇಕು. ಕಾಂಗ್ರೆಸ್ ಮತ್ತು ಡಿಎಂಕೆ ಪಕ್ಷಗಳು ತಮಿಳುನಾಡಿನಲ್ಲಿ ಪರಸ್ಪರ ಹೆಗಲು ಕೊಟ್ಟು ಚುನಾವಣೆಯಲ್ಲಿ ಸ್ಪರ್ಧಿಸಿದ್ದರೂ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಡಿಎಂಕೆಯ ನಾಯಕ ಎಂ.ಕೆ.ಸ್ಟಾಲಿನ್ ಅವರೊಂದಿಗೆ ವೇದಿಕೆಯನ್ನು ಹಂಚಿಕೊಂಡಿಲ್ಲ. 'ಇದು ಈ ಎರಡೂ ಪಕ್ಷಗಳು ಬೇರೆಯಾಗುವುದರ ಆರಂಭಿಕ ಲಕ್ಷಣಗಳೇ?' ಎಂದು ರಾಜಕೀಯ ಪಂಡಿತರು ತಲೆ ಕೆಡಿಸಿಕೊಂಡಿದ್ದಾರಂತೆ!

ಹೀಗೂ ಉಂಟು ಮಾರಾಯ್ರೆ!

ಈಕೆಯ ಹೆಸರು 'ಕಲಿತಾ ಮಾಜಿ'. 38ರ ಹರೆಯದ ಈಕೆಯದು ಮನೆ ಮನೆಗಳಲ್ಲಿ ಪಾತ್ರೆ ತೊಳೆಯುವ, ಬಟ್ಟೆ ಒಗೆಯುವ ಕಾಯಕ. ಅಂದು ಮಾರ್ಚ್ 27. ಕಲಿತಾ ಮಾಜಿ ಎಂದಿನಂತೆ ಮನೆಗೆಲಸಕ್ಕೆ ಹೊರಟರು. ಆದರೆ ಮನೆಯೊಂದರಲ್ಲಿ, 'ಇನ್ನು ಮುಂದೆ ನಿಮ್ಮ ಸೇವೆ ಅಗತ್ಯವಿಲ್ಲ' ಎಂದು ಅವರಿಗೆ ತಿಳಿಸಲಾಯಿತು. ಅವರು ಕೆಲಸ ಮಾಡುತ್ತಿದ್ದ ಇನ್ನೊಂದು ಮನೆಯವರಿಂದಲೂ ಇದೇ ಉತ್ತರ ಬಂತು. ಕಾರಣ ಗೊತ್ತೇ? ಅವರನ್ನು ಹಿಂದಿನ ದಿನವಷ್ಟೇ ಪಶ್ಚಿಮ ಬಂಗಾಳದ ಪೂರ್ಬ ಬರ್ಧಮಾನ್ ಜಿಲ್ಲೆಯ 'ಔಸ್‌ಗ್ರಾಮ್' ಎಂಬ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಬಿಜೆಪಿ ಘೋಷಿಸಿತ್ತು!

ಕಲಿತಾ ಮಾಜಿ ಅವರು ಮನೆಗೆಲಸದಿಂದ ತಿಂಗಳಿಗೆ ಹತ್ತತ್ತಿರ 3,000 ರುಪಾಯಿ ಸಂಪಾದಿಸುತ್ತಿದ್ದರಂತೆ. ಅವರ ಪತಿ 'ಸುಬ್ರತಾ ಮಾಜಿ' ಕೂಡ ದಿನಗೂಲಿ ನೌಕರರು. ಹೀಗಾಗಿ ಅವರಿಬ್ಬರ ಆದಾಯವು ಮನೆಯ ಮತ್ತು ಮಗನ ಶಿಕ್ಷಣ ವೆಚ್ಚವನ್ನು ಸರಿದೂಗಿಸುವ ಮಟ್ಟದಲ್ಲೇನೂ ಇಲ್ಲವಂತೆ. ಇಷ್ಟಿದ್ದೂ, ''ನೀವು ಕೆಲಸವನ್ನು ಕಳೆದುಕೊಂಡಿದ್ದರ ಬಗ್ಗೆ ಚಿಂತಿಸಬೇಕಿಲ್ಲ'' ಎಂದು ಸ್ಥಳೀಯ ಬಿಜೆಪಿ ನಾಯಕರು ಕಲಿತಾರಿಗೆ ಭರವಸೆ ನೀಡಿದ್ದಾರಂತೆ. ಹೀಗಾಗಿ ಕಲಿತಾ ಅವರು ಜನರನ್ನು ಭೇಟಿಮಾಡಿ ಆಶೀರ್ವಾದ ಪಡೆಯುತ್ತ, ಚುನಾವಣಾ ಪ್ರಚಾರಕಾರ್ಯದಲ್ಲಿ ವ್ಯಸ್ತರಾಗಬೇಕಾಗಿ ಬಂತು!

ಕಲಿತಾ ಅವರ ರಾಜಕೀಯ ಪಯಣವು ಅವರ ಹೊಟ್ಟೆಪಾಡಿನ ಮೇಲೆ ಪರಿಣಾಮ ಬೀರುತ್ತಿರುವುದು ಇದೇ ಮೊದಲೇನಲ್ಲ. 2021ರಲ್ಲಿಯೂ ಬಿಜೆಪಿ ಈ ಕ್ಷೇತ್ರದಿಂದ ತಮ್ಮನ್ನು ಕಣಕ್ಕಿಳಿಸಿದಾಗಲೂ ಕಲಿತಾ ಕೆಲಸದಿಂದ ಬಿಡುವು ತೆಗೆದುಕೊಳ್ಳಬೇಕಾಗಿ ಬಂದಿತ್ತು. ಆ ಬಾರಿಯ ಚುನಾವಣೆಯಲ್ಲಿ ಕಲಿತಾ ಅವರು ಶೇ. 40.80ರಷ್ಟು ಮತಗಳನ್ನು ದಕ್ಕಿಸಿಕೊಂಡಿದ್ದು ಹೌದಾದರೂ, ಶೇ.46.25ರಷ್ಟು ಮತಗಳನ್ನು ಬುಟ್ಟಿಗೆ ಹಾಕಿಕೊಂಡ ತೃಣಮೂಲ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಅಭೇದಾನಂದ ಥಂಡರ್ ಅವರ ವಿರುದ್ಧ ಸೋಲುಣ್ಣಬೇಕಾಯಿತು. ಈ ಬಾರಿ ಕಲಿತಾ ವಿರುದ್ಧ ತೃಣಮೂಲ ಕಾಂಗ್ರೆಸ್ ವತಿಯಿಂದ ಶ್ಯಾಮ ಪ್ರಸನ್ನ ಎಂಬ ವಕೀಲರು ಸ್ಪರ್ಧಿಸಿದ್ದಾರಂತೆ. ''ಈ ಸಲ ನಾನು ಗೆದ್ದೇ ಗೆಲ್ಲುತ್ತೇನೆ'' ಎಂದು ಅದಾಗಲೇ ಆತ್ಮವಿಶ್ವಾಸದಿಂದ ಬೀಗುತ್ತಿದ್ದಾರಂತೆ ಕಲಿತಾ ಮಾಜಿ.

ಆಗಲಿ, ಫಲಿತಾಂಶದ ದಿನವಾದ ಮೇ 4ರ ತನಕ ಕಾಯೋಣ, ಅಲ್ಲವೇ?!

ಹಿಂದೂಗಳ ಕಡೆಗಣನೆ: ಹಿಮಂತ ಆರೋಪ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲೀಗ 2ನೇ ಹಂತದ ವಿಧಾನಸಭಾ ಚುನಾವಣೆಗೆ ಭರ್ಜರಿ ಪ್ರಚಾರ ಸಾಗಿದ್ದು, ರಾಜಕೀಯ ಎದುರಾಳಿಗಳ ವಾಗ್ದಾಳಿ ಎಗ್ಗಿಲ್ಲದೇ ಸಾಗಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಹಿಂದೂಗಳನ್ನು ಕಡೆಗಣಿಸುತ್ತಿದ್ದಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಆರೋಪಿಸಿದ್ದಾರೆ. ಕಲ್ನಾದಲ್ಲಿ ಚುನಾವಣಾ ಪ್ರಚಾರಸಭೆಯಲ್ಲಿ ಮಾತನಾಡಿದ ಶರ್ಮಾ, ''ಮಮತಾ ಅವರ ಯಾವುದೇ ಭಾಷಣದ ವಿಡಿಯೋವನ್ನು ನೋಡಿ, ಐದು ಬಾರಿ ಹಜ್ ಯಾತ್ರೆಗೆ ಹೋಗಿಬಂದವರಂತೆ 'ಇನ್ಶಾ ಅಲ್ಲಾ', 'ಖುದಾ ಹಫೀಜ್' ಅಂತ ಹೇಳುತ್ತಲೇ ಇರುತ್ತಾರೆ. ಬಂಗಾಳದಲ್ಲಿ ಹಿಂದೂಗಳು ಕೂಡ ಇದ್ದಾರೆ ಎಂಬ ಸತ್ಯವನ್ನು ಮಮತಾ ಮರೆತಂತಿದೆ. ಅವರು ದುರ್ಗಿ ಮತ್ತು ಕಾಳಿ ದೇವಿಯರ ಹೆಸರನ್ನೂ ಜಪಿಸಬೇಕು. ಇಲ್ಲದಿದ್ದರೆ ಚುನಾವಣೆಯಲ್ಲಿ ಸೋತ ಬಳಿಕ ಅವರಿಗೆ ಶಾಂತಿ ಸಿಗುವುದಿಲ್ಲ. ಮಮತಾ ಅವರೇ 'ಜೈ ಶ್ರೀರಾಮ್' ಎಂಬ ಘೋಷಣೆ ಕೂಡ ಇದೆ ಎಂಬುದನ್ನು ಮರೆಯಬೇಡಿ'' ಎಂದು ಕುಟುಕಿದರು.

ಮಾತು ಮುಂದುವರಿಸಿದ ಶರ್ಮಾ, ''ಬಂಗಾಳದಲ್ಲಿ ಯಾರೋ ಒಬ್ಬರು ಬಾಬರಿ ಮಸೀದಿ ಕಟ್ಟುತ್ತೇವೆ ಎಂದರೆ, ಇನ್ನೊಬ್ಬರು ಷಹಜಹಾನ್ ಮಸೀದಿ ಕಟ್ಟುತ್ತೇವೆ ಎನ್ನುತ್ತಾರೆ. ನೀವು ಎಲ್ಲಿ ಬೇಕೆಂದರಲ್ಲಿ ಮಸೀದಿ ನಿರ್ಮಿಸಲು ಹೇಗೆ ಸಾಧ್ಯ? ಇದು ನಿಮ್ಮಪ್ಪನ ಆಸ್ತಿಯೇ?'' ಎಂದು ಪ್ರಶ್ನಿಸಿದರು.

ಮಮತಾ ದೀದಿಯ ನಿದ್ದೆಗೆಡಿಸಿದ್ದ ಅಭಯಾಳ ಸುತ್ತ...

ಗ್ರೌಂಡ್ ರಿಪೋರ್ಟ್

ರಾಘವಶರ್ಮ ನಿಡ್ಲೆ

ಪಾನಿಹಟಿ (ಪ.ಬಂಗಾಳ): 2024ರ ಆಗಸ್ಟ್ ತಿಂಗಳು. ಕೋಲ್ಕತ್ತಾದ ಆರ್.ಜಿ. ಕರ್ ಸರಕಾರಿ ಆಸ್ಪತ್ರೆಯ ಟ್ರೈನಿ ಮೆಡಿಕಲ್ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಬರ್ಬರ ಹತ್ಯೆ ಘಟನೆ ಇಡೀ ರಾಜ್ಯವನ್ನು ಬಡಿದೆಬ್ಬಿಸಿತ್ತು. ರಾಜ್ಯ ಸರಕಾರದ ನಿಷ್ಕ್ರಿಯತೆಗೆ ಮತ್ತು ಸಂತ್ರಸ್ತೆಯ ಕುಟುಂಬಕ್ಕೆ ನ್ಯಾಯ ಒದಗಿಸುವಲ್ಲಿ ಸರಕಾರ ವಿಫಲವಾಗಿದೆ ಎಂದು ಜನರು ಜಾತಿ-ಧರ್ಮ ನೋಡದೆ ಬೀದಿಗಿಳಿದಿದ್ದರು. ಸಿಎಂ ಮಮತಾ ಬ್ಯಾನರ್ಜಿ ತಮ್ಮ 15 ವರ್ಷಗಳ ಅಧಿಕಾರಾವಧಿಯಲ್ಲಿ ಎದುರಿಸಿದ್ದ ಅತ್ಯಂತ ಸವಾಲಿನ ಘಟನೆ ಇದಾಗಿತ್ತು. ರಾಜ್ಯದಲ್ಲಿ

ವಿಶ್ವವಾಣಿ ಬಂಗಾಳ ಚುನಾವಣಾ ಯಾತ್ರೆ

ಮಹಿಳೆಯರು ಸುರಕ್ಷಿತರಾಗಿಲ್ಲ ಎಂಬ ಬಿಜೆಪಿ, ಎಡಪಕ್ಷಗಳ ಆರೋಪಕ್ಕೂ ವೇಗ ಸಿಕ್ಕಿತ್ತು. ಪ್ರಕರಣದಲ್ಲಿ ರಾಜ್ಯ ಪೊಲೀಸರ ವೈಫಲ್ಯದಿಂದಾಗಿ ಕಲ್ಕತ್ತಾ ಹೈಕೋರ್ಟ್ ಮಧ್ಯಪ್ರವೇಶಿಸಿ ಕೇಸ್ ಅನ್ನು ಸಿಬಿಐಗೆ ವರ್ಗಾವಣೆ ಮಾಡಿತ್ತು. ಸುಪ್ರೀಂಕೋರ್ಟ್

ಬಿಜೆಪಿ ಅಭ್ಯರ್ಥಿ ರತ್ನಾ ದೇಬ್ನಾಥ್ ಪೋಸ್ಟರ್

ಕೂಡ 'ರಾಜ್ಯ ಸರಕಾರ ಬೇಜವಾಬ್ದಾರಿಯಂತೆ ವರ್ತಿಸಿದೆ' ಎಂದು ಆಕ್ರೋಶ ಹೊರಹಾಕಿತ್ತು. 2025ರಲ್ಲಿ, ಆರೋಪಿ ಸಂಜಯ್ ರಾಯ್ ಅಪರಾಧಿ ಎಂದು ಸಾಬೀತಾಗಿ ಜೀವಾವಧಿ ಶಿಕ್ಷೆಗೆ ಗುರಿಯಾದ. ಮರಣದಂಡನೆ ಶಿಕ್ಷೆಗೆ ಆಗ್ರಹಿಸಿದ ವೈದ್ಯೆ ವಿದ್ಯಾರ್ಥಿನಿ ಅಭಯಾಳ ಕುಟುಂಬ, ಆಕೆಯ ನೆನಪಿನಲ್ಲೇ ದಿನ ದೂಡುತ್ತಿದೆ.

ಮಗಳು ವೈದ್ಯೆಯಾಗಿ ಜನರ ಕಷ್ಟಕ್ಕೆ ಸ್ಪಂದಿಸುತ್ತಾಳೆ, ಜನಮನ ಗೆಲ್ಲುತ್ತಾಳೆ ಎಂದು ಏನೇನೋ ಕನಸು ಕಂಡಿದ್ದ ತಾಯಿಗೆ ಜೀವನವೇ ಶೂನ್ಯ ಎಂದನಿಸಿತ್ತು. ಸರಕಾರದ ನಿಷ್ಕ್ರಿಯತೆ ವಿರುದ್ಧ ಸೆಟೆದುನಿಂತು, ಬಹಿರಂಗವಾಗಿ ಮಮತಾ ಬ್ಯಾನರ್ಜಿ ವಿರುದ್ಧ ಕೆಂಡಕಾರಿದರು. ಪಾಣಿಹಟಿಯ ಇತರೆ ಸಾಮಾನ್ಯರಂತೆ ಪತಿಯ ಟೈಲರಿಂಗ್ ಸಂಪಾದನೆಯಿಂದ ಕುಟುಂಬ ನಿರ್ವಹಿಸುತ್ತಿದ್ದ ರತ್ನ ದೇಬ್ನಾಥ್ ಎಂದಿಗೂ ರಾಜಕೀಯದ ಬಗ್ಗೆ ಆಸಕ್ತಿ ತೋರಿದವರಲ್ಲ, ಅಧಿಕಾರದ ಕನಸು ಕಂಡವರಲ್ಲ. ಆದರೆ ಮಗಳನ್ನು ಕಳೆದುಕೊಂಡ ತಾಯಿಗೆ, ವ್ಯವಸ್ಥೆ ಮೇಲಿದ್ದ ಆಕ್ರೋಶ ರಾಜಕೀಯದ ಹಾದಿ ತುಳಿಯುವಂತೆ ಮಾಡಿತು. ''ವ್ಯವಸ್ಥೆಯ ಭಾಗವಾಗದೇ ಇದ್ದರೆ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ ಇಲ್ಲ. ಹೀಗಾಗಿ, ರಾಜ್ಯದ ಮಹಿಳೆಯರ ನೋವಿಗೆ ದನಿಯಾಗುವ ಸಲುವಾಗಿ, ನಿಮ್ಮೆಲ್ಲರ ಮಗಳಾಗಿ ಸೇವೆ ಮಾಡುತ್ತೇನೆ'' ಎಂದು ರಾಜ್ಯ ವಿಧಾನಸಭೆ ಚುನಾವಣೆ ಕಣಕ್ಕೆ ಇಳಿದಿದ್ದಾರೆ.

ರತ್ನ ದೇಬ್ನಾಥ್ ಈಗ ಪಾನಿಹಟಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ. 2011ರಿಂದ ಸತತ 3 ಬಾರಿ ಗೆದ್ದ ನಿರ್ಮಲ್ ಘೋಷ್ ಬದಲಿಗೆ ಅವರ ಪುತ್ರ, ತೀರ್ಥಂಕರ್ ಘೋಷ್‌ಗೆ ಟಿಎಂಸಿ ಟಿಕೆಟ್ ನೀಡಿದೆ. ''ಅಭಯಾ ಅತ್ಯಾಚಾರ ಘಟನೆ ವೇಳೆ ನಾವು ಕುಟುಂಬದೊಂದಿಗೆ ಇದ್ದು, ಹೋರಾಟ ನಡೆಸಿದೆವು. ಆದರೆ, ರತ್ನ ದೇಬ್ನಾಥ್ ಬಿಜೆಪಿಯನ್ನು ಆಯ್ಕೆ ಮಾಡಿಕೊಂಡರು'' ಎಂದು ಎಡ ಪಕ್ಷಗಳ ನಾಯಕರಿಗೆ ಬೇಸರವಿದೆ. ಬಂಗಾಳದಲ್ಲಿ ಪ್ರಸ್ತುತತೆ ಕಳೆದುಕೊಂಡಿರುವ ಸಿಪಿಐನಿಂದ ಸ್ಪರ್ಧಿಸಿದರೆ, ವ್ಯವಸ್ಥೆಯ ಭಾಗ ಆಗಲು ಸಾಧ್ಯ ಇಲ್ಲ ಎಂದು ರತ್ನ ದೇಬ್ನಾಥ್ ಬಿಜೆಪಿ ಸೇರ್ಪಡೆಯಾದರು ಮತ್ತು ಸಿಎಂ ಮಮತಾ ಬ್ಯಾನರ್ಜಿಯಿಂದ ರಾಜ್ಯಕ್ಕೆ ಮುಕ್ತಿ ಬೇಕು ಎಂದು ಪ್ರಚಾರ ಮಾಡುತ್ತಿದ್ದಾರೆ.

ನಾನು ಪಾನಿಹಟಿಯ ನಾಟಗರ್ ಪ್ರದೇಶದಲ್ಲಿರುವ ಅಭಯಾ ಮನೆ ಮುಂದೆ ನಿಂತಿದ್ದೆ. ಅಭಯಾಳ ನೈಜ ಹೆಸರನ್ನು ಮನೆಯ ಮುಂದೆ ಬರೆಯಲಾಗಿತ್ತು. ಒಂದಿಷ್ಟು ಮಹಿಳೆಯರು ಶಾಲೆಯಿಂದ ತಮ್ಮ ಮಕ್ಕಳ ಬರುವಿಕೆಗಾಗಿ ಕಾಯುತ್ತಿದ್ದರು. ಅಭಯಾ ಅತ್ಯಾಚಾರ, ಚುನಾವಣೆ ಹೋರಾಟದ ಬಗ್ಗೆ ಮಾತನಾಡಲು ಯತ್ನಿಸಿದರೂ, ''ಒಳ್ಳೆ ಕೆಲಸ ಮಾಡಿದವರು ಚುನಾವಣೆ ಗೆಲ್ಲುತ್ತಾರೆ'' ಎಂದಷ್ಟೇ ಹೇಳಿ, ರಾಜಕೀಯ ಒಲವು-ನಿಲುವುಗಳ ಬಗ್ಗೆ ಅವರು ಉತ್ತರ ನೀಡಲು ಹಿಂಜರಿದರು.

ಶುಕ್ರವಾರದಂದು ಪ್ರಧಾನಿ ನರೇಂದ್ರ ಮೋದಿ ಕೂಡ ಪಾನಿಹಟಿಯಲ್ಲಿದ್ದರು ಮತ್ತು ವಿಶಾಲ ಜನಸಭೆ ಉದ್ದೇಶಿಸಿ ಮಾತನಾಡುತ್ತಾ, ''ಬಂಗಾಳದ ಮಗಳನ್ನು (ಅಭಯಾ) ಮಮತಾ ದೀದಿ ಕಿತ್ತುಕೊಂಡರು'' ಎಂದು ಟಿಎಂಸಿ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದರು. ಅದೇ ಸಂದರ್ಭದಲ್ಲಿ ನಾನು ಪಾನಿಹಟಿಯ ಎಚ್.ಬಿ. ಟೌನ್‌ನಲ್ಲಿದ್ದ ಆಶಿಮ್

ನೋಟಾ ಒತ್ತಲಿರುವ ಸುಭಾಷ್ ಸಿಂಗ್

ದಾಸ್, ಸುಶಾಂತ್ ಕರ್ಮಾಕರ್, ರಂಜಿತ್ ಕರ್ಮಾಕರ್ ಜತೆ ಮಾತನಾಡುತ್ತಿದ್ದೆ. ''ರತ್ನ ದೇಬ್ನಾಥ್ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಬೇಕಿತ್ತು. ಆದರೆ, ಬಿಜೆಪಿಗೆ ಸೇರ್ಪಡೆಯಾದ್ದರಿಂದ ಅಭಯಾ ಹೋರಾಟ ರಾಜಕೀಕರಣಗೊಂಡಿದೆ. ಅಭಯಾ ಹೆಸರನ್ನು ಬಿಜೆಪಿ ತನ್ನ ಲಾಭಕ್ಕೆ ಬಳಸಿಕೊಳ್ಳುತ್ತಿದೆ. ಹೋರಾಟದ ಸಂದರ್ಭದಲ್ಲಿ ಎಲ್ಲಾ ಪಕ್ಷಗಳು, ಜನರು ಅವರೊಂದಿಗೆ ಇದ್ದರು. ಆದರೆ, ಈಗ ಬಿಜೆಪಿಯವರು ಮಾತ್ರ. ಹಾಗಿದ್ದರೂ, ಕುಟುಂಬಕ್ಕೆ ನಮ್ಮ ನೈತಿಕ ಬೆಂಬಲ ಇರಲಿದೆ, ರಾಜಕೀಯವಾಗಿ ಅಲ್ಲ'' ಎಂದು ಮೂವರೂ ಹೇಳಿದರು. ''ರಾಜ್ಯದಲ್ಲಿ ಆಡಳಿತದ ಪರಿವರ್ತನೆ ಆಗಬೇಕು ಎಂಬ ಆಶಯವಿದ್ದರೂ, ಧರ್ಮ ರಾಜಕಾರಣ ಮಾಡುವ ಬಿಜೆಪಿಯನ್ನು ಒಪ್ಪಲು ಕಷ್ಟವಾಗುತ್ತದೆ. ಬಾಂಗ್ಲಾದೇಶಿಯರು, ರೋಹಿಂಗ್ಯಾಗಳು ಇಲ್ಲಿದ್ದಾರೆ ಎನ್ನುತ್ತಾರಲ್ಲ... ಅವರ ಬಗ್ಗೆ ಚುನಾವಣೆ ಆಯೋಗ ಡೇಟಾಗಳನ್ನು ಏಕೆ ನೀಡುತ್ತಿಲ್ಲ?'' ಎಂದು ಪ್ರಶ್ನಿಸಿದರು ಆಶಿಮ್ ದಾಸ್. ಈ ಮೂವರು ಅಲ್ಲಿಂದ ತೆರಳಿದ ಮೇಲೆ ನನ್ನೊಂದಿಗೆ ಮಾತನಾಡಿದ ಟೀ ಅಂಗಡಿ ಮಾಲಕಿ ಚಂದನ ದತ್ತೋರಾಯ್, ''15 ವರ್ಷದ ನಂತರ ಪರಿವರ್ತನೆ ಆಗಬೇಕು. ನಮಗೆ ಮೋದಿ ಆಡಳಿತ ಬೇಕು. ರಕ್ಷಣೆ, ನೌಕರಿ ಬೇಕು'' ಎಂದು ಮೆಲುದನಿಯಲ್ಲಿ ಮನದಾಳ ಹೊರಹಾಕಿದರು.

ಪಾನಿಹಟಿಯ ಮೊಲ್ಲಾರ್‌ಹಾಟ್ ಪ್ರದೇಶದ ಸಕೀಮಾ ಬೀಬಿ, ರೋಮಿತಾ ಬಿಸ್ವಾಸ್ ಮತ್ತು ದುಲಾರಿ ಸರೋಜ್ ''ಈ ಬಾರಿ ಬದಲಾವಣೆ ಆಗಲೇಬೇಕು'' ಎನ್ನುತ್ತಾ, ''ಮನೆ ಮಕ್ಕಳಿಗೆ ಸೂಕ್ತ ನೌಕರಿ ಸಿಗದೆ, ಸಣ್ಣಪುಟ್ಟ ಕೆಲಸ ಮಾಡಿಕೊಂಡು ಕೂಲಿಗಳಂತೆ ಬದುಕುತ್ತಿದ್ದಾರೆ. ಒಳ್ಳೆ ಸಂಬಳ ಬೇಕು ಎಂದರೆ ಬೇರೆ ರಾಜ್ಯಕ್ಕೆ ಹೋಗಬೇಕು. 'ಲಕ್ಷ್ಮಿ ಭಂಡಾರ್' ಹಣದಿಂದ ಜೀವನ ನಡೆಯುತ್ತದಾ? ಒಂದು ಸಿಲಿಂಡರ್ ಖರೀದಿಯಲ್ಲಿ ಹಣ ಖಾಲಿಯಾಗಿಬಿಡುತ್ತದೆ. ನೌಕರಿ ಕೊಡಿಸಲು ಮಮತಾ ದೀದಿ ಏನು ಮಾಡಿದ್ದಾರೆ?'' ಎಂದು ಕಿಡಿಕಾರಿದರು. ''ರಾಜ್ಯದಲ್ಲಿ ಸುರಕ್ಷತೆ ಇದ್ದಿದ್ದರೆ ಆರ್.ಜಿ. ಕರ್ ಆಸ್ಪತ್ರೆಯಲ್ಲಿ ನಮ್ಮೂರಿನ ಬೇಟಿಗೆ ಈ ದುರ್ಗತಿ ಬರುತ್ತಿತ್ತಾ?'' ಎಂದು ಪ್ರಶ್ನಿಸಿದರು.

''ಪಾಣಿಹಟಿಯಲ್ಲಿ ರತ್ನ ದೇಬ್ನಾಥ್‌ರನ್ನೇ ಜನ ಬೆಂಬಲಿಸಬೇಕು, ರಾಜ್ಯದಲ್ಲೂ ಪರಿವರ್ತನೆ ಆಗಬೇಕು'' ಎನ್ನುವುದು ಪಾನಿಹಟಿಯ ಬಟ್ಟೆ ಅಂಗಡಿಯೊಂದರ ಸಿಬ್ಬಂದಿ ಸುಭಾಷ್ ಸಿಂಗ್ ಅನಿಸಿಕೆ. ಆದರೆ, ದೇಶದಲ್ಲಿ 'ನೋಟಾ' ಜಾರಿಯಾದ ನಂತರದಿಂದ ಆತ 'ನೋಟಾ'ವನ್ನೇ ಆಯ್ಕೆ ಮಾಡುತ್ತಿದ್ದಾನಂತೆ. ಯಾವ ಅಭ್ಯರ್ಥಿಗೂ ನಮ್ಮ ಕಷ್ಟ ಅರ್ಥ ಆಗುವುದಿಲ್ಲ ಎನ್ನುವ ಸುಭಾಷ್, ''ರಾಜಕಾರಣಿಗಳ ಹಿಂದೆ-ಮುಂದೆ ಇದ್ದವರಿಗಷ್ಟೇ ಬೆಲೆ. ಬಡವರ ನೋವನ್ನು ಯಾರು ಕೇಳುತ್ತಾರೆ? ನನ್ನ ಮಗ ದುಡ್ಡು ಮಾಡಬೇಕು ಎಂದರೆ ಅವನನ್ನು ರಾಜಕಾರಣಿ ಜತೆ ಸೇರಿಸಬೇಕಷ್ಟೇ. ಇಲ್ಲಿ ಇದ್ದ ಸರಕಾರಿ ಶಾಲೆಯನ್ನು ನಡೆಸಲಾಗದೆ ಮುಚ್ಚಿದರು. ನಾನು ಮಗನನ್ನು ಈಗ ಖಾಸಗಿ ಶಾಲೆಗೆ ಹಾಕಿದ್ದೇನೆ. ತಿಂಗಳಿಗೆ 10 ಸಾವಿರ ಸಂಬಳದಲ್ಲಿ ಜೀವನ ನಡೆಯುತ್ತದೆಯೇ? ಟಿಎಂಸಿ, ಬಿಜೆಪಿ ಯಾರ ಬಗ್ಗೆಯೂ ನನಗೆ ಭರವಸೆ ಉಳಿದುಕೊಂಡಿಲ್ಲ. ಅಭಯಾ ತಾಯಿ ಗೆಲ್ಲಲಿ. ರಾಜಕಾರಣದಿಂದ ಅವರಿಗೆ ಒಳ್ಳೆಯದಾಗಲಿ'' ಎಂದು ಹಾರೈಸಿದ. ''ನೀವು ಬೆಂಗಳೂರಿನಿಂದ ಅಷ್ಟು ಹಣ ಖರ್ಚು ಮಾಡಿಕೊಂಡು ಇಲ್ಲಿಗೆ ಬಂದಿದ್ದೀರಲ್ಲ. ನಿಮ್ಮಿಂದಲೂ ಈ ಸಮಾಜ ಬದಲಾಯಿಸಲು ಸಾಧ್ಯವಿಲ್ಲ'' ಎಂದು ನನಗೂ ಹೇಳಿದ. ''ಆಯ್ತು, ಇಷ್ಟು ಹೊತ್ತು ಮಾತಾಡಿದ್ದಕ್ಕೆ ಶುಕ್ರಿಯಾ ಭಾಯ್ ಸಾಬ್'' ಎನ್ನುತ್ತಾ ನಾನು ಮುಂದೆ ಸಾಗಿದೆ.

ರತ್ನಾ ದೇಬ್ನಾಥ್‌ರನ್ನು ಅಭಯಾ ಕೇಸಿನ ಕಾರಣಕ್ಕಾಗಿ ಇಲ್ಲಿ ಎಲ್ಲರೂ ಬಲ್ಲರು. ಅವರು ಮನೆ ಮುಂದೆ ನಿಂತು ಮತ ಯಾಚಿಸುವಾಗ ತಮ್ಮ ಮನೆ ಮಗಳು ಎಂದು ಮಹಿಳೆಯರು ತಬ್ಬಿಕೊಂಡು ಕಣ್ಣೀರು ಹಾಕುವ ದೃಶ್ಯ ನಿತ್ಯವೂ ಕಾಣುತ್ತಿದೆ. ಕರುಳ ಕುಡಿ ಕಳೆದುಕೊಂಡ ನೋವು ಆ ತಾಯಿಯಂದಿರಿಗಿಂತ ಚೆನ್ನಾಗಿ ಬೇರೆ ಯಾರಿಗೆ ತಾನೇ ಅರ್ಥವಾದೀತು? ಆದರೆ, ಮಗಳ ಸಾವಿಗೆ ನ್ಯಾಯ ಬೇಕು ಎಂದು ಕೇಳಿದ ಹೋರಾಟವೇ ಬೇರೆ, ಚುನಾವಣಾ ರಾಜಕೀಯವೇ ಬೇರೆ. ರಾಜಕೀಯಕ್ಕಿಳಿದು ಹೋರಾಡಿದರೆ ಮಗಳ ಆತ್ಮಕ್ಕೆ ಶಾಂತಿ ಸಿಕ್ಕೀತು ಎಂದು ಕೇಸರಿಶಾಲು ಧರಿಸಿರುವ ರತ್ನ ದೇಬ್ನಾಥ್‌ರನ್ನು ಪಾಣಿಹಟಿ ಮತದಾರ ಅಪ್ಪಿಕೊಳ್ಳುವನೇ..?

ಆರ್.ಜಿ. ಕರ್.ಆಸ್ಪತ್ರೆಯಲ್ಲಿ ಓಡಾಡುತ್ತಾ...

ಆರ್.ಜಿ. ಕರ್ ಆಸ್ಪತ್ರೆಗೆ 'ವಿಶ್ವವಾಣಿ' ಭೇಟಿ ನೀಡಿದಾಗ ಆಸ್ಪತ್ರೆ ಆವರಣ ರೋಗಿಗಳ ಕುಟುಂಬಸ್ಥರಿಂದ ಗಿಜಿಗುಡುತ್ತಿತ್ತು. ಒಂದೊಂದು ಕುಟುಂಬದ್ದೂ ಒಂದೊಂದು ಗೋಳಿನ ಕಥೆ. ವಾಹನ ಓಡಾಟಕ್ಕೂ ಜಾಗವಿಲ್ಲ ಎಂಬಂತೆ ಅಲ್ಲಿ ಜನ ತುಂಬಿದ್ದರು. ರಸ್ತೆ, ಓಣಿಗಳಲ್ಲಿ ಹಾಸು ಗೋಣಿ ಹಾಕಿದ ಮಂದಿ ಅಲ್ಲೇ 10-20 ದಿನ, ತಿಂಗಳಿಂದ ವಾಸ್ತವ್ಯ ಹೂಡಿದ್ದರು. ಆಸ್ಪತ್ರೆಗೆ ಬರುವ ಬಹುತೇಕ ಮಂದಿ ಬಡವರು, ಆರ್ಥಿಕ ಸಂಕಷ್ಟದಲ್ಲಿರುವವರು. ಉತ್ತಮ ಚಿಕಿತ್ಸೆ ಸಿಗುತ್ತದೆ ಎಂದು ಕೆಲ ಮಧ್ಯಮ ವರ್ಗದವರೂ ಇದ್ದುದನ್ನು ನಾನು ನೋಡಿದೆ. ಆದರೆ, ಸುತ್ತಮುತ್ತ ಲವಲೇಶವೂ ಸ್ವಚ್ಛತೆ ಇರಲಿಲ್ಲ. ಚರಂಡಿ ನೀರು ಹರಿಯುತ್ತಿದ್ದ ಪಕ್ಕದಲ್ಲೇ ಬಟ್ಟೆಗಳನ್ನು ಹಾಸಿ ಜನ ಕೂತಿದ್ದರು.

ಹೂಗ್ಲಿ ಜಿಲ್ಲೆಯ ಚಂಡಿತಾಲದಿಂದ ಬಂದಿದ್ದ ಅಬ್ದುಲ್ ಹುಸೇನ್ ಮಲಿಕ್ ಎಂಬಾತನ ಪತ್ನಿಯ ತೊಡೆ ಸ್ನಾಯು ಸೆಳೆತ ವಿಪರೀತ ಮಟ್ಟಕ್ಕೆ ಹೋಗಿ, ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾಳೆ. ಕಳೆದ 12 ದಿನದಿಂದ ಆಸ್ಪತ್ರೆಯ ಹೊರಭಾಗದಲ್ಲಿ, ಆ ಬಿರುಬಿಸಿಲಿನಲ್ಲೇ ಪತ್ನಿಗಾಗಿ ಕಾದುಕುಳಿತಿದ್ದಾನೆ ಪತಿ. ''ಹೋಟೆಲ್‌ಗೆ ಹೋಗಬಹುದಲ್ಲ?'' ಎಂದು ಕೇಳಿದ್ದಕ್ಕೆ, ''ಅಷ್ಟೊಂದು ದುಡ್ಡು ಎಲ್ಲಿದೆ ಸರ್..'' ಎಂಬ ಉತ್ತರ ಬಂತು. ರಾಜ್ಯದಲ್ಲಿ ಪರಿವರ್ತನೆ ಬೇಕು ಎಂದು ಹೇಳಿದರೂ, ಟಿಎಂಸಿ ಹೊರತಾಗಿ ಆತನಲ್ಲಿ ಬೇರೆ ಆಯ್ಕೆಗಳಿರಲಿಲ್ಲ. ಆತನ ಪಕ್ಕದಲ್ಲೇ ಉತ್ತರ ಪರಗಣ ಜಿಲ್ಲೆಯ ರಿಂಕಿ ಬೊಯಿತೊ ಎಂಬ ಮಧ್ಯ ವಯಸ್ಸಿನ ಮಹಿಳೆ ಇದ್ದಳು. ''ಪತಿಗೆ ಮಿದುಳಿನ ಸ್ಟ್ರೋಕ್ ಆಗಿರುವುದರಿಂದ ಹೇಗೇಗೋ ವರ್ತಿಸುತ್ತಿದ್ದಾರೆ. ಚಿಕಿತ್ಸೆ ನಡೆಯುತ್ತಿದೆ. ಇನ್ನೂ ಸ್ಪಷ್ಟ ಚಿತ್ರಣ ಸಿಕ್ಕಿಲ್ಲ'' ಎಂದಳು. ''ನಿಮ್ಮಲ್ಲಿ 29ಕ್ಕೆ ಚುನಾವಣೆ ಇದೆ. ಏನು ಮನಸ್ಸು ಮಾಡಿದ್ದೀರಿ?'' ಎಂದು ಕೇಳಿದೆ. ''ನಮಗೆ ದೀದಿಯೇ ಸೂಕ್ತ. ಸರಕಾರದ 'ಲಕ್ಷ್ಮಿ ಭಂಡಾರ್' ಯೋಜನೆಯ ಮಾಸಿಕ 1500 ರು. ಹಣದಿಂದ ತುಂಬಾ ನೆರವಾಗಿದೆ. ನಮ್ಮ ಕಷ್ಟ ದೀದಿಗೆ ಅರ್ಥವಾಗುತ್ತದೆ'' ಎಂದು ಮೆಚ್ಚುಗೆ ವ್ಯಕ್ತಪಡಿಸಿದಳು. ''2024ರಲ್ಲಿ ಇಲ್ಲೊಂದು ಅತ್ಯಾಚಾರ ಘಟನೆ ನಡೆದಿತ್ತು, ಗೊತ್ತಿದೆಯೇ?'' ಎಂಬ ಪ್ರಶ್ನೆಗೆ, ''ಅದು ದುರದೃಷ್ಟಕರ. ಇಲ್ಲಿ ಮಾತ್ರವಲ್ಲ, ದೇಶದೆಲ್ಲೆಡೆ ದೌರ್ಜನ್ಯಗಳಾಗುತ್ತಲೇ ಇರುತ್ತವೆ. ಇದನ್ನು ಹೇಗೆ ನಿಯಂತ್ರಿಸುವುದು ನೀವೇ ಹೇಳಿ?'' ಎಂದು ನನ್ನನ್ನೇ ಪ್ರಶ್ನಿಸಿದಳು.

ಹೌರಾದ ಸಿರಾಂಪುರ್‌ನಿಂದ ಬಂದಿದ್ದ ಸಾಜೋಲ್ ಚಕ್ರವರ್ತಿ ಎಂಬಾತನ ಜತೆ ಮಾತನಾಡಿದಾಗ, ''ಪತ್ನಿಯು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾಳೆ'' ಎಂದ. ''ಹಾಗಾದರೆ ನಿಮ್ಮ ಮನೆಗೆ ಲಕ್ಷ್ಮಿ ಭಂಡಾರ್ ಬಂತು'' ಎಂದು ಕಿಚಾಯಿಸಿದೆ. ಅವನೂ ಜೋರಾಗಿ ನಕ್ಕು ''1500 ರು.ನಿಂದ ನೌಕರಿ ಸಿಗುವುದೇ? ಯುವಕರಿಗೆ ಉದ್ಯೋಗಗಳಿಲ್ಲ. ಜನರ ಜೀವನ ಸುಧಾರಿಸುತ್ತಿಲ್ಲ'' ಎಂದರೂ, ಬಿಜೆಪಿಯನ್ನು ಆಯ್ಕೆ ಮಾಡುವ ಬಗ್ಗೆ ಆತನಲ್ಲಿ ಗೊಂದಲಗಳಿದ್ದವು. ''ಯಾರು ಗೆದ್ದರೂ ನಮ್ಮಂಥರಿಗೆ ಏನು ಲಾಭ, 29ರಂದೇ ತೀರ್ಮಾನಿಸುವೆ'' ಎಂದು ತಿಳಿಸಿದ.

ಬೆಂಕಿ ಬಿಸಿಲಿನ ಮಧ್ಯೆ, ಕಸಕಡ್ಡಿಗಳಿಂದ ತುಂಬಿದ್ದ, ಕೂರಲೂ ಸರಿಯಾಗಿ ವಿಶಾಲ ಕೋಣೆಗಳಿಲ್ಲದ ಆಸ್ಪತ್ರೆಯ ಆವರಣದಲ್ಲಿ ಗಾಳಿ ಬೀಸಿಕೊಳ್ಳುತ್ತಿದ್ದ ಜನರು ಇಲ್ಲಿನ ಶೋಚನೀಯ ಸ್ಥಿತಿಗೆ ಕನ್ನಡಿಯಾಗಿದ್ದರು. ''ನಗರಗಳಲ್ಲಿರುವ ಬಹುತೇಕ ಸರಕಾರಿ ಆಸ್ಪತ್ರೆಗಳ ಪರಿಸ್ಥಿತಿ ಹೀಗೇ ಇದ್ದರೂ, ಜನರಿಗೆ ಉಚಿತ ಗ್ಯಾರಂಟಿಗಳನ್ನು ಘೋಷಿಸುವ ಸರಕಾರಗಳು, ಆಸ್ಪತ್ರೆಗಳಲ್ಲಿ ಜನರು ಕನಿಷ್ಠಮಟ್ಟದ ಘನತೆಯಿಂದ ಇರಲು ವ್ಯವಸ್ಥೆ ಮಾಡುವುದಿಲ್ಲ. ಭೀಕರ ಅತ್ಯಾಚಾರ ಘಟನೆ ನಡೆದ ನಂತರವೂ ಈ ಆಸ್ಪತ್ರೆ ಸುಧಾರಿಸುವ ಯತ್ನ ನಡೆದಿಲ್ಲ'' ಎನ್ನುತ್ತಾ ಸಿಡಿಮಿಡಿಗೊಂಡ ಕಾರು ಚಾಲಕ ಸೋಮನಾಥ್, ಆಸ್ಪತ್ರೆಯ ಎಕ್ಸಿಟ್ ಗೇಟ್ ಬಳಿ ಕಾರು ತಿರುಗಿಸಿದ.

ರತ್ನ ದೇಬ್ನಾಥ್ ಪಕ್ಷೇತರ ಅಭ್ಯರ್ಥಿ ಆಗಬೇಕಿತ್ತು ಎನ್ನುವುದು ಈ ಮೂವರ ನಿಲುವು.

ಪರಿವರ್ತನೆ ಬೇಕು ಎನ್ನುವ ಟೀ ಅಂಗಡಿ ಮಾಲಕಿ ಚಂದನ ದತ್ತೋರಾಯ್.

ಪಾನಿಹಟಿಯಲ್ಲಿರುವ ಅಭಯಾಳ ಮನೆ

ಆರ್.ಜಿ. ಕರ್ ಆಸ್ಪತ್ರೆಯ ರಸ್ತೆಯಲ್ಲೇ ವಾಸ್ತವ್ಯ

ಟಿಎಂಸಿ ಅಭ್ಯರ್ಥಿ ತೀರ್ಥಂಕರ್ ಘೋಷ್

ಸಕೀಮಾ ಬೀಬಿ ಮತ್ತು ದುಲಾರಿ ಸರೋಜ್

ಅಂಗ, ವಂಗಗಳಲ್ಲಿ ಬಿಜೆಪಿ ಸರಕಾರ ಖಚಿತ: ಅಮಿತ್ ಶಾ

ಕೋಲ್ಕತ್ತಾ: ಬದಲಾವಣೆ ಬಯಸಿರುವ ಜನರು ಉತ್ಸಾಹದಿಂದ ಮತ ಚಲಾಯಿಸಿದ್ದಾರೆ. ಪ್ರಾಚೀನ ಸಾಮ್ರಾಜ್ಯಗಳಾದ 'ಅಂಗ-ವಂಗ'ಗಳಲ್ಲಿ (ಅಂದರೆ, ಇಂದಿನ ಅಸ್ಸಾಂ, ಬಂಗಾಳ) ಮುಂದಿನ ತಿಂಗಳ ಹೊತ್ತಿಗೆ ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಬರಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರತಿಪಾದಿಸಿದ್ದಾರೆ.

ಕೋಲ್ಕತ್ತಾದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡುತ್ತಾ, ''ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಸಂಪೂರ್ಣ ಬಹುಮತ ದಕ್ಕಲಿದೆ. ಮೊದಲ ಹಂತದ ಚುನಾವಣೆ ನಡೆದ 152 ಕ್ಷೇತ್ರಗಳ ಪೈಕಿ 110ಕ್ಕೂ ಹೆಚ್ಚು ಸ್ಥಾನಗಳನ್ನು ಪಕ್ಷ ಗೆಲ್ಲಲಿದೆ. ಬಂಗಾಳದ ಜನರು ಎಲ್ಲಾ ದಾಖಲೆಗಳನ್ನು ಮುರಿದಿದ್ದಾರೆ, ಬದಲಾವಣೆಗೆಂದು ಉತ್ಸಾಹದಿಂದ ಮತ ಚಲಾಯಿಸಿದ್ದಾರೆ. ಮೊದಲ ಹಂತದಲ್ಲಿಯೇ ಶೇ.92ಕ್ಕಿಂತ ಹೆಚ್ಚಿನ ಮತದಾನವಾಗಿರುವುದೇ ಇದಕ್ಕೆ ಸಾಕ್ಷಿ'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾತು ಮುಂದುವರಿಸಿದ ಅಮಿತ್ ಶಾ, ''2016ರ ವಿಧಾನಸಭಾ ಚುನಾವಣೆಯಲ್ಲಿ 1,278 ಮಂದಿ, 2021ರಲ್ಲಿ 1,681 ಮಂದಿ ಗಾಯ ಗೊಂಡಿದ್ದರು. ಈ ಬಾರಿ ಮೊದಲ ಹಂತದ ಚುನಾವಣೆಯಲ್ಲಿ ಯಾವುದೇ ಸಾವು-ನೋವು ಸಂಭವಿಸದಂತೆ ನೋಡಿಕೊಳ್ಳಲಾಗಿದೆ. ಇದಕ್ಕಾಗಿ ಚುನಾವಣಾ ಆಯೋಗ ಮತ್ತು ಭದ್ರತಾ ಪಡೆಗಳಿಗೆ ಧನ್ಯವಾದಗಳನ್ನು ಸಮರ್ಪಿಸುವೆ. ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಬಂಗಾಳದಲ್ಲಿ ಜನಿಸಿದ, ಬಂಗಾಳಿ ಭಾಷೆ ಮಾತನಾಡುವ ವ್ಯಕ್ತಿಯೇ ಮುಖ್ಯಮಂತ್ರಿಯಾಗಲಿದ್ದಾರೆ'' ಎಂದರು.

ಮೊದಲ ಹಂತದಲ್ಲೇ ಬಂಪರ್ ಬೆಳೆ

ಸುವೇಂದು ಅಧಿಕಾರಿ ಭವಿಷ್ಯ

ಕೋಲ್ಕತ್ತಾ: ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷ ಹಾಗೂ ಬಿಜೆಪಿ ಬಿರುಸಿನ ಪ್ರಚಾರದಲ್ಲಿ ತೊಡಗಿಸಿಕೊಂಡಿರುವ, ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಫಲಿತಾಂಶಗಳ ಕುರಿತಾಗಿ ಈಗಾಗಲೇ ಸಾಕಷ್ಟು ಕುತೂಹಲ ಮೂಡಿದೆ. ಅಧಿಕಾರಾರೂಢ ಟಿಎಂಸಿ ಪಕ್ಷವು ಸತತ ನಾಲ್ಕನೇ ಬಾರಿಗೆ ಗದ್ದುಗೆಯೇರುವ ಕನಸು ಕಾಣುತ್ತಿದ್ದರೆ, ಈ ಬಾರಿ ತನ್ನ ಅಸ್ತಿತ್ವವನ್ನು ಸ್ಥಾಪಿಸಲು ಬಿಜೆಪಿ ಇನ್ನಿಲ್ಲದ ಹುಮ್ಮಸ್ಸಿನಲ್ಲಿ ತೊಡಗಿಸಿಕೊಂಡಿದೆ. ಎರಡೂ ಪಾಳಯದವರು 'ಗೆಲುವು ನಮ್ಮದೇ' ಎಂದು ಘಂಟಾಘೋಷವಾಗಿ ಹೇಳಿಕೊಳ್ಳುತ್ತಿದ್ದಾರೆ. ಈ ಪೈಕಿ, ರಾಜ್ಯ ಬಿಜೆಪಿ ನಾಯಕ ಸುವೇಂದು ಅಧಿಕಾರಿ ನುಡಿದಿರುವ ಭವಿಷ್ಯ ಸ್ವಾರಸ್ಯಕರವಾಗಿದೆ.



ರಾಜ್ಯ ವಿಧಾನಸಭೆಯಲ್ಲಿ ವಿಪಕ್ಷ ನಾಯಕರೂ ಆಗಿರುವ ಸುವೇಂದು, ಭವಾನಿಪುರ ಮತ್ತು ನಂದಿಗ್ರಾಮ ಕ್ಷೇತ್ರಗಳಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದು, ಮೊದಲ ಹಂತದ ಮತದಾನ ಪ್ರಕ್ರಿಯೆಯನ್ನು ಯಾವುದೇ ಲೋಪವಿಲ್ಲದೆ ನಿರ್ವಹಿಸಿದ್ದಕ್ಕಾಗಿ ಚುನಾವಣಾ ಆಯೋಗದ ಬಗ್ಗೆ ಮೆಚ್ಚುಗೆಯ ನುಡಿಗಳನ್ನಾಡಿ, ''ಮೊದಲ ಹಂತದ ಮತದಾನ ನಡೆದಿರುವ 152 ಕ್ಷೇತ್ರಗಳ ಪೈಕಿ 125ರಲ್ಲಿ ಬಿಜೆಪಿ ಗೆಲ್ಲಲಿದೆ'' ಎಂದಿದ್ದಾರೆ.

ಅವರು ಮಾತು ಮುಂದುವರಿಸಿ, ''ರಾಜ್ಯ ಸರಕಾರದ ವಿರುದ್ಧ ಅಲ್ಪಸಂಖ್ಯಾತರ ಮತಗಳು ಕ್ರೋಢೀಕರಣಗೊಳ್ಳಲಿದ್ದು, ಹಿಂದೂಗಳು ಕೂಡ ಭಾರಿ ಪ್ರಮಾಣದಲ್ಲಿ ಬಿಜೆಪಿಯ ಕಡೆಗೆ ಒಲವು ತೋರಿದ್ದಾರೆ. ಇದು ಫಲಿತಾಂಶದಲ್ಲಿ ಗೋಚರಿಸಲಿದೆ. ಎರಡನೇ ಹಂತದ (ಏಪ್ರಿಲ್ 29) ಮತದಾನದ ವೇಳೆಗೆ, ಆಡಳಿತಾರೂಢ ಟಿಎಂಸಿ ಪಕ್ಷದ ಕಾರ್ಯಕರ್ತರು ಒಡ್ಡುತ್ತಿರುವ ಬೆದರಿಕೆಗಳನ್ನು ಎದುರಿಸುವುದು ನಮ್ಮೆದುರು ಇರುವ ಪ್ರಮುಖ ಸವಾಲು'' ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೊದಲ ಹಂತದಲ್ಲಿ 16 ಜಿಲ್ಲೆಗಳಲ್ಲಿ ಮತದಾನ ನಡೆದಿದ್ದು, 3.60 ಕೋಟಿಗೂ ಹೆಚ್ಚು ಅರ್ಹ ಮತದಾರರ ಪೈಕಿ ಶೇ.91.78ರಷ್ಟು ಮಂದಿ ತಮ್ಮ ಹಕ್ಕು ಚಲಾಯಿಸಿದ್ದಾರೆ. ಚುನಾವಣಾ ಭದ್ರತೆಗಾಗಿ ಎರಡೂವರೆ ಲಕ್ಷಕ್ಕೂ ಹೆಚ್ಚು ಸಿಬ್ಬಂದಿಯನ್ನು ನೇಮಿಸಿರುವುದು ಈ ಬಾರಿ ಎದ್ದುಕಾಣುವ ಅಂಶವಾಗಿದೆ.

ದೀದಿಯಿಂದ ಆಡಳಿತ ಯಂತ್ರ ದುರುಪಯೋಗ: ಇ.ಡಿ ದೂರು

ದೆಹಲಿ: ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು 'ಐ-ಪ್ಯಾಕ್' ಪ್ರಕರಣದ ತನಿಖೆಗೆ ತಡೆಯೊಡ್ಡಲು ರಾಜ್ಯದ ಆಡಳಿತ ಯಂತ್ರ ವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ಜಾರಿ ನಿರ್ದೇಶನಾಲಯವು ಸರ್ವೋಚ್ಚ ನ್ಯಾಯಾಲಯಕ್ಕೆ ತಿಳಿಸಿದೆ ಎನ್ನಲಾಗಿದೆ.

ಜಾರಿ ನಿರ್ದೇಶನಾಲಯ ಮತ್ತು ಅದರ ಅಧಿಕಾರಿ ರಾಬಿನ್ ಬನ್ಸಾಲ್ ಅವರ ಪರವಾಗಿ ನ್ಯಾಯಾಲಯಕ್ಕೆ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ಸಲ್ಲಿಸಿದ ಮನವಿಯನ್ನು ನ್ಯಾ. ಪ್ರಶಾಂತ್ ಕುಮಾರ್ ಹಾಗೂ ನ್ಯಾ. ಎನ್.ವಿ. ಅಂಜಾರಿಯಾ ಅವರಿದ್ದ ಪೀಠವು ಆಲಿಸಿತು.

''ಚುನಾವಣಾ ಸಲಹಾ ಸಂಸ್ಥೆ 'ಐ-ಪ್ಯಾಕ್'ನ ಕೋಲ್ಕತ್ತಾ ಕಚೇರಿಯಲ್ಲಿ ತಾನು ಶೋಧಕಾರ್ಯವನ್ನು ಕೈಗೊಂಡಿದ್ದಾಗ, ಸಿಎಂ ಮಮತಾ ಬ್ಯಾನರ್ಜಿ ಅವರು ತನಿಖೆಯಲ್ಲಿ ಹಸ್ತಕ್ಷೇಪ ಮಾಡಿದ್ದರ ಜತೆಗೆ, ಅಧಿಕಾರಿಗಳು ಸಂಗ್ರಹಿಸಿದ್ದ ದಾಖಲೆಗಳನ್ನು ಸ್ಥಳದಿಂದ ಕೊಂಡೊಯ್ಯಲು ಅಡ್ಡಿಪಡಿಸಿದ್ದಾರೆ. ಈ ಪ್ರಕರಣದಲ್ಲಿ ಮಮತಾರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಸಿಬಿಐಗೆ ನಿರ್ದೇಶಿಸಬೇಕು'' ಎಂದು ಈ ವೇಳೆ ಜಾರಿ ನಿರ್ದೇಶನಾಲಯದ ಪರವಾಗಿ ನ್ಯಾಯಪೀಠಕ್ಕೆ ಮನವಿ ಸಲ್ಲಿಸಲಾಯಿತು ಎಂದು ತಿಳಿದುಬಂದಿದೆ.

ಮಮತಾ ಬ್ಯಾನರ್ಜಿಯವರ ಪರವಾಗಿ ಹಾಜರಾದ ವಕೀಲೆ ಮೇನಕಾ ಗುರುಸ್ವಾಮಿ ಅವರು, ''ರಾಜಕೀಯ ಪ್ರಚಾರದಲ್ಲಿ ಸಾಮಾಜಿಕ ಜಾಲತಾಣವನ್ನು ಅಸ್ತ್ರವಾಗಿ ಬಳಸುವಂತೆ, ಜಾರಿ ನಿರ್ದೇಶನಾಲಯವು ನ್ಯಾಯಾಲಯದ ಕಲಾಪವನ್ನು ಬಳಸಿಕೊಳ್ಳುತ್ತಿದೆ. ಸಾಲಿಸಿಟರ್ ಜನರಲ್‌ಗಳು ಮಂಡಿಸಿರುವ ವಾದದಲ್ಲಿ, ಚುನಾಯಿತರಲ್ಲದ ಅಧಿಕಾರಿಶಾಹಿಯ ಧೋರಣೆ ಕಾಣುತ್ತಿದೆ'' ಎಂದು ದೂರಿದರು ಎನ್ನಲಾಗಿದೆ. ಈ ವಾದವನ್ನು ಅಲ್ಲಗಳೆದ ಸಾಲಿಸಿಟರ್ ಜನರಲ್, ''ಪೊಲೀಸ್ ಅಧಿಕಾರಿಗಳ ಜತೆಯಲ್ಲಿ ನೇರವಾಗಿ 'ಐ-ಪ್ಯಾಕ್' ಕಚೇರಿಗೆ ಬಂದ ಸಿಎಂ ಮಮತಾ ಬ್ಯಾನರ್ಜಿ, ಕಾನೂನನ್ನು ಕೈಗೆತ್ತಿಕೊಂಡಿದ್ದಾರೆ. ಇದು ತನಿಖಾಧಿಕಾರಿಗಳ, ನಾಗರಿಕರ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ. ಪಶ್ಚಿಮ ಬಂಗಾಳದಲ್ಲಿ ಕಾನೂನು-ಸುವ್ಯವಸ್ಥೆ ಸಂಪೂರ್ಣ ಹಾಳಾಗಿರುವುದಕ್ಕೆ ಇದು ದ್ಯೋತಕ'' ಎಂದು ಮಾರುತ್ತರ ನೀಡಿದರು ಎಂದು ತಿಳಿದುಬಂದಿದೆ.

ವಿಶ್ವವಾಣಿ ಬೆಂಗಳೂರು 25-04-2026 ಶನಿವಾರ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಬಿಸಿಲಿನ ತಾಪಕ್ಕೆ ತಂಪಿನ ಸ್ಪರ್ಶ: ಆಯುರ್ವೇದದ ಸಮಗ್ರ ಪರಿಹಾರಗಳು

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ. ಸಾಧನಶ್ರೀ
vveditoped@gmail.com

ಶಿವಪ್ಪ ಎಂಬ ಒಬ್ಬ ಪರಿಶ್ರಮಿ ಕೃಷಿಕನಿದ್ದನು. ಗ್ರೀಷ್ಮ ಋತುವಿನ ಕಿಡಿಕಾರುವ ಬಿಸಿಲಿನಲ್ಲಿ ಬೆಳಗ್ಗೆಯಿಂದ ಸಂಜೆವರೆಗೆ ದುಡಿದ ಬಳಿಕ ಅವನಲ್ಲಿ ತೀವ್ರ ದಾಹ, ದಣಿವು, ತಲೆನೋವು ಮತ್ತು ಅಸಹನೆ ಕಾಣಿಸಿಕೊಳ್ಳುತ್ತಿತ್ತು. ದಿನದಿಂದ ದಿನಕ್ಕೆ ಅವನ ದೇಹ ದುರ್ಬಲವಾಗುತ್ತಿತ್ತು. 'ಇದು ಬೇಸಗೆಯ ಸಹಜ ಪರಿಣಾಮವೇ ಇರಬಹುದು' ಎಂದು ಅವನು ಭಾವಿಸಿದ್ದ.

ಒಂದು ದಿನ ಅವನು ಆಯುರ್ವೇದ ವೈದ್ಯರನ್ನು ಭೇಟಿಯಾದಾಗ ಅವರು, ''ಬಿಸಿಲು ಸಮಸ್ಯೆಯಲ್ಲ; ಪ್ರಕೃತಿಗೆ ವಿರುದ್ಧವಾಗಿ ಬದುಕುವುದೇ ಸಮಸ್ಯೆ'' ಎಂದು ಹೇಳಿ ಗ್ರೀಷ್ಮದಲ್ಲಿ ಅನುಸರಿಸಬೇಕಾದ ಕ್ರಮ ಗಳನ್ನು ವಿವರಿಸಿದರು. ಕೆಲವೇ ದಿನಗಳಲ್ಲಿ ಅವನ ದೇಹದಲ್ಲಿ ತಂಪು, ಮನಸ್ಸಿನಲ್ಲಿ ಶಾಂತಿ ಮತ್ತು ಶಕ್ತಿ ಯಲ್ಲಿ ಸ್ಪಷ್ಟ ಬದಲಾವಣೆ ಕಂಡುಬಂತು.

● ಋತುಚರ್ಯೆ: ಪ್ರಕೃತಿಯೊಂದಿಗೆ ಹೊಂದಾಣಿಕೆಯ ಜೀವನ

ಆಯುರ್ವೇದದಲ್ಲಿ ಋತುಚರ್ಯೆ ಎಂದರೆ ಋತುಗಳಿಗೆ ಅನುಗುಣವಾಗಿ ಜೀವನಶೈಲಿಯನ್ನು ರೂಪಿಸಿಕೊಳ್ಳುವುದು. ಪ್ರತಿಯೊಂದು ಋತುವೂ ತನ್ನದೇ ಆದ ಗುಣಗಳನ್ನು ಹೊಂದಿದೆ ಮತ್ತು ಅವು ದೇಹದ ದೋಷಗಳ ಮೇಲೆ ಪರಿಣಾಮ ಬೀರುತ್ತವೆ. ಈ ಬದಲಾವಣೆಗಳಿಗೆ ಅನುಗುಣವಾಗಿ ಆಹಾರ, ನಿದ್ರೆ ಮತ್ತು ಆಚರಣೆಗಳನ್ನು ಹೊಂದಿಸಿಕೊಳ್ಳುವುದು ಆರೋಗ್ಯದ ಮೂಲ.

● ಗ್ರೀಷ್ಮ ಋತು: ಉಷ್ಣತೆ ಮತ್ತು ರೂಕ್ಷತೆಯ ಕಾಲ

ಗ್ರೀಷ್ಮದಲ್ಲಿ ಸೂರ್ಯನ ತಾಪ ಅತ್ಯಧಿಕವಾಗಿದ್ದು, ಗಾಳಿ ಒಣಗುತ್ತದೆ. ದೇಹದ ಜಲಾಂಶ ಕಡಿಮೆ ಯಾಗುತ್ತದೆ. ಇದರ ಪರಿಣಾಮವಾಗಿ ದಾಹ, ದಣಿವು, ಉಷ್ಣತೆ ಹೆಚ್ಚಾಗುತ್ತದೆ. ವಾತ ಸಂಚಯ, ಪಿತ್ತ ಚಯ ಮತ್ತು ಕಫ ಕ್ಷಯವಾಗಿ ದೇಹಬಲವು ಹೀನವಾಗುತ್ತದೆ.

ಗ್ರೀಷ್ಮದಲ್ಲಿ ದೇಹವನ್ನು ತಂಪಾಗಿಡುವ ಸಮಗ್ರ ಮಾರ್ಗಗಳ ಬಗ್ಗೆ ತಿಳಿದುಕೊಳ್ಳೋಣ:

1. ಶೀತಲ ಸ್ವಭಾವದ ಆಹಾರ ಸೇವನೆ

ಗ್ರೀಷ್ಮ ಋತುವಿನಲ್ಲಿ ಆಹಾರವು ಹಗುರ, ಶೀತಲ ಮತ್ತು ಜೀರ್ಣಸೌಕರ್ಯಯುಕ್ತವಾಗಿರಬೇಕು. ಅಕ್ಕಿ, ಗೋಧಿ, ಹಾಲು, ತುಪ್ಪ, ದ್ರಾಕ್ಷಿ, ಕಲ್ಲಂಗಡಿ, ಸೌತೆಕಾಯಿ, ತೆಂಗಿನಕಾಯಿ ಮುಂತಾದವು ದೇಹಕ್ಕೆ ಶೀತಲತೆಯನ್ನು ನೀಡುತ್ತವೆ. ಇವುಗಳಲ್ಲಿ ಮಧುರ ರಸ ಹೆಚ್ಚಾಗಿದ್ದು ಪಿತ್ತ ಶಮನಕ್ಕೆ ಸಹಕಾರಿ. ಇದಕ್ಕೆ ವಿರುದ್ಧವಾಗಿ ಅತಿಯಾಗಿ ಖಾರ, ಉಪ್ಪು, ಹುಳಿ ಮತ್ತು ಕರಿದ ಆಹಾರಗಳು ದೇಹದ ಒಳಗಿನ ಉಷ್ಣತೆ ಯನ್ನು ಹೆಚ್ಚಿಸುತ್ತವೆ. ಆದ್ದರಿಂದ ಇವುಗಳನ್ನು ಕಡಿಮೆ ಮಾಡುವುದು ಅತ್ಯಂತ ಅಗತ್ಯ. ಗ್ರೀಷ್ಮದಲ್ಲಿ ಹೆಚ್ಚು ತಿನ್ನುವುದಕ್ಕಿಂತ, ಅಲ್ಪ ಪ್ರಮಾಣದಲ್ಲಿ, ಸರಿ ಯಾದ ಸಮಯದಲ್ಲಿ, ಸುಲಭವಾಗಿ ಜೀರ್ಣ ವಾಗುವ ಆಹಾರ ಸೇವಿಸುವುದು ಮುಖ್ಯ.

2. ಸಮರ್ಪಕ ದ್ರವಪಾನ: ದೇಹದ ಜೀವಾಳ

ಗ್ರೀಷ್ಮದಲ್ಲಿ ದೇಹದಿಂದ ಬೆವರಿನ ಮುಖಾಂತರ ಜಲಾಂಶ ಹೊರಹೋಗುತ್ತದೆ. ಇದರಿಂದ ದೇಹದಲ್ಲಿ ಶೋಷಣೆ ಉಂಟಾಗುತ್ತದೆ. ಆದ್ದರಿಂದ ದ್ರವಪಾನ ವನ್ನು ಹೆಚ್ಚಿಸಬೇಕು. ಆದರೆ ಬಾಯಾರಿಕೆಗೆ ತಕ್ಕಂತೆ! ಅತಿಯಾಗಿ ತಣ್ಣಗಿರುವ ಫ್ರಿಜ್ ನೀರನ್ನು ಸೇವಿಸು ವುದರಿಂದ ಅಗ್ನಿ ದುರ್ಬಲವಾಗುತ್ತದೆ. ಆದ್ದರಿಂದ ಸಹಜ ತಂಪಿನಲ್ಲಿರುವ ಪಾನೀಯಗಳನ್ನು ಸೇವಿಸು ವುದು ಉತ್ತಮ. ಈ ಕಾಲದಲ್ಲಿ ಎಳನೀರಿನ ಸೇವನೆ ಅತ್ಯಂತ ಹಿತ!

● ಆಯುರ್ವೇದದ 'ಪಂಚಸಾರ' ಪಾನಕ

ಬೆಲ್ಲ ಕರಗಿಸಿದ ನೀರಿಗೆ, ನಿಂಬೆಹಣ್ಣಿನ/ದ್ರಾಕ್ಷಿಯ ರಸ, ಚಿಟಿಕೆ ಶುಂಠಿಪುಡಿ, ಚಿಟಿಕೆ ಏಲಕ್ಕಿ ಪುಡಿ ಸೇರಿಸಿ ತಯಾರಿಸುವ ಈ ಪಾನೀಯವನ್ನು ಸ್ವಲ್ಪ ಸಮಯ ಮಡಕೆಯಲ್ಲಿ ಇಟ್ಟು ತಂಪಾಗಿಸಿ ಸೇವಿಸುವುದರಿಂದ ದೇಹಕ್ಕೆ ಶಕ್ತಿ, ಶೀತಲತೆ ಸಿಗುತ್ತದೆ. ಇದು ದಾಹ ತಣಿಸಿ ಜೀರ್ಣಕ್ರಿಯೆಯನ್ನೂ ಸುಧಾರಿಸುತ್ತದೆ.

3. ಮಧುರ, ತಿಕ್ತ, ಕಷಾಯ ರಸಗಳ ಸೇವನೆ

ಆಯುರ್ವೇದದ ಪ್ರಕಾರ ರಸ ದೇಹದ ದೋಷಗಳ ಮೇಲೆ ಪರಿಣಾಮ ಬೀರುತ್ತದೆ. ಗ್ರೀಷ್ಮದಲ್ಲಿ ಮಧುರ, ತಿಕ್ತ, ಕಷಾಯ ರಸ ಗಳನ್ನು ಸೇವಿಸಬೇಕು. ಮಧುರ ರಸ ದೇಹ ವನ್ನು ಪೋಷಿಸುತ್ತದೆ, ತಿಕ್ತ ರಸ ದೇಹವನ್ನು ಶೋಧಿಸುತ್ತದೆ, ಕಷಾಯ ರಸ ಶೀತಲತೆ ನೀಡುತ್ತದೆ.

4. ಮಧ್ಯಾಹ್ನದ ಬಿಸಿಲಿನಿಂದ ದೂರವಿರಿ

ಗ್ರೀಷ್ಮದಲ್ಲಿ ಮಧ್ಯಾಹ್ನದ ಸೂರ್ಯನ ಕಿರಣಗಳು ಅತ್ಯಂತ ತೀಕ್ಷ್ಣವಾಗಿರುತ್ತವೆ. ಈ ಸಮಯದಲ್ಲಿ ಹೊರಗೆ ಹೋಗುವುದರಿಂದ ದೇಹದ ಉಷ್ಣತೆ ಹೆಚ್ಚಾಗಿ ದಣಿವು, ತಲೆನೋವು ಮತ್ತು ಹೀಟ್ ಸ್ಟ್ರೋಕ್ ಸಮಸ್ಯೆ ಗಳು ಉಂಟಾಗಬಹುದು. ಆದ್ದರಿಂದ ಸಾಧ್ಯವಾದಷ್ಟು ಮಧ್ಯಾಹ್ನ ಸಮಯದಲ್ಲಿ ಹೊರಗೆ ಹೋಗುವುದನ್ನು ತಪ್ಪಿಸಬೇಕು. ಹೊರಗೆ ಹೋಗಬೇಕಾದರೆ ತಲೆಯ ಭಾಗ ವನ್ನು ರಕ್ಷಿಸಿಕೊಳ್ಳುವುದು ಅಗತ್ಯ.

5. ಹತ್ತಿಯ ಹಗುರ ಉಡುಪು

ಹತ್ತಿ ಬಟ್ಟೆಗಳು ಬೆವರನ್ನು ಹೀರಿಕೊಳ್ಳುತ್ತವೆ ಮತ್ತು ದೇಹವನ್ನು ತಂಪಾಗಿಡುತ್ತವೆ. ಗ್ರೀಷ್ಮ ದಲ್ಲಿ ಗಾಢ ಬಣ್ಣದ ಬಟ್ಟೆಗಳು ತಾಪವನ್ನು ಹೆಚ್ಚು ಆಕರ್ಷಿಸುತ್ತವೆ. ಆದ್ದರಿಂದ ಲಘು ಬಣ್ಣದ, ಹಗುರ ಬಟ್ಟೆಗಳನ್ನು ಧರಿಸುವುದು ಉತ್ತಮ. ಸಿಂಥೆಟಿಕ್ ಬಟ್ಟೆಗಳು ದೇಹದಲ್ಲಿ ಉಷ್ಣತೆಯನ್ನು ಹೆಚ್ಚಿ ಸುತ್ತವೆ, ಆದ್ದರಿಂದ ಅವನ್ನು ತಪ್ಪಿಸುವುದು ಸೂಕ್ತ.

6. ಗುಲಾಬಿ ಚಂದನಾದಿ ಲೇಪನ

ಚಂದನದ ಲೇಪ, ಗುಲಾಬಿ ನೀರು ಮುಂತಾದವುಗಳು ದೇಹಕ್ಕೆ ತಕ್ಷಣ ಶೀತಲತೆ ನೀಡು ತ್ತವೆ. ಚಂದನವು ಪಿತ್ತ ಶಮನದಲ್ಲಿ ಅತ್ಯಂತ ಪ್ರಸಿದ್ಧ. ತಲೆಗೆ, ಎದೆಗೆ ಅಥವಾ ಮುಖಕ್ಕೆ ಚಂದನ ಲೇಪನ ಹಚ್ಚುವುದರಿಂದ ಉಷ್ಣತೆ ಕಡಿಮೆಯಾಗುತ್ತದೆ. ಇವು ಮನಸ್ಸಿಗೂ ಶಾಂತಿಯನ್ನು ನೀಡುತ್ತವೆ.

7. ಹಗಲುನಿದ್ರೆ: ಗ್ರೀಷ್ಮದ ವಿಶೇಷ ಅನುಮತಿ

ಸಾಮಾನ್ಯವಾಗಿ ಹಗಲುನಿದ್ರೆ ಆಯುರ್ವೇದದಲ್ಲಿ ನಿಷೇಧಿತ. ಆದರೆ ಗ್ರೀಷ್ಮದಲ್ಲಿ ದೇಹಬಲ ಕಡಿಮೆಯಾಗಿರುವ ದರಿಂದ ಸ್ವಲ್ಪ ಸಮಯ ಊಟಕ್ಕೆ ಮುನ್ನ ಖಾಲಿ ಹೊಟ್ಟೆಯಲ್ಲಿ ದಿನನಿದ್ರೆಗೆ ಅನುಮತಿಸಲಾಗಿದೆ. ಇದು ದೇಹಕ್ಕೆ ವಿಶ್ರಾಂತಿ ನೀಡಿ ಶಕ್ತಿಯನ್ನು ಮರುಸ್ಥಾಪಿ ಸುತ್ತದೆ. ಆದರೆ ಅತಿಯಾಗಿ, ಊಟದ ನಂತರ ನಿದ್ರೆ ಮಾಡುವುದು ತಪ್ಪು.

8. ಸೌಮ್ಯ ವ್ಯಾಯಾಮ ಮತ್ತು ಯೋಗಾಭ್ಯಾಸ

ಗ್ರೀಷ್ಮದಲ್ಲಿ ಹೆಚ್ಚು ವ್ಯಾಯಾಮ ಮಾಡಿದರೆ ದೇಹದ ಶಕ್ತಿ ಕುಗ್ಗುತ್ತದೆ. ಆದ್ದರಿಂದ ಸೌಮ್ಯ ಯೋಗ, ಧ್ಯಾನ, ಪ್ರಾಣಾ ಯಾಮಗಳನ್ನು ಅಭ್ಯಾಸ ಮಾಡಬೇಕು. ವಿಶೇಷವಾಗಿ ಶೀತಲಿ, ಶೀತಕಾರಿ ಪ್ರಾಣಾ ಯಾಮಗಳು ದೇಹದ ಒಳಗಿನ ಉಷ್ಣತೆ ಯನ್ನು ಕಡಿಮೆ ಮಾಡುತ್ತವೆ.

9. ಶೀತಲ ಸ್ನಾನ ಮತ್ತು ಪರಿಸರ

ತಂಪಾದ ನೀರಿನಲ್ಲಿ ಸ್ನಾನ ಮಾಡುವುದ ರಿಂದ ದೇಹದ ಉಷ್ಣತೆ ಕಡಿಮೆಯಾಗುತ್ತದೆ. ದಿನಕ್ಕೆ ಕನಿಷ್ಠ 2 ಬಾರಿ ಸ್ನಾನ ಮಾಡುವುದು ಉಪಯುಕ್ತ. ಮನೆಯಲ್ಲಿ ಗಾಳಿಯ ಹರಿವು, ಹಸಿರು ಸಸ್ಯಗಳು, ನೀರಿನ ಸಾನ್ನಿಧ್ಯ ಇತ್ಯಾದಿ ಗಳು ವಾತಾವರಣವನ್ನು ತಂಪಾಗಿಡುತ್ತವೆ.



10. ಮನಃಶಾಂತಿ: ಆಂತರಿಕ ಶೀತಲತೆ

ಗ್ರೀಷ್ಮದಲ್ಲಿ ದೇಹದ ಜತೆಗೆ ಮನಸ್ಸೂ ಉಷ್ಣವಾಗುತ್ತದೆ. ಇದರಿಂದ ಕೋಪ, ಅಸಹನೆ ಹೆಚ್ಚಾಗಬಹುದು. ಧ್ಯಾನ, ಭಜನೆ, ಪ್ರಕೃತಿ ಯೊಂದಿಗೆ ಸಮಯ ಕಳೆಯುವುದು ಮನಸ್ಸಿಗೆ ಶಾಂತಿ ಸಿಗುತ್ತದೆ. ಮನಸ್ಸು ಶಾಂತವಾಗಿದ್ದರೆ ದೇಹವೂ ಶೀತಲವಾಗಿರುತ್ತದೆ.

11. ರಾತ್ರಿ ಭೋಜನ

ಗ್ರೀಷ್ಮ ಋತುವಿನಲ್ಲಿ ದೇಹದ ಜೀರ್ಣಶಕ್ತಿ (ಅಗ್ನಿ) ಸ್ವಾಭಾವಿಕವಾಗಿ ಕಡಿಮೆಯಾಗಿರುತ್ತದೆ. ದಿನವಿಡೀ ಬಿಸಿಲಿನ ಪರಿಣಾಮದಿಂದ ದೇಹ ದಣಿದಿರುವುದ ರಿಂದ, ರಾತ್ರಿ ಸಮಯದಲ್ಲಿ ಜೀರ್ಣಕ್ಕೆ ಜಡವಾದ ಊಟವನ್ನು ಸೇವಿಸುವುದು ಜೀರ್ಣಕ್ರಿಯೆಗೆ ಒತ್ತಡ ಉಂಟುಮಾಡುತ್ತದೆ. ಇದರ ಪರಿಣಾಮವಾಗಿ ಅಜೀರ್ಣ, ಉರಿಯೂತ, ಹೊಟ್ಟೆ ಉಬ್ಬರ ಮತ್ತು ನಿದ್ರೆಯ ಅಶಾಂತಿ ಕಾಣಿಸಿಕೊಳ್ಳಬಹುದು. ಆದ್ದ ರಿಂದ ಈ ಋತುವಿನಲ್ಲಿ ರಾತ್ರಿ ಭೋಜನವನ್ನು ತಗ್ಗಿಸುವುದು ಅಥವಾ ಸಂಪೂರ್ಣವಾಗಿ ಬಿಡುವುದು (ಅಪರೂಪವಾಗಿ, ದೇಹಕ್ಕೆ ಅನುಗುಣವಾಗಿ) ಒಂದು ಉತ್ತಮ ಆಯ್ಕೆ ಎಂದು ಆಯುರ್ವೇದ ಸೂಚಿಸು ತ್ತದೆ. ಇದಕ್ಕೆ ಬದಲು, ರಾತ್ರಿ ಸಮಯದಲ್ಲಿ ಒಂದು ಲೋಟ ಹಾಲಿಗೆ ಸ್ವಲ್ಪ ಕಲ್ಲು ಸಕ್ಕರೆ ಮತ್ತು ಸ್ವಲ್ಪ ಬೆಣ್ಣೆ ಸೇರಿಸಿ ಸೇವಿಸುವುದು ಅತ್ಯಂತ ಹಿತಕರ.

ಹಾಲು ಮಧುರ ರಸದೊಂದಿಗೆ ಶೀತಲ ಗುಣವನ್ನು ಹೊಂದಿದ್ದು, ದೇಹಕ್ಕೆ ಪೋಷಕತ್ವ ನೀಡುತ್ತದೆ. ಕಲ್ಲು ಸಕ್ಕರೆ ದೇಹವನ್ನು ತಂಪಾಗಿಸಿ ದಾಹವನ್ನು ಕಡಿಮೆ ಮಾಡುತ್ತದೆ. ಬೆಣ್ಣೆ ದೇಹದ ಒಣತನವನ್ನು ಕಡಿಮೆ ಮಾಡಿ, ವಾತ-ಪಿತ್ತವನ್ನು ಶಮನಗೊಳಿಸುತ್ತದೆ. ಈ ಸಂಯೋಜನೆ ದೇಹವನ್ನು ಶಾಂತಗೊಳಿಸಿ ಉತ್ತಮ ನಿದ್ರೆಗೆ ಸಹಕರಿಸುತ್ತದೆ.

12. ಸಾತ್ವಿಕ ಜೀವನಶೈಲಿ ಅನುಸರಣೆ

ಗ್ರೀಷ್ಮ ಋತುವಿನಲ್ಲಿ ಸಂಜೆ ಸಮಯವನ್ನು ಶಾಂತ, ಶೀತಲ ಮತ್ತು ಸಾತ್ವಿಕವಾಗಿ ಕಳೆಯುವುದು ಅತ್ಯಂತ ಮುಖ್ಯ. ದಿನವಿಡೀ ಬಿಸಿಲಿನ ಪರಿಣಾಮದಿಂದ ದೇಹ ಮತ್ತು ಮನಸ್ಸು ಎರಡೂ ಒತ್ತಡದಲ್ಲಿರುತ್ತವೆ. ಆದ್ದರಿಂದ ಸಂಜೆ ವೇಳೆಯಲ್ಲಿ ತೀವ್ರ ಶಾರೀರಿಕ ಅಥವಾ ಮಾನಸಿಕ ಚಟುವಟಿಕೆಗಳನ್ನು ತಪ್ಪಿಸಿ, ಶಾಂತ ವಾತಾವರಣವನ್ನು ಆರಿಸಿಕೊಳ್ಳಬೇಕು. ಸಂಜೆಯಲ್ಲಿ ತಂಪಾದ ಸ್ಥಳದಲ್ಲಿ ವಿಶ್ರಾಂತಿ ಪಡೆಯುವುದು, ಹಸಿರು ಪರಿಸರದಲ್ಲಿ ನಡೆ ಯುವುದು, ಮಧುರವಾದ ಸಂಗೀತ ಕೇಳುವುದು, ಧ್ಯಾನ ಅಥವಾ ಭಜನೆ ಮಾಡು ವುದು ಮನಸ್ಸಿನ ಉಷ್ಣತೆಯನ್ನು ಕಡಿಮೆ ಮಾಡಿ, ದೇಹ-ಮನಸ್ಸಿಗೆ ಸಮತೋಲನವನ್ನು ನೀಡುತ್ತವೆ.

13. ಸಂಸ್ಕರಿತ ಜಲ ಸೇವನೆ

ಗ್ರೀಷ್ಮ ಋತುವಿನಲ್ಲಿ ದೇಹದ ಜಲಾಂಶವು ನಿರಂತರವಾಗಿ ಕಡಿಮೆಯಾಗುತ್ತಿರುತ್ತದೆ. ಸಾಮಾನ್ಯ ನೀರನ್ನು ಮಾತ್ರ ಸೇವಿಸುವುದರಿಂದ ದಾಹ ತಣಿಯಬಹುದು, ಆದರೆ ದೇಹಕ್ಕೆ ಅಗತ್ಯವಾದ ಶೀತಲ ಗುಣ ಮತ್ತು ಔಷಧೀಯ ಪೋಷಕತೆ ಸಿಗು ವುದಿಲ್ಲ. ಆದ್ದರಿಂದ ಆಯುರ್ವೇದವು 'ಸಂಸ್ಕರಿತ ಜಲ' ಎಂಬ ವಿಶಿಷ್ಟ ವಿಧಾನವನ್ನು ಸೂಚಿಸುತ್ತದೆ- ಇದು ಔಷಧೀಯ ದ್ರವ್ಯಗಳನ್ನು ನೀರಿನಲ್ಲಿ ಸಂಸ್ಕರಿಸಿ ತಯಾರಿಸುವ ನೀರು. ಇದು ದಾಹವನ್ನು ತಣಿಸು ವುದರ ಜತೆಗೆ ದೇಹದ ಉಷ್ಣತೆಯನ್ನು ಸಮತೋಲನ ಗೊಳಿಸಿ ದೋಷಗಳನ್ನು ಶಮನಗೊಳಿಸುತ್ತದೆ.

● ಕೆಲವು ಔಷಧೀಯ ಜಲಗಳು:

1. ಏಲಾ ಜಲ: ಏಲಕ್ಕಿಯನ್ನು ನೀರಿನಲ್ಲಿ ಹಾಕಿ ಕುದಿಸಿ ತಂಪಾಗಿಸಿದ ಜಲ. ಇದು ದೇಹಕ್ಕೆ ಸುಗಂಧ ಯುಕ್ತ ಶೀತಲತೆ ನೀಡುತ್ತದೆ, ದಾಹವನ್ನು ಕಡಿಮೆ ಮಾಡುತ್ತದೆ ಮತ್ತು ಜೀರ್ಣಕ್ರಿಯೆಯನ್ನು ಹಗುರ ವಾಗಿಡುತ್ತದೆ.

2. ಉಶೀರ ಜಲ: ಉಶೀರ (ವೇಟಿವರ್) ಬೇರುಗಳನ್ನು ನೀರಲ್ಲಿ ನೆನೆಸಿಟ್ಟು ಅಥವಾ ಕುದಿಸಿ ತಯಾರಿಸುವ ಜಲ. ಇದು ಅತ್ಯಂತ ಶೀತಲ ಗುಣ ವನ್ನು ಹೊಂದಿದ್ದು, ಪಿತ್ತ ಶಮನದಲ್ಲಿ ವಿಶೇಷವಾಗಿ ಪರಿಣಾಮಕಾರಿ. ದೇಹದ ಉಷ್ಣತೆಯನ್ನು ತಕ್ಷಣ ಕಡಿಮೆ ಮಾಡುತ್ತದೆ.

3. ಸಾರಿವಾ ಪಾನಕ/ದ್ರಾಕ್ಷಿ ಪಾನಕ: ಸಾರಿವಾ (ಅನಂತಮೂಲ) ಬಳಸಿ ತಯಾರಿಸುವ ಪಾನಕ. ಇದು ರಕ್ತವನ್ನು ಶುದ್ಧೀಕರಿಸಿ, ದಾಹ ಮತ್ತು ಉರಿ ಯನ್ನು ಕಡಿಮೆ ಮಾಡುತ್ತದೆ. ಗ್ರೀಷ್ಮದಲ್ಲಿ ಪಿತ್ತದ ಹೆಚ್ಚಳವನ್ನು ತಡೆಯಲು ಅತ್ಯುತ್ತಮ.

14. ಉತ್ತಮ ನಿದ್ರೆಗೆ ಪದಾಭ್ಯಂಗ

ಗ್ರೀಷ್ಮ ಋತುವಿನಲ್ಲಿ ದೇಹದ ಉಷ್ಣತೆ ಹೆಚ್ಚಿರುವುದರಿಂದ ರಾತ್ರಿ ಸಮಯದಲ್ಲಿ ನಿದ್ರೆ ಅಶಾಂತವಾಗುವುದು ಸಾಮಾನ್ಯ. ದೇಹದ ಒಳಗಿನ ತಾಪಮಾನ ಹೆಚ್ಚಿರುವುದರಿಂದ ಮನಸ್ಸು ಸಹ ಚಂಚಲವಾಗಿದ್ದು, ಗಾಢನಿದ್ರೆ ಕಾಣಿಸಿಕೊಳ್ಳುವುದಿಲ್ಲ. ಆದ್ದರಿಂದ ನಿದ್ರೆಗೆ ಮುನ್ನ ದೇಹವನ್ನು ಶೀತಲಗೊಳಿಸುವ ಕ್ರಮ ಗಳನ್ನು ಅನುಸರಿಸುವುದು ಅಗತ್ಯ. ಈ ಸಂದರ್ಭದಲ್ಲಿ ಆಯುರ್ವೇದವು ಸೂಚಿಸುವ ಅತ್ಯಂತ ಸರಳ ಮತ್ತು ಪರಿಣಾಮಕಾರಿ ವಿಧಾನವೇ ಪದಾಭ್ಯಂಗ (ಪಾದಗಳಿಗೆ ಮೃದು ವಾಗಿ ಮಸಾಜ್ ಮಾಡುವುದು).

● ಕ್ರಮ: ಮೊದಲು ಕಾಲುಗಳನ್ನು ತಂಪಾದ ನೀರಿನಿಂದ ಚೆನ್ನಾಗಿ ತೊಳೆಯಬೇಕು. ಕಣ್ಣುಗಳನ್ನು ಸಹ ತಂಪಾದ ನೀರಿನಿಂದ ತೊಳೆಯುವುದು. ನಂತರ ಸ್ವಲ್ಪ ತುಪ್ಪವನ್ನು ತೆಗೆದುಕೊಂಡು ಪಾದಗಳಿಗೆ 3-4 ನಿಮಿಷ ಮೃದುವಾಗಿ ಮಸಾಜ್ ಮಾಡಬೇಕು. ಇದರ ಜತೆಗೆ ತಲೆಯ ಮೇಲಿನ ಭಾಗವಾದ ಬ್ರಹ್ಮರಂಧ್ರ ಪ್ರದೇಶಕ್ಕೆ ಸ್ವಲ್ಪ ಶೀತಲ ತುಪ್ಪವನ್ನು ಹಚ್ಚಬಹುದು.

● ಪ್ರಯೋಜನಗಳು: ದೇಹದ ಉಷ್ಣತೆ ಕ್ರಮೇಣ ಕಡಿಮೆಯಾಗುತ್ತದೆ. ವಾತ ದೋಷ ಶಮನಗೊಂಡು ದೇಹದಲ್ಲಿ ಶಾಂತಸ್ಥಿತಿ ಉಂಟಾಗುತ್ತದೆ. ನರಮಂಡಲಕ್ಕೆ ವಿಶ್ರಾಂತಿ ಸಿಗುತ್ತದೆ. ಮನಸ್ಸು ಸ್ಥಿರವಾಗಿ, ಗಾಢನಿದ್ರೆ ಬರಲು ಸಹಾಯಕವಾಗುತ್ತದೆ. ದಿನವಿಡಿಯ ದಣಿವು ನಿವಾರಣೆಯಾಗುತ್ತದೆ

15. ಶಿರೋಃಶೀತಲತೆಗೆ ಲೇಪ ಮತ್ತು ಘೃತೋಪಚಾರ

ಗ್ರೀಷ್ಮ ಋತುವಿನಲ್ಲಿ ದೇಹದ ಉಷ್ಣತೆಯೊಂದಿಗೆ ತಲೆಯ ಭಾಗದಲ್ಲಿ ತಾಪ ಮಾನ ಹೆಚ್ಚಾಗುವುದು ಸಾಮಾನ್ಯ. ಇದರಿಂದ ತಲೆಬಿಸಿ, ಕಣ್ಣಿನ ಉರಿ, ಕೂದಲಿನ ಒಣತನ, ಅಸಹನೆ ಮತ್ತು ನಿದ್ರೆಯ ಅಶಾಂತಿ ಕಾಣಿಸಿ ಕೊಳ್ಳಬಹುದು. ಆದ್ದರಿಂದ ಶಿರಸ್ಸನ್ನು ಶೀತಲ ವಾಗಿಡುವುದು ಅಗತ್ಯ. ಆಯುರ್ವೇದದಲ್ಲಿ ಇದಕ್ಕಾಗಿ ಸರಳ ಮತ್ತು ಪರಿಣಾಮಕಾರಿ ವಿಧಾನಗಳನ್ನು ಸೂಚಿಸಲಾಗಿದೆ. ಅವೆಂದರೆ:

1. ಆಮಲಕೀ ಲೇಪ: ನೆಲ್ಲಿಕಾಯಿ/ಆಮಲಕೀ ಪುಡಿಯನ್ನು ಮೊಸರಿನೊಂದಿಗೆ ಕಲಸಿ ಲೇಪ ತಯಾರಿಸಿ ತಲೆಗೆ ಹಚ್ಚಬೇಕು. ಆಮಲಕೀ ಪಿತ್ತ ಶಮನದಲ್ಲಿ ಪ್ರಸಿದ್ಧವಾಗಿದ್ದು, ತಲೆಗೆ ಶೀತಲತೆ ನೀಡುತ್ತದೆ ಮತ್ತು ಕೂದಲಿಗೂ ಪೋಷಕವಾಗಿದೆ.

2. ಮೆಂತ್ಯ ಲೇಪ: ಮೆಂತ್ಯ ಕಾಳುಗಳನ್ನು ರಾತ್ರಿ ನೀರಲ್ಲಿ ನೆನೆಸಿಟ್ಟು, ಬೆಳಗ್ಗೆ ಅದನ್ನು ಮೊಸರಿನೊಂದಿಗೆ ರುಬ್ಬಿ ಲೇಪ ತಯಾರಿಸಬಹುದು. ಇದು ತಲೆಯ ಉಷ್ಣತೆಯನ್ನು ಕಡಿಮೆ ಮಾಡುತ್ತದೆ ಮತ್ತು ತಲೆಚರ್ಮವನ್ನು ಮೃದುವಾಗಿಸುತ್ತದೆ.

ಮೇಲಿನ ಲೇಪಗಳಲ್ಲಿ ಯಾವುದನ್ನಾದರೂ ಆಯ್ಕೆ ಮಾಡಿ ತಲೆಗೆ ಹಚ್ಚಬೇಕು. ಸುಮಾರು 30-45 ನಿಮಿಷಗಳವರೆಗೆ ಇರಿಸಬೇಕು. ನಂತರ ತಂಪಾದ ನೀರಿನಿಂದ ತಲೆ ತೊಳೆಯಬೇಕು. ನೆಗಡಿ, ತಲೆಭಾರ ಇದ್ದಾಗ ಬೇಡ. ಈ ಕ್ರಮವನ್ನು ಒಂದು ದಿನ ಬಿಟ್ಟು ಒಂದು ದಿನ ಅನುಸರಿಸುವುದು ಉತ್ತಮ.

3. ಘೃತೋಪಚಾರ: ತುಪ್ಪದಲ್ಲಿ ಅದ್ದಿದ ಹತ್ತಿಯನ್ನು ತಲೆಯ ಮೇಲೆ, ವಿಶೇಷವಾಗಿ ಮಧ್ಯಭಾಗದಲ್ಲಿ (ಬ್ರಹ್ಮರಂಧ್ರ ಪ್ರದೇಶದಲ್ಲಿ) ಇಟ್ಟು, ಸುಮಾರು 45 ನಿಮಿಷಗಳವರೆಗೆ ಇರಿಸಬಹುದು. ಇದು ಆಳವಾದ ಶೀತಲತೆ ನೀಡುವ ವಿಧಾನವಾಗಿದೆ. ನಂತರ ತಣ್ಣೀರಿನಲ್ಲಿ ತಲೆಸ್ನಾನ ಮಾಡಬೇಕು. ಇದು ತಲೆಯ ಉಷ್ಣತೆಯನ್ನು ಕಡಿಮೆ ಮಾಡುತ್ತದೆ. ಪಿತ್ತ ದೋಷವನ್ನು ಶಮನಗೊಳಿಸುತ್ತದೆ. ಕಣ್ಣುಗಳ ಉರಿ ಮತ್ತು ತಲೆಬಿಸಿ ಕಡಿಮೆಯಾಗುತ್ತದೆ. ಕೂದಲು ಮತ್ತು ತಲೆಚರ್ಮಕ್ಕೆ ಪೋಷಣೆ ನೀಡುತ್ತದೆ. ಮನಸ್ಸಿಗೆ ಶಾಂತಿ ನೀಡಿ ಉತ್ತಮ ನಿದ್ರೆಗೆ ಸಹಕಾರಿ.

ಗ್ರೀಷ್ಮ ಋತು ಸವಾಲಿನ ಕಾಲವಾದರೂ, ಆಯುರ್ವೇದದ ಋತು ಚರ್ಯೆಯನ್ನು ಅನುಸರಿಸಿದರೆ ಅದನ್ನು ಸುಲಭವಾಗಿ ಸಮ ತೋಲನಗೊಳಿಸಬಹುದು. ಪ್ರಕೃತಿಯ ಗುಣಧರ್ಮಗಳನ್ನು ಅರಿತು ಅದಕ್ಕೆ ಹೊಂದಿ ಕೊಂಡ ಜೀವನಶೈಲಿಯನ್ನು ಅಳವಡಿಸಿ ಕೊಂಡರೆ ದೇಹದಲ್ಲಿ ಶೀತಲತೆ, ಮನಸ್ಸಿನಲ್ಲಿ ಶಾಂತಿ, ಜೀವನದಲ್ಲಿ ಸಮ ತೋಲನ ಸಾಧಿಸಬಹುದು. ಪ್ರಕೃತಿಗೆ ಹೊಂದಿಕೊಂಡ ಜೀವನವೇ ನಿಜವಾದ ಆರೋಗ್ಯದ ಮಂತ್ರ. ಈ ಗ್ರೀಷ್ಮದಲ್ಲಿ ಆಯುರ್ವೇದದ ಈ 15 ಮಾರ್ಗಗಳನ್ನು ಅನುಸರಿಸಿ- ದೇಹ ತಂಪಾಗಲಿ, ಮನಸ್ಸು ಹಗುರವಾಗಲಿ, ಜೀವನ ಆರೋಗ್ಯಕರವಾಗಲಿ.

ಯುವಿಕಾ: ಅವಕಾಶ ವಂಚಿತ ಹೆಣ್ಣು ಮಕ್ಕಳ ಕನಸುಗಳ ರೆಕ್ಕೆ

ಸಮಾಜದ ಭವಿಷ್ಯವನ್ನು ರೂಪಿಸುವಲ್ಲಿ ಮಕ್ಕಳ ರಕ್ಷಣೆ ಮತ್ತು ಶಿಕ್ಷಣದ ಪಾತ್ರ ಅತೀವ ಮಹತ್ವದ್ದಾಗಿದೆ. ಕಳೆದ 20 ವರ್ಷಗಳಿಂದ ಈ ದಾರಿಯಲ್ಲಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿರುವ 'ಸ್ಪರ್ಶ' ಸಂಸ್ಥೆಯು, ಮಕ್ಕಳ ನ್ಯಾಯ (ರಕ್ಷಣೆ ಮತ್ತು ಪೋಷಣೆ) ಕಾಯಿದೆ 2015ರ ಅಡಿಯಲ್ಲಿ ನೋಂದಾಯಿಸಿಕೊಂಡು, ರಕ್ಷಣೆ ಮತ್ತು ಪೋಷಣೆ ಅಗತ್ಯವಿರುವ ಮಕ್ಕಳಿಗೆ ಆಶ್ರಯ, ಶಿಕ್ಷಣ ಮತ್ತು ಜೀವನದ ದಿಕ್ಕು ನೀಡುತ್ತಿರುವ ಪ್ರಮುಖ ಸಂಸ್ಥೆಯಾಗಿ ಗುರುತಿಸಿಕೊಂಡಿದೆ. ದೇವನಹಳ್ಳಿಯ ಮಕ್ಕಳ ಧಾಮದಲ್ಲಿ ಹೆಣ್ಣುಮಕ್ಕಳಿಗೆ ಹಾಗೂ ಹೆಸರುಘಟ್ಟ ಸಮೀಪದ ನಿಸರ್ಗ ಗ್ರಾಮದಲ್ಲಿ ಗಂಡುಮಕ್ಕಳಿಗೆ ನೀಡುತ್ತಿರುವ ಸಂರಕ್ಷಣಾ ವ್ಯವಸ್ಥೆಯ ಮೂಲಕ, ಎಲ್ಲಾ ಮಕ್ಕಳಿಗೂ ಗುಣಮಟ್ಟದ ಮತ್ತು ಸಮಾನ ಶಿಕ್ಷಣ ಎಂಬ ಗುರಿಯನ್ನು ಸಂಸ್ಥೆಯು ಅರ್ಥಪೂರ್ಣವಾಗಿ ಸಾಕಾರಗೊಳಿಸುತ್ತಿದೆ. ಈ

ಪಾಲನಾ ಗೃಹಗಳಲ್ಲಿ ಬೆಳೆದ ಅನೇಕ ಮಕ್ಕಳು ಇಂದು ಉನ್ನತ ಶಿಕ್ಷಣ ಪಡೆದು ಸಮಾಜದಲ್ಲಿ ತಮ್ಮದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿರುವುದು ಸಂಸ್ಥೆಯ ಕಾರ್ಯಪಟುತ್ವಕ್ಕೆ ಸಾಕ್ಷಿಯಾಗಿದೆ.

ಈ ದೀರ್ಘ ಅನುಭವದ ಹಿನ್ನೆಲೆಯಲ್ಲಿಯೇ, ಹೆಣ್ಣುಮಕ್ಕಳ ಸಬಲೀಕರಣ ಮತ್ತು ಲಿಂಗ ಸಮಾನತೆಯ ಅಗತ್ಯವನ್ನು ಮನಗಂಡ 'ಸ್ಪರ್ಶ' ಸಂಸ್ಥೆ, 'ಯುವಿಕಾ ಯೋಜನೆ' ಎಂಬ ಮತ್ತೊಂದು ಮಹತ್ವದ ಕಾರ್ಯಕ್ರಮವನ್ನು ಆರಂಭಿಸಿದೆ. ಇದು ಸರಕಾರಿ ಹಾಗೂ ಸರಕಾರೇತರ ಸಂಘ-ಸಂಸ್ಥೆಗಳ ಆಶ್ರಯದಲ್ಲಿ ಬೆಳೆದ ಹೆಣ್ಣು ಮಕ್ಕಳಿಗೆ ಮಾತ್ರವಲ್ಲದೆ, ಯಾವುದೇ ಸಮುದಾಯದ ಅನಾಥ ಹಾಗೂ ಏಕಪೋಷಕ ಕುಟುಂಬದ ಹೆಣ್ಣು ಮಕ್ಕಳಿಗೂ ಅನ್ವಯಿಸುತ್ತದೆ. ಉನ್ನತ ವ್ಯಾಸಂಗ ಮುಗಿಸಿದ, 21 ವರ್ಷಕ್ಕಿಂತ ಮೇಲ್ಪಟ್ಟ ಹೆಣ್ಣುಮಕ್ಕಳಿಗೆ ಈ ಯೋಜನೆಯನ್ನು ರೂಪಿಸಲಾಗಿದೆ. ಜೀವನದ ಹೊಸ ಹಂತಕ್ಕೆ ಕಾಲಿಡುವ ಈ ಯುವತಿಯರಿಗೆ ಸರಿಯಾದ ಮಾರ್ಗದರ್ಶನ ಮತ್ತು ಅವಕಾಶಗಳ ಕೊರತೆ ಎದುರಾದ ಸಂದರ್ಭಗಳಲ್ಲಿ, 'ಯುವಿಕಾ' ಅವರ ಕನಸುಗಳಿಗೆ ದಿಕ್ಕು ತೋರಿಸುವ ದೀಪಸ್ತಂಭದಂತಿದೆ.

ಈ ಯೋಜನೆಯು ಕೇವಲ ತರಬೇತಿ ಕಾರ್ಯಕ್ರಮವಲ್ಲ, ಅದು ಒಂದು ಸಮಗ್ರ ರೂಪಾಂತರ ಪ್ರಕ್ರಿಯೆಯಾಗಿದೆ. ಐಎಎಸ್, ಕೆಎಎಸ್ ಮತ್ತು ಸಿಎ ಮುಂತಾದ ಆಡಳಿತಾತ್ಮಕ ಹಾಗೂ ವೃತ್ತಿಪರ ಸೇವೆಗಳಲ್ಲಿ ಉನ್ನತ ಹುದ್ದೆಗಳನ್ನು ಗಳಿಸಲು ಅಗತ್ಯವಾದ ಗುಣಮಟ್ಟದ ತರಬೇತಿ, ನುರಿತ ಉಪನ್ಯಾಸಕರಿಂದ ಮಾರ್ಗದರ್ಶನ, ಉಚಿತ ವಸತಿ ಸೌಲಭ್ಯ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಎಲ್ಲಾ ಮೂಲಸೌಕರ್ಯಗಳನ್ನು ಒದಗಿಸುವ ಮೂಲಕ, ಯುವತಿಯರಿಗೆ ಸಮಾನ ಅವಕಾಶಗಳನ್ನು ಇದು ಕಲ್ಪಿಸುತ್ತದೆ. ಈಗಾಗಲೇ ಐಎಎಸ್ ಮತ್ತು ಕೆಎಎಸ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಸರಕಾರಿ ಸೇವೆಯಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ನಿವೃತ್ತ ಅಧಿಕಾರಿಗಳನ್ನೊಳಗೊಂಡ ಸಲಹಾ ಸಮಿತಿಯು ಈ ಯೋಜನೆಗೆ ದಿಕ್ಕು ತೋರಿಸುತ್ತಿರುವುದು ಇದರ ಮತ್ತೊಂದು ಬಲವಾಗಿದೆ.

ಭಾರತದಲ್ಲಿ ಮಹಿಳೆಯರ ಆಡಳಿತಾತ್ಮಕ ಸೇವೆಗಳಲ್ಲಿನ ಪಾಲು ಇನ್ನೂ ನಿರೀಕ್ಷಿತ ಮಟ್ಟಕ್ಕೆ ತಲುಪಿಲ್ಲ. ಐಎಎಸ್‌ನಲ್ಲಿ ಮಹಿಳೆಯರ ಪ್ರಮಾಣವು ಸರಾಸರಿ ಶೇ. 25ರಿಂದ 30ರವರೆಗೆ ಮಾತ್ರ ಸೀಮಿತವಾಗಿದ್ದು, ರಾಜ್ಯ ಮಟ್ಟದ ಸೇವೆಗಳಲ್ಲೂ ಇದೇ ಪರಿಸ್ಥಿತಿ ಕಂಡುಬರುತ್ತದೆ. ಗ್ರಾಮೀಣ ಹಾಗೂ ದುರ್ಬಲ ವರ್ಗದ ಹೆಣ್ಣುಮಕ್ಕಳಿಗೆ ಉನ್ನತ ಶಿಕ್ಷಣದ ಪ್ರವೇಶ ಇನ್ನೂ ಸವಾಲಿನ ವಿಷಯವಾಗಿದೆ. ಮಹಿಳೆಯರ ಶಿಕ್ಷಣವು ಕುಟುಂಬ ಮತ್ತು ಸಮಾಜದ ಅಭಿವೃದ್ಧಿಗೆ ನೇರವಾಗಿ ಸಂಬಂಧಿಸಿದೆ ಎಂದು ಯುನೆಸ್ಕೋ ಸೇರಿದಂತೆ ಹಲವು ಅಧ್ಯಯನಗಳು ಸೂಚಿಸುತ್ತವೆ. ಈ ಹಿನ್ನೆಲೆಯಲ್ಲಿಯೇ, 'ಯುವಿಕಾ'ದಂಥ ಕಾರ್ಯಕ್ರಮಗಳು ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯವನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಈ ಯೋಜನೆಯು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳೊಂದಿಗೆ ಸಹ ಸಮನ್ವಯ ಹೊಂದಿದೆ. ಗುಣಮಟ್ಟದ ಶಿಕ್ಷಣ, ಲಿಂಗ ಸಮಾನತೆ, ಉತ್ತಮ ಉದ್ಯೋಗಾವಕಾಶಗಳು ಮತ್ತು ಅಸಮಾನತೆಯನ್ನು ಕಡಿತಗೊಳಿಸುವ ಗುರಿಗಳನ್ನು ಸಾಧಿಸುವ ದಾರಿಯಲ್ಲಿ 'ಯುವಿಕಾ' ಒಂದು ಪರಿಣಾಮಕಾರಿ ಹೆಜ್ಜೆಯಾಗಿದೆ. ಶಿಕ್ಷಣ ಮತ್ತು ಉದ್ಯೋಗದ ಮೂಲಕ ಸಬಲೀಕೃತವಾಗುವ ಹೆಣ್ಣುಮಕ್ಕಳು ತಮ್ಮ ಕುಟುಂಬಗಳಷ್ಟೇ ಅಲ್ಲ, ಸಮುದಾಯದ ಸಮಗ್ರ ಅಭಿವೃದ್ಧಿಗೆ ಕಾರಣರಾಗುತ್ತಾರೆ.

'ಯುವಿಕಾ'ದ ಮಹತ್ವವು ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ಆತ್ಮವಿಶ್ವಾಸವನ್ನು ಬೆಳೆಸುವ, ಸ್ವಾವಲಂಬನೆಯನ್ನು ಉತ್ತೇಜಿಸುವ ಮತ್ತು ಸಮಾಜದಲ್ಲಿ ಗೌರವಯುತ ಸ್ಥಾನವನ್ನು ಪಡೆಯಲು ನೆರವಾಗುವ ಶಕ್ತಿಯುತ ವೇದಿಕೆಯಾಗಿದೆ. ಈ ಯೋಜನೆಯ ಮೂಲಕ ತರಬೇತಿ ಪಡೆಯುವ ಯುವತಿಯರು ಸರಕಾರಿ ಸೇವೆಗಳಲ್ಲಿ ಪ್ರವೇಶಿಸಿ, ನೀತಿ ರೂಪಿಸುವ ಮಟ್ಟದಲ್ಲಿ ಕೆಲಸ ಮಾಡುವ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಬಲ್ಲರು. ಅವರ ಯಶಸ್ಸು ಇನ್ನೂ ಅನೇಕ ಹೆಣ್ಣುಮಕ್ಕಳಿಗೆ ಪ್ರೇರಣೆಯಾಗುತ್ತದೆ.

ಒಬ್ಬ ಹೆಣ್ಣುಮಗಳಿಗೆ ನೀಡುವ ಶಿಕ್ಷಣವು ಒಂದು ಕುಟುಂಬವನ್ನು ಮಾತ್ರವಲ್ಲ, ಒಂದು ಸಮಾಜವನ್ನೇ ರೂಪಿಸುವ ಶಕ್ತಿಯನ್ನು ಹೊಂದಿರುತ್ತದೆ ಎಂಬುದು ಎಲ್ಲರೂ ಒಪ್ಪುವ ಸತ್ಯ. ಈ ನಂಬಿಕೆಯನ್ನು ಕಾರ್ಯರೂಪಕ್ಕೆ ತಂದಿರುವ 'ಸ್ಪರ್ಶ' ಸಂಸ್ಥೆಯ 'ಯುವಿಕಾ' ಯೋಜನೆಯು, ದುರ್ಬಲ ವರ್ಗದ ಹೆಣ್ಣುಮಕ್ಕಳಿಗೆ ಹೊಸ ಭವಿಷ್ಯದ ಬಾಗಿಲು ತೆರೆಯುತ್ತಿದೆ. ಇಂಥ ಕಾರ್ಯಕ್ರಮಗಳು ಸಮಾಜದ ಸಮಾನತೆ ಮತ್ತು ಪ್ರಗತಿಯ ದಾರಿಯಲ್ಲಿ ನಿಜವಾದ ಬದಲಾವಣೆಯನ್ನು ತರಬಲ್ಲವು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ನಿರಂತರ ಬೆಂಬಲ

ಅರ್ಹರಾದ ಹೆಣ್ಣು ಮಕ್ಕಳಿಗೆ ಈ ಯೋಜನೆಯಡಿ ಸಂಪೂರ್ಣ ವಸತಿ, ಶಿಕ್ಷಣ, ತರಬೇತಿ ಹಾಗೂ ಉದ್ಯೋಗಾವಕಾಶಗಳನ್ನು ಒದಗಿಸುವವರೆಗೆ ನಿರಂತರ ಸಹಾಯ ಮತ್ತು ಬೆಂಬಲ ನೀಡಲಾಗುತ್ತದೆ. ಈ ಯೋಜನೆಗೆ ಅರ್ಹರಾಗಿರುವ ಹೆಣ್ಣು ಮಕ್ಕಳು ಮುಂದೆ ನೀಡಿರುವ ದೂರವಾಣಿ ಸಂಖ್ಯೆಗೆ ಕರೆ ಮಾಡಬಹುದು ಅಥವಾ ನಮ್ಮ Sparsha Trust ಜಾಲತಾಣಕ್ಕೆ (www.sparsha.org) ಭೇಟಿ ನೀಡಿ ನೋಂದಣಿ ಫಾರ್ಮ್ ಅನ್ನು ಭರ್ತಿ ಮಾಡಬಹುದು.

ಕರ್ನಾಟಕದ ಹೆಣ್ಣು ಮಕ್ಕಳಿಗಾಗಿ ಇದೊಂದು ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಜೀವನದಲ್ಲಿ ಸಾಧನೆ ಮಾಡಲು ಬಯಸುವ ಪ್ರತಿಯೊಬ್ಬ ಹೆಣ್ಣು ಮಕ್ಕಳೂ ಕೂಡಲೇ ನೋಂದಣಿ ಮಾಡಿಕೊಳ್ಳುವಂತಾಗಲಿ. ಈ ಯೋಜನೆಯು ಮುಂಬರುವ ಮೇ 10ರಿಂದ ಪ್ರಾರಂಭವಾಗುತ್ತದೆ. ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ಶೀಘ್ರವಾಗಿ ಅರ್ಜಿ ಸಲ್ಲಿಸಬಹುದು.

ಸಂಪರ್ಕಿಸಿ: ಮಮತಾ (ಯೋಜನಾ ನಿರ್ದೇಶಕರು)

ದೂರವಾಣಿ ಸಂಖ್ಯೆ:

+91 98457 63191/8660096834

ಗೋಪಿನಾಥ್
ಸ್ಪರ್ಶ ಸಂಸ್ಥೆ
ಆಡಳಿತ ಮಂಡಳಿಯ ನಿರ್ದೇಶಕರು

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1	2			■	3		4	
■		■	■	■	■	■		■
5			6	■	7			8
	■	■		■	■	■	■	
9		■	10		11	■	12	
	■	■	■	■		■	■	
13	14			■	15		16	
■		■	■	■	■	■		■
17				■	18			

ಎಡದಿಂದ ಬಲಕ್ಕೆ

1. ನೇರವಾಗಿಲ್ಲ, ಓರೆಕೋರೆ (4)
3. ಲಲಿತ ಕಲೆಗಳನ್ನು ತಿಳಿದವನು (4)
5. ಯೋಗವಿರುವ ಬಳಕೆ (4)
7. ಅವನ ದೇಹದ ಅಂಗ (4)
9. ಎರಡಕ್ಷರದ ನಕಾಶೆ (2)
10. ಆರ್ಥಿಕವಾಗಿ ಕಷ್ಟದಲ್ಲಿರುವ ದೀನ (3)
12. ಹಾವಸೆ ಇಲ್ಲಿ ತಿರುಗಿಬಂದಿದೆ (2)
13. ಅದೃಷ್ಟ ಒಳ್ಳೆಯದಿಲ್ಲದವನು, ದುರ್ದೈವಿ (4)
15. ಕೈಯೊಂದಿಗೆ ಲೆಕ್ಕ ಬರೆಯುವವನು (4)
17. ನಾಲ್ಕು ಯುಗಗಳಲ್ಲಿ ಈಗಿನದ್ದು (4)
18. ಮಧ್ಯೆ ತಿರುಗಿದ ಆನೆಯಿರುವ ಸಲಕರಣೆ (4)

ಮೇಲಿಂದ ಕೆಳಕ್ಕೆ

2. ಆತನ ಅಂದಗೇಡಿತನ (3)
4. ಯಾರನ್ನಾದರೂ ಕಳಿಸುವಾಗ ಹೇಳುವುದು, ಬೀಳ್ಕೊಡುಗೆ (3)
5. ವಟುವಿಗೆ ಜನಿವಾರ ತೊಡಿಸುವ ಕಾರ್ಯಕ್ರಮ (5)
6. ಹಿಂದಿಯ ದರಿದ್ರ (3)
8. ಕಾಡಿನ ರಕ್ಷಕ ಇವನು (5)
11. ವ್ಯಾಪಾರಿ ಅಥವಾ ವರ್ತಕ (3)
14. ನೂಲು ತೆಗೆಯುವ ಒಂದು ಸಾಧನ (3)
16. ಮೆಟ್ಟಿಲುಗಳಿರುವ ಚೌಕಾಕಾರದ ಕೊಳ ತಲೆಕೆಳಗಾಗಿದೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ಅಂಕುಡೊಂಕು 3.ಕಲಾವಿದ 5.ಉಪಯೋಗ 7.ಅವಯವ 9.ನಕ್ಷೆ 10.ಬಡವ 12.ಚಿಪಾ 13.ನತದೃಷ್ಟ 15.ಕರಣಿಕ 17.ಕಲಿಯುಗ 18.ಪರಿಕರ

ಮೇಲಿಂದ ಕೆಳಕ್ಕೆ
2.ಕುರೂಪ 4.ವಿದಾಯ 5.ಉಪನಯನ 6.ಗರೀಬ 8.ವನಪಾಲಕ 11.ವಣಿಕ 14.ತಕಲಿ 16.ಣಿಲ್ಯಾಕ

ರಾಮಚರಿತ ಮಾನಸ: ಅಮಲ ಭಕ್ತಿಯ ಅನುಗ್ರಹ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಕೆವಟನು ಅತ್ಯಂತ ಭಕ್ತಿಯಿಂದ ರಾಮ, ಸೀತೆ, ಲಕ್ಷ್ಮಣರನ್ನು ನದಿ ದಾಟಿಸಿದನು. ಶ್ರೀರಾಮಚಂದ್ರನು ಕೇವಟನ ನಿಷ್ಕಪಟ ಪ್ರೇಮಕ್ಕೆ ಮಾರುಹೋಗಿ ಅವನನ್ನು ಅಪ್ಪಿಕೊಂಡಾಗ, ಕೇವಟನ ಕಣ್ಣುಗಳಿಂದ ಆನಂದಬಾಷ್ಪ ಧಾರೆಧಾರೆಯಾಗಿ ಹರಿಯಿತು. ಆ ಕ್ಷಣ ಭಕ್ತಿಯ ಸಾಮ್ರಾಜ್ಯದಲ್ಲಿ ಕೇವಟನು ಅಧಿಪತಿಯಾಗಿದ್ದ. ರಾಮನು ನೀಡಲು ಮುಂದಾದ ರತ್ನದ ಉಂಗುರವನ್ನು ನಿರಾಕರಿಸಿ, ಕೇವಲ ಮುಕ್ತಿಯನ್ನು ಬೇಡಿದ ಆ ಕ್ಷಣ ದೇವಲೋಕವೇ ಹೂಮಳೆಗರೆಯಿತು.

ರಾಮನು ಮೆಲ್ಲನೆ ನಗುತ್ತಾ ಕೇವಟನ ಕಡೆಗೆ ನೋಡಿದನು. ಆ ನೋಟದಲ್ಲಿ ಬ್ರಹ್ಮಾಂಡದ ಕರುಣೆಯಿತ್ತು. ಕೇವಟನು ಹೇಳಿದ ಮಾತುಗಳು ರಾಮನ ಹೃದಯಕ್ಕೆ ನಾಟಿದ್ದವು. ತನ್ನನ್ನು 'ಜನ್ಮ-ಮೃತ್ಯುವಿನ ನಾವಿಕ' ಎಂದು ಗುರುತಿಸಿದ ಈ ಮುಗ್ಧ ಭಕ್ತನಿಗೆ ರಾಮನು ಮರುಮಾತೇ ಇಲ್ಲದೆ ಅಧ್ಯಾತ್ಮದ ಅತ್ಯುನ್ನತ ಸ್ಥಿತಿಯನ್ನು ಕರುಣಿಸಿದನು.

ಬಿನಯ ಕೀನ್ಹಿ ಬಹು ಬಿನಯ ಸುನಾಯಿ । ಪ್ರೇಮ ಮಗನ ಕೇವಟ ಹರಷಾಯಿ ॥

ರಾಮ ಕೃಪಾಲ ಭಗತಿ ಬರ ದೀನ್ಹಾ । ಪರಮ ಪದಹಿ ಪಾವತ ಹರ್ಷ ಕೀನ್ಹಾ ॥

● **ಭಾವಾರ್ಥ:** ಕೇವಟನು ಬಹಳ ವಿನಯದಿಂದ ಪ್ರಾರ್ಥಿಸಿದನು, ಅವನ ಪ್ರೇಮವನ್ನು ಕಂಡು ರಾಮನು ಹರ್ಷಿತನಾದನು. ಕರುಣಾಮಯಿಯಾದ ರಾಮನು ಅವನಿಗೆ ನಿಶ್ಚಲವಾದ ಭಕ್ತಿಯ ವರವನ್ನು ನೀಡಿದನು, ಆ ಮೂಲಕ ಕೇವಟನು ಪರಮಪದವನ್ನು (ಮುಕ್ತಿಯನ್ನು) ಪಡೆದನು.

● ಭಕ್ತಿಯ ಹಾದಿಯಲ್ಲಿ ಸಾಗಿದ ದೈವ

ರಾಮ, ಸೀತೆ ಮತ್ತು ಲಕ್ಷ್ಮಣರು ವನವಾಸದ ಹಾದಿಯಲ್ಲಿ ಮುಂದೆ ಸಾಗಲು ಸಿದ್ಧರಾದರು. ಕೇವಟನು ದೂರದಲ್ಲಿ ನಿಂತು ಮೌನವಾಗಿ ಅವರನ್ನು ನೋಡುತ್ತಿದ್ದನು. ಅವನಿಗೆ ತನ್ನ ಕಣ್ಣುಗಳನ್ನೇ ನಂಬಲಾಗುತ್ತಿರಲಿಲ್ಲ. ಸ್ವಲ್ಪ ಸಮಯದ ಹಿಂದೆ ತನ್ನ ದೋಣಿಯಲ್ಲಿ ಕುಳಿತಿದ್ದ ಆ 'ನಾರಾಯಣ' ಈಗ ಕಾಲ್ನಡಿಗೆಯಲ್ಲಿ ಕಾಡಿನತ್ತ ಸಾಗುತ್ತಿದ್ದಾನೆ. ಕೇವಟನ ಮನಸ್ಸು ವ್ಯಾಕುಲವಾಯಿತು. 'ಪ್ರಭು, ಸುಕುಮಾರರಾದ ನೀವು ಕಲ್ಲು-ಮುಳ್ಳಿನ ಹಾದಿಯಲ್ಲಿ ಹೇಗೆ ನಡೆಯುವಿರಿ?' ಎಂದು ಮನದಲ್ಲೇ ಮರುಗಿದನು.

ರಾಮನು ತಿರುಗಿ ನೋಡಿ ಕೈಬೀಸಿದಾಗ, ಕೇವಟನಿಗೆ ಒಂದು ಸತ್ಯದರ್ಶನವಾಯಿತು. 'ಭಗವಂತನು ಕಷ್ಟ ಪಡುತ್ತಿರುವುದು ಲೋಕಕ್ಕೆ ಧರ್ಮವನ್ನು ಬೋಧಿಸುವುದಕ್ಕಾಗಿ. ನಾವು ಅವನಿಗೆ ದಾರಿ ತೋರಿಸಬೇಕಿಲ್ಲ, ಅವನ ಪಾದದ ಗುರುತುಗಳನ್ನು ಅನುಸರಿಸಿದರೆ ಸಾಕು' ಎಂಬ ಅರಿವು ಅವನಲ್ಲಿ ಮೂಡಿತು.

ಸಮಾಜದಲ್ಲಿ ಕೇವಟನನ್ನು ಕೇವಲ ಒಬ್ಬ ದೋಣಿ ನಡೆಸುವವನೆಂದು ಕರೆಯಲಾಗುತ್ತಿತ್ತು. ಆದರೆ ಅಂದು ಅವನು ಸಕಲ ಜೀವರಾಶಿಗಳಿಗೂ ಒಂದು ಪಾಠ ಕಲಿಸಿದನು. ದೊಡ್ಡ ದೊಡ್ಡ ಯೋಗಿಗಳು ಸಾವಿರಾರು ವರ್ಷ ತಪಸ್ಸು ಮಾಡಿದರೂ ಪಡೆಯದ ಆಲಿಂಗನ ಮತ್ತು ಅಮಲ ಭಕ್ತಿಯನ್ನು ಕೇವಟನು ಕೇವಲ ತನ್ನ 'ಸರಳತೆ'ಯಿಂದ ಪಡೆದಿದ್ದನು.

ದೇವರು ಯಾವುದಕ್ಕೆ ಸೋಲುತ್ತಾನೆ ಎಂಬ ಪ್ರಶ್ನೆಗೆ ಕೇವಟ ಇಲ್ಲಿ ಉತ್ತರವನ್ನೇ ನೀಡಿದನು. ಕೇವಟನಲ್ಲಿ 'ನಾನು ದೇವರಿಗೆ ಉಪಕಾರ ಮಾಡಿದೆ' ಎಂಬ ಅಹಂಕಾರವಿರಲಿಲ್ಲ. ದೇವರೆದುರು ಎಲ್ಲರೂ ಒಂದೇ ಎಂಬ ಭಾವ ಅವನಲ್ಲಿತ್ತು. ತನ್ನಲ್ಲಿದ್ದ ಏಕೈಕ ಆಸ್ತಿ 'ದೋಣಿ'ಯನ್ನು ದೇವರಿಗೆ ಸಮರ್ಪಿಸಿದನು.

ರಾಮನು ಕಣ್ಣಿನಿಂದ ಮರೆಯಾಗುವವರೆಗೂ ಕೇವಟನು ಅಲ್ಲಿಯೇ ನಿಂತಿದ್ದನು. ಅವನಿಗೆ ಈಗ ಗಂಗೆಯನ್ನು ದಾಟಿಸುವ ಕೆಲಸವು ಕಾಯಕ ಮಾತ್ರವಾಗಿರಲಿಲ್ಲ, ಅದು ದೈವದ ಸೇವೆಯಾಗಿತ್ತು. ರಾಮನ ಪಾದದ ಧೂಳು ತಾಗಿದ ತನ್ನ ದೋಣಿಯನ್ನು ಅವನು ದೇವಸ್ಥಾನದಂತೆ ಕಂಡನು. ಅವನ ಕಥೆಯು ಇಂದಿಗೂ ನಮಗೆ ಹೇಳುವುದು ಒಂದೇ- ನಾವು ಎಷ್ಟೇ ಸಾಮಾನ್ಯರಾಗಿದ್ದರೂ, ನಮ್ಮ ಭಕ್ತಿ ಅಸಾಮಾನ್ಯವಾಗಿದ್ದರೆ ಆ ಪರಮಾತ್ಮನೇ ನಮ್ಮನ್ನು ಹುಡುಕಿಕೊಂಡು ಬರುತ್ತಾನೆ.

ಕೇವಟನ ಈ ನಿಷ್ಕಾಮ ಭಕ್ತಿಯು ಇಡೀ ರಾಮಾಯಣಕ್ಕೆ ಒಂದು ಅಧ್ಯಾತ್ಮಿಕ ಮೆರುಗನ್ನು ನೀಡಿತು. ದೇವರು ಕೇವಲ ಪೂಜೆ-ಪುನಸ್ಕಾರಗಳಿಗಲ್ಲ, ಬದಲಿಗೆ ಹೃದಯದ ಒಳಗಿನ ಶುದ್ಧ ಪ್ರೀತಿಗಾಗಿ ಹಪಹಪಿಸುತ್ತಾನೆ ಎಂಬುದಕ್ಕೆ ಕೇವಟನೇ ಸಾಕ್ಷಿ. ನಮ್ಮ ಬದುಕಿನ ದೋಣಿಗೂ ರಾಮನೇ ಚುಕ್ಕಾಣಿ ಹಿಡಿಯಲಿ ಎಂದು ಪ್ರಾರ್ಥಿಸುತ್ತಾ ಕೇವಟನು ಇಂದಿಗೂ ಭಕ್ತರ ಮನದಲ್ಲಿ ಚಿರಂಜೀವಿಯಾಗಿದ್ದಾನೆ. ಇಂಥ ಸಮರ್ಪಣಾ ಭಾವ, ನಿಷ್ಕಾಮ ಭಕ್ತಿ ಪ್ರಾಮಾಣಿಕ ಬದುಕು ನಮ್ಮದಾಗಲಿ.

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಪಂಜಾಬ್	6	5	0	11
ಬೆಂಗಳೂರು	7	5	2	10
ರಾಜಸ್ಥಾನ್	7	5	2	10
ಹೈದರಾಬಾದ್	7	4	3	8
ಚೆನ್ನೈ	7	3	4	6
ಡೆಲ್ಲಿ	6	3	3	6
ಗುಜರಾತ್	7	3	4	6
ಮುಂಬೈ	7	2	5	4
ಲಖನೌ	7	2	5	4
ಕೋಲ್ಕತಾ	7	1	5	3

ಸಮಾಚಾರ ಸಣ್ಣದಲ್ಲ

ಫಿಲ್ ಸಾಲ್ಟ್ ಗಾಯ: ತಂಡದಿಂದ ಹೊರಕ್ಕೆ

ಬೆಂಗಳೂರು: ಶುಕ್ರವಾರ ಗುಜರಾತ್ ವಿರುದ್ಧದ ಪಂದ್ಯದಲ್ಲಿ ಆರ್‌ಸಿಬಿ ಆರಂಭಿಕ ಆಟಗಾರ ಫಿಲ್ ಸಾಲ್ಟ್ ಆಡುವ ಹನ್ನೊಂದರ ಬಳಗದಿಂದ ಹೊರ ಬಿದ್ದರು. ಅವರು ಗಾಯಕ್ಕೆ ತುತ್ತಾಗಿರುವ ಬಗ್ಗೆ ಫ್ರಾಂಚೈಸಿ ತನ್ನ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಾಕಿದೆ. 'ಶುಕ್ರವಾರ ನಾವು ಫಿಲ್ ಸಾಲ್ಟ್ ಅವರನ್ನು ಕಳೆದುಕೊಂಡಿದ್ದೇವೆ. ಆದಷ್ಟು ಬೇಗ ಗುಣಮುಖರಾಗಿ ಬಂದು, ಮತ್ತೊಮ್ಮೆ ಆರ್‌ಸಿಬಿ ಪರ ಆಡುವುದನ್ನು ನೋಡಲು ಎದುರು ನೋಡುತ್ತಿದ್ದೇವೆ' ಎಂದು ಹಂಚಿಕೊಂಡು ಈ ರೀತಿ ಬರೆದಿದೆ. ಫಿಲ್ ಸಾಲ್ಟ್ ಪ್ರಸ್ತುತ ನಡೆಯುತ್ತಿರುವ ಐಪಿಎಲ್ ಟೂರ್ನಿ ಯಲ್ಲಿ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನವನ್ನು ತೋರುತ್ತಿದ್ದಾರೆ. ಅವರು ಇಲ್ಲಿಯವರೆಗೂ ಆಡಿದ ಆರು ಇನ್ನಿಂಗ್ಸ್‌ಗಳಿಂದ 168.33ರ ಸ್ಟ್ರೈಕ್‌ರೇಟ್‌ನಲ್ಲಿ 202 ರನ್‌ಗಳನ್ನು ಕಲೆ ಹಾಕಿದ್ದಾರೆ.

ಟಿ20ಯಲ್ಲಿ ಭಾರತದ ವನಿತೆಯರಿಗೆ ಸೋಲು

ಜೋಹಾನ್ಸ್ ಬರ್ಗ್: ನಾಯಕ ಲಾರಾ ವೋಲ್ವಾರ್ಟ್ ಅವರ ಶತಕ (115 ರನ್, 53 ಬಾಲ್) ಅವರ ಅಮೋಘ ಶತಕದ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಭಾರತದ ವಿರುದ್ಧ 3ನೇ ಟಿ20 ಪಂದ್ಯದಲ್ಲಿ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು. ಈ ಮೂಲಕ ಅತಿಥೇಯ ತಂಡವು ಇನ್ನೂ 2 ಪಂದ್ಯಗಳು ಬಾಕಿ ಇರುವಂತೆ ಸರಣಿಯನ್ನು ವಶಪಡಿಸಿಕೊಂಡಿತು. ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಭಾರತ ತಂಡವು ಶಫಾಲಿ ವರ್ಮಾ ಮತ್ತು ಹರ್ಮನ್‌ಪ್ರೀತ್ ಕೌರ್ ಅವರ ಅರ್ಧ ಶತಕಗಳ ನೆರವಿನಿಂದ 4 ವಿಕೆಟ್ ನಷ್ಟಕ್ಕೆ 192 ರನ್ ಗಳಿಸಿತ್ತು. ಆ ಗುರಿಯನ್ನು ಬೆಂಬತ್ತಿದ ದ.ಆಫ್ರಿಕಾ ತಂವು ಇನ್ನೂ 21 ಬಾಲ್‌ಗಳು ಬಾಕಿ ಇರುವಂತೆ 193 ರನ್ ಗಳಿಸಿ ಹ್ಯಾಟ್ರಿಕ್ ಗೆಲುವನ್ನು ಕಂಡಿತು.

ಒಲಿಂಪಿಕ್ಸ್ ಕ್ರಿಕೆಟ್‌ಗೆ ಸಜ್ಜುಗೊಂಡ ಮೈದಾನ

ಲಾಸ್ ಏಂಜಲೀಸ್: 128 ವರ್ಷಗಳ ಕಾಯುವಿಕೆಯ ಕ್ರಿಕೆಟ್ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಕ್ರಿಕೆಟ್ ಮರಳಲು ಸಜ್ಜಾಗಿದೆ. ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗಾಗಿ ಮೈದಾನವನ್ನು ಅಂತಿಮ ಗೊಳಿಸಿದೆ. ಎಲ್ಲಾ ಪಂದ್ಯಗಳೂ ಕ್ಯಾಲಿಫೋರ್ನಿಯಾದ ಪೊಮೊನಾದ ಫೇರ್‌ಪ್ಲೆಕ್ಸ್ ಕ್ರೀಡಾಂಗಣದಲ್ಲಿ ನಡೆಯಲಿವೆ. ಈ ಐತಿಹಾಸಿಕ ಪಂದ್ಯಾವಳಿಗಾಗಿ ತಾತ್ಕಾಲಿಕವಾದ ಆಧುನಿಕ ಕ್ರಿಕೆಟ್ ಕ್ರೀಡಾಂಗಣದ ನಿರ್ಮಾಣ ಈಗಾಗಲೇ ಪ್ರಾರಂಭವಾಗಿದೆ. ಬುಧವಾರ ನಡೆದ ಶಿಲಾನ್ಯಾಸ ಸಮಾರಂಭದೊಂದಿಗೆ ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡಲಾಯಿತು. ಐಸಿಸಿ ಅಧ್ಯಕ್ಷ ಜಯ್ ಶಾ, 'ಇದನ್ನು ಕ್ರಿಕೆಟ್‌ನ ಜಾಗತಿಕ ವಿಸ್ತರಣೆಯತ್ತ ಒಂದು ಪ್ರಮುಖ ಹೆಜ್ಜೆ' ಎಂದು ಬಣ್ಣಿಸಿದ್ದಾರೆ. ಈ ಬಾರಿ ಪಂದ್ಯಾವಳಿಯು ಟಿ20 ಮಾದರಿಯಲ್ಲಿ ನಡೆಯಲಿದೆ. ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಆರು ತಂಡಗಳು ಭಾಗವಹಿಸಲಿವೆ. ಪ್ರತೀ ತಂಡವು 15 ಆಟಗಾರರನ್ನು ಹೊಂದಿರಲಿದ್ದು, 2028 ಜುಲೈ 12ರಿಂದ ಜುಲೈ 29ರ ವರೆಗೆ ನಡೆಯಲಿದೆ. ಪ್ರಥಮ ಸ್ಥಾನವನ್ನು ಪಡೆಯುವ ತಂಡವು ಚಿನ್ನ, ದ್ವಿತೀಯ ಸ್ಥಾನವನ್ನು ಪಡೆಯುವ ತಂಡವು ಬೆಳ್ಳಿ ಮತ್ತು 3ನೇ ಸ್ಥಾನದ ತಂಡವು ಕಂಚಿನ ಪದಕವನ್ನು ಗೆಲ್ಲಲಿದೆ.

ವಿರಾಟ್ ಕೊಹ್ಲಿ ಅಬ್ಬರದ ಬ್ಯಾಟಿಂಗ್. ▸▸ ಚಿತ್ರ: ಸುಧಾಕರ್ ದೇವರಾಜ್



ಸಮಯೋಚಿತ ಅರ್ಧ ಶತಕ ಬಾರಿಸಿದ ಪಡಿಕ್ಕಲ್.

ವಿರಾಟ್ ಆಟದ ಸೊಗಸನ್ನು ಆನಂದಿಸುತ್ತಿರುವ ಅನುಷ್ಕಾ ಶರ್ಮಾ.

2ನೇ ಸ್ಥಾನಕ್ಕೇರಿದ ಆರ್‌ಸಿಬಿ | ಗುಜರಾತ್ ಟೈಟಾನ್ಸ್‌ಗೆ ಮತ್ತೆ ಸೋಲು

ಪಡಿಕ್ಕಲ್-ವಿರಾಟ ದರ್ಶನ

ಬೆಂಗಳೂರು: ವಿರಾಟ್ ಕೊಹ್ಲಿ ಹಾಗೂ ದೇವದತ್ ಪಡಿಕ್ಕಲ್‌ರವರ ಸ್ಫೋಟಕ ಅರ್ಧ ಶತಕಗಳ ಬಲದಿಂದ ಆರ್‌ಸಿಬಿ ಇಲ್ಲಿ ಶುಕ್ರವಾರ ನಡೆದ ಐಪಿಎಲ್ ಟೂರ್ನಿಯ 34ನೇ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ಎದುರು 5 ವಿಕೆಟ್‌ಗಳ ಗೆಲುವು ಪಡೆಯಿತು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುಜರಾತ್ ನೀಡಿದ್ದ 206 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಆರ್‌ಸಿಬಿ, ತವರು ಅಂಗಣದ ಪಂದ್ಯವನ್ನು ಗೆದ್ದು ಅಭಿಮಾನಿಗಳಿಗೆ ಭರ್ಜರಿ ರಸದೌತಣ ಉಣಬಡಿಸಿತು.

ತವರಿನಲ್ಲಿ ದೊರೆತ ಈ ಗೆಲುವಿನ ಮೂಲಕ ಒಟ್ಟು 10 ಅಂಕಗಳು ಹಾಗೂ ಉತ್ತಮ ರನ್‌ರೇಟ್ ಬಲದಿಂದ ಅಂಕಪಟ್ಟಿಯಲ್ಲಿ ಪಾಟೀದಾರ್ ಪಡೆ ಎರಡನೇ ಸ್ಥಾನಕ್ಕೆ ಲಗ್ಗೆ ಇಟ್ಟಿತು. ಸಾಯಿ ಸುದರ್ಶನ್ ಶತಕದ ಹೊರತಾಗಿಯೂ 4ನೇ ಸೋಲು ಅನುಭವಿಸಿದ ಶುಭಮನ್ ಗಿಲ್ ನಾಯಕತ್ವದ ಗುಜರಾತ್ ತಂಡ ಏಳನೇ ಸ್ಥಾನದಲ್ಲಿಯೇ ಉಳಿಯಿತು.

ಕೊಹ್ಲಿ-ಪಡಿಕ್ಕಲ್ ಜತೆಯಾಟ: ಫಿಲ್ ಸಾಲ್ಟ್ ಅನುಪಸ್ಥಿತಿಯಲ್ಲಿ ವಿರಾಟ್ ಕೊಹ್ಲಿ ಜತೆ ಇನ್ನಿಂಗ್ಸ್ ಆರಂಭಿಸಿದ ಜೇಕಬ್ ಬೆಥೆಲ್ 14 ರನ್ ಗಳಿಸಿ ಮೊಹಮ್ಮದ್ ಸಿರಾಜ್‌ಗೆ ವಿಕೆಟ್ ಒಪ್ಪಿಸಿದರು. 2ನೇ ವಿಕೆಟ್‌ಗೆ ಜತೆಯಾದ ವಿರಾಟ್ ಕೊಹ್ಲಿ ಹಾಗೂ ದೇವದತ್ ಪಡಿಕ್ಕಲ್ ಅಬ್ಬರದ ಬ್ಯಾಟಿಂಗ್ ಮೂಲಕ ಗುಜರಾತ್ ಬೌಲರ್‌ಗಳಿಗೆ ಬೆವರಿಳಿಸಿದರು. ಈ ಜೋಡಿ 59 ಎಸೆತಗಳಲ್ಲಿ 115 ರನ್‌ಗಳ ಜತೆಯಾಟ ಪ್ರದರ್ಶಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿತು. ಪಡಿಕ್ಕಲ್ 27 ಎಸೆತಗಳಲ್ಲಿ 6 ಸಿಕ್ಸರ್ ಹಾಗೂ 2 ಬೌಂಡರಿಗಳೊಂದಿಗೆ 55 ರನ್ ಗಳಿಸಿ ರಶೀದ್ ಖಾನ್‌ಗೆ ವಿಕೆಟ್ ಒಪ್ಪಿಸಿದರು.

81 ರನ್ ಸಿಡಿಸಿದ ಕೊಹ್ಲಿ: ಮೊದಲ ಓವರ್‌ನಲ್ಲಿಯೇ ವಾಷಿಂಗ್ಟನ್ ಸುಂದರ್ ಅವರಿಂದ ಸಿಕ್ಕ ಜೀವದಾನವನ್ನು ಸದುಪಯೋಗಪಡಿಸಿಕೊಂಡ ವಿರಾಟ್ ಕೊಹ್ಲಿ ಉತ್ತಮವಾಗಿಯೇ ಆಡಿದರು. 44 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 8 ಬೌಂಡರಿಗಳೊಂದಿಗೆ 81 ರನ್ ಗಳಿಸಿದರು. ಜಿತೇಶ ಶರ್ಮಾ ಹಾಗೂ ರಜತ್ ಪಾಟೀದಾರ್ ಒಂದೊಂದು ಸಿಕ್ಸರ್ ಬಾರಿಸಿ ತಂಡವನ್ನು ಬಹುಬೇಗ ಗೆಲ್ಲಿಸುವ ಪ್ರಯತ್ನದಲ್ಲಿ ವಿಕೆಟ್ ಒಪ್ಪಿಸಿದರು. ಇದಾದ ಬಳಿಕ ಆರ್‌ಸಿಬಿಗೆ ಕೊನೆಯ 4 ಓವರ್‌ಗಳಲ್ಲಿ 31 ರನ್ ಅಗತ್ಯವಿತ್ತು. ಆದರೆ 18ನೇ ಓವರ್‌ನಲ್ಲಿ ಕೃಣಾಲ್ ಪಾಂಡ್ಯ ಎರಡು ಬೌಂಡರಿ ಹಾಗೂ ಒಂದು ಸಿಕ್ಸರ್ ಮೂಲಕ ಆರ್‌ಸಿಬಿ ತಂಡಕ್ಕೆ ಗೆಲುವನ್ನು ಖಾತ್ರಿಗೊಳಿಸಿದರು. ಕೃಣಾಲ್ ಕೊನೆಯಲ್ಲಿ 12 ಎಸೆತಗಳಲ್ಲಿ 23 ರನ್‌ಗಳನ್ನು ಬಾರಿಸಿ ಅಜೇಯರಾಗಿ ಉಳಿದರು.

ಸುದರ್ಶನ್-ಗಿಲ್ ಜತೆಯಾಟ: ಇದಕ್ಕೂ ಮುನ್ನ ಟಾಸ್ ಗೆದ್ದು ಎದುರಾಳಿ ಗುಜರಾತ್ ಟೈಟನ್ಸ್ ತಂಡವನ್ನು ಮೊದಲು ಬ್ಯಾಟಿಂಗ್‌ಗೆ ಆಹ್ವಾನ ನೀಡಿದ್ದ ಆರ್‌ಸಿಬಿಯ ಯೋಜನೆಯನ್ನು ಸಾಯಿ ಸುದರ್ಶನ್ ತಲೆ ಕೆಳಗಾಗುವಂತೆ ಮಾಡಿದರು. ಗುಜರಾತ್ ಪರ ಇನ್ನಿಂಗ್ಸ್ ಆರಂಭಿಸಿದ ಸಾಯಿ ಸುದರ್ಶನ್ ಹಾಗೂ ಶುಭಮನ್ ಗಿಲ್ ಮೊದಲನೇ ವಿಕೆಟ್‌ಗೆ 76 ಎಸೆತಗಳಲ್ಲಿ 128 ರನ್‌ಗಳನ್ನು ಕಲೆ ಹಾಕಿದರು. ಒಂದು ಕಡೆ ಸುದರ್ಶನ್ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿದರೆ, ಮತ್ತೊಂದು ಕಡೆ ಗಿಲ್ ಸಂಯಮದಿಂದ ಅವಕಾಶ ಸಿಕ್ಕಾಗ ಚೆಂಡನ್ನು ಬೌಂಡರಿ ಹಾಗೂ ಸಿಕ್ಸರ್ ಗೆರೆ ದಾಟಿಸುತ್ತಿದ್ದರು. ಗಿಲ್ 24 ಎಸೆತಗಳಲ್ಲಿ 32 ರನ್ ಗಳಿಸಿ ಸುಯಾಶ್ ಶರ್ಮಾಗೆ ಸಿಕ್ಸರ್ ಹೊಡೆಯುವ ಪ್ರಯತ್ನದಲ್ಲಿ ದೇವದತ್ ಪಡಿಕ್ಕಲ್‌ಗೆ ಕ್ಯಾಚ್ ಕೊಟ್ಟು ನಿರ್ಗಮಿಸಿದರು.

ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ಜೋಸ್ ಬಟ್ಲರ್ 16 ಎಸೆತಗಳಲ್ಲಿ 25 ರನ್ ಗಳಿಸಿದ ಬಳಿಕ ಔಟ್ ಆದರು. ಆದರೆ ಸಾಯಿ ಸುದರ್ಶನ್ ಲೀಲಾಜಾಲವಾಗಿ ಬ್ಯಾಟ್ ಬೀಸಿದರು. ಅವರು 58 ಎಸೆತಗಳಲ್ಲಿ 5 ಸಿಕ್ಸರ್ ಹಾಗೂ 11 ಬೌಂಡರಿಗಳೊಂದಿಗೆ 100 ರನ್ ಗಳಿಸಿದರು. ಆ ಮೂಲಕ ತಮ್ಮ ಐಪಿಎಲ್ ವೃತ್ತಿ ಜೀವನದ ಮೂರನೇ ಶತಕ ಹಾಗೂ ವೇಗವಾಗಿ 2000 ರನ್‌ಗಳನ್ನು ಪೂರ್ಣಗೊಳಿಸಿದ ಮೊದಲ ಬ್ಯಾಟರ್ ಎನಿಸಿಕೊಂಡರು. 16ನೇ ಓವರ್‌ನಲ್ಲಿ ಹೇಜಲ್‌ವುಡ್ ಎಸೆತದಲ್ಲಿ ಅವರು ಔಟ್ ಆದರು.

ಸಾಯಿ ಸುದರ್ಶನ್ ವಿಕೆಟ್ ಒಪ್ಪಿಸಿದ ಬಳಿಕ ಸುಯಾಶ್ ಶರ್ಮಾ, ಭುವನೇಶ್ವರ್ ಕುಮಾರ್ ಹಾಗೂ ಹೇಜಲ್‌ವುಡ್ ಅವರು ಕ್ರಮವಾಗಿ 17,18 ಹಾಗೂ 19ನೇ ಓವರ್‌ಗಳಲ್ಲಿ ಗುಜರಾತ್ ತಂಡವನ್ನು ಕಟ್ಟಿಹಾಕಿದರು. ಕೃಣಾಲ್ 20ನೇ ಓವರ್‌ನಲ್ಲಿ ಜೇಸನ್ ಹೋಲ್ಡರ್‌ಗೆ ಎರಡು ಸಿಕ್ಸರ್ ಹಾಗೂ ಒಂದು ಬೌಂಡರಿ ಬಿಟ್ಟುಕೊಟ್ಟರು. ಹೋಲ್ಡರ್ 10 ಎಸೆತಗಳಲ್ಲಿ 23 ರನ್ ಗಳಿಸಿದರು. ಅಂತಿಮವಾಗಿ ಗುಜರಾತ್ ಟೈಟಾನ್ಸ್ 20 ಓವರ್‌ಗಳಿಗೆ 3 ವಿಕೆಟ್‌ಗಳ ನಷ್ಟಕ್ಕೆ 205 ರನ್‌ಗಳನ್ನು ಕಲೆ ಹಾಕಿತು.

ಕೊಹ್ಲಿ: 800 ಬೌಂಡರಿ

ಈಗಾಗಲೇ ಹಲವು ದಾಖಲೆಯನ್ನು ಬರೆದಿರುವ ವಿರಾಟ್ ಕೊಹ್ಲಿ ಶುಕ್ರವಾರ ಮತ್ತೊಂದು ದಾಖಲೆಯನ್ನು ತಮ್ಮ ಹೆಸರಿಗೆ ಬರೆದುಕೊಂಡಿದ್ದಾರೆ. ಅವರು ಐಪಿಎಲ್ ಟೂರ್ನಿಯಲ್ಲಿ 800 ಬೌಂಡರಿಗಳನ್ನು ಪೂರ್ಣಗೊಳಿಸಿದ ಮೊದಲ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ.

ಸ್ಕೋರ್ ಬೋರ್ಡ್

ಗುಜರಾತ್ 205/3 20 ಓವರ್

		ರನ್	ಎಸೆತ	4s	6s
ಸಾಯಿ ಸುದರ್ಶನ್	ಸಿ ಮತ್ತು ಬಿ ಹೇಜಲ್‌ವುಡ್	100	58	11	5
ಶುಭ್‌ಮನ್ ಗಿಲ್	ಸಿ ಪಡಿಕ್ಕಲ್, ಬಿ ಸುಯಶ್	32	24	2	1
ಜೋಸ್ ಬಟ್ಲರ್	ಸಿ ಹೇಜಲ್‌ವುಡ್, ಬಿ ಭುವನೇಶ್ವರ್	25	16	2	1
ವಾಷಿಂಗ್ಟನ್	ನಾಟೌಟ್	19	12	1	1
ಹೋಲ್ಡರ್	ನಾಟೌಟ್	23	10	1	2

ಬೌಲಿಂಗ್ ಬೆಂಗಳೂರು

	ಓವರ್	ಮೆಡನ್	ರನ್	ವಿಕೆಟ್
ಭುವನೇಶ್ವರ್	4	0	31	1
ಹೇಜಲ್‌ವುಡ್	4	0	40	1
ರಾಸಿಖ್	3	0	28	0
ಕೃನಾಲ್	4	0	50	0
ಶೆಫರ್ಡ್	1	0	17	0
ಸುಯಶ್	4	0	36	1

ವಿಕೆಟ್ ಪತನ : 1-128, 2-160, 3-177

ಬೆಂಗಳೂರು 206/5 18.5 ಓವರ್

		ರನ್	ಎಸೆತ	4s	6s
ಜೆ.ಬೆಥೆಲ್	ಸಿ ಶಾರೂಖ್, ಬಿ ಸಿರಾಜ್	14	10	3	0
ಕೊಹ್ಲಿ	ಬಿ ಹೋಲ್ಡರ್	81	44	8	4
ಪಡಿಕ್ಕಲ್	ಬಿ ರಶೀದ್	55	27	2	6
ಪಾಟೀದಾರ್	ಸಿ ಸುಂದರ್, ಬಿ ಸುತಾರ್	8	5	0	1
ಜಿತೇಶ್	ಸಿ ಸುತಾರ್, ಬಿ ರಶೀದ್	10	6	1	1
ಟಿಮ್ ಡೇವಿಡ್	ನಾಟೌಟ್	10	9	0	1
ಪಾಂಡ್ಯ	ನಾಟೌಟ್	23	12	3	1

ಬೌಲಿಂಗ್ ಗುಜರಾತ್

	ಓವರ್	ಮೆಡನ್	ರನ್	ವಿಕೆಟ್
ಸಿರಾಜ್	3	0	25	1
ರಬಾಡ	4	0	45	0
ಹೋಲ್ಡರ್	3.5	0	35	1
ಪ್ರಸಿದ್ಧ್	2	0	31	0
ರಶೀದ್	4	0	49	2
ಸುತಾರ್	2	0	19	1

ವಿಕೆಟ್ ಪತನ: 1-26, 2-140, 3-154, 4-171, 5-173

ಪ್ಲೇಯರ್ ಆಫ್ ದಿ ಮ್ಯಾಚ್ ▸▸ ವಿರಾಟ್ ಕೊಹ್ಲಿ

ಡಾ.ರಾಜ್ ಜನ್ಮದಿನ: ಆರ್‌ಸಿಬಿ ಗುಣಗಾನ

ಬೆಂಗಳೂರು: ನಟ ಸಾರ್ವಭೌಮ ಡಾ. ರಾಜ್‌ಕುಮಾರ್ ಅವರ 97ನೇ ಜನುಮ ದಿನದ ನಿಮಿತ್ತ ಆರ್‌ಸಿಬಿ ತಂಡ, ತನ್ನ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ವಿಶೇಷ ಗೌರವ ಸಲ್ಲಿಸಿದೆ.

ಎಕ್ಸ್ ಖಾತೆಯಲ್ಲಿ ಆರ್‌ಸಿಬಿ ತಂಡ ಅಣ್ಣಾವ್ರ ಬಗ್ಗೆ ಪೋಸ್ಟ್ ಹಾಕಿ ಕನ್ನಡದ ಅಭಿಮಾನಿಗಳ ಪ್ರೀತಿಗೆ ಪಾತ್ರವಾಗಿದೆ. ಡಾ. ರಾಜ್ ಅವರ ಫೋಟೋವನ್ನು ಉಲ್ಲೇಖಿಸಿ, 'ನಟ ಸಾರ್ವಭೌಮ, ಕರ್ನಾಟಕ ರತ್ನ, ಬಂಗಾರದ ಮನುಷ್ಯ, ಡಾ. ರಾಜ್‌ಕುಮಾರ್ ಅವರ ಜನ್ಮದಿನದ ಸವಿನೆನಪು. ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ಎಂದು ಹೇಳಿದ ನಮ್ಮ ರಾಜ್ ಅವರಿಗೆ ರಾಜ ನಮನ' ಎಂಬ ಶೀರ್ಷಿಕೆಯನ್ನೂ ಬರೆದಿದೆ.

ಬಲಿಷ್ಠ ಅಯ್ಯರ್ ಪಡೆ ಎದುರು ಅಕ್ಷರ್ ಪಟೇಲ್ ತಂಡಕ್ಕೆ ಗೆಲ್ಲಬೇಕಾದ ಸವಾಲು

ಡೆಲ್ಲಿಗಿಂದು ತವರಿನಲ್ಲಿ ಪಂಜಾಬ್ ಎದುರಾಳಿ

ದೆಹಲಿ: ಇಲ್ಲಿನ ಅರುಣ್ ಜೇಟ್ಲಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಇಂದು ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಡೆಲ್ಲಿ ತಂಡವು ಬಲಿಷ್ಠ ಪಂಜಾಬ್ ತಂಡವನ್ನು ಎದುರಿಸಲಿದೆ.

ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ಈಗಾಗಲೇ 6 ಪಂದ್ಯಗಳನ್ನಾಡಿ 3ರಲ್ಲಿ ಸೋತು, 3ರಲ್ಲಿ ಗೆದ್ದು 6 ಅಂಕಗಳನ್ನಷ್ಟೇ ಪಡೆದು ಅಂಕಪಟ್ಟಿಯಲ್ಲಿ 6ನೇ ಸ್ಥಾನದಲ್ಲಿದೆ. ಆದರೆ ಅಂಕಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ 6 ಪಂದ್ಯಗಳ ಪೈಕಿ 5ನ್ನು ಗೆದ್ದು, ಒಂದು ಪಂದ್ಯ ಮಳೆಯಿಂದಾಗಿ ರದ್ದಾದ ಕಾರಣ 11 ಅಂಕಗಳನ್ನು ಗಳಿಸಿದೆ.

ಆಟಗಾರರ ನಡುವಿನ ಸಮನ್ವಯದ ಕೊರತೆ ಮತ್ತು ತಂಡದಲ್ಲಿ ಸಂಘಟಿತ ಹೋರಾಟ ಕಾಣದಿರುವುದು ಈ ಸಲದ ಐಪಿಎಲ್‌ನಲ್ಲಿ ಡೆಲ್ಲಿ ತಂಡಕ್ಕೆ ಈ ವರೆಗೂ ಆಗಿರುವ ಹಿನ್ನಡೆಗೆ ಪ್ರಮುಖ ಕಾರಣ. ಹಾಗಾಗಿ ಪ್ಲೇ ಆಫ್ ಅವಕಾಶ ಗಿಟ್ಟಿಸಬೇಕಾದರೆ ಡೆಲ್ಲಿ ತಂಡವು ಇನ್ನು ಉಳಿದ

ಪಂದ್ಯಗಳ ಪೈಕಿ ಕನಿಷ್ಠ 5 ಪಂದ್ಯಗಳನ್ನಾದರೂ ಗೆಲ್ಲಬೇಕಾದ ಒತ್ತಡಲ್ಲಿದೆ.

ಈ ಆವೃತ್ತಿಯಲ್ಲಿ ಆರಂಭದಿಂದಲೂ ಉತ್ತಮ ಫಾರ್ಮ್‌ನಲ್ಲಿರುವ ಪಂಜಾಬ್, ಈ ವರೆಗೂ ಈ ಬಾರಿ ಒಂದೇ ಒಂದು ಪಂದ್ಯವನ್ನೂ ಸೋತಿಲ್ಲ. ಸಂಘಟಿತ ಪ್ರಯತ್ನವು ವರವಾಗಿರುವುದೇ ಅಯ್ಯರ್ ಬಳಗದ ನಿಜವಾದ ಶಕ್ತಿ ಎನಿಸಿದೆ. ಒಂದೊಂದು ಪಂದ್ಯದಲ್ಲಿ ಒಬ್ಬೊಬ್ಬರು ತಂಡವನ್ನು ಗೆಲುವಿನತ್ತ ಕೊಂಡೊಯ್ಯುತ್ತಿರುವುದು ಈ ಸಲದ ಐಪಿಎಲ್‌ನಲ್ಲಿ ಇದುವರೆಗಿನ ಅದರ ಅಜೇಯ ಓಟಕ್ಕೆ ಬಹು ಮುಖ್ಯ ಕಾರಣ. ಹೀಗಾಗಿ ತನ್ನ ತವರಿನಲ್ಲಿ ಡೆಲ್ಲಿ ತಂಡವು ಪಂಜಾಬಿನ ಸವಾಲನ್ನು ಹೇಗೆ ಎದುರಿಸಲಿದೆ ಎಂಬುದೇ ನಿಜಕ್ಕೂ ಕುತೂಹಲಕಾರಿಯಾಗಿದೆ.

ಇಂದಿನ ಪಂದ್ಯ

ಡೆಲ್ಲಿ vs ಪಂಜಾಬ್

ತಾಣ	: ಅರುಣ್ ಜೇಟ್ಲಿ ಸ್ಟೇಡಿಯಂ, ದೆಹಲಿ
ಸಮಯ	: ಅಪರಾಹ್ನ 3.30
ನೇರಪ್ರಸಾರ	: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್	: ಜಿಯೋ ಹಾಟ್‌ಸ್ಟಾರ್

ಪ್ರಬಲರ ನಡುವಿನ ಕಾದಾಟ | ಎರಡು ತಂಡಗಳಿಗೂ ಪಂದ್ಯ ಗೆಲ್ಲುವ ಗುರಿ

ಇಂದು ರಾಜಸ್ಥಾನ-ಹೈದರಾಬಾದ್ ಹಣಾಹಣಿ

ಜೈಪುರ: ಇಂದು ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ರಾಜಸ್ಥಾನ್ ರಾಯಲ್ಸ್ ತಂಡವು ಸನ್ ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ.

ರಿಯಾನ್ ಪರಾಗ್ ನಾಯಕತ್ವದ ಬಲಿಷ್ಠ ರಾಜಸ್ಥಾನವು ಈ ಆವೃತ್ತಿಯ ಐಪಿಎಲ್‌ನಲ್ಲಿ 7 ಪಂದ್ಯಗಳನ್ನು ಆಡಿದ್ದು, 5 ಪಂದ್ಯಗಳಲ್ಲಿ ಗೆದ್ದು, 2 ಪಂದ್ಯಗಳಲ್ಲಿ ಸೋತು ಒಟ್ಟು 10 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ 2ನೇ ಸ್ಥಾನದಲ್ಲಿದೆ. 7 ಪಂದ್ಯಗಳನ್ನು ಆಡಿರುವ ಇಶಾನ್ ಕಿಶಾನ್ ನಾಯಕತ್ವದ ಹೈದರಾಬಾದ್ ತಂಡ ಕೂಡಾ 7 ಪಂದ್ಯಗಳನ್ನು ಆಡಿ, 4ರಲ್ಲಿ ಸೋತು, 3ರಲ್ಲಿ ಗೆದ್ದು 8 ಅಂಕಗಳನ್ನು ಸಂಪಾದಿಸಿ ಅಂಕಪಟ್ಟಿಯಲ್ಲಿ 4ನೇ ಸ್ಥಾನದಲ್ಲಿದೆ.

ಆರಂಭಿಕ ಆಟಗಾರರಾದ ಧ್ರುವ್ ಜ್ಯುರೆಲ್ ಮತ್ತು ವೈಭವ್ ಸೂರ್ಯವಂಶಿ ಉತ್ತಮ ಫಾರ್ಮ್‌ನಲ್ಲಿರುವುದು ರಾಜ ಸ್ಥಾನ ತಂಡಕ್ಕೆ ವರವೆನಿಸಿದೆ. ಸರಿಸುಮಾರು ತಲಾ ನಾಲ್ಕು ಪಂದ್ಯಗಳಲ್ಲಿ ಇಬ್ಬರೂ ಮಿಂಚಿದ್ದಾರೆ. ಅದೇ ರೀತಿ ತಂಡದ ಬೌಲರ್‌ಗಳೂ ಕೂಡಾ ಉತ್ತಮ ಸಾಧನೆ ಮೆರೆದಿದ್ದಾರೆ. ತವರಿನಲ್ಲಿ

ಪಂದ್ಯ ನಡೆಯುತ್ತಿರುವುದರಿಂದ ರಾಜಸ್ಥಾನದ ಪಾಲಿಗೆ ಪ್ರೇಕ್ಷಕರ ಹೆಚ್ಚಿನ ಬೆಂಬಲ ಸಿಗುವುದು ಸಹಜವೂ ಹೌದು. ಹೈದರಾಬಾದ್ ತಂಡವು ಈ ಐಪಿಎಲ್ ಆವೃತ್ತಿಯ ಆರಂಭದಲ್ಲಿ ಮುಗ್ಗರಿಸಿದರೂ, ಆ ಬಳಿಕ ಪುಟಿದೆದ್ದು ಇದೀಗ ಲೀಗ್ ಹಂತದಲ್ಲಿ ಎಲ್ಲಾ ತಂಡಗಳಿಗೂ ಉತ್ತಮ ಪೈಪೋಟಿ ನೀಡುವಲ್ಲಿ ಯಶಸ್ವಿ ಯಾಗುತ್ತಿದೆ. ಇನ್ನೊಂದು ವಾರದಲ್ಲಿ ತಂಡಕ್ಕೆ ಪ್ಯಾಟ್ ಕಮಿನ್ಸ್ ಲಭ್ಯರಾದರೆ ಹೈದರಾಬಾದ್‌ನ ಬೌಲಿಂಗ್ ವಿಭಾಗ ಇನ್ನಷ್ಟು ಬಲಿಷ್ಠವಾಗುವುದು ಖಚಿತವೆನಿಸಿದೆ. ಇಂದಿನ ಈ ಪಂದ್ಯವು ಎರಡೂ ತಂಡಗಳಿಗೂ ಪ್ರತಿಷ್ಠೆಯಾಗಿರುವುದರಿಂದ ರೋಚಕವಾಗಬಹುದೆಂಬುದು ಕ್ರಿಕೆಟ್ ಪ್ರೇಮಿಗಳ ನಿರೀಕ್ಷೆಯಾಗಿದೆ.

ಇಂದಿನ ಪಂದ್ಯ

ರಾಜಸ್ಥಾನ vs ಹೈದರಾಬಾದ್

ಸಮಯ	: ರಾತ್ರಿ 7.30
ತಾಣ	: ಸವಾಯ್ ಮಾನ್ ಸಿಂಗ್ ಸ್ಟೇಡಿಯಂ, ಜೈಪುರ
ನೇರಪ್ರಸಾರ	: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್	: ಜಿಯೋ ಹಾಟ್‌ಸ್ಟಾರ್

ವಿಟಾಕೀಸ್

ಜೆರಾಕ್ಸ್‌ನಲ್ಲಿ ತಾಯ್ತನದ ಮ್ಯಾಜಿಕ್

ಟಗರು ಪಲ್ಯ ಸೇರಿದಂತೆ ಹಲವು ಸಿನಿಮಾಗಳನ್ನು ನಿರ್ಮಿಸಿರುವ ಡಾಲಿ ಧನಂಜಯ ಈಗ ಜೆರಾಕ್ಸ್ ಶೀರ್ಷಿಕೆಯ ವೆಬ್ ಸೀರೀಸ್ ನಿರ್ಮಾಣ ಮಾಡಿದ್ದಾರೆ. ಜೆರಾಕ್ಸ್ ಪ್ರೇಕ್ಷಕರನ್ನು ನಗುವಿನ ಅಲೆಯಲ್ಲಿ ತೇಲಿಸುತ್ತದೆ. ನಾಯಕ ಪ್ರಕಾಶ, ಬಾಲ್ಯದಲ್ಲಿ ಅಪ್ಪ ಅಮ್ಮನನ್ನು ಕಳೆದುಕೊಂಡು ದಿಕ್ಕು ತೋಚದಾಗಿರುತ್ತಾನೆ. ಆಗ ಆತನಿಗೆ ದೊಡ್ಡಪ್ಪನೇ ಆಸರೆಯಾಗುತ್ತಾನೆ.

ದೊಡ್ಡಪ್ಪ ಒಂದು ಜೆರಾಕ್ಸ್ ಅಂಗಡಿಯನ್ನು ನಡೆಸುತ್ತಿರುತ್ತಾನೆ. ಪ್ರಕಾಶನಿಗೆ ಜವಾಬ್ದಾರಿ ಬರಬೇಕು ಎಂಬ ನಿಟ್ಟಿನಲ್ಲಿ ಜೆರಾಕ್ಸ್ ಅಂಗಡಿಯನ್ನು ಆತನಿಗೆ ವಹಿಸಿರುತ್ತಾನೆ. ಪ್ರಕಾಶ ಹುಡು ಗಾಟದ ಬುದ್ಧಿಯವನು, ತಾನು ಪ್ರೀತಿಸುವ ಹುಡುಗಿಯ ಹಿಂದೆ ಬಿದ್ದಿರುತ್ತಾನೆ. ಅದೊಂದು ದಿನ ಪ್ರಕಾಶನ ಜೆರಾಕ್ಸ್ ಶಾಪ್‌ನಲ್ಲಿ ದೊಡ್ಡಪ್ಪ ಪಾನ್ ಕಾರ್ಡ್ ಜೆರಾಕ್ಸ್ ಮಾಡಲು ಹೋಗಿ ಅದನ್ನು ಅಲ್ಲೇ ಬಿಟ್ಟ ಹೋಗಿರುತ್ತಾನೆ. ರಾತ್ರಿ ವೇಳೆ ಜೆರಾಕ್ಸ್ ಯಂತ್ರದಿಂದ ಬರುವ ಪ್ರತಿಗಳಿಗೆ ಇದ್ದಕ್ಕಿದಂತೆ ಜೀವ ಬರುತ್ತದೆ. ಇದು ಕುತೂಹಲ ಮೂಡಿಸುತ್ತ ಸಾಗುತ್ತದೆ. ಜೆರಾಕ್ಸ್ ಯಂತ್ರದಲ್ಲಿ ಯಾರ ಫೋಟೋ ಹಾಕಿದರೂ ಅವರು ಅಲ್ಲಿಯೇ ಪ್ರತ್ಯಕ್ಷವಾಗುತ್ತಾರೆ. ಅದು ಯಾಕೆ, ಏನು. ಈ ಘಟನೆಗೂ ತಾಯ್ತಕ್ಕೂ ಏನು ಸಂಬಂಧ ಎಂಬುದನ್ನು ಜೆರಾಕ್ಸ್ ಸರಣಿಯನ್ನು ನೋಡಿಯೇ ತಿಳಿಯಬೇಕು.

ಈ ಹಿಂದೆ ಬ್ಲಿಂಕ್ ಚಿತ್ರದ ಮೂಲಕ ಸೈಂಟಿಫಿಕ್ ಥ್ರಿಲ್ಲರ್ ಸ್ಟೋರಿ ಹೇಳಿದ್ದ ನಿರ್ದೇಶಕ ಶ್ರೀನಿಧಿ, ಈಗ ವೆಬ್ ಸರಣಿಯಲ್ಲಿಯೂ ಕಾಮಿಡಿ, ಸಸ್ಪೆನ್ಸ್, ಥ್ರಿಲ್ಲರ್ ಸ್ಟೋರಿಯ ಜತೆಗೆ ಫ್ಯಾಂಟಸಿ ಕಥೆಯನ್ನು ಬೆರೆಸಿ ಕಟ್ಟಿಕೊಟ್ಟಿದ್ದಾರೆ. ಪ್ರಕಾಶನಾಗಿ ನಾಗ ಭೂಷಣ್ ಮೆಚ್ಚುವ ಅಭಿನಯ ತೋರಿದ್ದಾರೆ. ದೊಡ್ಡಪ್ಪನ ಪಾತ್ರದಲ್ಲಿ ಓಂ ಪ್ರಕಾಶ್ ರಾವ್ ನಗುವಿನ ಕಚಗುಳಿ ಇಡುತ್ತಾರೆ. ಪಾಯಲ್ ಚಂಗಪ್ಪ ನಾಯಕಿಯಾಗಿ ನಟಿಸಿದ್ದು ಅಪ್ಪಟ ಹಳ್ಳಿ ಹುಡುಗಿ ಯಾಗಿ ಗಮನಸಳೆಯುತ್ತಾರೆ. ಉಳಿ ದಂತೆ ತುಕಾಲಿ ಸಂತು, ಜಗ್ಗಪ್ಪ ಹೀಗೆ ಎಲ್ಲರೂ ತಮ್ಮ ತಮ್ಮ ಪಾತ್ರಗಳಲ್ಲಿ ಜೀವಿಸಿದ್ದಾರೆ. ಮಂಡ್ಯ ಸೊಗಡಿನ ಸಂಭಾಷಣೆ ಕೇಳಲು ಹಿತ ಅನ್ನಿಸುತ್ತದೆ. ಒಟ್ಟಾರೆ ಜೆರಾಕ್ಸ್ ಮನೆಮಂದಿಯೆಲ್ಲಾ ಕುಳಿತು ನೋಡಿ ಆನಂದಿಸಬಹುದಾಗಿದೆ.

ಮೆಕ್ಸಿಕೋದಿಂದ ಬಂದ ಡಾಲಿ

ಡಾಲಿ ಧನಂಜಯ ಅಣ್ಣ ಫ್ರಮ್ ಮೆಕ್ಸಿಕೊ ಚಿತ್ರದಲ್ಲಿ ನಟಿಸುತ್ತಿದ್ದಾರೆ. ವಿಭಿನ್ನ ಶೀರ್ಷಿಕೆಯಲ್ಲಿ ಸದ್ದು ಮಾಡುತ್ತಿರುವ ಈ ಚಿತ್ರದ ಟೀಸರ್ ರಿಲೀಸ್ ಆಗಿದೆ. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಟೀಸರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಟೀಸರ್ ಥ್ರಿಲ್ಲಿಂಗ್ ಆಗಿದ್ದು, ಹೊಸತನದಿಂದ ಕೂಡಿದೆ. ಟೀಸರ್ ನೋಡಿದರೆ ಸಿನಿಮಾದ ಬಗ್ಗೆ ಕುತೂಹಲ ಮೂಡುತ್ತಿದೆ. ಕನ್ನಡ ಸಿನಿಮಾಗಳನ್ನು ನೋಡಿಕೊಂಡು ಬೆಳೆದವರು ನಾವು. ಕನ್ನಡ ಚಿತ್ರರಂಗ ಸಾಕಷ್ಟು ಶ್ರೀಮಂತವಾಗಿದೆ. ಚಿತ್ರರಂಗಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ಉದ್ದೇಶದಿಂದ ಚಿತ್ರ ನಿರ್ಮಾಣ ಮಾಡಲು ಮುಂದಾದೆವು. ಈ ಚಿತ್ರದ ಕಥೆ ಕೇಳಿ ಇಷ್ಟವಾಯ್ತು. ಚಿತ್ರದಲ್ಲಿ ಒಂದೊಳ್ಳೆ ಪ್ರಯೋಗ ಮಾಡುವ ನಿಟ್ಟಿನಲ್ಲಿ ಚಾಮುಂಡಿ ಆಶೀರ್ವಾದ ಪಡೆದು ಈ ಸಿನಿಪಯಣ ಶುರು ಮಾಡಿದೆವು ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಹೊಯ್ಸಳ ಸಿನಿಮಾದ ಚಿತ್ರೀಕರಣ ಬೆಳಗಾವಿಯಲ್ಲಿ ನಡೆಯುವಾಗ ಲಕ್ಷ್ಮೀ ಮೇಡಂ ಮನೆಗೆ ಹೋಗಿದ್ದೆ. ಆಗ ಅವರು, ನಮ್ಮ ಸಹೋದರನಿಗೆ ಸಿನಿಮಾರಂಗದ ಬಗ್ಗೆ ತುಂಬಾ ಆಸಕ್ತಿ, ಒಂದು ಒಳ್ಳೆಯ ಸಿನಿಮಾ ಮಾಡಬಹುದೆ ನೋಡಿ ಎಂದರು. ಆ ಬಳಿಕ ಈ ಜರ್ನಿ ಶುರುವಾಯ್ತು. ಚೆನ್ನರಾಜು ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಈ ಚಿತ್ರದಲ್ಲಿ ನಾನು ತುಂಬಾ ಸ್ಟೈಲಿಶ್ ಆಗಿ ಕಾಣಿಸಿಕೊಂಡಿದ್ದೇನೆ. ಸಾಹಸ ಪ್ರಧಾನ ಕಥೆಯ ಜತೆಗೆ ಕೌಟುಂಬಿಕ ಸ್ಟೋರಿಯೂ ಸಿನಿಮಾ

ದಲ್ಲಿದೆ ಎಂದು ಡಾಲಿ ಧನಂಜಯ ಹೇಳಿದರು. ಈ ಹಿಂದೆ ಬಡವ ರಾಸ್ಕಲ್ ಚಿತ್ರವನ್ನು ನಿರ್ದೇಶನ ಮಾಡಿದ್ದ ಶಂಕರ್ ಗುರು, ಈ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ರೀಷ್ಮಾ ನಾಣಯ್ಯ ನಾಯಕಿಯಾಗಿ ಬಣ್ಣಹಚ್ಚಿದ್ದು, ರಂಗಾಯಣ ರಘು, ನಾಗಭೂಷಣ, ಪೂರ್ಣ ಮೈಸೂರು ಮುಂತಾದವರು ತಾರಾಬಳಗದಲ್ಲಿದ್ದಾರೆ. ವಾಸುಕಿ ವೈಭವ್ ಸಂಗೀತ ನಿರ್ದೇಶನ, ಅಜಯ್ ಸಂಕಲನ, ಗುಣ ಕಲಾ ನಿರ್ದೇಶನ ಈ ಚಿತ್ರಕ್ಕಿದೆ. ಐರಾ ಫಿಲಂಸ್ ಹಾಗೂ ರಾಯಲ ಸ್ಟುಡಿಯೋಸ್ ಬ್ಯಾನರಿನಲ್ಲಿ ಈ ಚಿತ್ರ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ.